"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

20ನೇ ಮಾರ್ಚ್ 2017
ಸೋಮವಾರ

## ವಿಷಯಾನುಕ್ರಮಣಿಕೆ

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

775 – ದಡಾರ ಲಸಿಕೆ ಬಗ್ಗೆ
– ಶ್ರೀ ಕೆ.ಅಬ್ದುಲ್‌ಜಬ್ಬಾರ್

791 – ಚಿತ್ರದುರ್ಗ ಜಿಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭದ ಬಗ್ಗೆ
– ಶ್ರೀ ಜಿ.ರಘು ಆಚಾರ್

772 – ದಡಾರ ಮತ್ತು ರುಬೆಲ್ಲಾ ಎಂಬ ಕಾಯಿಲೆ ಬಗ್ಗೆ
ಶ್ರೀ ಆರ್.ಪ್ರಸನ್ನ ಕುಮಾರ್

850 – ಭಿಕ್ಷಾಟನೆ ನಿಯಂತ್ರಣದ ಬಗ್ಗೆ
– ಡಾ: ಜಯಮಾಲ ರಾಮಚಂದ್ರ

832 – ರಾಯಚೂರು ಜಿಲ್ಲೆಯಲ್ಲಿ ವೈದ್ಯರ ಕೊರತೆ ಬಗ್ಗೆ
– ಶ್ರೀ ಎನ್.ಎಸ್.ಬೋಸ್‌ರಾಜು

805 – ಕುಂದಾಪುರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಗ್ಗೆ
– ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

879 – ಚೈನೀಸ್ ರೆಸ್ಟೋರೆಂಟ್‌ಗಳಲ್ಲಿ ಹಾಗೂ ಬೀದಿ ಬದಿಯಲ್ಲಿ ಮಾಡುವ ಗೋಬಿ ಮಂಚೂರಿ ಮತ್ತು ಫ್ರೈಡ್ ರೈಸ್ ಮೊದಲಾದ ಆಹಾರಗಳಲ್ಲಿ ರಾಸಾಯನಿಕ ವಸ್ತುಗಳ ಬಳಕೆ ಬಗ್ಗೆ.
– ಶ್ರೀ ರಾಮಚಂದ್ರಗೌಡ

868+869 – ಮೊರಾರ್ಜಿ ಹಾಗೂ ಕಿತ್ತೂರ ರಾಣಿ ಚೆನ್ನಮ್ಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೂ ಒಂದು ಹೆಚ್ಚುವರಿ ವೇತನ ಬಡ್ತಿ ಜಾರಿ ಬಗ್ಗೆ
– ಶ್ರೀ ಅರುಣ ಶಹಾಪೂರ
– ಶ್ರೀಮತಿ ತಾರಾಅನೂರಾಧ

859 – ಕುಳಗೇರಿಯ ನವೋದಯ ವಸತಿ ಶಾಲೆ ಬಗ್ಗೆ –ಶ್ರೀ ನಿರಾಣಿ ಹನಮಂತ್ ರುದ್ರಪ್ಪ

762 – ವಸತಿ ನಿಲಯದ ಸಂಖ್ಯಾಬಲ ಹೆಚ್ಚಿಸುವ ಬಗ್ಗೆ. –ಶ್ರೀ ಬಸವರಾಜ ಪಾಟೀಲ್ ಇಟಗಿ

768 – ಚಿಕ್ಕಮಗಳೂರು ಜಿಲ್ಲೆಯ ಗಿರಿಜನ ಕುಟುಂಬಗಳ ಬಗ್ಗೆ –ಶ್ರೀಮತಿ ಮೋಟಮ್ಮ

476 – ಉಚಿತ ಆರೋಗ್ಯ ಯೋಜನೆ ಹಿಂಪಡೆದುಕೊಂಡಿರುವ ಬಗ್ಗೆ
– ಶ್ರೀ ಮಾನೆ ಶ್ರೀನಿವಾಸ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

2. ಸಚಿವರ ಹೇಳಿಕೆಗಳು

ಅ) ಕಸ್ತೂರಿ ರಂಗನ್ ವರದಿ ಅನುಷ್ಠಾನ ಮಾಡಿದರೆ ಅರಣ್ಯ ಪ್ರದೇಶದಲ್ಲಿ ವಾಸಿಸುವ ಅದಿವಾಸಿಗಳ ಬಗ್ಗೆ.
- ಡಾಃಜಿ.ಪರಮೇಶ್ವರ್(ಸಭಾ ನಾಯಕರು)

ಆ) ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪಶು ವೈದ್ಯಾಧಿಕಾರಿಗಳ ನೇಮಕಾತಿ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ.
- ಡಾಃಜಿ.ಪರಮೇಶ್ವರ್(ಸಭಾ ನಾಯಕರು)

ಇ) ಅನುದಾನಕ್ಕೆ ಒಳಪಟ್ಟ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ 'ಡಿ'ಗ್ರೂಪ್ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳು ತಮ್ಮ ನೇಮಕಾತಿಯನ್ನು ಅನುದಾನಕ್ಕೆ ಒಳಪಡಿಸುವಂತೆ ಆಗ್ರಹಿಸಿ ಧರಣಿ ನಡೆಸುತ್ತಿರುವ ಕುರಿತು.
- ಡಾಃಜಿ.ಪರಮೇಶ್ವರ್(ಸಭಾ ನಾಯಕರು)

3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ ವಿಷಯಗಳು.

ಅ) ಬೆಂಗಳೂರಿನಲ್ಲಿ ಇರುವ ಮಹಿಳಾ ಪೊಲೀಸ್ ಠಾಣೆಗಳನ್ನು ಹೆಚ್ಚಿಸುವ ಬಗ್ಗೆ.
- ಶ್ರೀಮತಿ ತಾರಾಅನೂರಾಧ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಆ) ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವವರಿಗೆ ದುಬಾರಿ ಶುಲ್ಕ ನಿಗದಿ ಮಾಡಿರುವ ಬಗ್ಗೆ
- ಶ್ರೀ ಎಸ್.ವ್ಹಿ.ಸಂಕನೂರ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಇ) ಶಿವಮೊಗ್ಗ ತಾಲ್ಲೂಕು ಹಾರ್ನಹಳ್ಳಿ ಗ್ರಾಮದ ಶ್ರೀಮತಿ ಬಿ.ಎಂ.ವೀಣಾ ಇವರಿಗೆ ಹುತಾತ್ಮ ಯೋಧರಿಗೆ ನೀಡುವ ಪರಿಹಾರ/ಸರ್ಕಾರಿ ಉದ್ಯೋಗ ನೀಡುವ ಬಗ್ಗೆ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಈ) ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಇತರೆ ಭಾಷಾ ವಿಷಯಗಳ ಪ್ರಶ್ನೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮುದ್ರಿಸುವ ಬಗ್ಗೆ.
- ಶ್ರೀ ಅರುಣ ಶಹಾಪುರ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಉ) ಕೊಡಗು ಜಿಲ್ಲೆಯ ಕುಶಾಲನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ
- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಊ) ಗ್ರಾಮೀಣ ಪ್ರದೇಶದ ಬಡವರ ವಸತಿ ಯೋಜನೆಯು ಗ್ರಾಮ ಪಂಚಾಯಿತಿ ಮೂಲಕ ಅನುಷ್ಠಾನಗೊಳ್ಳುತ್ತಿದ್ದು, ವಸತಿ ಇಲಾಖೆಯ ಕ್ಷಣಕ್ಕೊಂದು ಆದೇಶದ ಹಿನ್ನಲೆಯಲ್ಲಿ ತಮಗಾಗುತ್ತಿರುವ ತೊಂದರೆ ಕುರಿತು ಪಂಚಾಯಿತಿ ಸಿಬ್ಬಂದಿಗಳು ಉಡುಪಿ ಜಿಲ್ಲೆಯಲ್ಲಿ ಮುಷ್ಕರ ನಡೆಸುತ್ತಿರುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು)

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿ ಖಾಸಗಿ ಕೇಬಲ್ ನೆಟ್‌ವರ್ಕ್ ಏಜೆನ್ಸಿಗಳು ಸಆರ್ವಜನಿಕರಿಂದ ಹೆಚ್ಚಿನ ಹಣವನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕಾನೂನು ರೂಪಿಸುವ ಹಾಗೂ ಸರ್ಕಾರದಿಂದಲೇ ಕೇಬಲ್ ನೆಟ್‌ವರ್ಕ್ ವ್ಯವಸ್ಥೆಯನ್ನು ಜಾರಿಗೆ ತಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ.

- ಶ್ರೀ ಪುಟ್ಟಣ್ಣ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ರಾಮಚಂದ್ರಗೌಡ
- ಶ್ರೀ ಟಿ.ಎ.ಶರವಣ
- ಶ್ರೀ ವಿ.ಎಸ್.ಉಗ್ರಪ್ಪ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾಜುನ
- ಡಾ: ಜಯಮಾಲ ರಾಮಚಂದ್ರ
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು)

6. ನಿಯಮ 330ರ ಮೇರೆಗೆ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಜೀವಂತ ಕೆರೆಗಳು, ರಾಸಾಯನಿಕ ಹಾಗೂ ಕೈಗಾರಿಕಾ ತ್ಯಾಜ್ಯ ವಸ್ತುಗಳಿಂದ ಮಲಿನಗೊಂಡು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ.

- ಶ್ರೀ ರಾಮಚಂದ್ರಗೌಡ
- ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು)

7. ವಿತ್ತೀಯ ಕಾರ್ಯಕಲಾಪ

2017–2018ನೇ ಆಯವ್ಯಯ ಮೇಲಿನ ಮುಂದುವರೆದ ಚರ್ಚೆ:

- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

8. ಪ್ರಕಟಣೆ

– – –

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(273) 20-03-2017 ಕೆಜಿ/ಎಕೆ 11.00**

# ಕರ್ನಾಟಕ ವಿಧಾನ ಪರಿಷತ್ತು

***ಸೋಮವಾರ, 20ನೇ ಮಾರ್ಚ್ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪ ಸಭಾಪತಿ (ಶ್ರೀ ಮರಿತಿಬ್ಬೇಗೌಡ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಪ್ರಶ್ನೋತ್ತರಗಳು
~~~~~~~

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಉಪ ಸಭಾಪತಿಯವರು:-** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 91 (768) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ಸಭೆಗೆ ಹಾಜರಾಗಿಲ್ಲ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಸ್ವಲ್ಪ ತಡವಾಗಿ ಸದನಕ್ಕೆ ಬರುತ್ತೇನೆಂದು ತಿಳಿಸಿದ್ದಾರೆ.

**ಉಪ ಸಭಾಪತಿಯವರು:-** ಈಗ ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಕೆ.ಅಬ್ದುಲ್ ಜಬ್ಬಾರ್‌ರವರದ್ದು.

**ಪ್ರಶ್ನೆ ಸಂಖ್ಯೆ 775**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನಾನು ದಾವಣಗೆರೆಯ ಜಿಲ್ಲೆಯಲ್ಲಿ ಮಕ್ಕಳಿಗೆ ಲಸಿಕೆ ಹಾಕಿರುವ ಬಗ್ಗೆ ವಿಚಾರಣೆ ಮಾಡಿದಾಗ, ಇನ್ನೂ ಶೇಕಡಾ 7 ರಿಂದ 8 ರಷ್ಟು ಆಗಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ಶೇಕಡಾ 97 ರಷ್ಟು ಆಗಿದೆ. ಗ್ರಾಮೀಣ ಪ್ರದೇಶಗಳಿಗೆ ಬಹಳ ಕಡಿಮೆ workers ಹೋಗಿ ಲಸಿಕೆಯನ್ನು ಹಾಕುತ್ತಿದ್ದಾರೆ. ಇದರ ಅವಶ್ಯಕತೆ ಇರುವುದೇ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು. ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆಗಳು ಕಡಿಮೆ ಇರುತ್ತವೆ. ನಗರ ಪ್ರದೇಶಗಳಲ್ಲಿ ಆಸ್ಪತ್ರೆಗಳು ಹೆಚ್ಚಿಗೆ ಇರುತ್ತವೆ. ಹಾಗಾಗಿ, ನಗರ ಪ್ರದೇಶಗಳಿದಿಂದಲೇ workers ಹೋಗಿ ಗ್ರಾಮೀಣ ಪ್ರದೇಶಗಳಲ್ಲಿ ಲಸಿಕೆಯನ್ನು ಹಾಕಬೇಕಾಗುತ್ತದೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಚಾರದಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮೊಟ್ಟಮೊದಲನೆಯದಾಗಿ, ಮಾನ್ಯ ಸದಸ್ಯರು ಈ ಬಗ್ಗೆ ಕಾಳಜಿಯನ್ನು ತೋರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ನಾನು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ಇದೊಂದು ಮಾರಣಾಂತಿಕವಾದ ರೋಗ. ಈ ಬಗ್ಗೆ ನಾವು ಒಂದು ಅಭಿಯಾನವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಎಲ್ಲಾ ಕಡೆಗೂ ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಬಹಳಷ್ಟು ಕವರ್ ಮಡಿದ್ದೇವೆ. ಮೊದಲನೇ ಸುತ್ತಿನಲ್ಲಿ 10,70,771 ಮಕ್ಕಳಿಗೆ ಕವರ್ ಮಾಡಿದ್ದೇವೆ. ಎರಡನೇ ಸುತ್ತಿನಲ್ಲಿ ಸಹ ಅಷ್ಟೇ ಪ್ರಮಾಣದಲ್ಲಿ ಕವರ್ ಮಾಡಿದ್ದೇವೆ. ಈಗ ಬಾಕಿ ಇರುವ ಮಕ್ಕಳಿಗೆ ಕವರ್ ಮಾಡಲಿಕ್ಕೆ ಪ್ರತಿದಿವಸ ಮಾಡುವುದನ್ನು ಬಿಟ್ಟು, ಪ್ರತಿ ಗುರುವಾರಗಳಂದು ಆಸ್ಪತ್ರೆಗಳಲ್ಲಿಯೇ ಮಾಡುತ್ತಿದ್ದೇವೆ. ವಿಶ್ವ ಆರೋಗ್ಯ ಸಂಸ್ಥೆಯವರು ಸಹ ಇದು ಬಹಳ ಗಂಭೀರವಾದಂತಹ ವಿಷಯವೆಂದು ಹೇಳಿದ್ದಾರೆ. ನಾವು ಇದನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದೇವೆ. ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸದಸ್ಯರ ಕಾಳಜಿಯನ್ನು ಗೌರವಿಸಿ ಆದಷ್ಟು ಬೇಗ ಎಲ್ಲಾ ಮಕ್ಕಳಿಗೂ ಈ ಲಸಿಕೆಯನ್ನು ಕೊಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಏನಾದರೂ ಟೈಮ್ ನಿಗಧಿ ಮಾಡಲಾಗಿದಯೇ ಎಂಬುದನ್ನು ತಿಳಿಸಬೇಕು. ಏಕೆಂದರೆ, ಇದರ ಅವಶ್ಯಕತೆ ಎಲ್ಲಿ ಇದೆಯೋ ಅಲ್ಲಿ ಮುಗಿಯುವವರೆಗೂ ಟೈಮ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ನಾವು ಇದಕ್ಕೆ ಒಂದು ಅಭಿಯಾನವನ್ನು ಪ್ರಾರಂಭವನ್ನು ಮಾಡಿದ್ದೇವೆ. ಬಹಳ ಒಂದು warlike situation ಅನ್ನು start ಮಾಡಿದ್ದೇವೆ. ಈಗ almost ಒಂದು ಹಂತಕ್ಕೆ ಬಂದಿದ್ದೇವೆ. ಬಾಕಿ ಇರತಕ್ಕತಂಹದ್ದನ್ನು weekly once ನಾವು ಮಾಡುವುದರಿಂದ ನಾವು ನಿಭಾಯಿಸಬಹುದು ಎಂಬ ವಿಶ್ವಾಸ ಬಂದಿದೆ. ಇದನ್ನು ಆದಷ್ಟುಬೇಗ ಮಾಡುತ್ತೇವೆ. ಇದಕ್ಕೆ dates ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಮಾರಣಾಂತಿಕ ರೋಗ ಎನ್ನುವುದು ನಮಗೆ ಮನವರಿಕೆ ಆಗಿದೆ. ಮಾನವ ಜೀವ ಅಮೂಲ್ಯವಾದುದು. ಇದು ಸರ್ಕಾರದ ಹೊಣೆ. ಈ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದೇವೆ. ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯವಿದೆಯೋ ಆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 791**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಮೊದಲ ಬಾರಿಗೆ ವಿಧಾನ ಪರಿಷತ್ತಿಗೆ ಆಯ್ಕೆ ಆಗಿ ಬಂದಾಗ ಇದನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೆ. ಮಾನ್ಯ ಸಚಿವರು ಆಗಿನಿಂದಲೂ ಮಾಡುತ್ತಿದ್ದೇವೆ ಎಂದು ಹೇಳುತ್ತಲೇ ಬರುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಒಂದು cut-off

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

date ಯಾವುದು ಎಂದು ತಿಳಿಸಿದರೆ ನಮಗೆ ಬಹಳ ಅನುಕೂಲವಾಗುತ್ತದೆ. ಚಿತ್ರದುರ್ಗದ ಜನತೆ ಮಾನ್ಯ ಸಚಿವರ ಮೇಲೆ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಇವತ್ತು ಚಿತ್ರದುರ್ಗ ಜಿಲ್ಲೆಯ ಮಾನ್ಯ ಉಸ್ತುವಾರಿ ಸಚಿವರಾದ ಎಚ್.ಆಂಜನೇಯರವರು ಸದನಲ್ಲಿದ್ದಾರೆ. ಮಾನ್ಯ ಉಸ್ತುವಾರಿ ಸಚಿವರು ಅವತ್ತು ಇದ್ದರು. ನಾನು independent ಆಗಿ ಗೆದ್ದು ಬಂದಿದ್ದೆ. ಆಗ ಮಾನ್ಯ ಉಸ್ತುವಾರಿ ಸಚಿವರು ಮಾಡಿಸುತ್ತೇನೆಂದು ಒಪ್ಪಿಕೊಂಡಿದ್ದರು. ಹಾಗಾಗಿ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಹೇಳಿ ಒಂದು ದಿನಾಂಕವನ್ನು announce ಮಾಡಿಸಬೇಕು.

**ಡಾ॥ಶರಣ ಪ್ರಕಾಶ್ ಆರ್.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜ್‌ನ್ನು ಸ್ಥಾಪನೆ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ. ಈಗಾಗಲೇ ಆರು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದೇವೆ. 2014-2015ನೇ ಸಾಲಿನಲ್ಲಿಯೇ ಇನ್ನೂ ಆರು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಘೋಷಣೆ ಆಗಿತ್ತು. ಆದರೆ, ವಿವಿಧ ಕಾರಣಗಳಿಂದ ಮತ್ತು ಅದಕ್ಕೆ ಇನ್ನೂ ಹಣದ ಲಭ್ಯತೆ ಇರತಕ್ಕಂತಹದ್ದನ್ನು ನೋಡಿಕೊಂಡು ಮಾಡಬೇಕೆಂಬ ಉದ್ದೇಶದಿಂದ ಸ್ವಲ್ಪ ವಿಳಂಬವಾಗಿದೆ. ಆದರೆ, ಈಗಾಗಲೇ ಈ ಕುರಿತು ಪ್ರಕ್ರಿಯೆ ಪ್ರಾರಂಭವಾಗಿದೆ. ನಾವು Government Order ಅನ್ನು issue ಮಾಡಿದ್ದೇವೆ. ಅಲ್ಲಿ government hospital ಏನಿದೆ. ಅಂದರೆ, ನಮ್ಮ Health Department ಆಸ್ಪತ್ರೆಯನ್ನು ನಾವು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸ್ಥಳಾಂತರಿಸಿಕೊಂಡಿದ್ದೇವೆ. ಈಗ ವೈದ್ಯಕೀಯ ಕಾಲೇಜು ಕಟ್ಟಡ ಕಟ್ಟುವುದಕ್ಕೆ ಸ್ವಲ್ಪ ಹಣದ ಲಭ್ಯತೆಯನ್ನು ನೋಡಿಕೊಂಡು ಮಾಡಬೇಕು ಎನ್ನುವಂತಹ ಉದ್ದೇಶದಿಂದ ಸ್ವಲ್ಪ ವಿಳಂಬವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಈ ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಒದಗಿಸಿದ್ದಾರೆ. ಹಾಗಾಗಿ, ಇದಕ್ಕೆ ಶೀಘ್ರದಲ್ಲಿ ಟೆಂಡರ್ ಕರೆಯುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ.

**(274) 11.10 20-03-2017 : ಎಂವಿ:ಎಕೆ**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜಿ. ರಘು ಆಚಾರ್:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಮಾನ್ಯ ಸಚಿವರು active ಆಗಿ ಇದ್ದಾರೆ, ಇದನ್ನು ಮಾಡುತ್ತಾರೆ ಮತ್ತು ಅವರಿಗೆ ನಮ್ಮ ಮೇಲೆ ಕಳಕಳಿಯೂ ಇದೆ, ಆದರೆ ದಯಮಾಡಿ ದಿನಾಂಕವನ್ನು ತಿಳಿಸಿಬಿಟ್ಟರೆ, ನಮ್ಮ ಜನರಿಗೂ ಸಹ ಸ್ವಲ್ಪ ಖುಷಿಯಾಗುತ್ತದೆ, ಇದನ್ನು ಅತೀ ಬೇಗ ಮಾಡುತ್ತೇವೆಂದು ಕಳೆದ ನಾಲ್ಕು ವರ್ಷದಿಂದ ನಾನು ಸುಮ್ಮನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುತ್ತಾ ಬಂದಿದ್ದೇನೆ. ಆದುದರಿಂದ ದಯಮಾಡಿ ಮಾನ್ಯ ಸಚಿವರು ಒಂದು ತಿಂಗಳೋ ಅಥವಾ ಎರಡು ತಿಂಗಳೋ, ತಾವು ಯಾವಾಗ ಕೊಡುತ್ತೀರೋ ಎಂದು ಹೇಳಿದರೆ, ಕಳೆದ ಸಾಲಿನ ಬಜೆಟ್ ಪುಸ್ತಕದಲ್ಲಿ ನಾನು ಇದನ್ನು ನೋಡಿದ್ದೇನೆ. ಈಗಲೂ ನೋಡುತ್ತಿದ್ದೇನೆ, ದಯಮಾಡಿ ತಾವು ತಿಳಿಸಿ.

**ಡಾ|| ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ನಮಗೆ ಬಜೆಟ್‌ನಲ್ಲಿ ಹಣ ಒದಗಿಸಿದ್ದಾರೆ, ಅದಕ್ಕೆ ಎಷ್ಟು ಹಣ ಒದಗಿಸಿದ್ದಾರೆ ಎಂಬುದೆಲ್ಲವನ್ನೂ ಸಂಪೂರ್ಣವಾಗಿ ತಿಳಿದುಕೊಂಡು, ಅದಕ್ಕೆ ಸಂಬಂಧಿಸಿದಂತೆ ಇನ್ನು ಮೂರು ತಿಂಗಳಿನಲ್ಲಿ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಜಿ. ರಘು ಆಚಾರ್:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಇದು ತುಂಬಾ ಮುಖ್ಯವಾದದ್ದು. ಮಾನ್ಯ ಸಚಿವರು ಸದನಕ್ಕೆ ಬಂದು ಉತ್ತರ ಕೊಡುತ್ತಿದ್ದೀರಾ, ಈಗ ಎಷ್ಟು ಹಣ ದೊರೆತಿದೆ ಅಥವಾ ಇಲ್ಲವೇ ಎಂಬುದನ್ನು ಚಿಂತನೆ ಮಾಡುತ್ತೇನೆ, ನೋಡುತ್ತೇನೆ ಎಂದರೆ ಇದು ಯಾವ ರೀತಿಯ ಉತ್ತರ, ಈ ತರಹದ ಉತ್ತರವನ್ನು ನಾವು ತಮ್ಮಲ್ಲಿ ನಿರೀಕ್ಷೆ ಮಾಡಬಹುದೆ?

**ಡಾ|| ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಸದಸ್ಯರಿಗೆ ಯಾವ ರೀತಿ ಹೇಳಿದ್ದೇನೆಂದರೆ, ಈ ಬಜೆಟ್ ಪುಸ್ತಕದಲ್ಲಿ ಯಾವ್ಯಾವ scheme ಗಳಿಗೆ ಎಷ್ಟೆಷ್ಟು ಹಣ allocate ಆಗಿದೆ ಎಂದು ನೋಡಿಕೊಂಡು. ಹಣದ ಲಭ್ಯತೆ ನೋಡಿಕೊಂಡು ಮೂರು ತಿಂಗಳ ಒಳಗಾಗಿ ಎಲ್ಲಾ ತಯಾರಿ ಮಾಡಿಕೊಂಡು, ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದ್ದೇನೆ. ಈಗ ಇಲ್ಲೇ ಆ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರೆ, ಅವರ ಜೊತೆಯಲ್ಲಿಯೂ ಸಹ ನಾನು ಚರ್ಚೆ ಮಾಡಿದ್ದೇನೆ, ಅತೀ ಶೀಘ್ರದಲ್ಲೆ ಅಂದರೆ ಕಾಲಮಿತಿ ಏನು ಮೂರು ತಿಂಗಳು ಎಂದು ಹೇಳಿದ್ದೇನೆ, ಅದರ ಒಳಗಡೆಯೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 772**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಆರ್. ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ, ಆದರೆ ಈ ದಡಾರ ಎನ್ನುವಂತಹ ಒಂದು ಚುಚ್ಚುಮದ್ದನ್ನು ಮಕ್ಕಳಿಗೆ ಯಾವುದೇ

ಕಾಯಿಲೆ ಬರಬಾರದೆಂದು ಅದನ್ನು ಕೊಡುತ್ತಿದ್ದಾರೆ, ಅದರಲ್ಲಿ ಈ ರುಬೆಲ್ಲಾ ಎಂದು ಹೇಳಿಕೊಂಡು ಏನು ಈ ಚುಚ್ಚುಮದ್ದನ್ನು ಕೊಡುತ್ತಿದ್ದಾರೆ, ಒಂದು ಕಡೆ ಉತ್ತರದಲ್ಲಿ ನನಗೆ ಈ ರೀತಿ ತಿಳಿಸಿದ್ದಾರೆ, ತಾಯಂದಿರ ಗರ್ಭಾವಸ್ಥೆಯಲ್ಲಿ ಇದಕ್ಕೆ ತೊಂದರೆಯಾಗುತ್ತದೆ, ಆದುದರಿಂದ ಇದನ್ನು ಮಕ್ಕಳಿಗೆ ಕೊಡುತ್ತಿದ್ದಾರೆಂದು ಹೇಳಿದ್ದಾರೆ. ಆ ಮಕ್ಕಳಿಗೆ ಕೊಟ್ಟಾಗ ಸೋಂಕು ಬರುವುದು ನಿಲ್ಲುತ್ತದೆ, ಅದಕ್ಕೋಸ್ಕರ ಕೊಡುತ್ತಿದ್ದಾರೆಯೇ, ಏನು ಎಂಬುದರ ಬಗ್ಗೆ ನನಗೆ ವಿಚಾರ ಗೊತ್ತಾಗಬೇಕಾಗಿದೆ, ಅದು ಒಂದು ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ, ಇವತ್ತಿನ ದಿವಸ ಶಾಲೆಗಳಲ್ಲಿ ಈ ದಡಾರ ಮತ್ತು ರುಬೆಲ್ಲಾ ಚುಚ್ಚುಮದ್ದುಗಳನ್ನು ಕೊಡಬೇಕಾದರೆ, ಆ ದಿವಸ ಶಾಲೆ ನಡೆಸುವುದಿಲ್ಲ, ಶಾಲೆಗಳಲ್ಲಿ ಆರೋಗ್ಯ ಹಬ್ಬವೆಂದು ಹೇಳಿ, ಅದನ್ನು ಆಚರಣೆ ಮಾಡಿ, ಚುಚ್ಚುಮದ್ದು ಕೊಡುವ ದಿವಸ ಮಕ್ಕಳ ಎಲ್ಲಾ ಪೋಷಕರನ್ನು ಶಾಲೆಗೆ ಕರೆಸಿಕೊಂಡು, ಅವರನ್ನು ಅಲ್ಲೇ ಉಳಿಸಿಕೊಂಡು, ಮಕ್ಕಳಿಗೆ ಅದು ಯಾವ ರೀತಿ ದುಷ್ಪರಿಣಾಮ ಬೀರುತ್ತದೆ ಎಂಬ ವಿಚಾರವಾಗಿ ಮಾಡುತ್ತಿದ್ದಾರೆ, ನನಗೆ ತಿಳಿದಿರುವಂತಹ ಇನ್ನೂ ಕೆಲವು ಶಾಲೆಗಳಲ್ಲಿ, ಎರಡು-ಮೂರು ಮಕ್ಕಳಿಗೆ ಆ ಚುಚ್ಚುಮದ್ದನ್ನು ಕೊಟ್ಟಂತಹ ಸಂದರ್ಭದಲ್ಲಿ ಅದರ ಪರಿಣಾಮ ಬೀರಿದೆ, ಹಾಗಾಗಿ ಚುಚ್ಚುಮದ್ದು ಕೊಡಬೇಕಾದರೆ, ಅದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಈ ರೀತಿಯ ಕೆಲವು ಸಂದೇಹಗಳು ಬಹಳ ಜನರಲ್ಲಿವೆ. ಅದಕ್ಕೆ ಸಾಕಷ್ಟು ವ್ಯಾಪಕ ಪ್ರಚಾರ ಮಾಡಿ, ಮುಂಜಾಗ್ರತಾ ಕ್ರಮವಹಿಸಿ, ಈ ಅಪಪ್ರಚಾರ ಏನು ಪ್ರಾರಂಭವಾಗುತ್ತದೆ, ಅದನ್ನು ತಡೆಗಟ್ಟುವಂತಹ ಪ್ರಯತ್ನವನ್ನು ಸರ್ಕಾರ ಮಾಡಿದೆ. ಇದು ಎಲ್ಲಿಯವರೆವಿಗೂ ಹೋಗುತ್ತದೆಂದರೆ, ಒಬ್ಬರು Dr. Andrew Wakefield ಅಂತ ಹೇಳಿ Great Britain ನವರು ಈ ಲಸಿಕೆ ಕೊಡುವುದರಿಂದ ಮಕ್ಕಳಿಗೆ ಕಿವುಡುತನ ಬರುತ್ತದೆಂದು ಹೇಳಿದರು. ಅದರ ಮೇಲೆ *Anti-Vaccine Campaign* ಪ್ರಾರಂಭವಾಗುತ್ತದೆ. ಅದರ ಮೇಲೆ ವಿಚಾರಣೆ ನಡೆದು ಈಗ ಆತನ *Doctor enrolment* ನೇ *cancel* ಮಾಡಿದ್ದಾರೆ. *World Health Organization* ನವರು ತಮ್ಮ *Position Paper* ನಲ್ಲಿ, ನಮಗೆ ಅಮ್ಮ ಅಥವಾ ನಾವು ದಡಾರ ಎಂದು ಏನು ಹೇಳುತ್ತೇವೆ, ಅದರಿಂದ ಏನು *after effects* ಆಗುತ್ತದೆ, ಅದು ಮಾರಣಾಂತಿಕ. *It leads to death.* ರುಬೆಲ್ಲಾ ಒಳಗೆ ಏನು *death* ಆಗುವುದಿಲ್ಲ. ಆದರೆ ಜನ್ಮ ಜಾತವಾದಂತಹ ಅಂಗ ವೈಪಲ್ಯಗಳು ಬರುತ್ತವೆ. *Congenital malfunctions* ಆಗುತ್ತವೆ. ಲಸಿಕೆ ಕೊಡುವುದರಿಂದ *after effects* ಬರುತ್ತದೆ ಎಂದು ಏನು ಹೇಳುತ್ತಿದ್ದಾರೆ, ಅಂತಹವುಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೂ ಸಹ ಸರ್ಕಾರದ ಗಮನಕ್ಕೆ ಬಂದಿಲ್ಲ, ಒಂದು ವೇಳೆ ಆ ತರಹ ಎಲ್ಲಿಯಾದರೂ ಇದ್ದರೆ, ನಮ್ಮ ಗಮನಕ್ಕೆ ತಂದರೆ, ನಾವುಗಳೆಲ್ಲರೂ ಆ ಮಕ್ಕಳ ಒಳ್ಳೆಯದಕ್ಕೆ ಇಷ್ಟೆಲ್ಲಾ ಮಾಡುತ್ತಿರುವುದು. ಒಂದು ವೇಳೆ *after effects* ಇದ್ದರೆ, ತಕ್ಷಣ ಅದರ ಕಡೆಗೆ ನಾವು ಗಮನಹರಿಸುತ್ತೇವೆ.

**ಉಪ ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಸದಸ್ಯರಾದಂತಹ ಡಾ॥ ಜಯಮಾಲ ರಾಮಚಂದ್ರರವರು ಮಾತನಾಡುವುದು.

**ಪ್ರಶ್ನೆ ಸಂಖ್ಯೆ 850**
**(ಉತ್ತರವನ್ನು ಒದಗಿಸಲಾಗಿದೆ)**

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಈಗ ಭಿಕ್ಷುಕರು ಮತ್ತು ಅನಾಥ ಮಕ್ಕಳನ್ನು ವಾಮಮಾರ್ಗದಿಂದ ಕರೆದುಕೊಂಡು ಬಂದು ಭಿಕ್ಷಾಟನೆ ಮಾಡಿಸುತ್ತಾರೆ. ಇವತ್ತು ಇದು ಒಂದು ಬಹಳ ದೊಡ್ಡ ದಂಧೆಯಾಗಿದೆ. ಬೇರೆ ಬೇರೆಯ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆ, ಅವರಿಗೆ ಅಮಲು ಬರುವಂತಹ ಔಷಧಿಯನ್ನು ಕುಡಿಸುತ್ತಾರೆ, ಬೆಳಿಗ್ಗೆಯಿಂದ ರಾತ್ರಿಯವರೆವಿಗೂ ಆ ಮಗುವನ್ನು ರಸ್ತೆಯಲ್ಲಿ ಕೈಯಲ್ಲಿಟ್ಟುಕೊಂಡು, ಓಡಾಡಿಸಿಕೊಂಡು ಕುಡಿಸುತ್ತಾರೆ, ಆ ಮಗು ಏಳುವುದೇ ಇಲ್ಲ. ಆ ಅಮಲು ಔಷಧಿ ಹೆಚ್ಚಾಗಿ ಅದರಿಂದ ಎಷ್ಟೋ ಮಕ್ಕಳು ಸತ್ತು ಹೋಗಿದ್ದಾರೆ, ಬಾಡಿಗೆ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆ, ಈಗಾಗಲೇ 14 ಭಿಕ್ಷುಕರ ಕೇಂದ್ರಗಳಿವೆ. ಈ ಸಾರಿಯ ಬಜೆಟ್‌ನಲ್ಲಿ ಇನ್ನೂ ಐದು ಭಿಕ್ಷುಕರ ಕೇಂದ್ರಗಳನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಯಾವ ಕ್ರಮವನ್ನು ಕೈಗೊಂಡಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಸಿಗ್ನಲ್‌ಗಳಲ್ಲಿ ಇವತ್ತಿನ ದಿವಸ ಬಹಳಷ್ಟು ಜನ ಭಿಕ್ಷುಕರು ಭಿಕ್ಷೆ ಬೇಡುತ್ತಿದ್ದಾರೆ. ಕೆಲವರ ಮುಖ ನೋಡಿದರೆ ನಮ್ಮ ರಾಜ್ಯದವರೆಂದು ನಮಗೆ ಕಾಣಿಸುತ್ತಿಲ್ಲ. ಹೆಚ್ಚಿನವರು ಬಾಂಗ್ಲಾದೇಶದವರಿದ್ದಾರೆ, ಇನ್ನೂ ಹೆಚ್ಚಿನವರು ಉತ್ತರಪ್ರದೇಶದವರು ನಮ್ಮ ಕಣ್ಣಿಗೆ ಕಾಣಿಸುತ್ತಿದ್ದಾರೆ, ದೇವಸ್ಥಾನ ಮತ್ತು ಚರ್ಚ್‌ಗಳ ಮುಂದೆ ಭಿಕ್ಷೆ ಬೇಡುತ್ತಿದ್ದಾರೆ. ಭಿಕ್ಷಾಟನೆಯ ನಿಯಂತ್ರಣ ಎಂಬ ಕಾನೂನು ಇದ್ದರೂ ಕೂಡ, ಇದನ್ನು ತಡೆಯುವ ನಿಟ್ಟಿನಲ್ಲಿ ಅಧಿಕಾರಿಗಳು ಯಾವ ಕ್ರಮವನ್ನು ವಹಿಸಿದ್ದಾರೆ ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅವರು ಈ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿದ್ದಾರೆ ಎಂಬ ಬಗ್ಗೆ ಉತ್ತರ ಕೊಟ್ಟಿಲ್ಲ, ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಪ್ರಮುಖವಾಗಿ ಈ ಭಿಕ್ಷಾಟನೆಗೆ ಹಸಿವು, ಬಡತನ ಮತ್ತು ಅಜ್ಞಾನ ಇವುಗಳು ಕಾರಣವಾಗಿದೆ. ಇವುಗಳ ನಿವಾರಣೆಗಾಗಿ ಅನೇಕ ಶಾಸನಗಳನ್ನೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಮಾಡಿದ್ದೇವೆ. ಭಿಕ್ಷಾಟನೆ ನಿಷೇಧ ಕೂಡ ಇದೆ. ಮಾನ್ಯ ಸದಸ್ಯರಾದಂತಹ ಶ್ರೀಮತಿ ಜಯಮಾಲ ರಾಮಚಂದ್ರರವರು ಹೇಳಿದಂತೆ, ಸಿಗ್ನಲ್‌ಗಳಲ್ಲಿ ಎಳೆ ಕೂಸುಗಳನ್ನು ಹಿಡಿದು, ಭಿಕ್ಷಾಟನೆ ಮಾಡುವಂತಹ ಆ ದೃಶ್ಯವನ್ನು ನೋಡಿದಾಗ, ಎಂತಹವರಿಗೂ ಕೂಡ ಮಾನವೀಯತೆ ಇರತಕ್ಕಂಥವರ ಕರುಳು ಹಿಸುಕಿ ಬಿಡುತ್ತದೆ. ಆದರೂ ಕೂಡ ಅಲ್ಲಲ್ಲಿ ನಮ್ಮ ಭಿಕ್ಷಾಟನೆ ಕೇಂದ್ರದ ಅಧಿಕಾರಿಗಳು ಅಲ್ಲಿಗೆ ಹೋಗಿ *raid* ಮಾಡಿ ಅವರೆಲ್ಲರನ್ನೂ ಬಂಧಿಸಿ ಕರೆದುಕೊಂಡು ಬಂದು, ಆ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯಲ್ಲಿ ಸ್ವೀಕಾರ ಕೇಂದ್ರವೆಂದು ಇದೆ, ಅವರನ್ನು ಅಲ್ಲಿಗೆ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇನ್ನೂ ಕೆಲವರು ಅಂದರೆ ತಂದೆ-ತಾಯಿಗಳನ್ನು ಬೀದಿಗೆ ಬಿಟ್ಟುಬಿಡುತ್ತಾರೆ, ಅವರಿಗೆ ಅನ್ನ ಹಾಕುವುದಿಲ್ಲ, ಪಾಪ ಅವರಿಗೆ ಒಂದು ನಮೂನೆಯ ಬುದ್ಧಿಭ್ರಮಣೆಯಾಗಿದೆ ಎನ್ನುವ ರೀತಿಯಲ್ಲಿ ಬಿಟ್ಟುಬಿಡುತ್ತಾರೆ. ಅವರನ್ನು ಕೂಡ ಕರೆದುಕೊಂಡು ಬಂದು ಅವರಿಗೆ ಎಲ್ಲಾ ರೀತಿಯ ಚಿಕಿತ್ಸೆಗಳನ್ನು ಕೊಟ್ಟು, ಅವರನ್ನು ತಂದೆ-ತಾಯಿಗಳ ತರಹ ನೋಡಿಕೊಳ್ಳಬೇಕು ಎಂದು ಇಲಾಖೆಯವರಿಗೆ ಸೂಚನೆ ನೀಡಿದ್ದೇವೆ. ನಾನೂ ಕೂಡ ಒಂದು ದಿವಸ ಹೋಗಿ, ಅವರ ಜೊತೆಯಲ್ಲಿ ಊಟ ಮಾಡಿ, ಅವರಿಗೆ ಆತ್ಮಸ್ಥೈರ್ಯ ತುಂಬಿದ್ದೇನೆ. ಆದುದರಿಂದ ಅವರನ್ನು ಎಲ್ಲಾ ರೀತಿಯಿಂದ ತಯಾರು ಮಾಡಿ, ಅಲ್ಲಿ ತರಬೇತಿಯನ್ನು ಕೊಟ್ಟು, ಅವರು ಉದ್ಯೋಗದಲ್ಲಿ ತೊಡಗಬೇಕು ಎನ್ನುವಂತಹ ದೃಷ್ಟಿಯಿಂದ, ಅವರನ್ನು ಬಿಡುಗಡೆ ಮಾಡಬೇಕು ಎನ್ನುವಂತಹ ಪ್ರಕ್ರಿಯೆಯೂ ಕೂಡ ಇದೆ. ನೀವು ಹೇಳಿದ ಹಾಗೆ ಹೆಂಗಸರು ಎಳೆ ಮಕ್ಕಳನ್ನು ಕರೆದುಕೊಂಡು ಬಂದು ಸಿಗ್ನಲ್‌ಗಳಲ್ಲಿ ಇನ್ನೂ ಭಿಕ್ಷಾಟನೆ ಮಾಡುತ್ತಿದ್ದಾರೋ ಅದನ್ನು ತಡೆಯಲು ಮಹಿಳಾ ಸಿಬ್ಬಂದಿಗಳಿಗೆ ವಹಿಸುತ್ತೇನೆ. ಎಲ್ಲೆಲ್ಲಿ ಆ ರೀತಿ ಮಾಡುತ್ತಿದ್ದಾರೋ ಅವರನ್ನು ಕರೆತಂದು, ಇನ್ನು ಮುಂದೆ ಅವರು ಭಿಕ್ಷಾಟನೆ ಮಾಡದಂತೆ ಮುಂದಿನ ದಿನಗಳಲ್ಲಿ ಹೆಚ್ಚಿನ ನಿಗಾ ವಹಿಸಿ ಕ್ರಮವನ್ನು ಕೈಗೊಳ್ಳುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಮಕ್ಕಳನ್ನು ಭಿಕ್ಷಾಟನೆಗೆಂದು ಬಾಡಿಗೆಗೆ ತೆಗೆದುಕೊಳ್ಳುತ್ತಾರೆ ಎನ್ನುವಂತಹ ಸುದ್ದಿ ಇದೆ. ಭಿಕ್ಷಾಟನೆಗೆಂದು ಮಕ್ಕಳನ್ನು ಬಾಡಿಗೆಗೆ ಕೊಡುತ್ತಾರೆ, ಮಕ್ಕಳಿಗೆ ಮಾದಕದ್ರವ್ಯ ನೀಡುವುದರಿಂದ ಮಕ್ಕಳು ಮಲಗಿಕೊಂಡೇ ಇರುತ್ತಾರೆ. ಅದು ತುಂಬಾ ಗಂಭೀರವಾಗಿದೆ. ಅದರ ಬಗ್ಗೆ ಗಮನ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, ದಯವಿಟ್ಟು ಬೇಡ, ಸಮಯವಿಲ್ಲ, ಅವರು ಉತ್ತರ ಹೇಳಿದ್ದಾರೆ, ನೋಡಿ ಪ್ರಶ್ನೆ ಕೇಳಿರುವವರು ಸಮಧಾನವಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ತಾವು ಆ ಸಿನಿಮಾದ ದೃಶ್ಯ ನೋಡಿಕೊಂಡು ಹೇಳಬೇಡಿ. ಬಾಡಿಗೆ ಮಗು ತೆಗೆದುಕೊಂಡು ಭಿಕ್ಷೆ ಬೇಡುತ್ತಾರೆ ಎಂದರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಇದು ಸಿನಿಮಾ ದೃಶ್ಯವಲ್ಲ, ಇದು ಆಗುತ್ತಿದೆ, ನಾನು ಇದನ್ನು ನೋಡಿದ್ದೇನೆ, ಆ *traffic junction* ಗಳಲ್ಲಿ ಮಗು ಯಾವಾಗಲೂ ನಿದ್ದೆ ಮಾಡುತ್ತಿರುತ್ತದೆ ಆದರೆ ತಾವು ಸಿನಿಮಾ ಬಗ್ಗೆ ಹೇಳುತ್ತೀರಾ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಇದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಇದು ಸಮಾಜದ ಜವಾಬ್ದಾರಿ, ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿ, ಈ ರೀತಿಯಾದಂತಹ ದೃಶ್ಯಗಳು ಕಂಡು ಬಂದರೆ, ಅವರೂ ಕೂಡ ಅಲ್ಲಿ ನಿಂತುಕೊಂಡು ನಮ್ಮ ಇಲಾಖೆಯವರನ್ನು ಕರೆಸಿಕೊಂಡು, ಅವರಿಗೆ ಸರಿಯಾದ ಮಾರ್ಗದಲ್ಲಿ ಪರಿಹಾರ ನೀಡುವಂಥದ್ದು ಮತ್ತು ಅವರಿಗೆ ಆತ್ಮಸ್ಥೈರ್ಯವನ್ನು ತುಂಬಿ ಇನ್ನು ಮುಂದೆ ಭಿಕ್ಷಾಟನೆಯನ್ನು ಮಾಡಬಾರದೆಂದು ತಿಳಿಸಿ ಹೇಳಬೇಕು ಮತ್ತು ಯಾರಾದರೂ ಬಾಡಿಗೆಗೆ ಮಕ್ಕಳನ್ನು ತಂದಿದ್ದಾರೆಂದು ತಿಳಿದರೆ ಆ ಕುರಿತು ಸರಿಯಾದ ರೀತಿಯಲ್ಲಿ ತನಿಖೆ ಮಾಡಿ, ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ನಾವು ಮತ್ತು ನೀವು ಮಾಡಬೇಕಾಗಿದೆ. ಅದರ ಬಗ್ಗೆ ನಾವು ನಿಗಾ ಇಡುತ್ತೇವೆ. ಆ ಮಕ್ಕಳು ಯಾರು, ಎಲ್ಲಿಂದ ಬರುತ್ತಾರೆ ಅದು ಏನು ಎಂಬುದರ ಬಗ್ಗೆ ಪೊಲೀಸ್ ಇಲಾಖೆಯವರ ಜೊತೆ ಮಾತುಕತೆ ಮಾಡಿ, ಅದನ್ನು ನಿರ್ಮೂಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**(ಮುಂದು...)**

(275) 20.03.2017 11.20 LL-RN

**ಉಪ ಸಭಾಪತಿಯವರ ಉಪಸ್ಥಿತಿ**

**ಡಾ|| ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಮಾನ್ಯ ಗೃಹ ಸಚಿವರು ಕೂಡ ಹಾಜರಿದ್ದಾರೆ. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಪರಸ್ಪರ ಹೊಂದಾಣಿಕೆಯಿಟ್ಟುಕೊಳ್ಳಬೇಕೆಂದು ಕೇಳುತ್ತಾ, ಇದೊಂದು ನಿಜಕ್ಕೂ ಪಿಡುಗು ಎಂದು ಹೇಳಬಹುದು. ಇದೊಂದು ದೊಡ್ಡ ಮಾಫಿಯಾ. ಆ ಮಾಫಿಯಾವನ್ನು ನಿಯಂತ್ರಣ ಮಾಡಬೇಕಾಗಿದೆ. ನಮ್ಮ ಕಣ್ಣ ಮುಂದೆ ಅದು ಕಾಣಿಸುತ್ತಿದೆ. ಈಗಲೂ ಕೂಡ ಯಾವುದೇ ಟ್ರಾಫಿಕ್ ಸಿಗ್ನಲ್‌ಗಳಿಗೆ ಹೋಗಿ, ಅಲ್ಲಿ ಪ್ರತಿಯೊಬ್ಬರು ನಿಂತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಅದಕ್ಕೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಪುನರ್‌ವಸತಿ ಕೇಂದ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಅವರನ್ನು ಕರೆದುಕೊಂಡು ಬಂದು ಪುನರ್‌ವಸತಿ ಕೌಶಲ್ಯ ತರಬೇತಿ ಕೊಡಲಿ. ಒಂದು ವೇಳೆ ಅಂತಹವರಿಗೆ ಕೌಶಲ್ಯ ತರಬೇತಿ ಕೊಡುವುದೇ ಆಗಿದ್ದರೆ ಅವರು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಏತಕ್ಕೆ ಕಾಣಿಸುತ್ತಿದ್ದಾರೆ? ಏತಕ್ಕೆ ಚರ್ಚ್‌ಗಳ ಮುಂದೆ ನಿಂತಿರುತ್ತಾರೆ? ಭಿಕ್ಷಾಟನೆ ಮಾಡುವುವರನ್ನು ಲಾರಿಗಳಲ್ಲಿ ಹೊತ್ತುಕೊಂಡು ಬರುವುದು ನಮಗೆ ಕಾಣಿಸುತ್ತಿದೆ. ಅವರು ಪ್ರತಿ ಮಂಗಳವಾರ ಮತ್ತು ಗುರುವಾರ ಅವರು ಏತಕ್ಕೆ ಚರ್ಚ್‌ಗಳ ಮುಂದೆ ನಿಂತಿರುತ್ತಾರೆ? ಆದುದರಿಂದ, ಸರ್ಕಾರ ದಯವಿಟ್ಟು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಿ.

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆಲ್ಲರೂ ಒಂದು ದಿನ ಪುನರ್‌ವಸತಿ ಕೇಂದ್ರಕ್ಕೆ ದಯವಿಟ್ಟು ಭೇಟಿ ನೀಡಿದರೆ ಉತ್ತಮವಾಗುತ್ತದೆ. ಡಾ॥ ಜಯಮಾಲ ರಾಮಚಂದ್ರರವರು ಇವತ್ತೇ ಹೋಗಲಿ ಅಥವಾ ನಾಳೆಯಾದರೂ ಹೋಗಲಿ. ಅಲ್ಲಿ ನಾವು ಅವರಿಗೆ ಕೌಶಲ್ಯ ತರಬೇತಿಯನ್ನು ಕೂಡ ಕೊಡುತ್ತಿದ್ದೇವೆ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಮೇಲೆ ನನಗೆ ಬಹಳ ಗೌರವವಿದೆ. ನಾನು ನಿರಾಶ್ರಿತರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಹದಿನಾಲ್ಕು ಕೇಂದ್ರಗಳಿಗೆ ನಾನು ಭೇಟಿ ನೀಡಿದ್ದೇನೆ.

**ಉಪಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ. ಅವರು ಉತ್ತರ ಹೇಳಲಿ ಬಿಡಿ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒಳ್ಳೆಯ ಕೆಲಸ ಮಾಡಿದ್ದಾರೆ. ನಾನು ಮಾಡಿಲ್ಲವೆಂದು ಹೇಳುವುದಿಲ್ಲ. ಆದರೆ...

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಸಭಾಪತಿಯವರೆ, ಈಗ ದೇವಸ್ಥಾನಗಳ ಮುಂದೆ, ಚರ್ಚ್‌ಗಳ ಮುಂದೆ ಮತ್ತು ಮಸೀದಿಗಳ ಮುಂದೆ ಬಡವರು ಇವತ್ತಿಗೂ ಕೂಡ ಅಲ್ಲಲ್ಲಿ ಭಿಕ್ಷಾಟನೆ ಮಾಡುತ್ತಿದ್ದಾರೆ. ನಾನು ಆಗಲೇ ಹೇಳಿದಂತೆ, ಹಸಿವು, ಬಡತನ, ಅಜ್ಞಾನ ಮತ್ತು ಕೆಲವು ತಂದೆ–ತಾಯಿಗಳಿಂದ ತಳ್ಳಲ್ಪಟ್ಟಂತಹ ಜನರಿಂದ ಈ ರೀತಿ ನಡೆಯುತ್ತಿದೆ. ಅದು ಎಷ್ಟೋ ಸಾಧ್ಯವೋ ಅಲ್ಲಿ ಅಂತಹ ಜನರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂಧಿಸಿ ಕರೆದುಕೊಂಡು ಅವರಿಗೆ ಪುನರ್‌ವಸತಿ ಮತ್ತು ಕೌಶಲ್ಯ ತರಬೇತಿಯನ್ನು ಕೊಡಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

**ಪ್ರಶ್ನೆ ಸಂಖ್ಯೆ:- 832**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ರಾಯಚೂರು ಜಿಲ್ಲೆಯಲ್ಲಿ ವೈದ್ಯರ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೆಂದರೆ, ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 49 ಹುದ್ದೆಗಳಲ್ಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆಂದು ಉತ್ತರ ನೀಡಿದ್ದಾರೆ. ಇನ್ನು 4 ತಾಲ್ಲೂಕು ಆಸ್ಪತ್ರೆಗಳಲ್ಲಿ 45 ಮಂದಿ ತಜ್ಞ ವೈದ್ಯರಿರುವಂತಹ ಪ್ರದೇಶದಲ್ಲಿ ಕೇವಲ 23 ಮಂದಿ ಇದ್ದಾರೆ. ಇನ್ನು 22 ಮಂದಿ ತಜ್ಞ ವೈದ್ಯರು ಹುದ್ದೆಗಳು ಖಾಲಿಯಿವೆ. ಅಂದರೆ ಅರ್ಧ ಭಾಗದಷ್ಟು ಖಾಲಿಯಿದೆ. ಇದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಅದಕ್ಕಾಗಿ ಈಗಾಗಲೇ ಸಚಿವರ ಜೊತೆಯಲ್ಲಿ ನಾನು ಮಾತನಾಡಿದಾಗ, ಈ ಬಗ್ಗೆ ಅವರು ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಅದರಂತೆ, ಹೈದರಾಬಾದ್-ಕರ್ನಾಟಕ ಭಾಗಕ್ಕೆ ಹೆಚ್ಚಿನ ಒತ್ತು ಕೊಡಲಿ. ಈಗಾಗಲೇ 1065 ತಜ್ಞರು ಹಾಗೂ 365 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುರ್ತಾಗಿ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವುದಕ್ಕೆ...

**ಉಪಸಭಾಪತಿಯವರು:-** ತಮ್ಮ ಪ್ರಶ್ನೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕು? ಅದನ್ನು ತಿಳಿಸಿ ಸಾಕು.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ಅದೇ ವಿಷಯವನ್ನು ಹೇಳುತ್ತಿದ್ದೇನೆ.

**ಉಪಸಭಾಪತಿಯವರು:-** ಆದರೆ ತಾವು ಮಾನ್ಯ ಸಚಿವರು ನೀಡಿರುವ ಉತ್ತರವನ್ನೇ ಓದುತ್ತಿದ್ದೀರಿ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೆ, ತಜ್ಞ ವೈದ್ಯರನ್ನು ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಯಾವ ಪ್ರದೇಶದಲ್ಲಿ ಹೆಚ್ಚಿನ ಕೊರತೆಯಿದೆಯೋ..? ಅದರಲ್ಲೂ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಎರಡನೆಯದಾಗಿ, ಅನೇಕ ವರ್ಷಗಳಿಂದ ಬಂದಿರತಕ್ಕಂತಹ ಸರ್ಕಾರಗಳು ನೂತನವಾಗಿ ಈ ಪ್ರಾಥಮಿಕ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ಕೊಡಲಿಲ್ಲ. ಏಕೆಂದರೆ, ಈಗಾಗಲೇ ಉತ್ತರ ಕೊಟ್ಟಿರುವ ಪ್ರಕಾರ... ಮಾರ್ಗಸೂಚಿಗಳ ಪ್ರಕಾರ, ಈಗ 30,000 ಜನಸಂಖ್ಯೆಗೆ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ 20,000 ಜನಸಂಖ್ಯೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆಯೆಂದು ಉತ್ತರ ಕೊಟ್ಟಿದ್ದಾರೆ. ತಾವು ಹೇಳಿದಂತೆ, ಅನೇಕ

ಪ್ರದೇಶಗಳಲ್ಲಿ 30,000 ಜನಸಂಖ್ಯೆಗಿಂತ ಕಡಿಮೆ ಪ್ರದೇಶಗಳಲ್ಲಿ ಪ್ರಾಥಮಿಕ ಕೇಂದ್ರಗಳಾಗಿದೆ. ಆದರೆ, ಕೆಲವು ಪ್ರದೇಶಗಳಲ್ಲಿ ಅಸಮತೋಲನದಿಂದ 40,000, 50,000 ಮತ್ತು 55,000 ಜನಸಂಖ್ಯೆ ಇರುವಂತಹ ಪ್ರದೇಶಗಳಿಗೂ ಸಹ ಈ ಪ್ರಾಥಮಿಕ ಕೇಂದ್ರಗಳು ಸಿಕ್ಕಿಲ್ಲ. ಆದರೆ ಇತ್ತೀಚಿನ ಕಾಲದಲ್ಲಿ ಕೆಲವು ವರ್ಷಗಳಿಂದ ನೂತನವಾಗಿ ಪ್ರಾಥಮಿಕ ಕೇಂದ್ರಗಳು ಸಾಕಷ್ಟು ಪ್ರಯತ್ನ ಇದ್ದರೂ ಒತ್ತಡ ಇದ್ದರೂ ಸಹ ಸರ್ಕಾರಗಳು ಅದನ್ನು ಪ್ರಾರಂಭಿಸತಕ್ಕಂತಹ ಪ್ರಯತ್ನ ಮಾಡುತ್ತಿಲ್ಲ. ಕಾರಣವೇನೆಂದರೆ, ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಎನ್ನುವಂತಹ ಮಾತನ್ನು ತೋರಿಸುತ್ತಿದೆ. ಕೆಲವು ಕಡೆ ಜಾಸ್ತಿಯಿದೆ. ಈ ಸಬ್ ಸ್ಟೇಷನ್ಸ್ (ಉಪ ಕೇಂದ್ರಗಳು) ಮತ್ತು ಪ್ರಾಥಮಿಕ ಕೇಂದ್ರಗಳನ್ನು ಬೇಡಿಕೆ ಪ್ರಕಾರ ಮಾಡಲಿಲ್ಲ. ಯಾರ್ಯಾರು ಒತ್ತಡಗಳು ಮತ್ತು ರಾಜಕೀಯ ಶಿಫಾರಸ್ಸುಗಳನ್ನು ಮಾಡುತ್ತಾರೆ ಅಂತಹ ಕ್ಷೇತ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಾಡಿದ್ದಾರೆ. ಹಿಂದಿನ ಕಾಲದಿಂದಲೂ ಆ ರೀತಿಯಾಗಿ ಬಂದಿದೆ. ಅನೇಕ ಕಡೆ 40,000 ಮತ್ತು 50,000 ಜನಸಂಖ್ಯೆಯಿರುವ ಪ್ರದೇಶಗಳಲ್ಲೂ ಸಹ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಿಲ್ಲ. ಅದರಲ್ಲೂ ವಿಶೇಷ ಸ್ಥಾನಮಾನ ಹೊಂದಿರತಕ್ಕಂತಹ ಹೈದರಾಬಾದ್-ಕರ್ನಾಟಕ ಪ್ರದೇಶ 371 ಕಲಂ ಪ್ರಕಾರ ಪ್ರಾಶಸ್ತ್ಯ ಸಿಕ್ಕಿಲ್ಲವೆಂದರೆ ಹೇಗೆ? ಅಲ್ಲಿಯೂ ಸಹ ಹಿಂದುಳಿದ ಪ್ರದೇಶಗಳಿವೆ. ಈ ಅಸಮತೋಲನವನ್ನು ಸರಿಪಡಿಸುವ ನಿಟ್ಟಿನಲ್ಲಿ ಮಾನ್ಯ ಸಚಿವರು ಆ ಕಡೆ ಗಮನಹರಿಸಬೇಕು. ಯಾವ್ಯಾವ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇಕು? ಮತ್ತು ಎಲ್ಲೆಲ್ಲಿ ವೈದ್ಯರ ಕೊರತೆ ಮತ್ತು ತಜ್ಞರ ಕೊರತೆ ಹೆಚ್ಚು ಇದೆ. ಆ ಭಾಗದಲ್ಲಿ ಅವರುಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು. ಅದರ ಜೊತೆಯಲ್ಲಿ ಇತ್ತೀಚೆಗೆ ಸನ್ಮಾನ್ಯ ಸಚಿವರು Trauma Hospitals ಗಳಲ್ಲಿ ತುರ್ತು ಘಟಕಗಳನ್ನು ಪ್ರಾರಂಭಿಸುವುದಕ್ಕೆ ಒಂದು ಯೋಜನೆಯನ್ನು ತಯಾರಿಸಿದ್ದು, ಈ ಕುರಿತು ಆಗಲೇ ನಮಗೆ ಮಾರ್ಗದರ್ಶನ ಕೊಟ್ಟಿದ್ದಾರೆ. ಅದನ್ನು ಆದಷ್ಟು ಬೇಗ ಅಂದರೆ, ಹಿಂದುಳಿದ ಪ್ರದೇಶವಾದ ಹೈದರಾಬಾದ್-ಕರ್ನಾಟಕದಲ್ಲಿ ಪ್ರಾರಂಭಿಸಬೇಕೆಂದು ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರದ್ದು ಮುಖ್ಯವಾಗಿ ಮೂರು ಪ್ರಶ್ನೆಗಳಿವೆ. ರಾಯಚೂರು ತಾಲ್ಲೂಕಿನಲ್ಲಿ ಎಷ್ಟು ವೈದ್ಯರ ಹುದ್ದೆ ಖಾಲಿಯಿದೆಯೆಂದು ಪ್ರಶ್ನೆ ಕೇಳಿದ್ದಾರೆ. ಅಲ್ಲಿ ಒಟ್ಟು ಮಂಜೂರಾಗಿರುವುದು 55 ಹುದ್ದೆಗಳು. 49 ಜನ ಈಗ ಕೆಲಸ ಮಾಡುತ್ತಿದ್ದಾರೆ. ಉಳಿದ 06 ಜನ ಬರುವ ಶನಿವಾರದೊಳಗಾಗಿ ವರದಿ ಮಾಡಿಕೊಳ್ಳುತ್ತಾರೆ. ಸಾಮಾನ್ಯ ವೈದ್ಯಾಧಿಕಾರಿಗಳು (ಜನರಲ್ ಡ್ಯೂಟಿ ಮೆಡಿಕಲ್ ಆಫೀಸರ್ಸ್) ಯಾವುದು ಖಾಲಿಯಿರುವುದಿಲ್ಲ. ತಜ್ಞರ ವಿಚಾರ ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಶೇಷ ತಜ್ಞರದ್ದು ನಮಗೆ ಸಮಸ್ಯೆಯಾಗಿದೆ. ಲೋಕಸೇವಾ ಆಯೋಗದಿಂದ ಜಾಹೀರಾತು ನೀಡಿ ಕರೆದಲ್ಲಿ ಸಂದರ್ಶನಕ್ಕೆ ಬಂದು ಆಯ್ಕೆಯಾದವರು ಕೂಡ, ಅವರು ಕೇಳಿದಲ್ಲಿಗೆ ನೇಮಕಾತಿ ನೀಡಿದರೆ ಮಾತ್ರ ಬರುತ್ತಾರೆ. ಇಲ್ಲವಾದರೆ ಬರುವುದಿಲ್ಲ. ಅಲ್ಲದೇ, ತಜ್ಞರ ಹುದ್ದೆಗೆ ನಾವು ಯಾರೆಂದರೆ ಅವರನ್ನು ಕರೆದು ತಂದು ಕೂರಿಸುವುದಕ್ಕಾಗುವುದಿಲ್ಲ. ತಜ್ಞತೆ ಅವರ ಹತ್ತಿರ ಇದೆ. ನನಗೆ ಬೇಡಿಕೆ ಇದೆ. ಆದರೆ ಅವರು ನನ್ನ ಬೇಡಿಕೆಗೆ ಅವರು ಸ್ಪಂದಿಸುತ್ತಿಲ್ಲ. ವಿಶೇಷವಾಗಿ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಇನ್ನು 25 ಸಾವಿರ ರೂಪಾಯಿ ಹೆಚ್ಚು ವೇತನ ಕೊಡುತ್ತಿದ್ದೇವೆ. ಒಟ್ಟಾರೆಯಾಗಿ 1 ಲಕ್ಷದ 25 ಸಾವಿರ ರೂಪಾಯಿ ವೇತನ ಕೊಡುತ್ತೇವೆ ಗುತ್ತಿಗೆ ಆಧಾರದ ಮೇರೆಗೆ ಬನ್ನಿ ಎಂದು ಕರೆದಿದ್ದೇವೆ. ಗುತ್ತಿಗೆ ಆಧಾರದ ಮೇರೆಗೆ ಬರುವುದಕ್ಕೆ ತಯಾರಿದ್ದಲ್ಲಿ, ಇಲ್ಲವೇ ಸ್ಥಳೀಯವಾಗಿ ತಜ್ಞತೆ ಹೊಂದಿರತಕ್ಕಂತಹ ವೈದ್ಯರುಗಳು ಖಾಸಗಿ ಪ್ರಾಕ್ಟೀಸ್‌ನಲ್ಲಿ ಇದ್ದರೆ, ಕಾಲ್ ಬೇಸಿಸ್ ಮೇರೆಗೆ ನಮ್ಮ ಜೊತೆ ಒಪ್ಪಂದ ಮಾಡಿಕೊಳ್ಳಲಿ. ನಮ್ಮ ಆಸ್ಪತ್ರೆಗಳಿಗೆ ಬಂದು ನಮ್ಮ ಬಡ ರೋಗಿಗಳು ಯಾರು ದಾಖಲಾಗುತ್ತಾರೆ ಅವರ ಚಿಕಿತ್ಸೆಗಾಗಿ ನಾವು ನಿಮಗೆ ದೂರವಾಣಿ ಕರೆ ಕೊಟ್ಟಾಗ ಬಂದು ನಮಗೆ ಸಹಾಯ ಮಾಡಬೇಕೆಂದು ವಿನಂತಿಸಿದ್ದೇವೆ. ಅದಕ್ಕೆ ಒಂದು ಕೇಸ್‌ಗೆ ಇಂತಿಷ್ಟು ಹಣ ನೀಡುತ್ತೇವೆಂದು ಹೇಳಿದ್ದೇವೆ. ಈ ಎಲ್ಲಾ ಸಮಸ್ಯೆಗಳನ್ನು ನೀಗಿಸಬೇಕೆನ್ನುವಂತಹ ದೂರದೃಷ್ಟಿಯಿಂದಲೇ ಕನಿಷ್ಟ ಪಕ್ಷ ಮುಂದಿನ ದಿನಗಳಲ್ಲಿಯಾದರೂ ನಮಗೆ ಈ ದರಿದ್ರ ಹೋಗಬೇಕೆಂದು ಹೇಳಿ ಈ ವರ್ಷದಿಂದಲೇ 11 ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ನಾವು ಡಿಪ್ಲೋಮಾ ಕೋರ್ಸ್‌ಸ್ ಅನ್ನು ಪ್ರಾರಂಭ ಮಾಡುತ್ತಿದ್ದೇವೆ. ಇನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಚಾರದ ಬಗ್ಗೆ ಹೇಳುವುದಾದರೆ, ಅದಕ್ಕೆ ಮಾನ್ಯ ಸದಸ್ಯರೇ ನನ್ನ ಪರವಾಗಿ ಉತ್ತರ ಹೇಳಿದ್ದಾರೆ. ಮಂತ್ರಿಯಾಗಿ ಉತ್ತರ ಹೇಳುವುದಕ್ಕೆ ಎರಡು ವಿಧಾನಗಳಿರುತ್ತವೆ. ಒಂದು ತಾಂತ್ರಿಕವಾಗಿ ಅಧಿಕಾರಿಗಳಿಂದ ಉತ್ತರವನ್ನು ತೆಗೆದುಕೊಂಡು ಹೇಳತಕ್ಕಂತಹದ್ದು. ಇನ್ನೊಂದು ಜನಪ್ರತಿನಿಧಿಗಳ ಸಭೆಯೆಂದು ಹೇಳಿ, ಸತ್ಯವನ್ನು ಆತ್ಮವಂಚನೆಯಿಲ್ಲದೇ ಹೇಳತಕ್ಕಂತಹದ್ದು. ಆಯಾ ಕಾಲಕ್ಕೆ ಜವಾಬ್ದಾರಿಯನ್ನು ನಿರ್ವಹಣೆ ಮಾಡಿದಂತವರು, ಜನಹಿತವನ್ನು, ಜನರ ಅಗತ್ಯತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದರೆ, ನಮಗೆ ಇವತ್ತಿನ ದಿವಸ ಈ ಕಷ್ಟ ಬರುತ್ತಿರಲಿಲ್ಲ. ಆಲ್ ಇಂಡಿಯಾ ಗೈಡ್‌ಲೈನ್ಸ್ ಪ್ರಕಾರ 30,000 ಜನಸಂಖ್ಯೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಇದೆ. ಇಂದು ನಾವು ಆ ಮಿತಿಯನ್ನು ಮೀರಿದ್ದೇವೆ. ಆದರೆ ಕೆಲವು ಭಾಗಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಇದು ನಮಗೆ ಈ ನ್ಯೂನತೆ ಇದ್ದು ಇದು ಮನಸ್ಸಿಗೂ ಬಂದಿದೆ. ಅದಕ್ಕೆ ಒಂದು ಪರ್ಯಾಯವನ್ನು ಕಂಡುಹಿಡಿದುಕೊಳ್ಳಬೇಕೆಂದು ನಾವು ಆಲೋಚನಾ ಮಗ್ನರಾಗಿದ್ದೇವೆ. ಆಯವ್ಯಯ ಭಾಷಣದಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಕ್ಸ್‌ಟೆನ್ಷನ್ ಹಾಸ್ಪಿಟಲ್‌ಗಳ ಬಗ್ಗೆ ಹೇಳಿದ್ದಾರೆ. ಕನಿಷ್ಠ ಆರೋಗ್ಯ ಸೌಲಭ್ಯಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಗತಕ್ಕಂತಹ ವ್ಯವಸ್ಥೆಯನ್ನು ಮಾಡಿಸುವುದಕ್ಕೆ ಕಾರ್ಯೋನ್ಮುಖರಾಗಿದ್ದೇವೆ. ವಿಶೇಷವಾಗಿ ಹೈದರಾಬಾದ್-ಕರ್ನಾಟಕ ಪ್ರದೇಶ ಹಿಂದುಳಿದ ಪ್ರದೇಶವೆಂದು ಇಡೀ ರಾಜ್ಯ ಒಪ್ಪಿಕೊಂಡಿದೆ. ಸಂಸತ್‌ನಲ್ಲಿ ಮಂಡನೆಯಾಗಿ ಬಂದಿದೆ. ನಮಗೂ ಕೂಡ ನಿಮ್ಮಷ್ಟೇ ಕಾಳಜಿಯಿದೆ. ನಿಮ್ಮ ಅನಿಸಿಕೆ ಏನಿದೆ? ಅದಕ್ಕೆ ನಾವು ಸ್ಪಂದಿಸುತ್ತೇವೆ ಎನ್ನುವಂತಹ ಭರವಸೆಯನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ:805**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಕೋಟೇಶ್ವರದಲ್ಲಿ ಪ್ರಾರಂಭವಾಗಿರತಕ್ಕಂತಹ ಮೊರಾರ್ಜಿ ದೇಸಾಯಿ ಆಂಗ್ಲ ಮಾಧ್ಯಮ ವಸತಿ ಶಾಲೆ ಪ್ರಾರಂಭವಾಗಿ ಸುಮಾರು 10 ವರ್ಷಗಳಾಗಿವೆ. ಆ ಶಾಲೆಯಲ್ಲಿ 4ಜನ ಶಿಕ್ಷಕರು ಇದ್ದಾರೆ. ಇನ್ನೂ 6ಜನ ಶಿಕ್ಷಕರ ಕೊರತೆಯಿದೆ. ಗ್ರೂಪ್ 'ಡಿ' 11ಜನ ಇರಬೇಕಾಗಿತ್ತು, ಈಗ ಆ 11 ಹುದ್ದೆಗಳೂ ಕೂಡ ಖಾಲಿ ಇದೆ. ಆದರೆ, ಈ ಸಮಸ್ಯೆಗಳಿಗೆಲ್ಲ ಪರಿಹಾರವನ್ನು ಕಂಡುಕೊಂಡಿದ್ದಾರೆ. ಹೊರ ಸಂಪನ್ಮೂಲ ವ್ಯಕ್ತಿಗಳ ಮುಖಾಂತರ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ 11 'ಡಿ' ಗ್ರೂಪ್ ಹುದ್ದೆಗಳಿಗೆ ಸಂಬಂಧಿಸಿದಂತೆ, ಈ ಹೊರ ಸಂಪನ್ಮೂಲ ವ್ಯಕ್ತಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನತಕ್ಕಂತಹ ಉತ್ತರವನ್ನು ಕೊಟ್ಟಿದ್ದಾರೆ ಮತ್ತು ದಿನಾಂಕ:06.04.2017ಕ್ಕೆ ಈ ಶಾಲಾ ಸಂಕೀರ್ಣವನ್ನು ಟೆಂಡರ್ ಕರೆದು ಪೂರ್ಣಗೊಳಿಸುತ್ತೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಇದೇ ವರ್ಷ ತಾವೇ ಈ ಕಟ್ಟಡದ ಶಂಕು ಸ್ಥಾಪನೆ ಮಾಡಿ ಈ ಶಾಲಾ ಸಂಕೀರ್ಣವನ್ನು ಪ್ರಾರಂಭಿಸಬೇಕೆಂಬ ಮನವಿಯನ್ನು ಮಾಡುತ್ತೇನೆ.

**ಶ್ರೀ ಹೆಚ್. ಆಂಜನೇಯ:-** ಮಾನ್ಯ ಸಭಾಪತಿಯವರೆ, ಟೆಂಡರ್ ಪ್ರಕ್ರಿಯೆ ಮುಂದಿನ ತಿಂಗಳು 4ನೇ ತಾರೀಖು ಮುಗಿಯುತ್ತದೆ. ಮುಂದಿನ ತಿಂಗಳೇ ನಾವು ಅಲ್ಲಿಗೆ ಹೋಗಿ ಆ ಕಟ್ಟಡದ ಶಂಕು ಸ್ಥಾಪನೆಯನ್ನು ಮಾಡಿ ಕಾರ್ಯಾರಂಭ ಮಾಡುತ್ತೇವೆ ಮತ್ತು ಡಿಸೆಂಬರ್ ತಿಂಗಳ ಅಂತ್ಯದೊಳಗೆ ಆ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ. ಅಲ್ಲಿನ ಮಕ್ಕಳಿಗೆ ಉತ್ತಮವಾದಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ಒಳ್ಳೆಯ ವಿದ್ಯಾಭ್ಯಾಸಕ್ಕೆ ಉತ್ತಮ ವಾತಾವರಣವನ್ನು ನಿರ್ಮಿಸುತ್ತೇವೆ ಮತ್ತು ಮಾನ್ಯ ಸದಸ್ಯರನ್ನು ಕೂಡ ಆ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು...)

(276) 20-03-2017 (11-30)BSD-RN

ಪ್ರಶ್ನೆ ಸಂಖ್ಯೆ: 820

**ಡಾ: ಜಿ. ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾಳೆ ಉತ್ತರವನ್ನು ಒದಗಿಸುತ್ತೇನೆ. ಮಾನ್ಯ ಸಚಿವರು ತಮ್ಮ ಬಳಿ ಅನುಮತಿ ಕೇಳಿ ಪತ್ರ ಕೊಟ್ಟು ಹೋಗಿದ್ದಾರೆ.

**ಉಪ ಸಭಾಪತಿಯವರು:–** ತಾವು ಉತ್ತರ ಕೊಡುತ್ತಾರೆ ಎಂದು ಪತ್ರವನ್ನು ಕೊಟ್ಟಿದ್ದಾರೆ.

**ಡಾ: ಜಿ. ಪರಮೇಶ್ವರ್:–** ದಯಮಾಡಿ ಕ್ಷಮಿಸಬೇಕು, ನಾಳೆ ಉತ್ತರವನ್ನು ಕೊಡುತ್ತೇನೆ. ಅದು ಸ್ವಲ್ಪ ಛಿಂಟಿಜಿಞುಂಟ ಆಗಿದ್ದು, ನಾಳೆ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸಚಿವರು ಇಲ್ಲದಿದ್ದರೂ ನಾಳೆ ನಾನು ಉತ್ತರವನ್ನು ಕೊಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾಳೆ ಉತ್ತರವನ್ನು ಕೊಡುತ್ತಾರೆ.

ಪ್ರಶ್ನೆ ಸಂಖ್ಯೆ: 879

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಆದರೆ ಅದರ ಮೇಲೆ ಆಗುವ ಪರಿಣಾಮಗಳ ಬಗ್ಗೆ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಡೆ ***Kathleen Holton*** *Professor in the School of Education, Teaching Health and Neuroscience at American University in Washington, D.C. He says, 'Its symptom is called as, Chinese Restaurant Syndrome (CRS), which is characterized by symptoms like headache, sweating, rapit heart beat and tightness in the chest.* ಮಾನ್ಯ ಸಚಿವರು ಇದರ ಬಗ್ಗೆ ಇದೆ ಎಂದು ಹೇಳಿದ್ದಾರೆ. He says, *'In my research on the effects of MSG in individuals with irritable bowel syndrome and the chronic pain condition 'fibromyalgia'* ಅಂದರೆ ಮಾಂಸಖಂಡಗಳ ನೋವು ಇದರಲ್ಲಿ ಒಳಗೊಳ್ಳುತ್ತದೆ. He also says, *'I observed headache*

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*(including migraine), diarrhea (ಬೇಧಿ), gastro intestinal pain and bloating, extreme fatigue, muscle pain and cognitive dysfunction- all of which improved when subjects were put on a diet, low in free glutamate and which returned with re-introduction of MSG.'* ಇಷ್ಟರ ಬಗ್ಗೆ ಆತನು ಗಮನ ಕೊಟ್ಟಿದ್ದಾನೆ. ಈ ಔಷಧಿಯನ್ನು ರುಚಿ ಮತ್ತು ಬಣ್ಣಕ್ಕಾಗಿ ಬೀದಿಯ ಬದಿಯ ಅಂಗಡಿಗಳು ಮತ್ತು ಚೈನೀಸ್ ರೆಸ್ಟೋರೆಂಟ್‌ಗಳಲ್ಲಿ ಉಪಯೋಗಿಸುತ್ತಾರೆ. ಪ್ರಾಣಿಗಳನ್ನು ಹಿಡಿಯಲು ಮೂಳೆಯನ್ನು ಹಾಕಿದಂತೆ ಇವರು ಗಿರಾಕಿಗಳನ್ನು ಹಿಡಿಯುತ್ತಿದ್ದಾರೆ. ಇದನ್ನು ಯಥೇಚ್ಛವಾಗಿ ಉಪಯೋಗಿಸಿದಾಗ ಕ್ಯಾನ್ಸರ್, ರಕ್ತದೊತ್ತಡ ಸೇರಿದಂತೆ ಬೇರೆ ಬೇರೆ ಕಾಯಿಲೆಗಳು ಬರುವ ಸಂದರ್ಭಗಳು ಜಾಸ್ತಿಯಿವೆ ಎಂದು ಅನೇಕರು ಹೇಳಿದ್ದಾರೆ. ಆದ್ದರಿಂದ ಇದನ್ನು ಕನಿಷ್ಠ ನಮ್ಮ ರಾಜ್ಯದಲ್ಲಿ ನಿಷೇಧ ಮಾಡುವುದಕ್ಕೆ ಆಗುತ್ತದೆಯೇ? ಅಖಿಲ ಭಾರತ ಮಟ್ಟದಲ್ಲಿ ನಿಷೇಧ ಮಾಡುವುದು ಬೇರೆ ವಿಚಾರವಾಗಿದೆ. ಆದರೆ ನಮ್ಮ ರಾಜ್ಯದಲ್ಲಿ health hazard ಆಗುವುದರಿಂದ ನಿಷೇಧ ಮಾಡಬೇಕು. ಈ ಪ್ರಶ್ನೆ ಕೇಳುವ ಸಲುವಾಗಿ ಇಂದು ನಾನು ಸಭೆಗೆ ಬಂದಿದ್ದೇನೆ. ದಯಮಾಡಿ ನಿಷೇಧ ಮಾಡಿದರೆ ಒಳ್ಳೆಯದಾಗುತ್ತದೆ ಮತ್ತು ಅವಶ್ಯಕವಿದ್ದರೆ ಸಮಯ ತೆಗೆದುಕೊಂಡು ಉತ್ತರ ಕೊಡಬಹುದು ಎಂದು ವಿನಂತಿಸುತ್ತೇನೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಚಿಣ ಙುಜ ಔಣಾಣಜಣ ಮಾನ್ಯ ಸದಸ್ಯರು ನಮ್ಮ ಮಾಹಿತಿಗಳ ಜೊತೆಗೆ ಹೊರಗಿನ ಮಾಹಿತಿಗಳನ್ನು ನಮಗೆ ಕೊಟ್ಟು ನಮ್ಮನ್ನು ಜಜಣಾಭಿಚಿಣಜ ಮಾಡಿದ್ದಾರೆ. Government is grateful to the Honourable Member. ಈ Mono Sodium Glutamate (MSG) ಏನಿದೆ, ನಮ್ಮ ಅಧಿಕಾರಿಗಳ ಬಳಿ ಸದನಕ್ಕೆ ಬರುವ ಮುನ್ನ ನಾನು ಮಾತನಾಡಿದ್ದೇನೆ. ನಂತರದ ಪರಿಣಾಮಗಳು ಇದೆ ಎಂದು ಗೊತ್ತಾದ ನಂತರ ಬಳಕೆ ಮಾಡಲು ಅವಕಾಶ ಕೊಟ್ಟಿರುವುದು ಏಕೆ? ಮತ್ತು ಅಮಿತವಾಗಿ ಬಳಕೆ ಮಾಡಿದರೆ ಮಾತ್ರ ಹೀಗಾಗುತ್ತದೆ ಎಂದು ತಿಳಿಸಿದ್ದು ಮಿತವಾಗಿ ಬಳಕೆ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೆ ಮಾಡಿರುವ ಪ್ರಯತ್ನಗಳ ಬಗ್ಗೆ ಅಧಿಕಾರಿಗಳ ಬಳಿ ಮಾತನಾಡಿದ್ದೇನೆ. ಅದಕ್ಕೆ ಅವರು ನಿರುತ್ತರರಾಗಿದ್ದರು. I definitely agree with you. ನಮ್ಮಲ್ಲಿ ರುಚಿ ಹೆಚ್ಚಿಸಲು ಅಥವಾ ಪರಿಮಳ ಬರಬೇಕೆಂದು ಬಳಕೆದಾರರ ಆರೋಗ್ಯದ ಅಲಕ್ಷ್ಯ ಮಾಡುವುದು ಬಹಳ heinous crime. ಇದನ್ನು ಅಗತ್ಯಕ್ಕಿಂತ ಹೆಚ್ಚು ಬಳಕೆ ಮಾಡಿರುವ ಬಗ್ಗೆ ಪತ್ತೆ ಹಚ್ಚಿ, ಕೇಸ್ ನೋಂದಣಿ

ಮಾಡಿರುವ ಉದಾಹರಣೆಗಳೂ ಇಲ್ಲ. Therefore, failure of the Government on this count is admitted. I have no hesitation. I always believe in being plain and truthful. ಮಾನ್ಯ ಸದಸ್ಯರು ಹೊಸ ಸಲಹೆಯಾಗಿ ನಮ್ಮ ರಾಜ್ಯದ ಮಟ್ಟಿಗೆ ನಿಷೇಧ ಮಾಡುವ ಬಗ್ಗೆ ಕೇಳಿದ್ದು, ನಾನು emotional ಆಗಿ ಉತ್ತರ ಕೊಡುವುದಕ್ಕಿಂತಲೂ ಮಾನ್ಯ ಸದಸ್ಯರ ಭಾವನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮತ್ತು ಬಳಕೆದಾರರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು, I think within a short span of time we will take a decision about it. ನಂತರ ಈ ಬಗ್ಗೆ ಸದನಕ್ಕೆ ವರದಿ ಕೊಡುತ್ತೇನೆ.

**ಉಪ ಸಭಾಪತಿಯವರು:–** ಧನ್ಯವಾದಗಳು. ನಂತರದ ಪ್ರಶ್ನೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಅವರು ತಯಾರು ಮಾಡಿರುವ ಉತ್ತರಕ್ಕೆ ನಾನು dissatisfy ಆಗಿದ್ದು, ನಾಳೆ ಅಥವಾ ನಾಳಿದ್ದು ಉತ್ತರವನ್ನು ಒದಗಿಸುತ್ತೇನೆ.

ಪ್ರಶ್ನೆ ಸಂಖ್ಯೆ: 868 + 869

ಉತ್ತರದ ಪ್ರತಿ ಲಗತ್ತಿಸಿದೆ

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಬಹಳ ಚೆನ್ನಾಗಿ ಮತ್ತು ಪ್ರಾಮಾಣಿಕವಾಗಿ ಒದಗಿಸಿರುವುದರಿಂದ, ಮಾನ್ಯ ಸಚಿವರಿಗೆ ಧನ್ಯವಾದಗಳು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ವೇತನ ತಾರತಮ್ಯವನ್ನು ಸರಿಪಡಿಸಲು ಹೆಚ್ಚುವರಿ ವೇತನ ಬಡ್ತಿಯ ಬಗ್ಗೆ ಈಗಾಗಲೇ ಆದೇಶ ಆಗಿದ್ದು, ಇದನ್ನು ಏಕೆ ಕೊಡುತ್ತಿಲ್ಲ ಎಂದು ಕೇಳಿದ್ದೇನೆ. ಅದಕ್ಕೆ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನ ಬಡ್ತಿ ನೀಡುವ ಬಗ್ಗೆ ಶೀಘ್ರದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಅಭಿನಂದಿಸುತ್ತೇನೆ. ಈಗಾಗಲೇ ಹೆಚ್ಚುವರಿ ವೇತನ ಬಡ್ತಿಯ ಆದೇಶವಾಗಿ ಒಂದು ವರ್ಷ ಆಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ಆ ಸಂಬಳ ತೆಗೆದುಕೊಳ್ಳುತ್ತಿದ್ದು, ಈ ಶಿಕ್ಷಕರಿಗೆ ಮಾತ್ರ ಕೊಟ್ಟಿಲ್ಲ. ಈ ವಿಳಂಬ ಸರಿಯೇ ಎಂದು ಹೇಳಬೇಕು. ಮಾನ್ಯ ಸಚಿವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಏಕೆಂದರೆ ಒಂದು–ಒಂದೂವರೆ ವರ್ಷಗಳ ಹಿಂದೆ ಸಾವಿರಾರು ಶಿಕ್ಷಕರು ಬೀದಿಗಿಳಿದು ಹೋರಾಟ ಮಾಡಿದರು. ಪುನಃ ಆ ಪರಿಸ್ಥಿತಿ ಮರುಕಳಿಸುವುದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಡ ಎಂದು ನನ್ನ ವಿನಂತಿ. ಅದೇ ರೀತಿ ನನ್ನ ಪ್ರಶ್ನೆಯಲ್ಲಿ ಸಮಯದ ಮಿತಿಯ ಬಗ್ಗೆ ಕೇಳಿದ್ದು, ಅದಕ್ಕೆ ಉತ್ತರವನ್ನು ನೀಡಿರುವುದಿಲ್ಲ. ಅದಕ್ಕೆ ಏಕೆ ಉತ್ತರ ಹೇಳಿಲ್ಲ ಎಂದು ಗೊತ್ತಿಲ್ಲ ಅಥವಾ ಸಮಯದ ಮಿತಿ ನಮಗೆ ಇಲ್ಲವೋ ಅಥವಾ ಅವರಿಗೆ ಇಲ್ಲವೋ ಗೊತ್ತಾಗಿಲ್ಲ. ಇದಲ್ಲದೇ ಸೌಲಭ್ಯಗಳ ಬಗ್ಗೆ ಕೇಳಿದ್ದು, ಐದಾರು ಸೌಲಭ್ಯಗಳನ್ನು ಕೊಡುತ್ತಿರುವ ಬಗ್ಗೆ ತಿಳಿಸಿದ್ದು, ಅದಕ್ಕಾಗಿಯೂ ಅವರನ್ನು ಅಭಿನಂದಿಸುತ್ತೇನೆ. ತತ್ಸಮಾನ ಶಿಕ್ಷಕರಿಗೆ ಕೊಡುತ್ತಿರುವ ಇನ್ನೂ ಹಲವಾರು ಸೌಲಭ್ಯಗಳನ್ನು ಕೊಡುತ್ತಿಲ್ಲ ಎನ್ನುವ ಕೂಗು ಇದ್ದು, ಇದರ ಬಗ್ಗೆ ಗಮನಹರಿಸಬೇಕು. ನಾನು ಮಾನ್ಯ ಸಚಿವರಿಂದ ಒಳ್ಳೆಯ ಉತ್ತರವನ್ನು ಬಯಸುತ್ತಿದ್ದೇನೆ. ಉತ್ತರದಲ್ಲಿ ಹೇಗೂ ಒಪ್ಪಿಕೊಂಡಿದ್ದು, ಅದರಂತೆ ಎಲ್ಲರಿಗೂ ಕೊಟ್ಟುಬಿಡಬೇಕು.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದು, ಇದೇ ಪ್ರಶ್ನೆಯನ್ನು ನಾನು ಬೆಳಗಾವಿ ಅಧಿವೇಶನದಲ್ಲಿಯೂ ಕೇಳಿದ್ದೆನು. ಸಾರ್ವಜನಿಕರ ಶಿಕ್ಷಣ ಇಲಾಖೆಯಲ್ಲಿ ಇರುವಂತಹವರಿಗೆ ಕೊಡುತ್ತಿರುವ ಹೆಚ್ಚುವರಿ ವೇತನ ಬಡ್ತಿಯನ್ನು ಮೊರಾರ್ಜಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಕೊಡುತ್ತಿಲ್ಲ. ಇದೇ ಉತ್ತರವನ್ನು ಬೆಳಗಾವಿ ಅಧಿವೇಶನದಲ್ಲಿ ಪರಿಶೀಲಿಸುತ್ತೇವೆ ಮತ್ತು ಶೀಘ್ರ ಕ್ರಮ ಕೈಗೊಳ್ಳುತ್ತೇವೆ ಎಂದು ಕೊಟ್ಟಿದ್ದರು. ಈ ಶೀಘ್ರ ಎನ್ನುವುದಕ್ಕೆ ಏನರ್ಥ ಎಂದು ಅರ್ಥವಾಗುತ್ತಿಲ್ಲ. ಆದ್ದರಿಂದ ಶೀಘ್ರ ಎನ್ನುವುದಕ್ಕೆ definition ಏನೆಂದು ಸರ್ಕಾರ ಹೇಳಬೇಕು. ಮೂರು ತಿಂಗಳ ಹಿಂದೆ ಶೀಘ್ರ ಎಂದು ಉತ್ತರದಲ್ಲಿ ಹೇಳಿರುವುದು ಇನ್ನೂ ಜಾರಿಗೆ ಬಂದಿಲ್ಲ. ಈಗ ಒಂದು ವರ್ಷ ಕಳೆಯುತ್ತಾ ಬಂತು. ಇದನ್ನು ಯಾವ ಸಮಯದೊಳಗೆ ಕೊಡುತ್ತಾರೆ. ಏಕಚನೆಯದಾಗಿ ಮೊರಾರ್ಜಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳನ್ನು ಸ್ಥಾಪಿಸುವ ಉದ್ದೇಶ ಮಾನ್ಯ ಸಚಿವರಿಗೆ ತಿಳಿದಿದೆ. ನವೋದಯ ಮಾದರಿಯಲ್ಲಿ ಈ ಶಾಲೆಗಳನ್ನು ನಡೆಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಪ್ರತಿಭಾನ್ವಿತ ದಲಿತ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಆ ಶಾಲೆಗಳಲ್ಲಿ ಇರುವ ಶಿಕ್ಷಕರಿಗೆ ಕೊಡುವ ಸೌಲಭ್ಯಗಳಲ್ಲಿ ವಿಳಂಬವಾದರೆ ಹೇಗೆ? ಅಲ್ಲದೇ ಸಾರ್ವಜನಿಕರ ಶಿಕ್ಷಣ ಇಲಾಖೆಯಲ್ಲಿನ ಶಿಕ್ಷಕರಿಗಿಂತ ಕಡಿಮೆ ಮಟ್ಟದ ಶಿಕ್ಷಕರು ಎಂದು ನಿರ್ಣಯ ತೆಗೆದುಕೊಳ್ಳುವುದಾದರೆ ಹೇಗೆ? ಸಾರ್ವಜನಿಕರ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿಯಾದಾಗ ಮೊರಾರ್ಜಿ ಶಾಲೆಯ ಶಿಕ್ಷಕರು ನೌಕರಿ ಬಿಟ್ಟು ಅಲ್ಲಿಗೆ ವಲಸೆ ಹೋಗುವ ಸ್ಥಿತಿ ಬಂದಿದೆ. ಅಂದರೆ ಅಷ್ಟರಮಟ್ಟಿಗೆ ಸೌಲಭ್ಯಗಳ ಕೊರತೆ ಇಲಾಖೆಯಿಂದ ನಿರ್ಮಾಣವಾಗಿದೆ. ಜವಹರ್‌ಲಾಲ್ ನೆಹರೂ ನವೋದಯ ವಿದ್ಯಾಲಯಗಳನ್ನು ಬಿಟ್ಟುಬಿಡಲಿ. ಆದರೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಮಟ್ಟಕ್ಕಾದರೂ ಸೌಲಭ್ಯಗಳನ್ನು ಕೊಡಲು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(277) YL-VK/20.03.2017/11.40

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ವಸತಿ ಶಾಲಾ ಶಿಕ್ಷಕರ ಸಂಘಗಳ ಸಮಸ್ಯೆಗಳು ಸಂಪೂರ್ಣವಾಗಿ ನಮ್ಮೆಲ್ಲರ ಅರಿವಿನಲ್ಲಿದೆ. ಸದರಿ ಸಂಸ್ಥೆಗೆ ಎಲ್ಲೆಲ್ಲಿಂದ ಶಿಕ್ಷಕರು ನೇಮಕವಾದರು, ನಂತರ ಯಾವ ರೀತಿ ಆ ಶಿಕ್ಷಕರಿಗೆ ಪರೀಕ್ಷೆಯನ್ನು ಮಾಡಿ, ನೇಮಕ ಮಾಡಿಕೊಂಡಿದ್ದೇವೆ ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿದೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕಂಥವರನ್ನು ಖಾಯಂಗೊಳಿಸುವಂತಹ ಸಂದರ್ಭದಲ್ಲಿ ಕೋರ್ಟ್‌ಗಳು ನೀಡಿದಂತಹ ನಿರ್ದೇಶನ ಇವೆಲ್ಲದರ ಅರಿವು ಮಾನ್ಯ ಸದಸ್ಯರಿಗೆ ಇದೆ. ಒಟ್ಟು 518 ಮೊರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳು ಇವತ್ತಿನ ದಿನ ನಡೆಯುತ್ತಿದೆ. ಸದರಿ ಶಾಲೆಗಳಲ್ಲಿ ಸಂಪೂರ್ಣವಾಗಿ ಇವತ್ತಿಗೂ ಕೂಡ ಖಾಯಂ ಶಿಕ್ಷಕರನ್ನು ನೇಮಕಗೊಳಿಸುವಂತಹ ಪ್ರಕ್ರಿಯೆ ನಡೆಯುತ್ತಿದೆ. ಸದರಿ ಶಾಲೆಗಳಿಗೆ ಸರಿಯಾದಂತಹ ರೀತಿಯಲ್ಲಿ ಪೂರ್ಣವಾಗಿ ಆ ಶಿಕ್ಷಕರಿಗೆ ಕೆಸಿಎಸ್‌ಆರ್‌ಎಸ್ ನಿಯಮಾವಳಿಗಳ ರೀತ್ಯಾ ಕೊಡಬೇಕಾದಂತಹ ಸವಲತ್ತುಗಳನ್ನು ಕೊಟ್ಟಿದ್ದೇವೆ. ಈ ಸಂಸ್ಥೆಯಲ್ಲಿ ಏನಾಗಿದೆಂದರೆ ಬಡ್ತಿ ನೀಡಬೇಕಾಗಿದೆ ಮತ್ತು ಜೇಷ್ಠತೆಯನ್ನು ಕಾಪಾಡಬೇಕಾಗಿದೆ. ಹಾಗೂ 518 ಶಾಲೆಗಳಿಗೂ ಕೂಡ ಪ್ರಿನ್ಸಿಪಾಲರನ್ನು ನೇಮಕ ಮಾಡಬೇಕು, ಅದರ ಜೊತೆಗೆ ಇನ್ನುಳಿದಂತಹ ಎಲ್ಲಾ ವಿಷಯಗಳಿಗೂ ಕೂಡ ಶಿಕ್ಷಕರನ್ನು ನೇಮಕ ಮಾಡಿ, ಪೂರ್ಣ ಪ್ರಕ್ರಿಯೆ ಆದನಂತರ ಏನು ಸರ್ಕಾರಿ ನೌಕರರಿಗೆ ಸಿಗುತ್ತಿರುವಂತಹ ಬಡ್ತಿ ಮೀಸಲಾತಿ, ಬಡ್ತಿ, ವೃತ್ತಿಪರ ಸವಲತ್ತು ಸೌಲಭ್ಯಗಳನ್ನು ಕೊಡುವುದಕ್ಕೆ ನಾವು ಅದರ ಕೌನ್ಸಿಲ್ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಒಂದು ವರ್ಷದಿಂದ ಶಿಕ್ಷಕರನ್ನು ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಒಂದು ವರ್ಷವಾಗಿದೆ ಅಲ್ಲವೇ? ನೀವು ಮತ್ತೆ ಹೆಚ್ಚುವರಿ ವೇತನ ಕೊಡುವುದಿಲ್ಲ. ಯಾವತ್ತು ಇದನ್ನು ಜಾರಿಗೆ ತರುತ್ತೀರೋ ಅವತ್ತಿನಿಂದ effect ಗೆ ಬರುವುದು.

**ಶ್ರೀ ಎಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಮೊರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಿಗೆ ಸಂಬಂಧಪಟ್ಟ ವಿಚಾರವೇ ಬೇರೆ. ಇನ್ನುಳಿದಂತಹ ಶಾಲೆಗಳ ವಿಚಾರವೇ ಬೇರೆ. ಇದು ಸರ್ಕಾರಿ ಶಾಲಾ ಕಾಲೇಜುಗಳ ನೇಮಕ ಆಗಿದೆ. ಆದರೆ, ಇದರ ನಿಯಮಾವಳಿಗಳೆ ಬೇರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧಾನದಾಗಿದ್ದು, ಸದರಿ ಶಾಲೆಗಳಲ್ಲಿ ಬಹಳ ಗೊಂದಲಗಳಿವೆ. ಮಾನ್ಯ ಸದಸ್ಯರು ಹೇಳಿರುವುದರಿಂದಲೇ ಅವರೆಲ್ಲರನ್ನೂ ಕೂಡ ಕರೆದು ಮಾತನಾಡಿದ್ದೇವೆ. ಈ ವಿಚಾರವು ತಮಗೂ ಕೂಡ ಗೊತ್ತಿದೆ. ಮಾನ್ಯ ಸದಸ್ಯರೆಲ್ಲರ ಸಮ್ಮುಖದಲ್ಲಿ ಮಾನವೀಯತೆಯ ದೃಷ್ಟಿಯಿಂದ ಒಂದು weightage marks ಕೊಟ್ಟು ಖಾಯಂಗೊಳಿಸಬೇಕೆಂಬ ಸಂದರ್ಭ ಬಂದಾಗ ಕೇವಲ 200, 300 ಶಿಕ್ಷಕರು ಮಾತ್ರ ನೇಮಕಗೊಳ್ಳುತ್ತಿದ್ದರು. ಮಾನ್ಯ ಸದಸ್ಯರೆಲ್ಲರ ಹೋರಾಟದ ಪ್ರತಿಫಲದಿಂದ 600 ಜನ ಶಿಕ್ಷಕರನ್ನು ಈಗಾಗಲೇ ಖಾಯಂಗೊಳಿಸಿದ್ದೇವೆ. ಉಳಿದಂತಹ ಶಿಕ್ಷಕರನ್ನು ನೇಮಕಗೊಳಿಸುವ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ. ಆದುದರಿಂದ ಜೂನ್ ತಿಂಗಳೊಳಗಾಗಿ ಖಾಯಂ ಶಿಕ್ಷಕರನ್ನು ನೇಮಕಗೊಳಿಸಿ, ನಂತರ ಮೊರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಏನು ಸೌಲಭ್ಯಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನು ನಂತರ ಒದಗಿಸುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತೇವೆ. ಸದರಿ ಶಾಲೆಯೂ ಕೂಡ ಒಂದು ಸಂಸ್ಥೆಯಾಗಿದೆ. ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಕೆಸಿಎಸ್ಆರ್ಎಸ್ ನಿಯಮದ ಪ್ರಕಾರ ಶಿಕ್ಷಕರಿಗೆ ಕೊಡಬೇಕಾದಂಥಹ ಭತ್ಯೆಗಳಾದ ರಜೆ ಭತ್ಯೆ, ಹೆರಿಗೆ ಭತ್ಯೆ ಮತ್ತು ವೈದ್ಯಕೀಯ ವೆಚ್ಚದ ಭತ್ಯೆ ಎಲ್ಲಾ ರೀತಿಯ ಭತ್ಯೆಗಳನ್ನು ಕೊಡುವಂತಹ ಕ್ರಮವನ್ನು ಕೈಗೊಂಡಿದ್ದೇವೆ. ಇವೆಲ್ಲವನ್ನು ಕೂಡ ಮಾನ್ಯ ಸದಸ್ಯರ ಸಲಹೆಯ ಮೇರೆಗೆ ಹಾಗೂ ಅವರ ಸಮ್ಮುಖದಲ್ಲಿಯೇ ಸಭೆಗಳನ್ನು ನಡೆಸಿ, ಇಲ್ಲಿ ಬಂದಂತಹ ಸಲಹೆಗಳನ್ನೇ ನಾವು ಅಂಗೀಕರಿಸಿ ಮಾಡಿದ್ದೇವೆ. ಅದೇ ರೀತಿ ಮೊರಾರ್ಜಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಿಗೂ ಕೂಡ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿಗಳನ್ನು ನೇಮಕ ಮಾಡಿದ ನಂತರ ನಾವು ಇದರ ಬಗ್ಗೆ ಒಂದು ಗಮನವನ್ನು ಹರಿಸಿ ಮಾನ್ಯ ಸದಸ್ಯರ ಮನವಿಯನ್ನು ಬಹಳ ಗಂಭೀರವಾಗಿ ಪರಿಶೀಲಿಸಿ, ಸದರಿ ಶಾಲೆಗೂ ಸಹಾಯ ಮಾಡುವ ಕೆಲಸವನ್ನು ಮಾಡುತ್ತೇನೆ.

**ಶ್ರೀ ತಾರಾಅನೂರಾಧ:-** ಮಾನ್ಯ ಸಭಾಪತಿಯವರೆ, ಒಂದೇ ಒಂದು ಸಲಹೆಯನ್ನು ನೀಡಬಯಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನೇ ಕೊಟ್ಟಿದ್ದಾರಲ್ಲವೇ?

**ಶ್ರೀ ತಾರಾಅನೂರಾಧ:-** ಮಾನ್ಯ ಸಭಾಪತಿಯವರೆ, ಸಮಾಜ ಕಲ್ಯಾಣಕ್ಕೂ, ಶಿಕ್ಷಣ, ವಸತಿಗೂ ಏನು ಸಂಬಂಧ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಇಲ್ಲವೆಂದರೆ ಶಿಕ್ಷಣ ಇಲಾಖೆಯನ್ನು ವರ್ಗಾವಣೆ ಮಾಡಲಿ. ಆಗ ಸಮಸ್ಯೆಗಳೇ ಬರುವುದಿಲ್ಲವಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಒಂದು ಸಲಹೆ ಇರುವುದೇನೆಂದರೆ ಶಿಕ್ಷಕರ ಒಟ್ಟು ಸೇವಾ ವಿಚಾರಗಳು ಕೂಡ ಇವೆ. ಹಾಗಾಗಿ ಅಲ್ಲಿ ಏನಾಗುತ್ತದೆಂದರೆ, ಇದೆಲ್ಲವನ್ನೂ ಜಾರಿಗೆ ತರಲು ನಿಮ್ಮ Executive Council Meeting ಮಾಡಿ ನೀವು ಅಳವಡಿಸಿಕೊಳ್ಳುವಷ್ಟರಲ್ಲಿ 6 ತಿಂಗಳು, 1 ವರ್ಷವಾಗುತ್ತದೆ. ಅದರ ಪರಿಣಾಮವಾಗಿ ಈ ಶಿಕ್ಷಕರಿಗೆ ಎಲ್ಲಿಯೋ ಒಂದು ಕಡೆ ನಮಗೆ ಅನ್ಯಾಯವಾಗುತ್ತಿದೆ ಎನ್ನುವ ಭಾವನೆ ಇದೆ. ಯಾವುದನ್ನು ಮಾನ್ಯ ಸಚಿವರು ಜವಹಾರ್‌ಲಾಲ್ ನೆಹ್ರು ನವೋದಯದ ಮಾದರಿಯಲ್ಲಿ ಮಾಡಬೇಕಾಗಿತ್ತೋ? ಆ ಕಡೆಗೆ ಹೆಚ್ಚಿನ ನಿಗಾವಹಿಸಬೇಕಾಗುತ್ತದೆ. ಮಾನ್ಯ ಸಚಿವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರ ಮಾದರಿಯಲ್ಲಿಯೂ ತೆಗೆದುಕೊಂಡು ಹೋಗುತ್ತಿಲ್ಲವೆನ್ನುವುದು ಬಹಳ ದೊಡ್ಡ ಹೊಡೆತವಾಗುತ್ತದೆ. ಇದು ಶೈಕ್ಷಣಿಕವಾಗಿ ಬಹಳ ತೊಂದರೆಯಾಗುತ್ತದೆ. ಆ ಹಿನ್ನೆಲೆಯಲ್ಲಿ ಈ ಶಿಕ್ಷಕರ ಸೇವೆಯನ್ನು ನೀವು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿ, ಅವರನ್ನು ಎರವಲು ಸೇವೆಯ ಮೇರೆಗೆ ಅವರ ಇಲಾಖೆಯಲ್ಲಿಯೇ ನೇಮಕಾತಿ ಮಾಡಬಹುದು ಎನ್ನುವಂತಹ ಒಂದು ಸಲಹೆ ಇದೆ. ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಬೇಕು. ಹಾಗೂ ಒಂದು ಹೆಚ್ಚುವರಿ ವೇತನವನ್ನು ಯಾವ ದಿನಾಂಕದೊಳಗೆ ಮಾಡುತ್ತಾರೆಂಬುದನ್ನು ಸಚಿವರು ಹೇಳಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ Executive Council ಸಭೆಯಾಗಿದ್ದು ಅಲ್ಲಿ ಹೆಚ್ಚುವರಿ ವೇತನವು pass ಆಗಿಲ್ಲ. ಇನ್ನು next Executive Council ಯಾವಾಗ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೌಢ ಶಾಲಾ ಶಿಕ್ಷಕರು, ಮುಖ್ಯ ಗುರುಗಳು, ಪದವಿ ಪೂರ್ವ ಉಪನ್ಯಾಸಕರು, ಪ್ರಾಚಾರ್ಯರು ಏನಿದ್ದಾರೆ ಅವರೆಲ್ಲರೂ ಹೋರಾಟ ಮಾಡುವ ಪರಿಸ್ಥಿತಿಯನ್ನು ದಯವಿಟ್ಟು ತರಬೇಡಿ. ಏಕೆಂದರೆ ಪರೀಕ್ಷೆಯೂ ಹತ್ತಿರದಲ್ಲಿಯೇ ಇದೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಆ ಒಂದು increment ಯಾವಾಗ ಮಾಡುತ್ತೀರೆಂಬುದನ್ನು ಘೋಷಣೆ ಮಾಡಬೇಕು.

**ಶ್ರೀ ಎಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ನವೋದಯ ಮಾದರಿಯಲ್ಲಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಸದರಿ ಸಂಸ್ಥೆಯಲ್ಲಿ ಶಿಕ್ಷಕರ ನೇಮಕಾತಿ ಯಾವ ರೀತಿಯಾಗಿದೆ ಎಂಬುದನ್ನು ಈ ರಾಜ್ಯವನ್ನಾಳುವ ರಾಜಕಾರಣಿಗಳು ಹಾಗೂ ನಾವು, ಮಾನ್ಯ ಸದಸ್ಯರೆಲ್ಲರೂ ಸೇರಿಕೊಂಡು ಏನು ಮಾಡಿದ್ದೇವೆಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನವೋದಯ ಮಾದರಿಯಲ್ಲಿ ಅವರದೇ ಆದಂತಹ ಒಂದು ನಿಯಮವನ್ನು frame ಮಾಡಿ. ನಂತರ ಒಂದು exam ಮಾಡಿ, ಅದಕ್ಕೆ ವೇತನವನ್ನೆಲ್ಲಾ ನಿಗಧಿ ಮಾಡಿ, ನೇಮಕಾತಿ ಮಾಡಿಕೊಂಡಿದ್ದಾರೆ. ನೇಮಕಾತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡ ಮೇಲೆ ಬಹಳ ಕಟ್ಟುನಿಟ್ಟಿನ ರೀತಿಯಲ್ಲಿ ಶಿಕ್ಷಣವನ್ನು ಕೊಡುತ್ತಾರೆ. ಆದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಆ ರೀತಿಯಾಗುವುದಿಲ್ಲ. ಶಾಲೆಯನ್ನು ಆರಂಭ ಮಾಡಿದ ಮೇಲೆ, ಹೋಗಿ ಜಿಲ್ಲಾ ಪಂಚಾಯತಿಯವರ ಹತ್ತಿರ ಹೋಗಿ ಎಲ್ಲಿಯೂ ಕೂಡ ಕೆಲಸ ಸಿಗದೇ ಇರುವಂತಹ ಮಹನೀಯರನ್ನು ಕರೆದುಕೊಂಡು ಬಂದು, ನಾವೆಲ್ಲರೂ ಹೊರಗುತ್ತಿಗೆ ಆಧಾರದ ಮೇಲೆ ಸೇರಿಸಿಕೊಂಡಿದ್ದೇವೆ ಮಾನ್ಯ ಸದಸ್ಯರೆ, ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಸಮಸ್ಯೆಯಾಗುತ್ತದೆ. ಆ ವಿಚಾರ ಬೇಡ. ಆದ್ದರಿಂದ ಹಂತ ಹಂತವಾಗಿ ಏನೇನು ಬೇಕೋ ಅದನ್ನು ಮಾಡಿಕೊಡುತ್ತೇನೆ ದಯವಿಟ್ಟು ನಮ್ಮನ್ನು ಮಾನ್ಯ ಸದಸ್ಯರೆ ಬಿಟ್ಟು ಬಿಡಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, increment ಯಾವಾಗ ಮಾಡುತ್ತಾರೆ

**ಶ್ರೀ ಎಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ನೋಡೋಣ ಮಾಡುತ್ತೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಮತ್ತೆ ಅವರು ಪರೀಕ್ಷೆ ಬರೆಸಬೇಕಾದದ್ದು ಇದೆ. ಮತ್ತೆ ಅವರು ಪರೀಕ್ಷೆ ಬಹಿಷ್ಕರಿಸಿದರೆ?

**ಶ್ರೀ ಎಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರೆಲ್ಲ ಹೇಳಿದ ನಂತರ ಕೆಸಿಎಸ್‌ಆರ್ ನಿಯಮವನ್ನು ಅಳವಡಿಸಿಕೊಂಡು ಎಲ್ಲಾ ಸವಲತ್ತುಗಳನ್ನು ಕೊಡುತ್ತಿದ್ದೇವೆ. ಮುಂದೆ ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದನ್ನು ಪರಿಶೀಲನೆ ಮಾಡಿ ಎಂದು ನಮ್ಮ ಹಿರಿಯ ನಾಯಕರು ಹೇಳಿದ್ದಾರೆ. ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:859**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕುಳಗೇರಿಯ ಜವಹರ್‌ಲಾಲ್ ನೆಹರು ನವೋದಯ ವಸತಿ ಶಾಲೆಯಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದರ ಜೊತೆಗೆ 50 ಕ್ಕೂ ಹೆಚ್ಚು ಸಿಬ್ಬಂದಿ ವರ್ಗದ ಕುಟುಂಬಗಳು ವಾಸಿಸುತ್ತಿರುವುದರಿಂದ ಕಳೆದ ಒಂದು ಒಂದೂವರೆ ತಿಂಗಳಿನಿಂದ ಸಾಕಷ್ಟು ಕುಡಿಯುವ ನೀರಿಗಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಸದರಿ ಜಿಲ್ಲೆಯಲ್ಲಿ ವಾಸ ಮಾಡುತ್ತಿರುವಂತಹ ಪಾಲಕರು ಕೂಡ ಈ ನೀರಿನ ಸಮಸ್ಯೆಯನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಆದರೆ, ನವೋದಯ ವಸತಿ ಶಾಲೆಯೂ ಭಾರತ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಸದರಿ ಶಾಲೆಗೆ ಏನು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಬರುವುದಿಲ್ಲವೆಂಬ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ, ನಾನು ಹೇಳುವುದೇನೆಂದರೆ, ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರದ ಶಾಲೆ ಮತ್ತು ರಾಜ್ಯ ಸರ್ಕಾರದ ಶಾಲೆ ಎನ್ನತಕ್ಕಂಥ ಬೇಧ ಭಾವವನ್ನು ಮಾಡದೇ, ಸದರಿ ಶಾಲೆಯಲ್ಲಿರತಕ್ಕಂಥ ಮಕ್ಕಳು ನಮ್ಮ ರಾಜ್ಯದ ಮಕ್ಕಳು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ನವೋದಯ ವಸತಿ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಸಂದರ್ಭದಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಮತ್ತೊಂದು ಕೊಳವೆ ಬಾವಿಯನ್ನು ಅಕ್ಕಪಕ್ಕದಲ್ಲಿ ನೀರಾವರಿ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಮತ್ತೊಂದು ಕೊಳವೆ ಬಾವಿಯನ್ನು ಕೊರೆಸುವುದರ ಮೂಲಕ ಆದಷ್ಟು ಶೀಘ್ರವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಬರಗಾಲದ ಪರಿಸ್ಥಿತಿಯಲ್ಲಿ task force ನಲ್ಲಿ ಆಗಿರಬಹುದು, ಬರಗಾಲದ ಪರಿಹಾರ ನಿಧಿಯಿಂದಾಗಿರಬಹುದು. ಯಾವುದೇ ಒಂದು ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡು ಆದಷ್ಟು ಶೀಘ್ರವಾಗಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಕಸ್ತೂರಿ ಬಾ ನವೋದಯ ವಸತಿ ಶಾಲೆಗಳಿಗೆಲ್ಲಾ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿದರೆ ಬಹಳ ಒಳ್ಳೆಯದಾಗುತ್ತದೆ ಎನ್ನುವ ವಿಚಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ ಸುಮಾರು 10,000 ಹೆಚ್ಚು ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸುತ್ತಿರುವಂಥಹ ಸಂದರ್ಭದಲ್ಲಿ ನವೋದಯ ಶಾಲೆಯ ಮಕ್ಕಳಿಗೂ ಕೂಡ ಶುದ್ಧ ಕುಡಿಯುವ ನೀರಿನ ಘಟಕವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಶೀಘ್ರವಾಗಿ ಇಲ್ಲಿ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಮಾರ್ಗದರ್ಶನವನ್ನು ಮಾಡುವುದಕ್ಕೆ ಈ ಸಂದರ್ಭದಲ್ಲಿ ನಿರ್ದೇಶನವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಎಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ತಮಗೂ ಗೊತ್ತಿದೆ. ನವೋದಯ ವಸತಿ ಶಾಲೆಯ ನನ್ನ ಆಡಳಿತಕ್ಕೆ ಬರುವುದಿಲ್ಲ. ಆದರೆ, ಮಕ್ಕಳು ಎಂದ ಮೇಲೆ ಎಲ್ಲಾ ಮಕ್ಕಳು ನಮ್ಮವರೆ ಆಗಿರುವುದರಿಂದ ಅಲ್ಲಿನ ಸಂಬಂಧ ಪಟ್ಟ ಇಲಾಖೆಯೊಂದಿಗೆ ಸಂಪರ್ಕ ಮಾಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಸುತ್ತೇವೆ. ಆ ಇಲಾಖೆಯವರೇನಾದರೂ ಮಾಡಲಿಲ್ಲವೆಂದರೆ ನಮ್ಮ ಇಲಾಖೆಯಿಂದಲೇ ಒಂದು ಕೊಳವೆ ಬಾವಿಯನ್ನು ಕೊರೆಯಿಸಿ, ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾನವೀಯತೆಯ ದೃಷ್ಟಿಯಿಂದ ಮಾಡುತ್ತೇನೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿದ ಹಾಗೆ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಶ್ರೀ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಬೇಕೆಂದು ಹೇಳಿದ್ದಾರೆ. ಅದೇ ರೀತಿ ಎಲ್ಲಾ ಕಡೆಯೂ ಕೂಡ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡಿ, ಒಳ್ಳೆಯ ನೀರನ್ನು ಮಕ್ಕಳಿಗೆ ಒದಗಿಸುವ ಕಡೆಗೆ ಕ್ರಮವನ್ನು ಕೈಗೊಳ್ಳುತ್ತೇವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಂತ ಹಂತವಾಗಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ನಾವು ಬಹಳ ಸಮರೋಪಾದಿಯಲ್ಲಿ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ವಿಜಯ ಸಿಂಗ್‌ರವರ **ಪ್ರಶ್ನೆ ಸಂಖ್ಯೆ: 844ಕ್ಕೆ** ಮಾನ್ಯ ಸಚಿವರು ಕಾಲಾವಕಾಶವನ್ನು ಕೋರಿದ್ದಾರೆ.

**ಪ್ರಶ್ನೆ ಸಂಖ್ಯೆ 476**

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಾನೆ ಶ್ರೀನಿವಾಸ್‌ರವರು ಸದನದಲ್ಲಿ ಹಾಜರಿರಲಿಲ್ಲ.)

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 762**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿರುವಂತಹ ಲಿಖಿತ ಉತ್ತರದಲ್ಲಿ ನನ್ನ ಮೊದಲನೇ ಪ್ರಶ್ನೆಗೆ ಹೌದು ಎಂದು ಉತ್ತರವನ್ನು ನೀಡಿದ್ದಾರೆ. ನನ್ನ ಎರಡನೇ ಪ್ರಶ್ನೆಗೆ ದಿನಾಂಕ: 03.05.2017 ರಂದು ನಡೆದ ಕ್ರಿಯಾ ಯೋಜನೆಯಲ್ಲಿ ಬಾಲಕಿಯರ ವಸತಿ ನಿಲಯಗಳನ್ನು ಬೇರೆ ಅಭಿವೃದ್ಧಿ ಇಲಾಖೆಯಿಂದ ಮಾನ್ಯ ಸಚಿವರು ಬಳಸಿಕೊಳ್ಳಲು ತೀರ್ಮಾನಿಸಲಾಗುತ್ತದೆಂದು ತಿಳಿಸಿದ್ದಾರೆ. ಶ್ರೀ ಚರಬಸವೇಶ್ವರ ಗ್ರಾಮೀಣ ಬಾಲಕಿಯರ ವಸತಿ ನಿಲಯವು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರತಕ್ಕಂಥ ಒಂದು ಅನುದಾನಿತ ಸಂಸ್ಥೆ. ಈ ಬಾಲಕಿಯರ ವಸತಿ ನಿಲಯದಲ್ಲಿ ಈಗಾಗಲೇ 50 ಬಾಲಕಿಯರಿದ್ದಾರೆ. ಇದೊಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದ್ದು, ಈ ಸಂಸ್ಥೆ ಚೆನ್ನಾಗಿಯೇ ನಡೆಯುತ್ತಿರುವುದರಿಂದ ಬಹಳಷ್ಟು ಪೋಷಕರು ತಮ್ಮ ಮಕ್ಕಳನ್ನು ಈ ಹಾಸ್ಟೆಲ್‌ಗೆ ಸೇರಿಸಬೇಕೆಂದು ಇಚ್ಛೆಪಡುತ್ತಿರುವುದರಿಂದ ಬಹಳ ಬೇಡಿಕೆಯೂ ಇದೆ.

(ಮುಂದು) . . .

(278) 20-03-2017 (12-50)BSD-VK

ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು)

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಹಿಳೆಯರಾಗಿದ್ದು, ನಮ್ಮ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಮಹಿಳೆಯರ ಅಕ್ಷರತೆ ಬಹಳಷ್ಟು ಕಡಿಮೆ ಇದ್ದು, ಈ ಸಂದರ್ಭದಲ್ಲಿ ಅನುಕೂಲವಾಗುವವರಿಗೆಲ್ಲಾ ಹೆಚ್ಚು ಅನುಕೂಲಗಳನ್ನು ಕಲ್ಪಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಚರಬಸವೇಶ್ವರ ಬಾಲಕಿಯರ ವಸತಿ ನಿಲಯದಲ್ಲಿ ಸಂಖ್ಯಾಬಲವನ್ನು ಹೆಚ್ಚು ಮಾಡುವ ಬಗ್ಗೆ ಕೇಳಿದ್ದಾರೆ. ಈಗಾಗಲೇ ಮೆಟ್ರಿಕ್ ಪೂರ್ವಕ್ಕೆ ಸಂಬಂಧಪಟ್ಟಂತೆ ಸುಮಾರು 23 ವಸತಿ ನಿಲಯಗಳು ಹಾಗೂ ಮೆಟ್ರಿಕ್ ನಂತರದಲ್ಲಿ 21 ವಸತಿ ನಿಲಯಗಳನ್ನು ನಮ್ಮ ಇಲಾಖೆಯಿಂದ ನಡೆಸುತ್ತಿದ್ದೇವೆ. ಇದಲ್ಲದೇ ಬಿಸಿಎಂ, ಎಸ್‌ಸಿ., ಎಸ್‌ಟಿ ಹಾಗೂ ಇತರ ಬೇರೆ ಬೇರೆ ಇಲಾಖೆಗಳ ವತಿಯಿಂದ ಹಾಸ್ಟೆಲ್‌ಗಳು ನಡೆಯುತ್ತಿವೆ. ನಮ್ಮಲ್ಲಿಯೂ ಬಹಳ ಬೇಡಿಕೆ ಇತ್ತು. ಆದರೆ ನಮಗೆ 25% ಅವಕಾಶ ಇದ್ದು, ವಿದ್ಯಾಸಿರಿಯನ್ನು ಕೊಡುತ್ತಿರುವುದರಿಂದ ನಮ್ಮಲ್ಲಿ ಹೆಚ್ಚು ಬೇಡಿಕೆ ಇದ್ದರೂ, ಬೇರೆ ಕಡೆ ಅವಕಾಶಗಳು ಇರುವುದರಿಂದ ಮೊದಲು ಆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಲಿ ಎನ್ನುವ ಕಾರಣದಿಂದ ಮುಂದೂಡಿದೆವು. ಆದ್ದರಿಂದ ನಾವು ಕೊಡಲು ಸಾಧ್ಯವಾಗಲಿಲ್ಲ. ಇದೇ ರೀತಿ ಮೆಟ್ರಿಕ್‌ಪೂರ್ವದ 23 ಬಾಲಕಿಯರ ವಸತಿ ನಿಲಯಗಳ 14 ವಸತಿ ನಿಲಯಗಳಲ್ಲಿ 50 ಸಂಖ್ಯಾಬಲ ಹೊಂದಿದ್ದು, ಮೆಟ್ರಿಕ್ ನಂತರದ 21 ವಸತಿ ಶಾಲೆಗಳಲ್ಲಿ 14

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಖ್ಯಾಬಲವನ್ನು ಹೊಂದಿದೆ. ಹಾಗಾಗಿ ಬೇರೆ ಬೇರೆ ಕಡೆ ಬೇಡಿಕೆ ಇರುವುದರಿಂದ ನಾವು ಮುಂದೆ ಹಾಕಿದ್ದೇವೆ. ಇದಲ್ಲದೇ ಹೊಸದಾಗಿ ಎಸ್‌ಸಿ., ಎಸ್‌ಟಿ., ಬಾಲಕಿಯವ ವಿದ್ಯಾರ್ಥಿನಿಲಯವು ಪ್ರಾರಂಭವಾಗಿದೆ. ಅದಕ್ಕೆ ಇನ್ನೂ enrolment ಶುರು ಆಗಿಲ್ಲ ಮತ್ತು ಅಲ್ಲಿಯೂ 25% ಇರುತ್ತದೆ. ಆ ಕಾರಣಕ್ಕಾಗಿ ನಾವು ಮುಂದೆ ಹಾಕಿದ್ದೇವೆ.

ಪ್ರಶ್ನೆ ಸಂಖ್ಯೆ: 768

ಉತ್ತರದ ಪ್ರತಿ ಲಗತ್ತಿಸಿದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಗಿರಿಜನ ಕುಟುಂಬಗಳಿಗೆ ಮಳೆಗಾಲದಲ್ಲಿ ಆರು ತಿಂಗಳು ಆಹಾರವನ್ನು ಒದಗಿಸುವ ನೂತನ ಯೋಜನೆಯನ್ನು ತಂದಿರುವುದಕ್ಕಾಗಿ ಅಭಿನಂದಿಸುತ್ತೇನೆ. ಆದರೆ ಗಿರಿಜನ ಕುಟುಂಬಗಳಿಗೆ ಆಹಾರ ಒದಗಿಸುವ ಸಂದರ್ಭದಲ್ಲಿ ಕೆಲವು ಗಿರಿಜನ ಕುಟುಂಬಗಳಿಗೆ ಆಹಾರವನ್ನು ಒದಗಿಸುವಲ್ಲಿ ಕೆಲವು ಗಿರಿಜನ ಪಂಗಡಗಳನ್ನು ಗುರುತಿಸಿ, ಕೆಲವನ್ನು ಬಿಟ್ಟಿದ್ದಾರೆ. ಅದರಲ್ಲಿ ಗೌಡಲು ಮತ್ತು ಹಸಲರನ್ನು ಸೇರಿಸಿದ್ದು, ನಮ್ಮ ಜಿಲ್ಲೆಯಲ್ಲಿ ಒಟ್ಟು 6 ಪಂಗಡಗಳು ಬರುತ್ತವೆ. ಅದರಲ್ಲಿ ಮುಖ್ಯವಾಗಿ ಮಲೆಯರು ಮತ್ತು ಮಲೆಕುಡಿಯಾಸ್ ಆಗಿದ್ದಾರೆ. ಮಲೆಕುಡಿಯಾಸ್ ಜನಾಂಗದ ಬಗ್ಗೆ ಎಲ್ಲರೂ ಕೇಳಿರಬಹುದು. ಇವರು ಕಾಡಿನಲ್ಲಿ ಇದ್ದು, ಚಾರ್ಮಾಡಿ ಘಾಟ್‌ನ ಬೆಟ್ಟದ ಮೇಲೆ ಇರುತ್ತದೆ. Alekhan Horatti, Bidarahalli, ಆಲೇಕಾನ್‌ಹೊರಟ್ಟಿ, ಬಿದರಹಳ್ಳಿ ಮತ್ತು ಕಳಸ ಸುತ್ತಮತ್ತಲಿನ ಪ್ರದೇಶಗಳಲ್ಲಿ ಹಾಗೂ ಬಾರಿ ಮಲಯದ ಘಾಟ್ ಕೆಳಗಿನ ಪ್ರದೇಶದಲ್ಲಿ ಇವರು ಇರುತ್ತಾರೆ. ಅಲ್ಲಿರುವ ಜನರಲ್ಲಿ ಮಲೆಯರು ಮತ್ತು ಮಲೆಕುಡಿಯಾಸ್ ಜನಾಂಗವನ್ನು ಬಿಟ್ಟಿದ್ದಾರೆ. ಅದೇರೀತಿ ಮೇಧಾ ಜನಾಂಗವನ್ನು ಬಿಟ್ಟಿದ್ದು, ಏಕೆ ಬಿಟ್ಟಿದ್ದಾರೆ ಎಂಬುದು ನನ್ನ ಪ್ರಶ್ನೆಯಾಗಿದೆ. ITDPs (Integrated Tribal Development Projects) ಅನ್ನು ಕೊಡಲು ಹತ್ತು ಸಾವಿರ ಜನಸಂಖ್ಯೆ ಹೊಂದಿರಬೇಕೆಂದು ಇದೆ. ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಮಾನ್ಯ ಹಾವನೂರ್‌ರವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ನಾನು ಈ ಯೋಜನೆಯನ್ನು ತೆಗೆದುಕೊಂಡಿದ್ದು, ಈಗ ಮೂಡಿಗೆರೆಯಲ್ಲಿ ಕೇವಲ ಮೂರು ಸಾವಿರ ಜನಸಂಖ್ಯೆ ಎಂದು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಹೇಳಬೇಕು. ಈಗ ಬಿಟ್ಟು ಹೋಗಿರುವ ಜನಾಂಗಕ್ಕೆ ಆಹಾರವನ್ನು ಏಕೆ ಒದಗಿಸಿಲ್ಲ ಮತ್ತು ಅವರಿಗೆ ಆಹಾರವನ್ನು ಒದಗಿಸುತ್ತಾರೆಯೇ ಎಂದು ಸ್ಪಷ್ಟವಾಗಿ ಹೇಳಬೇಕು. ಇನ್ನು ಸುಮಾರು 7.75 ಕೋಟಿಗಳನ್ನು ನಿಗದಿ ಮಾಡಿ, ಇದರಲ್ಲಿ ಅರ್ಧದಷ್ಟು ಬಿಡುಗಡೆ ಮಾಡಿ, ಕೇವಲ 1.15 ಕೋಟಿ ಮಾತ್ರ ಖರ್ಚಾಗಿದೆ. ಇದು ಏಕೆ ಎಂಬುದಕ್ಕೆ ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬೇಕು. ಇದನ್ನು ಘೋಷಣೆ ಮಾಡಿ ಸುಮಾರು ಎರಡು ವರ್ಷಗಳಾಗಿದ್ದು, ಕಾರ್ಯಗತವಾಗುವುದರಲ್ಲಿ ಏಕೆ ದೋಷವಾಗಿದೆ ಹಾಗೂ ಇಲಾಖೆಯವರು ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲವೇ? ಇದಕ್ಕೆ ಸರಿಯಾದ survey ಏಕೆ ಮಾಡಿಲ್ಲ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಹೆಚ್. ಆಂಜನೇಯ:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ 6 ಜಿಲ್ಲೆಯಲ್ಲಿ ಆದಿ ವಾಸಿಗಳು ವಾಸ ಮಾಡುತ್ತಿದ್ದು, ಮಾನ್ಯ ಸದಸ್ಯರ ಜಿಲ್ಲೆ ಸೇರಿದಂತೆ ಒಟ್ಟು 7 ಜಿಲ್ಲೆಗಳಲ್ಲಿ ಆದಿವಾಸಿಗಳು ಕಾಡಿನಲ್ಲಿ ವಾಸ ಮಾಡುತ್ತಾರೆ. ಮಳೆಗಾಲದಲ್ಲಿ ಅವರಿಗೆ ಎಲ್ಲಿಯೂ ಕೂಲಿ ಸಿಗದೇ ಇರುವುದರಿಂದ ಜೂನ್‌ನಿಂದ ಡಿಸೆಂಬರ್‌ವರೆಗಿನ ಆರು ತಿಂಗಳ ಕಾಲ ಅವರಿಗೆ ಪೌಷ್ಟಿಕ ಆಹಾರವನ್ನು ಕೊಡುವ ಯೋಜನೆ ಇದೆ. ಚಿಕ್ಕಮಗಳೂರಿಗೆ ಈ ಯೋಜನೆ ಇರಲಿಲ್ಲ. ನಾನು ಕಳೆದ ವರ್ಷ ಆ ಜಿಲ್ಲೆಯಲ್ಲಿ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ ಬೆಳಕಿಗೆ ಬಂತು ಹಾಗೂ ಅಲ್ಲಿನ ಜನರೆಲ್ಲರೂ ಎಲ್ಲಾ ಜಿಲ್ಲೆಗಳಿಗೆ ಕೊಟ್ಟಂತೆ ಅವರಿಗೂ ಪೌಷ್ಟಿಕ ಆಹಾರವನ್ನು ಕೊಡುವ ಹಾಗೂ ಸ್ವತಂತ್ರ್ಯ ಬಂದು 70 ವರ್ಷಗಳಾಗಿ ಯಾವ ಮಂತ್ರಿಗಳು ಈ ಬಗ್ಗೆ ಮಾಡಲಿಲ್ಲ ಎಂದು ಕೇಳಿಕೊಂಡರು. ಆಗ ನನಗೆ ಎರಡು ಜನಾಂಗದವರು ಕೊಟ್ಟಿದ್ದು, ಎರಡು ಜನಾಂಗದವರನ್ನು ಸರ್ವೆ ಮಾಡುವ ಬಗ್ಗೆ ಆದೇಶ ಮಾಡಿದ್ದೆನು. ಸರ್ವೆ ಮಾಡಿದ ನಂತರ ಫಲಾನುಭವಿಗಳನ್ನು ಗುರುತು ಮಾಡಿದ ನಂತರ ಕಳೆದ ಎರಡು ತಿಂಗಳುಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಮೂಲಕ ಪಡಿತರ ವಿತರಣೆ ಮಾಡುವ ಕೆಲಸ ಮಾಡಿದ್ದೇನೆ. ಇದು ಆರನೆಯ ತಿಂಗಳಿನಿಂದ ಜಾರಿಗೆ ಬಂದಿಲ್ಲ. ಆದ್ದರಿಂದ ಕಡಿಮೆ ತಿಂಗಳುಗಳು ಆಗಿದ್ದರಿಂದ ಕಡಿಮೆ ಹಣ ಖರ್ಚಾಗಿದೆ. ಮುಂದಿನ ಜೂನ್‌ನಿಂದ ಡಿಸೆಂಬರ್‌ವರೆಗೆ ಅವರು ಪಡೆಯಬಹುದು. ಮಾನ್ಯ ಮೋಟಮ್ಮನವರು ಉಳಿದ ಜಾತಿಗಳನ್ನು ಕೈಬಿಟ್ಟಿರುವ ಬಗೆಗೆ ಪ್ರಸ್ತಾಪಿಸಿದ್ದು, ನಮ್ಮಲ್ಲಿ ಗಿರಿಜನ ಸಂಶೋಧನಾಲಯ ಇದ್ದು, ಈ ಸಂಸ್ಥೆಗೆ ಇದನ್ನು refer ಮಾಡುತ್ತೇನೆ. ಈ ಸಂಸ್ಥೆಯಿಂದ ಒಂದು ವರದಿಯನ್ನು ತರಿಸಿ, ಪೌಷ್ಟಿಕ ಆಹಾರ ಪಡೆಯಲು ಅವರು ಅರ್ಹರಿದ್ದರೆ ಅವರಿಗೂ ಒದಗಿಸುವ ಕೆಲಸವನ್ನು ಮುಂದಿನ ದಿನಗಳಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, original tribes, ಮಲೆಯರು ಮತ್ತು ಮಲೆ ಕುಡಿಯಾಸ್ ಜನಾಂಗದವರಾಗಿದ್ದಾರೆ. ಮಲೆ ಎಂದರೆ ಬೆಟ್ಟ ಎಂದಾಗುತ್ತದೆ. ಮಲೆ ಕುಡಿಯಾಸ್ ಬೆಟ್ಟದ ತಳದಲ್ಲಿ, ಕಾಡಂಚಿನಲ್ಲಿ ಇರುತ್ತಾರೆ. ಅವರನ್ನು ಬಿಟ್ಟಿದ್ದಾರೆ. ಹಸಲರು ಮಂಗಳೂರಿನಿಂದ ಮೂಡಿಗೆರೆಗೆ ಬಂದು ನೆಲೆಸಿರುವ ಜನಾಂಗವಾಗಿದ್ದು, ಮೂಲವಾಗಿ ಆ ಪ್ರದೇಶದ ಜನರಲ್ಲ. ಈ ಗುರುತು ಮತ್ತು ಸರ್ವೆ ಮಾಡುವಾಗ ಏಕೆ ತಪ್ಪಾಗಿದೆ ಎಂಬುದು ನನ್ನ ಪ್ರಶ್ನೆಯಾಗಿದೆ. ಮೂಡಿಗೆರೆಯವರಾದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಪ್ರಾಣೇಶ್‌ರವರು ಸದನದಲ್ಲಿ ಕುಳಿತಿದ್ದಾರೆ. ಅವರಿಗೂ ಈ ದೂರು ಬಂದಿದೆ. ನಾಲ್ಕೈದು ಉಪ ಪಂಗಡಗಳನ್ನು ಕೈಬಿಟ್ಟು, ಕೇವಲ ಎರಡು ಪಂಗಡಗಳನ್ನು ಮಾತ್ರ ಪರಿಗಣಿಸಿದ್ದಾರೆ. ಹಸಲರು original tribes ಅಲ್ಲ, ಅವರು ಮಂಗಳೂರಿನಿಂದ ಬಂದು ನೆಲೆಸಿರುವ ಗಿರಿಜನರು. ಆದರೆ ಮೂಲವಾಗಿ ನೆಲೆಸಿರುವ ಜನರು ಆಲೇಕಾನ್‌ಹೊರಟಿ ಮತ್ತು ಬಿದರಹಳ್ಳಿ ಹಾಗೂ ಕಳಸಾ ಸುತ್ತಮುತ್ತಲೂ ನೆಲೆಸಿದ್ದು, ಇವರನ್ನು ಕೈಬಿಡಲು ಕಾರಣವೇನು? ಇಷ್ಟೊಂದು ಹಣವಿದ್ದರೂ ಕೇವಲ ಎರಡು ಪಂಗಡಗಳಿಗೆ ಮಾತ್ರ ಕೊಟ್ಟಿದ್ದಾರೆ. ಇವರನ್ನು ಏಕೆ ಗುರುತು ಮಾಡಲಿಲ್ಲ. ಇದು ಸರಿಯೋ ತಪ್ಪೋ ಎಂದು ತಾವೇ ಹೇಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ (ವಿಧಾನಸಭಾ ಕ್ಷೇತ್ರ):-** ರಾಜ್ಯದಲ್ಲಿ ಸುಮಾರು 606 ಹಾಡಿಗಳಿದ್ದು, ಇವುಗಳಲ್ಲಿ 206 ಮೈಸೂರು ಮತ್ತು 146 ಚಾಮರಾಜ ನಗರದಲ್ಲಿವೆ. ಅದೇ ರೀತಿ ಕೊಡಗು, ಚಿಕ್ಕಮಗಳೂರು ಹಾಗೂ ಮಂಗಳೂರಿನಲ್ಲಿಯೂ ಇವೆ. ಈ 606 ಹಾಡಿಗಳಲ್ಲಿ primitive tribes, ಅಂದರೆ ಬುಡಕಟ್ಟು ಜನಾಂಗದವರಾಗಿದ್ದು, ಅವರು ಅತ್ಯಂತ ಕಷ್ಟದಲ್ಲಿರುತ್ತಾರೆ. ಈಗ ಅನ್ನಭಾಗ್ಯದ ಜೊತೆಗೆ ವಿಶೇಷವಾದ ಆಹಾರವನ್ನು ಕೊಡುತ್ತಿದ್ದು, ನನಗೆ ಅನಿಸಿದಂತೆ ಈ 606 ಹಾಡಿಗಳಿಗೆಲ್ಲಕ್ಕೂ ಕೊಡುವುದು ಸೂಕ್ತ. ಎರಡನೆಯದಾಗಿ ಅವರುಗಳಿಗೆ ತುಪ್ಪ ಕೊಡುತ್ತಿದ್ದು, ನಾನು ಹೆಚ್.ಡಿ. ಕೋಟೆಗೆ ಕೆಲವು ಹಾಡಿಗಳಿಗೆ ಭೇಟಿ ನೀಡಿದ್ದಾಗ ಅವರು ತುಪ್ಪವನ್ನು ಅಲ್ಲಿಯೇ ಮಾರಾಟ ಮಾಡಿ ಹೋಗುತ್ತಾರೆ. ಆದ್ದರಿಂದ ತುಪ್ಪದ ಬದಲು ಮೊಟ್ಟೆ ಇನ್ನಿತರ ಪದಾರ್ಥಗಳನ್ನು ಕೊಡುವುದಕ್ಕೆ ಸರ್ಕಾರ ಮುಂದಾಗುವುದು ಸೂಕ್ತ. ಈಗಾಗಲೇ ರೂ.200 ಕೋಟಿ ಹಣವನ್ನು ಈ ಸಾರಿ ಬಜೆಟ್‌ನಲ್ಲಿ ಇಟ್ಟಿದ್ದು, ಸಮುದಾಯ ಭವನಕ್ಕೆ ರೂ.25 ಕೋಟಿ ಬಿಟ್ಟಿದ್ದು, ವಿಶೇಷ ಆಹಾರದಲ್ಲಿ ತುಪ್ಪದ ಬದಲು ಮೊಟ್ಟೆ ಕೊಡಬೇಕು. 606 ಹಾಡಿಗಳಲ್ಲಿನ ಬುಡಕಟ್ಟು ಜನಾಂಗಕ್ಕೆ ಸರ್ಕಾರ ಆಹಾರ ಕೊಡಲು ಯಾವಾಗ ಕಾರ್ಯಕ್ರಮ ರೂಪಿಸುತ್ತದೆ ಎಂದು ಕೇಳಬಯಸುತ್ತೇನೆ.

**ಶ್ರೀ ಹೆಚ್. ಆಂಜನೇಯ:-** ಮಾನ್ಯ ಸಭಾಪತಿಯವರೇ, ಅವರುಗಳು ಮೊದಲು ಜೇನು ತಿನ್ನುತ್ತಿದ್ದು, ಜೇನು ಕೀಳಲು ಸಹ ಅರಣ್ಯ ಇಲಾಖೆಯವರು ಬಿಡುವುದಿಲ್ಲ. ಅವರು ಪೌಷ್ಠಿಕವಾಗಿ ಸದೃಢರಾಗಲಿ ಎಂಬ ದೃಷ್ಟಿಯಿಂದ ಒಂದು ಕೆ.ಜಿ ನಂದಿನಿ ತುಪ್ಪವನ್ನು ನೀಡುವ ಪದ್ಧತಿಯನ್ನು ನಾನು ಬಂದ ಮೇಲೆ ಜಾರಿಗೆ ತಂದೆನು.

(ಮುಂದು)

**(279) 20-03-2017 SK-BNS 12.00**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಉಪಸಭಾಪತಿಯವರ ಉಪಸ್ಥಿತಿ)**

ಸನ್ಮಾನ್ಯ ಸಭಾಪತಿಯವರೇ, ಒಂದು ಕೆ.ಜಿ. ನಂದಿನಿ ತುಪ್ಪವನ್ನು ಕೊಡುವ ಪದ್ಧತಿಯನ್ನು ನಾನು ಜಾರಿಗೆ ತಂದಿರುತ್ತೇನೆ. ಈಗ ಅವರಿಗೆ ಕೊಡುವಂತಹ ಸೌಲಭ್ಯಗಳು ತಮಗೆ ಗೊತ್ತಿರಲಿ. ಅವರು ಅಕ್ಕಿ, ಗೋಧಿ, ರಾಗಿ ಯಾವುದು ಬೇಕೋ ಅದನ್ನು 15 ಕೆಜಿಯಾಗಿ ತೆಗೆದುಕೊಳ್ಳಬಹುದು. ತೊಗರಿಬೇಳೆ 5 ಕೆಜಿ ಕೊಡುತ್ತೇವೆ. ಹೆಸರುಬೇಳೆ, ಹುರುಳಿ....

**ಉಪಸಭಾಪತಿಯವರು:–** ಈಗ ಸಚಿವರೇ ...

**ಶ್ರೀ ಎಚ್. ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು :–** ಈಗ ನಾನು ಹೇಳಿ ಬಿಡುತ್ತೇನೆ. ಒಂದು ಗಂಟೆ ಉಪ ಪ್ರಶ್ನೆ ಬರುವುದು ಬೇಡ.

**ಉಪಸಭಾಪತಿಯವರು:–** ಮಾನ್ಯ ಉಗ್ರಪ್ಪನವರು ನೀವು ತುಪ್ಪದ ಬದಲಾಗಿ ಮೊಟ್ಟೆಯನ್ನು ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

**ಶ್ರೀ ಎಚ್. ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು) :–** ಸನ್ಮಾನ್ಯ ಸಭಾಪತಿಯವರೇ, ಮೊಟ್ಟೆಯನ್ನು ಕೊಡುತ್ತಿದ್ದೇವೆ. ನಾನು ಹೇಳುವುದಕ್ಕೆ ಒಂದು ನಿಮಿಷ ಅವಕಾಶ ಮಾಡಿಕೊಡಿ. ಈಗ ನಾನು ಹೇಳಿದ್ದರೆ ಮತ್ತೆ ಉಪ ಪ್ರಶ್ನೆ ಕೇಳಲ್ಲ. ಅವರಿಗೆ ಎರಡು ಲೀಟರ್ ಒಳ್ಳೆಣ್ಣೆ ಮತ್ತು ಸಕ್ಕರೆ ಅಥವಾ ಬೆಲ್ಲವನ್ನಾದರೂ ತೆಗೆದುಕೊಳ್ಳಿ ಎಂದು ಒಟ್ಟು 4 ಕೆ.ಜಿ.ಯನ್ನು ಕೊಡುತ್ತಿದ್ದೇವೆ. 45 ಮೊಟ್ಟೆಗಳನ್ನು ಕೊಡುತ್ತಿದ್ದೇವೆ. ಒಂದು ಕೆ.ಜಿ. ನಂದಿನಿ ತುಪ್ಪವನ್ನು ಕೊಡುತ್ತಿದ್ದೇವೆ. ತುಪ್ಪ ಬೇಡ ಎಂದು ಹೇಳುತ್ತಾರೆ. ಅದರೆ ನೋಡೋಣ ಯೋಚನೆ ಮಾಡಿ ಅವರನ್ನು ಕೇಳಿ ತುಪ್ಪದ ಬದಲಾಗಿ, ಇನ್ನು ಸ್ವಲ್ಪ ಮೊಟ್ಟೆಗಳನ್ನು ಕೊಡಬೇಕು ಎನ್ನುವ ಬಗ್ಗೆ ತೀರ್ಮಾನಿಸುತ್ತೇವೆ. ಮಾನ್ಯ ಉಗ್ರಪ್ಪನವರು ಇನ್ನೂ ಸ್ವಲ್ಪ ಮೊಟ್ಟೆ ಕೊಡಿ ಎಂದು ಹೇಳುತ್ತಾರೆ. ಅದನ್ನು ಪರಿಶೀಲನೆ ಮಾಡಿ ಮತ್ತು ಫಲಾನುಭವಿಗಳ ಅಭಿಪ್ರಾಯವನ್ನು ಕೇಳಿ ಕ್ರಮವನ್ನು ಕೈಗೊಳ್ಳುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೆ ಏನು ಕೇಳಿದ್ದಾರೆ ಎಂದರೆ ನೀವು ಏನು ಕೊಡುತ್ತೀರಾ ಎಂದು ಕೇಳಲಿಲ್ಲ. ಸಮರ್ಪಕವಾಗಿ ಕೊಡುತ್ತಿದ್ದೀರಾ ಎಂದು ಕೇಳಿದ್ದಾರೆ. ಎರಡು ಪ್ರಶ್ನೆಗಳು ಇರುವಂಥಹದ್ದು ನೋಡಿ. ಉಳಿಕೆ ಅನುದಾನವೆಷ್ಟು; ಈ ಕಾರ್ಯಕ್ರಮದ ಯೋಜನೆಯಡಿಯಲ್ಲಿ ಎಲ್ಲಾ ಗಿರಿಜನ ಕುಟುಂಬಗಳಿಗೆ ಸಮರ್ಪಕವಾಗಿ ಆಹಾರವನ್ನು ವಿತರಿಸಲಾಗಿದೆಯೇ; ನೀವು ಏನು ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ ನೀವು ಸಮರ್ಪಕವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿಲ್ಲ ಎಂಬುದು ಅವರ ಅಪಾದನೆ. ನೀವು ಸಮರ್ಪಕವಾಗಿ ಕೊಡುತ್ತಿದ್ದೇವೆಂದು ಹೇಳಿದ್ದೀರಾ? ಮುಂದಿನ ಪ್ರಶ್ನೆ ಕೇಳುತ್ತಾರೆ, ಪರಿಶಿಷ್ಟ ಪಂಗಡ ಎಂದು ಗುರುತಿಸಿರುವ ಎಲ್ಲಾ ಉಪ ಜಾತಿ ಕುಟುಂಬಗಳಿಗೆ ಪೌಷ್ಠಿಕ ಆಹಾರ ವಿತರಣೆ ಮಾಡಲಾಗಿದೆಯೇ? ನೀವು 'ಮಾಡಲಾಗಿದೆ ಅಥವಾ ಇಲ್ಲ' ಎಂದು ಹೇಳುತ್ತಿಲ್ಲ. ಪ್ರಶ್ನೆ ನೇರವಾಗಿ ಇರುವಂಥಹದ್ದು. ತಮ್ಮದು ಏನು ಯೋಜನೆಯಿದೆಯೋ, ಅದು ಆ ಗಿರಿಜನರಿಗೆ ಸಮರ್ಪಕವಾಗಿ ತಲುಪಿದೆಯೇ, ಆಹಾರ ಸರಿಯಾಗಿ ವಿತರಣೆಯಾಗಿದೆಯೋ ಇಲ್ಲವೋ, ಅದನ್ನು ಸ್ಪಷ್ಟವಾಗಿ ಹೇಳಿ.

**ಶ್ರೀ ಎಚ್. ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾವು ಸರ್ವೇ ಮಾಡಿ, ಯಾವ ಯಾವ ಜನಾಂಗಕ್ಕೆ ಕೊಡಬೇಕೆಂದು ತೀರ್ಮಾನ ಮಾಡಿದ್ದೆವೋ, ಆ ಜನಾಂಗಕ್ಕೆ ಕೊಡಲಾಗುತ್ತಿದೆ. ಬಿಟ್ಟು ಹೋಗಿರುವ ಜನಾಂಗದ ಬಗ್ಗೆ ಮುಂದೆ ಪರಿಶೀಲನೆ ಮಾಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 476**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದಲ್ಲಿ ಸ್ಪಷ್ಟವಾಗಿ ಕೆಲವೊಂದು ಖಾಸಗಿ ಆಸ್ಪತ್ರೆಗಳಿಗೆ ಹಣ ಬಿಡುಗಡೆಯಾಗಿರುವುದು ಮತ್ತು ತೊಂದರೆಯಾಗಿರುವುದರ ಬಗ್ಗೆ ಒಪ್ಪಿಕೊಂಡಿದ್ದಾರೆ. ಯಾವ ಆಸ್ಪತ್ರೆಗಳು ಚಿಕಿತ್ಸೆ ನೀಡುವುದನ್ನು ನಿರಾಕರಿಸುತ್ತವೆಯೋ, ಅಂತಹ ಆಸ್ಪತ್ರೆಗಳ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮವನ್ನು ಕೈಗೊಳ್ಳುತ್ತೇವೆಂದು ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ ಉತ್ತರ ಕರ್ನಾಟಕ ಭಾಗದಲ್ಲಿರುವ ಸಾಕಷ್ಟು ಜನ ಬಡವರು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಾಗ, ಆಸ್ಪತ್ರೆಯವರು ಸರ್ಕಾರದಿಂದ ಹಣ ಬಂದಿಲ್ಲ ಅಥವಾ ಚಿಕಿತ್ಸೆ ಕೊಡುವುದಕ್ಕೆ ತೊಂದರೆಯಾಗುತ್ತದೆ ಎಂಬುದರ ಬಗ್ಗೆ ಯಾವುದೇ ಮಾಹಿತಿ ಕೊಡದೇ ಇದನ್ನೆಲ್ಲಾ ಮುಚ್ಚಿ ಹಾಕುತ್ತಾರೆ. ಅವರಿಗೆ ಮೊದಲನೇ ಹಂತದಲ್ಲಿ ಏನು ಚಿಕಿತ್ಸೆ ಕೊಡಬೇಕೋ ಅದನ್ನು ಕೊಟ್ಟು admit ಮಾಡಿಕೊಂಡು, ಇನ್ನು ಏನು operation ಮಾಡುವಂತಹ ಸಂದರ್ಭದಲ್ಲಿ ಸರ್ಕಾರದಿಂದ ಹಣ ಬಂದಿಲ್ಲ. ನೀವೇ ಹಣವನ್ನು ಕಟ್ಟಿ ಎಂದು ಒತ್ತಾಯ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ patients ಹಣವನ್ನು ತುಂಬಿ operation ಮಾಡಿಸಿಕೊಂಡು ಚಿಕಿತ್ಸೆ ಪಡೆದುಕೊಳ್ಳಬೇಕೋ ಅಥವಾ ವಾಪಸ್ಸು ಊರಿಗೆ ಹೋಗಬೇಕೋ ಎನ್ನುವ confusion ಈ ಭಾಗದ ಜನರಿಗೆ ಆಗುತ್ತಿರುವುದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಸರ್ಕಾರ ಸರಿಯಾದ ಸಮಯದಲ್ಲಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಪ್ರಥಮ ಆದ್ಯತೆಯನ್ನು ಕೊಡಬೇಕು. ತಪ್ಪಿದ್ದಲ್ಲಿ ಖಾಸಗೀ ಆಸ್ಪತ್ರೆಗಳಿಗೆ ನೇರವಾದ ನಿರ್ದೇಶನವನ್ನು ಕೊಡಬೇಕು. ಆ ಭಾಗದಿಂದ ಯಾವುದೇ ಒಬ್ಬ ಬಡ ರೋಗಿ ಆಸ್ಪತ್ರೆಗೆ ಬಂದಾಗ ಚಿಕಿತ್ಸೆ ಕೊಡುವುದನ್ನು  ಕಡ್ಡಾಯವಾಗಿ ಮಾಡಬೇಕೆಂಬ ಒಂದು ನಿರ್ದೇಶನ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

**ಶ್ರೀ ಕೆ. ಆರ್. ರಮೇಶ್ ಕುಮಾರ್ ( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸುಮಾರು ಏಳು ಯೋಜನೆಗಳ ಮುಖಾಂತರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆ ಎಂದು ಮಾಡಿದ್ದೇವೆ. ಖಾಸಗಿ ಆಸ್ಪತ್ರೆಗಳಲ್ಲಿ ನಾವು ಕೊಡುವ ಚಿಕಿತ್ಸೆ ಸಾಲದು ಹಾಗೂ ನಮ್ಮಲ್ಲಿ  ಅಸಮರ್ಪಕತೆಯಿದ್ದರೆ ಅವರ ಸಹಕಾರ ಪಡೆದುಕೊಳ್ಳಬೇಕು ಎಂದು empanel ಮಾಡಿಕೊಂಡಿದ್ದೇವೆ. ಅವರು ಏನು ಸೇವೆ ನಮಗೆ ಸಲ್ಲಿಸಿರುತ್ತಾರೆ  ಅದಕ್ಕೆ ಸರಿಯಾಗಿ ಕಾಲ ಕಾಲಕ್ಕೆ ಹಣ ಕೊಡಬೇಕು. 'ಯಶಸ್ವಿನಿ' ಯೋಜನೆಯನ್ನು ಇಟ್ಟುಕೊಂಡಿದ್ದೇವೆ. 2014–15 2015–16, 2016–17 ನೇ ವರ್ಷಗಳ ಸಾಲಿಗೆ ಒಟ್ಟು 661 ಕೋಟಿ ರೂಪಾಯಿಗಳ ಹಣವನ್ನು ನೀಡಿದ್ದೇವೆ. ಇದರಲ್ಲಿ ಸರ್ಕಾರದ ಆಸ್ಪತ್ರೆಗೆ ಬರೀ 130 ಕೋಟಿ ರೂಪಾಯಿಗಳು ಬಂದಿದೆ. ಖಾಸಗಿ ಆಸ್ಪತ್ರೆಗಳಿಗೆ ಒಟ್ಟು 530 ಕೋಟಿ ರೂಪಾಯಿಗಳನ್ನು ನೀಡಿದ್ದೇವೆ. ಖಾಸಗಿ ಆಸ್ಪತ್ರೆಯವರಿಗೆ ಬಾಕಿ ನೀಡಬೇಕಾಗಿದ್ದು ಸುಮಾರು 150 ಕೋಟಿ ರೂಪಾಯಿಗಳು. ಆದರೆ ಈಗ ಅದು ಒಟ್ಟು 30 ಕೋಟಿ ರೂಪಾಯಿಗಳಿಗೆ ಬಂದಿದೆ. ಏಕಾಏಕಿ ಒಂದು ಹಂತದಲ್ಲಿ ನಮಗೆ ನೋಟಿಸ್‌ನ್ನು ಕೂಡ ಕೊಡದೇ, ನಮ್ಮ ಹಣ ಬಾಕಿಯನ್ನು ತೀರಿಸದೇ ಹೋದರೆ ಸೇವೆಯನ್ನು ಮುಂದುವರೆಸುವುದಿಲ್ಲ ಎಂದು ಸವಾಲು ಹಾಕಿದ್ದಾರೆ. ನಾನು ಅನಿವಾರ್ಯವಾಗಿ ಹೇಳಿದೆ. ನೀವು ಇದನ್ನು business proposition ಎಂದು consider ಮಾಡುವುದಾದರೆ, ನಾವು ನಿಮಗೆ ಕೊಡಬೇಕಾಗಿರುವ ಬಾಕಿ ಹಣವನ್ನು ತೀರಿಸುತ್ತೇವೆ. ನಮ್ಮ ಪ್ರಯತ್ನವನ್ನು ನಾವು ಮಾಡುತ್ತೇವೆ ಮತ್ತು ನಮ್ಮ ಜನರನ್ನು ನಾವು ಕಾಪಾಡಬೇಕಾಗಿದೆ. ಕೆಲವರು ಆ ಹೇಳಿಕೆಯಿಂದ ಮುಂದೆ ಬಂದು ಸೇವೆಯನ್ನು ಮುಂದುವರೆಸುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳಿಗೆ ಕೊಡಬೇಕಾಗಿರುವ ಬಾಕಿ ಹಣವನ್ನು ತೀರಿಸಿದ್ದೇವೆ. ಇನ್ನು ಕೆಲವರು ಮೊಂಡು ವಾದ ಮಾಡಿ ಕುಳಿತಿದ್ದರು, ಅವರನ್ನೆಲ್ಲಾ suspend ಮಾಡಿದ್ದೇವೆ. ನಮಗೆ ಬೇಕಾಗಿಲ್ಲ ನಿಮ್ಮ ಸೇವೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರೆಲ್ಲರಿಗೆ ವಿನಂತಿ ಮಾಡುವುದೇನೆಂದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವಂತಹ ಸೇವೆಗಳನ್ನು ಕೂಡ ಅನೇಕ ವೇಳೆ ನಮ್ಮವರು ಅಲ್ಲಿಗೆ ಹೋಗಿ ಚಿಕಿತ್ಸೆ ಪಡೆದು ಬಂದಿದ್ದಾರೆ. ಈ ಎಲ್ಲಾ ವಿವಿಧ ಯೋಜನೆಗಳಿಗೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ, ಶಾಸಕರು, ಮಾಜಿ ಶಾಸಕರು ಮತ್ತು ಮಂತ್ರಿಗಳು ಹಾಗೂ ನಮಗೆ ಕೊಡುವಂತಹ  reimbursement, ಎಲ್ಲಾ ಸರ್ಕಾರಿ ನೌಕರರನ್ನು ಸೇರಿಸಿದರೆ ಸ್ವಲ್ಪ ಹೆಚ್ಚು ಕಡಿಮೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ಹಾಗಾದರೆ ಸರ್ಕಾರಿ ಆಸ್ಪತ್ರೆ ಯಾಕೆ ಇರಬೇಕು? It is a very big question. ಯಾರು ಕೆಲವರು ತಮ್ಮ ಸಂಘಟನೆ ಮಾಡಿಕೊಂಡು, ಸರ್ಕಾರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಬಹುದು ಎಂದು ಭಾವಿಸಿಕೊಂಡಿದ್ದಾರೆ, ನಮ್ಮದು ಅವರಿಗೆ ಬಗ್ಗುವಂತಹ ಬಲಹೀನವಾದ ಸರ್ಕಾರವಲ್ಲ. ಜನರ ಆರೋಗ್ಯವನ್ನು ಕಾಪಾಡುವುದೇ ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ಇಲ್ಲಿಯವರೆಗೆ ಏನಾಯಿತೋ, ಏನು ಹೋಯಿತೋ ಅದು ಬೇರೆ ಪ್ರಶ್ನೆ. ಸರ್ಕಾರ ಬೇರೆ ಆಲೋಚನೆಯಲ್ಲಿದೆ. ಅವರ ಬಾಕಿಯನ್ನು ಒಂದು ನೈಯಾ ಪೈಸೆ ಇಲ್ಲದೇ ತೀರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ನಾವು ನಮ್ಮ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುವವರೆಗೆ ಅವರು empanel ನಲ್ಲಿ continue ಆಗುತ್ತಾರೆ. ಮಾನ್ಯ  ಮಾನೆ ಶ್ರೀನಿವಾಸ್‌ರವರು ಎತ್ತಿರುವ ಉಚಿತವಾದ ಪ್ರಶ್ನೆಗೆ ಉತ್ತರ ಭಾಗದಿಂದ ಬರುವಂತಹ ಕೆಲವು ರೋಗಿಗಳಿಗೆ ಪ್ರಾಥಮಿಕವಾಗಿ ಏನನ್ನೂ ಹೇಳದೇ surgery ಮಾಡುವ ವೇಳೆಗೆ ಅಥವಾ tertiary treatment ಕೊಡುವಾಗ ಸರ್ಕಾರದಿಂದ ಹಣ ಬಂದಿಲ್ಲ ಎಂದು ಏನು ಹೇಳುತ್ತಾರೆ, ಅವುಗಳು ಯಾವ ಆಸ್ಪತ್ರೆಗಳು ಎಂದು ನನಗೆ writing ನಲ್ಲಿ ಕೊಡಿ. We will initiate action against them. We will not spare anybody. ರಾಜ್ಯದ ಜನತೆಯ ಆರೋಗ್ಯವನ್ನು ಕಾಪಾಡುವಂತಹದು ಮತ್ತು ಜೀವ ಅಮೂಲ್ಯ ಎನ್ನುವ ಕಲ್ಪನೆಗೆ ನಾವು ಬದ್ಧರಾಗಿದ್ದೇವೆ. ಮಾನ್ಯ ಸದಸ್ಯರೆಲ್ಲರ ಸಹಕಾರವನ್ನು ಬಯಸುತ್ತೇನೆ. ಇದೊಂದು ದೊಡ್ಡ ತಿಮಿಂಗಿಲ ಆಗಿಬಿಟ್ಟಿದೆ. ಯಾರೋ ಕೆಲವರನ್ನು ಸಾಕುವುದಕ್ಕೆ, ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಹಂಚುತ್ತಿದ್ದೇವೆ. ಇದರಲ್ಲಿ ನಾವು ಎಲ್ಲರೂ ಎಚ್ಚೆತ್ತುಕೊಳ್ಳಬೇಕೆಂದು ತಮ್ಮ ಮೂಲಕ ಈ ಸದನಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಮಾನೆ ಶ್ರೀನಿವಾಸ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಸಚಿವರು ಇದರ ಬಗ್ಗೆ ಬಹಳ ದೀರ್ಘವಾದ ಮಾತನ್ನು ಹೇಳಿದ್ದಾರೆ. ವೈದ್ಯರು ರೋಗಿಗೆ ತಮ್ಮ ಮಾತಿನಲ್ಲಿ ಅರ್ಧ ಖಾಯಿಲೆಯನ್ನು ಗುಣ ಮಾಡಬಹುದಂತೆ. ಆದರೆ ಸರ್ಕಾರಿ ಆಸ್ಪತ್ರೆಯಲ್ಲಿ ಆ ಮಟ್ಟದ ಮಾತುಗಳು ಕೂಡ ವೈದ್ಯರ ಕಡೆಯಿಂದ ಕೇಳಿ ಬರುತ್ತಿಲ್ಲ. ಜನರ ವಿಶ್ವಾಸ ಇವತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಕುಂಠಿತಗೊಳ್ಳುತ್ತಿದೆ. ಅದಕ್ಕೂ ಕೂಡ ಏನಾದರೂ ಕಾರ್ಯಕ್ರಮ ಮಾಡಿ, ಆ ವೈದ್ಯರುಗಳಿಗೆ ಸ್ವಲ್ಪ tune up ಮಾಡುವ ರೀತಿಯಲ್ಲಿ ಮಾಡಿ ಸ್ವಲ್ಪ patients ಜೊತೆ ಮತ್ತು ಗ್ರಾಮೀಣ ಭಾಗದಿಂದ ಬಂದಂತಹ ಜನರಿಗೆ ಸ್ವಲ್ಪ ವಿಶ್ವಾಸ ಮೂಡಿಸುವಂತಹ ಕೆಲಸವನ್ನು ಮಾಡಿದರೆ ಬಹುಶ: ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ಆಸ್ಪತ್ರೆಗೆ ಹೋಗುವುದಕ್ಕೆ ಬಯಸುವುದಿಲ್ಲ. ಅದನ್ನು ಕೂಡ ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಕೆ. ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಸಚಿವರು ತೆಗೆದುಕೊಂಡಿರುವ ದಿಟ್ಟ ಕ್ರಮಗಳಿಗೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಖಾಸಗಿ ಆಸ್ಪತ್ರೆಗಳು ಯಾವ ಯಾವ ರೀತಿಯಲ್ಲಿ ಸುಲಿಗೆ ಮತ್ತು ತೊಂದರೆ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಅನೇಕ ಆಸ್ಪತ್ರೆಗಳು ಸರ್ಕಾರ ಮಾಡದೇ ಇರುವಂತಹ ಒಳ್ಳೆಯ ಕೆಲಸಗಳನ್ನು ಖಾಸಗಿ ಆಸ್ಪತ್ರೆಗಳು ಮಾಡುತ್ತಿದೆ. ನೀವು ತೆಗೆದುಕೊಂಡಿರುವಂತಹ ಕ್ರಮ, ಆ ಖಾಸಗಿ ಆಸ್ಪತ್ರೆಯವರು ಏನಾದರೂ ಮಾಡಿಕೊಳ್ಳಲಿ ಬಿಡಿ, ನಮಗೆ ಏತಕ್ಕೆ ಎಂಬ ಸರ್ಕಾರದವರು ಅಭಿಪ್ರಾಯಕ್ಕೆ ಬಂದರೆ ರೋಗಿಗಳಿಗೆ ಖಂಡಿತ ಕಷ್ಟವಾಗುತ್ತದೆ. ನೀವು ತೆಗೆದುಕೊಳ್ಳುವಂತಹ ಕ್ರಮವನ್ನು ನಾನು ಮತ್ತು ಇಡೀ ರಾಜ್ಯದ ಜನತೆ ನೋಡುತ್ತಿದೆ. ಯಾವ ಯಾವ ಆಸ್ಪತ್ರೆಗಳ ಬಗ್ಗೆ ನೀವು ಕ್ರಮ ಕೈಗೊಳ್ಳಬೇಕು ಎಂಬುದು ಬೇರೆ. ಅನೇಕ ಆಸ್ಪತ್ರೆಗಳ ಬಗ್ಗೆ ನಾನು ಉದಾಹರಣೆ ಸಮೇತ ಕೊಡಬಲ್ಲೆ. ನಾನು ಇಲ್ಲಿ ಹೇಳುವುದೇನೆಂದರೆ,  ನಿಮ್ಮ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಇರುವಂತಹ ಸಂಘರ್ಷ ಅಂದರೆ ಮಾನ್ಯ ಆರೋಗ್ಯ ಸಚಿವರು ಮತ್ತು ಖಾಸಗಿ ಆಸ್ಪತ್ರೆಯ ಮಾಲೀಕರ ಮಧ್ಯೆ ಇರುವಂತಹ ಸಂಘರ್ಷ, ರೋಗಿಗಳಿಗೆ ಬಹಳ ತೊಂದರೆಯಾಗುತ್ತದೆ. ನೀವು ಮಾಡದೇ ಇರುವಂತಹ ಕೆಲಸಗಳನ್ನು ಅನೇಕ ಖಾಸಗಿ ಆಸ್ಪತ್ರೆಗಳವರು ಮಾಡುತ್ತಿದ್ದಾರೆ ಎನ್ನುವುದನ್ನು ನೀವು ಒಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಅದಕ್ಕೆ ಈ ರೀತಿ ಆಗುತ್ತಿರುವುದು. ಅವರನ್ನು ಕರೆದು, ಕುಳಿತುಕೊಂಡು ಈ ರೀತಿ ತಪ್ಪು ಮಾಡುತ್ತಿದ್ದೀರಿ ಮತ್ತು ನಮ್ಮಿಂದ ಏನು ಅನುಕೂಲವಾಗಬೇಕು ಎಂದು ಹೇಳಿ. ಇಲ್ಲಿ ನೀವು ಸೌಹಾರ್ದ ವಾತಾವರಣವನ್ನು ತರಲಿಲ್ಲವೆಂದರೆ, ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ. ಮಾನ್ಯ ಆರೋಗ್ಯ ಸಚಿವರೇ ತಾವು ಅವರ ಜೊತೆ ಸಂಘರ್ಷಕ್ಕೆ ಇಳಿಯಬೇಡಿ ಎಂಬುದು ನನ್ನ ಪ್ರಾರ್ಥನೆ.  ಅವರನ್ನು ಕರೆದು ಮಾತುಕತೆ ನಡೆಸುವಂತಹ ಸಂದರ್ಭದಲ್ಲಿ ನಮ್ಮ ಅವಶ್ಯಕತೆಯಿದ್ದರೆ ಚುನಾಯಿತ ಪ್ರತಿನಿಧಿಗಳು ಮತ್ತು ನಾವು ಬರುವುದಕ್ಕೆ ತಯಾರಿದ್ದೇವೆ. ನಾವು ಯಾರ ಪರವಾಗಿ ಮಾತನಾಡುತ್ತೇವೆಂಬುದಲ್ಲ. ರೋಗಿಗಳಿಗೆ ತೊಂದರೆ ಮತ್ತು ಅನ್ಯಾಯವಾಗಬಾರದು. ಸೌಹಾರ್ದಯುತವಾದ ವಾತಾವರಣ ತರುವ ದಿಕ್ಕಿನಲ್ಲಿ ತಾವು ಏನು ಪ್ರಯತ್ನ ನಡೆಸುತ್ತೀರಾ ಎಂದು ಕೇಳಬಯಸುತ್ತೇನೆ.

**ಶ್ರೀ ಕೆ. ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಿ ಪಕ್ಷದ ನಾಯಕರು ತುಂಬಾ ದೂರಾಲೋಚನೆ ಮಾಡಿ, ತೂಕದ ಮಾತುಗಳನ್ನು ಹೇಳಿ ನಮಗೆ ಸಲಹೆಯನ್ನು ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು…)

280/20.03.2017/12.10/hv.bns

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಆರ್.ರಮೇಶ್‌ಕುಮಾರ್ (ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ನಾನು ಅತ್ಯಂತ ನಮ್ರತೆಯಿಂದ ಅವರಿಗೆ ಸ್ಪಷ್ಟಪಡಿಸುವ ವಿಚಾರವೇನೆಂದರೆ, ಸರ್ಕಾರ ಹಾಗೂ ಖಾಸಗಿ ಆಸ್ಪತ್ರೆಗಳ ನಡುವೆ ಯಾವುದೇ ರೀತಿಯ ಸಂಘರ್ಷ ಇಲ್ಲವೇ ಇಲ್ಲ. ಖಾಸಗಿ ವಲಯದಲ್ಲಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವವರು ಅನೇಕ ಜನರಿದ್ದಾರೆ. ಅವರೆಲ್ಲರಿಗೂ ಈ ಸದನ ಮೂಲಕ ಕೈಯೆತ್ತಿ ಮುಗಿಯುತ್ತೇನೆ ಮತ್ತು ಅವರ ಸೇವೆಯನ್ನು ಶ್ಲಾಘಿಸುತ್ತೇನೆ. ಆದರೆ, ಕೆಲವರು ವೈದ್ಯ ವೃತ್ತಿಯನ್ನು ಸೇವಾ ಮನೋಭಾವದಿಂದ ನೋಡುವುದನ್ನು ಮರೆತಿದ್ದಾರೆ. ಯಾವುದೋ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಪಡೆದುಕೊಂಡು, ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ್ದರೆ ಹಣ ಕಟ್ಟುವವರೆಗೆ ಹೆಣ ಕೊಡುವುದಿಲ್ಲ ಎಂದು ಹೇಳುವವರನ್ನು ಏನು ಮಾಡಬೇಕೆನ್ನುವುದನ್ನು ಅವರೇ ಹೇಳಬೇಕಾಗಿದೆ. ನಾನು ಯಾರೊಡನೆ ಕಠಿಣವಾಗಿ ನಡೆದುಕೊಳ್ಳುತ್ತಿದ್ದೇನೆಂದರೆ, ಯಾರು ಮನುಷ್ಯತ್ವನ್ನು ಮರೆತು ವೈದ್ಯ ವೃತ್ತಿಯ hypocrites, Oath ಏನಿದೆ ಅದಕ್ಕೆ ತಿಲಾಂಜಲಿಯನ್ನು ಕೊಟ್ಟಿದ್ದಾರೆ, ಯಾರಿಗೆ ದುಡ್ಡೇ ಸರ್ವಸ್ವವಾಗಿದೆ ಅವರಿಗೆ ನಾನು, "ನೀವು ಏನಾದರೂ ಮಾಡಿಕೊಳ್ಳಿ ನಮಗೂ ಅದಕ್ಕೂ ಸಂಬಂಧವಿಲ್ಲ. ಅದಕ್ಕೆ ಬೇರೆ ಕಾನೂನುಗಳು ಇವೆ. ಅವು ನಿಮ್ಮೊಡನೆ ವ್ಯವಹರಿಸುತ್ತವೆ. ಆದರೆ, ಸರ್ಕಾರದ ಸೇವೆಗೆಂದು ನಿಮ್ಮನ್ನು empanel ಮಾಡಿಕೊಂಡಾಗ, ನಿಮಗೆ ಹಣವನ್ನು ನಾವು ಕೊಡುತ್ತೇವೆ. ನಮ್ಮ ಜನರಿಗೆ ಸೇವೆ ಕೊಡಿ" ಎಂದು ಹೇಳುತ್ತಿದ್ದೇನೆ. ಇದರಲ್ಲಿ ನನಗೆ ಯಾರೂ ವಿರೋಧಿಗಳಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಆಸ್ಪತ್ರೆಗಳ ಬಾಕಿ ಸುಮಾರು 661 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಉಳಿದಂತೆ ಸುಮಾರು 40 ಕೋಟಿ ರೂಪಾಯಿಗಳು ಮಾತ್ರ ಬಾಕಿ ಉಳಿದಿದೆ. ಅದು ಮಹಾ ದೊಡ್ಡ ಬಾಕಿಯೇನಲ್ಲ. ಆದರೂ ಅವರು ಹಣಕ್ಕಾಗಿ ಈ ರೀತಿ ವರ್ತಿಸುತ್ತಿದ್ದಾರೆ. ಆ ರೀತಿ ಮಾಡಬಾರದೆನ್ನುವುದು ನನ್ನ ಮನವಿಯಾಗಿದೆ. ಮಾನ್ಯ ಶ್ರೀನಿವಾಸ್ ಮಾನೆಯವರು ಸರ್ಕಾರಿ ವೈದ್ಯರು ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸುವುದಿಲ್ಲವೆಂದು ಹೇಳಿದ್ದಾರೆ. ಅವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವರು ದುಷ್ಟರಿರಬಹುದು. ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಮೆರಿಟ್‌ನಲ್ಲಿ ಯಾರು ಮೇಲಿರುತ್ತಾರೆ ಅವರೇ ಸರ್ಕಾರಿ ಸೇವೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯ್ಕೆಯಾಗಿ ಬರುತ್ತಾರೆ. ಇಲ್ಲಿ ಆಯ್ಕೆಗೊಳ್ಳದೇ ಇರುವವರು ಖಾಸಗಿ ವಲಯದ ಆಸ್ಪತ್ರೆಗಳಿಗೆ ಹೋಗುತ್ತಾರೆ. Meritwise, our Doctors are the best Doctors. ಸರ್ಕಾರಿ ಆಸ್ಪತ್ರೆಗಳಲ್ಲಿ ಚೆನ್ನಾಗಿ ಕೆಲಸ ಮಾಡುವವರು ಇದ್ದಾರೆ. ಆದರೆ, ಖಾಸಗಿ ಆಸ್ಪತ್ರೆಗಳ ಬಗ್ಗೆ ಒಂದು ರೀತಿಯ psychology ಯನ್ನು ಸೃಷ್ಟಿ ಮಾಡಿಬಿಟ್ಟಿದ್ದೇವೆ. ಸರ್ಕಾರಿ ಆಸ್ಪತ್ರೆಗಳಿಗೆ ಆರೋಗ್ಯವಂತ ಬಂದರೂ ಸಹ ಆತ ಮರಣ ಹೊಂದುತ್ತಾನೆ. ಖಾಸಗಿ ಆಸ್ಪತ್ರೆಗೆ ಮರಣ ಹೊಂದಿರುವವನು ಹೋದರು ಸಹ ಉತ್ತಮ ಆರೋಗ್ಯವನ್ನು ಹೊಂದಿ ಹೊರಗೆ ಬರುತ್ತಾನೆ ಎನ್ನುವಂತಹ ಪ್ರಚಾರವನ್ನು ಮಾಡಿದರೆ ಸರ್ಕಾರಿ ಆಸ್ಪತ್ರೆಗಳಿಗೆ ಉಳಿಗಾಲ ಎಲ್ಲಿದೆ? ಸರ್ಕಾರಿ ಸೇವೆಯಲ್ಲಿರುವ ಸರ್ಕಾರಿ ನೌಕರರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುತ್ತೇವೆ. ಶಾಸಕರು ಮತ್ತು ಮಂತ್ರಿಗಳು ಸರ್ಕಾರಿ ಆಸ್ಪತ್ರೆಗಳನ್ನು ಬಿಟ್ಟು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ಹಣ ಮರುಪಾವತಿಗಾಗಿ ಪ್ರಯತ್ನಿಸುತ್ತೇವೆ. ಹಾಗಾದರೆ ಕ್ಯೂ ನಲ್ಲಿ ನಿಂತುಕೊಂಡು ನಮಗೆ ಮತವನ್ನು ನೀಡಿದಂತಹ ಜನರು ಸರ್ಕಾರಿ ಆಸ್ಪತ್ರೆಗೆ ಹೋಗಬೇಕೇ? ಅವರು ಎರಡನೆ ದರ್ಜೆ ನಾಗರಿಕರು, ನಾವು ಮೊದಲನೆ ದರ್ಜೆ ನಾಗರಿಕರೇ? ನಾವೇ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುವುದನ್ನು ನಿರಾಕರಿಸುತ್ತಾ ಹೋದರೆ, ಆ ಆಸ್ಪತ್ರೆಗಳು ಉಳಿಯುವುದು ಹೇಗೆ? ಎರಡೂ ಸದನಗಳ ಸದಸ್ಯರುಗಳು ಸೇರಿಕೊಂಡು Public Health Institutions ಅನ್ನು wind-up ಮಾಡೋಣ. Public Health ಪ್ರಶ್ನೆಯೇ ಬೇಡ. ಅಮೇರಿಕಾದಂತಹ ದೊಡ್ಡ ರಾಷ್ಟ್ರದಲ್ಲಿಯೂ ಸಹ Public Health Institutions are vital. ಸಾರ್ವಜನಿಕರ ಆರೋಗ್ಯವನ್ನು ಕಾಪಾಡಬೇಕಾದರೆ, ಆ ಆಸ್ಪತ್ರೆಗಳೇ ಪ್ರಧಾನ ಪಾತ್ರವನ್ನು ವಹಿಸಬೇಕಾಗುತ್ತದೆ. ಖಾಸಗಿ ವಲಯದ ಆಸ್ಪತ್ರೆಗಳ ಬಗ್ಗೆ ನನ್ನ ವಿರೋಧವೇನೂ ಇಲ್ಲ. Corporate Sector ನಲ್ಲಿ Management ನವರು ಆಸ್ಪತ್ರೆಗಳನ್ನು ನಡೆಸುವಂತಹ ಸಂದರ್ಭದಲ್ಲಿ ಅಗತ್ಯವಿಲ್ಲದೇ ಇರುವಂತಹ ಟೆಸ್ಟ್‌ಗಳನ್ನು ಮಾಡುತ್ತಾರೆ. ಇದನ್ನು ಯಾರು ತನಿಖೆ ಮಾಡಬೇಕು? 2007ನೇ ಇಸವಿಯಲ್ಲಿ The Karnataka Private Medical Establishments Act ಗೆ ಉಭಯ ಸದನಗಳು ಅನುಮತಿಯನ್ನು ನೀಡಿವೆ. ಅದರ ಪ್ರಕಾರ ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೇವೆ? Gastritis ನಿಂದ ಆಗಿರಬಹುದು, cardiac problem ನಿಂದ ಆಗಿರಬಹುದು. ಒಂದು ಸಣ್ಣ ಎದೆ ನೋವುವೆಂದು ಖಾಸಗಿ ಆಸ್ಪತ್ರೆಗಳಿಗೆ ಹೋದರೆ, ಆ ರೋಗಿಗೆ ಎಲ್ಲ ರೀತಿಯ ಟೆಸ್ಟ್‌ಗಳನ್ನು ಮಾಡಿ, ಸಂಜೆ ಹೊತ್ತಿಗೆ ಒಂದು ಲಕ್ಷ ರೂಪಾಯಿಗಳ ಬಿಲ್ ಮಾಡುತ್ತಾರೆ. ಅವರನ್ನು ಹೇಳುವವರಿಲ್ಲ, ಕೇಳುವವರಿಲ್ಲ, professional ethics ಇಲ್ಲ. Tariff

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಬೇಕಾಗಿಲ್ಲ. ಇದು ಹೇಗೆ ಸಾಧ್ಯ? ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಹೋದರೆ, ಒಂದು stent ಹಾಕುವುದಕ್ಕೆ ಸುಮಾರು 55 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಅದೇ ಖಾಸಗಿ ಆಸ್ಪತ್ರೆಯಲ್ಲಿ 2.5 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುವುದಾದರೆ, ಈ ವ್ಯತ್ಯಾಸವನ್ನು ನೋಡಿಕೊಂಡು ನಾವು ಹೇಗೆ ಸುಮ್ಮನೆ ಕುಳಿತುಕೊಳ್ಳುವುದು? ನಾನು ಸಂಘರ್ಷ ಮಾಡುತ್ತಿಲ್ಲ. ಅವರು ಯಾರೂ ನನಗೆ ವಿರೋಧಿಗಳಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ಮಾತುಗಳನ್ನು ತಲೆ ಬಾಗಿ ಒಪ್ಪಿಕೊಳ್ಳುತ್ತೇನೆ. ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ ಪ್ರತಿಯೊಬ್ಬ ವೈದ್ಯರಿಗೂ ಈ ಸದನದ ಮೂಲಕ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. "ನೀವು ನಮಗೆ role models. ಉತ್ತಮ ಕಾರ್ಯವನ್ನು ಇನ್ನೂ ಮುಂದುವರೆಸಿ" ಎಂದು ಹೇಳುತ್ತೇವೆ. ಅಲ್ಲಿರುವಂತಹವರು ತಮ್ಮ ತಪ್ಪುಗಳನ್ನು ತಿದ್ದುಕೊಂಡು ಒಳ್ಳೆಯ ಕೆಲಸವನ್ನು ಮಾಡಲಿ ಎನ್ನುವುದು ನನ್ನ ಅಪೇಕ್ಷೆಯಾಗಿದೆ. ಆದರೆ, ಮಾನವೀಯತೆಯನ್ನು ಮರೆತು, ಸರ್ಕಾರಕ್ಕೆ ಬಲವಿಲ್ಲ, ಶಕ್ತಿಯಿಲ್ಲ, ಯೋಗ್ಯತೆಯಿಲ್ಲ, ವಿವೇಚನೆಯಿಲ್ಲವೆಂದು ಜನರನ್ನು ಸುಲಿಗೆ ಮಾಡುವುದಕ್ಕೆ ಹೋದರೆ, ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ವಿರೋಧ ಪಕ್ಷದವರ ಸಹಕಾರವನ್ನು ನಾನು ಬಯಸುತ್ತಿದ್ದೇನೆ. ನಾವೆಲ್ಲರೂ ಪಕ್ಷಬೇಧವನ್ನು ಮರೆತು ಒಟ್ಟಾಗಿ ಜನ ಪ್ರತಿನಿಧಿಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವಸ್ಥರಾಗಬೇಕು ಎನ್ನುವ ದೃಷ್ಟಿಯಿಂದ ಮತ್ತು ಆ ಜನರ ಗೌರವವನ್ನು ಪಡೆದುಕೊಳ್ಳುವುದಕ್ಕೆ ಅವರನ್ನು spare ಮಾಡುವುದು ಬೇಡವೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕರಿಗೆ ಆರೋಗ್ಯ ಭಾಗ್ಯವನ್ನು ನೀಡುವುದಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ದೊರೆತರೆ, ಈ ಯೋಜನೆಗಳು ಏತಕ್ಕೋಸ್ಕರ ಬೇಕು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ದೊರೆತರೆ, ಈ ಯೋಜನೆಗಳಿಗೆ ಬೆಲೆ ಬರುತ್ತದೆಯೇ? ಮಾನ್ಯ ಸಚಿವರು ಹೇಳುತ್ತಿರುವ ಮಾತನ್ನು ಭಾಗಶಃ ಒಪ್ಪುತ್ತೇನೆ. ಪೂರ್ತಿಯಾಗಿ ಒಪ್ಪುವುದಕ್ಕೆ ಹೋಗುವುದಿಲ್ಲ. ಸರ್ಕಾರಿ ಆಸ್ಪತ್ರೆಗಳೇ ಎಲ್ಲವನ್ನೂ ಮಾಡುವುದಾದರೆ ಖಾಸಗಿ ಆಸ್ಪತ್ರೆಗಳು ಏತಕ್ಕೋಸ್ಕರ ಬೇಕು ಅಥವಾ ಖಾಸಗಿ ಆಸ್ಪತ್ರೆಗಳೇ ಎಲ್ಲವನ್ನು ಮಾಡುವುದಾದರೆ, ಸರ್ಕಾರಿ ಆಸ್ಪತ್ರೆಗಳು ಏತಕ್ಕೋಸರ ಬೇಕು? ಯಾವ ಆಸ್ಪತೆಗಳು ಲೂಟಿ ಮಾಡುತ್ತಿವೆ ಆ ಆಸ್ಪತ್ರೆಗಳ ಪರವಾಗಿ ಯಾವ ಕಾರಣಕ್ಕೂ ನಾವು ಮಾತನಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ, ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ಹಾಕಿ ತೂಗುವುದು ಬೇಡ ಎನ್ನುವುದು ನನ್ನ ಮನವಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಆರ್.ರಮೇಶ್‌ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸದಾ ಡಾ:ಜಿ.ಪರಮೇಶ್ವರ್‌ರವರ ಕಡೆಗೆ ನೋಡಿಕೊಂಡು ಮಾತನಾಡುತ್ತಿರುತ್ತಾರೆ. ಅವರು ನನ್ನ ಕಾರ್ಯವೈಖರಿ 'ಲಾಠಿಚಾರ್ಜ್' ಎಂದು ತಿಳಿದುಕೊಂಡಿದ್ದಾರೆ. ಆದರೆ, ನಾನು ಲಾಠಿಚಾರ್ಜ್ ಮಾಡುವುದಿಲ್ಲ, ಇಂಜೆಕ್ಷನ್ ಕೊಡುತ್ತೇನೆ. (ಮಾನ್ಯ ಸಭಾ ನಾಯಕರ ಕಡೆಗೆ ಕೈ ತೋರಿಸಿ) ಲಾಠಿಚಾರ್ಜ್ ಮಾಡುವವರು ಅಲ್ಲಿದ್ದಾರೆ. ಲಾಠಿಚಾರ್ಜ್ ಮಾಡುವಾಗ ಸುಮ್ಮನೆ ಹೊಡಿಯುತ್ತಾ ಹೋಗುತ್ತಾರೆ. ಆದರೆ, ನಾನು ಆ ರೀತಿ ಮಾಡುತ್ತಿಲ್ಲ. ನಾನು ನೋಡಿಕೊಂಡು ಇಂಜೆಕ್ಷನ್ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಲಾಠಿಚಾರ್ಜ್‌ನಲ್ಲಿ ಒಂದು ಹೊಡತಕ್ಕೆ ಮುಗಿದು ಹೋಗುತ್ತದೆ. ಆದರೆ, ಮಾನ್ಯ ಆರೋಗ್ಯ ಸಚಿವರು ಕೊಡುವ ಒಂದು ಇಂಜೆಕ್ಷನ್‌ಗೆ ಆತ ಸತ್ತೇ ಹೋಗುತ್ತಾನೆ. ಆದ್ದರಿಂದ ನೋಡಿಕೊಂಡು ಇಂಜೆಕ್ಷನ್ ಕೊಡಿ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಕೆ.ಆರ್.ರಮೇಶ್‌ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, quacks ಕೊಟ್ಟಾಗ ಆತ ಸಾಯುತ್ತಾನೆ. ಆದರೆ, ನಾನು ರೋಗವನ್ನು ನೋಡಿಕೊಂಡು ಇಂಜೆಕ್ಷನ್ ಕೊಡುತ್ತೇನೆ. ಯಾವುದೋ ಇಂಜೆಕ್ಷನ್ ಕೊಡುವುದಕ್ಕೆ ನಾನು ನಾಟಿ ವೈದ್ಯನಲ್ಲ. ಅದರ ಬಗ್ಗೆ ಅವರು ಭಯಪಡಬೇಕಾದ ಅವಶ್ಯಕತೆ ಇಲ್ಲ. I am not a quack.

**ಶ್ರೀ ರಾಮಚಂದ್ರಗೌಡ:-** ಸನ್ಮಾನ್ಯ ಸಭಾಪತಿಯವರೇ, ಕೆಲವು ಖಾಸಗಿ ಆಸ್ಪತ್ರೆಗಳಿಗೆ ಅಪಘಾತಕ್ಕೆ ಒಳಗಾಗಿರುವ ವ್ಯಕ್ತಿಯನ್ನು ಕರೆದುಕೊಂಡು ಹೋದರೆ, 'ವಿಮೆ ಮಾಡಿಸಲಾಗಿದೆಯೇ?' ಎನ್ನುವ ಪ್ರಶ್ನೆಯನ್ನು ಕೇಳುತ್ತಾರೆ. ವಿಮೆ ಮಾಡಿಸಿಲ್ಲವೆಂದರೆ 'ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ' ಎಂದು ಹೇಳುತ್ತಾರೆ. ಇದು ಯಾವ ಧರ್ಮ? ಖಾಸಗಿ ಆಸ್ಪತ್ರೆಯವರಿಗೆ ವಿಮೆಯಿಂದ ಹಣ ಬರುತ್ತದೆ. ವಿಮೆ ಇಲ್ಲವೆಂದರೆ, ಅವರಿಗೆ ಬಿಲ್ ಕೊಡುವುದಕ್ಕೆ ಶಕ್ತಿಯಿಲ್ಲ. ಆದ್ದರಿಂದ ನಾವು ಅಡ್ಮಿಟ್ ಮಾಡಿಕೊಳ್ಳುವುದು ಬೇಡವೆಂದು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಡುತ್ತಾರೆ. ಆ ರೀತಿಯ ಅನುಭವ ನನಗೆ ಬಹಳಷ್ಟು ಆಗಿದೆ. I don't want to name the hospitals.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಆರ್.ರಮೇಶ್‌ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಈಗ ನಾನು ಹೇಳಲು ಹೊರಟಿರುವ ಸಂಗತಿ ವಿಷಯಾಂತರ ಆಗಬಹುದು, ಆದರೂ ಹೇಳುತ್ತೇನೆ. ಹಿಂದೆ ನಾನು ಚುನಾವಣೆಯಲ್ಲಿ ಸೋತ ಸಂದರ್ಭದಲ್ಲಿ ಮಾನ್ಯ ರಾಮಚಂದ್ರಗೌಡರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. ನನ್ನ ಸಹಪಾಠಿಯ ಮಗನೊಬ್ಬನಿಗೆ ಕ್ಯಾನ್ಸರ್ ಆಗಿರುತ್ತದೆ. ಆತನನ್ನು ಕರೆದುಕೊಂಡು ನಾವು ಒಂದು ಆಸ್ಪತ್ರೆಗೆ ಹೋದಾಗ, ಆ ಆಸ್ಪತ್ರೆಯವರು ಚಿಕಿತ್ಸೆಗಾಗಿ 12 ಲಕ್ಷ ರೂಪಾಯಿಗಳನ್ನು ಕೇಳುತ್ತಾರೆ. ಆಗ ನಾನು ಏನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ನನ್ನ ಸಹಪಾಠಿಗೆ ಒಬ್ಬನೇ ಮಗ. ಆತ ಮಗನ ಸ್ಥಿತಿಯನ್ನು ನೋಡಿ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. He was so kind, ಸ್ವತಃ ಮಾನ್ಯ ರಾಮಚಂದ್ರಗೌಡರು ಆ ಆಸ್ಪತ್ರೆಗೆ ಬಂದು, ಕೇಂದ್ರ ಸರ್ಕಾರದವರೊಂದಿಗೆ ಸಂಪರ್ಕ ಮಾಡಿ ಏನೇನೋ ಪ್ರಯತ್ನಗಳನ್ನು ಮಾಡಿ 12 ಲಕ್ಷ ರೂಪಾಯಿಗಳ ಮೊತ್ತವನ್ನು 3 ಲಕ್ಷ ರೂಪಾಯಿಗಳಿಗೆ ಇಳಿಸಿದರು. ಖಾಸಗಿ ಆಸ್ಪತ್ರೆಗಳ ವರ್ತನೆ ಈ ರೀತಿ ಇದೆ. All India Institute of Medical Sciences ಗೆ ನಾನು ಮತ್ತು ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಭೇಟಿ ನೀಡಿದ್ದೆವು. ಅಲ್ಲಿ Anticancer ಗೆ ಒಂದು ಇಂಜೆಕ್ಷನ್ ಕೊಡುತ್ತಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಒಂದು ಇಂಜೆಕ್ಷನ್‌ಗೆ 13,800 ರೂಪಾಯಿಗಳಷ್ಟು ಚಾರ್ಜ್ ಮಾಡುತ್ತಾರೆ. ಅದೇ generic medicines ಮತ್ತು ಅಮೃತ್ ಮಳಿಗೆಗಳಲ್ಲಿ ಇದೇ ಇಂಜೆಕ್ಷನ್ ಅನ್ನು 280 ರೂಪಾಯಿಗಳಿಗೆ ಮಾರಾಟ ಮಾಡಲಾಗುತ್ತಿದೆ. 280 ರೂಪಾಯಿಗಳಿಗೆ ಸಿಗುವಂತಹ ಔಷಧಿಯನ್ನು 13,800 ರೂಪಾಯಿಗಳಿಗೆ ಮಾರಾಟ ಮಾಡಿದರೆ ನಾನು ಏನು ಮಾಡಬೇಕು ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಮತ್ತೊಮ್ಮೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, irrational ಆಗಿ ವಿವೇಚನಾರಹಿತನಾಗಿ, ಪೂರ್ವಗ್ರಹ ಪೀಡಿತನಾಗಿ ಎಲ್ಲರ ಮೇಲೂ ಸಾರ್ವತ್ರಿಕವಾಗಿ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ ಎನ್ನುವ ಆಶ್ವಾಸನೆಯನ್ನು ನಾನು ನೀಡುತ್ತಿದ್ದೇನೆ. ಪ್ರತಿಯೊಂದು ಪ್ರಕರಣವನ್ನು ನೋಡಿ, ನಿಜವಾಗಿ ಯಾರು ಹಾದಿ ತಪ್ಪಿದ್ದಾರೆ ಅವರಿಗೆ ಪ್ರಜ್ಞೆ ಬರಲಿ, ಅವರು ಹಾದಿಗೆ ಬರಲಿ ಎನ್ನುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಇಲ್ಲಿಗೆ ಮುಕ್ತಾಯಗೊಂಡಿದೆ. ಈಗ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾಃ ಜಿ.ಪರಮೇಶ್ವರ್(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ 20ನೇ ಮಾರ್ಚ್ 2017, ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 134 ಪ್ರಶ್ನೆಗಳ ಪೈಕಿ 57 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**2. ಸಚಿವರ ಹೇಳಿಕೆಗಳು**

**ಅ) ಕಸ್ತೂರಿ ರಂಗನ್ ವರದಿ ಅನುಷ್ಠಾನ ಮಾಡಿದರೇ ಅರಣ್ಯ ಪ್ರದೇಶದಲ್ಲಿ ವಾಸಿಸುವ ಆದಿವಾಸಿಗಳ ಕುರಿತು**

– – –

**ಡಾಃಜಿ.ಪರಮೇಶ್ವರ್(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ16.03.2017ರಂದು ಮಾನ್ಯ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಆ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಪಶು ವೈದ್ಯಾಧಿಕಾರಿಗಳ ನೇಮಕಾತಿ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು.**

– – –

**ಡಾಃಜಿ.ಪರಮೇಶ್ವರ್(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ16.03.2017ರಂದು ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಮಾನ್ಯ ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವರ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ಅನುದಾನಕ್ಕೆ ಒಳಪಟ್ಟ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ 'ಡಿ'ಗ್ರೂಪ್ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳು ತಮ್ಮ ನೇಮಕಾತಿಯನ್ನು ಅನುದಾನಕ್ಕೆ ಒಳಪಡಿಸುವಂತೆ ಆಗ್ರಹಿಸಿ ಧರಣಿ ನಡೆಸುತ್ತಿರುವ ಕುರಿತು.**

– – –

**ಡಾಃಜಿ.ಪರಮೇಶ್ವರ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ17.03.2017ರಂದು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

## 3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು

**ಅ) ಬೆಂಗಳೂರಿನಲ್ಲಿ ಇರುವ ಮಹಿಳಾ ಪೊಲೀಸ್ ಠಾಣೆಗಳನ್ನು ಹೆಚ್ಚಿಸುವ ಕುರಿತು.**

– – –

**ಶ್ರೀಮತಿ ತಾರಾ ಅನೂರಾಧ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಠಾಣೆಗಳು ಎರಡೇ ಎರಡು. ಈ ಕುರಿತು ನಾನು ಕಳೆದ ಅಧಿವೇಶನದಲ್ಲಿ ಪ್ರಶ್ನಿಸಿ ಚರ್ಚೆಯನ್ನು ನಡೆಸಿದ ವೇಳೆ ಮಾನ್ಯ ಗೃಹ ಇಲಾಖೆಯ ಸಚಿವರು ಇನ್ನು ಹೊಸದಾಗಿ 04 ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸುವುದಾಗಿ ಭರವಸೆಯನ್ನು ನೀಡಿದ್ದರು. ಆ ನಂತರದಲ್ಲಿ ಈ ಕುರಿತು ಯಾವುದೇ ಕ್ರಮ ಕೈಗೊಳ್ಳದೇ ಈಗ ಇರುವ 02 ಠಾಣೆಗಳ ಪೈಕಿ ಬೆಂಗಳೂರಿನ ಹೃದಯ ಭಾಗದಲ್ಲಿರುವ ಹಲಸೂರಿನ ಮಹಿಳಾ ಪೊಲೀಸ್ ಠಾಣೆಯನ್ನು ಶಿವಾಜಿನಗರದಲ್ಲಿರುವ ರಸಲ್ ಮಾರ್ಕೆಟ್ ಬಳಿ ಸ್ಥಳಾಂತರಿಸಿದ್ದಾರೆ. ಈ ಸ್ಥಳಾಂತರ ಕುರಿತು ನನಗೆ ಹಲವು ಪ್ರಶ್ನೆಗಳು ಕಾಡ ತೊಡಗಿವೆ ಈಗಿರುವ ಎರಡೇ ಎರಡು ಠಾಣೆಗಳ ಪೈಕಿ ಈ ಠಾಣೆಯನ್ನು ಈ ಸ್ಥಳಕ್ಕೆ ಸ್ಥಳಾಂತರಿಸಿರುವುದು ಏಕೆ? ಈ ಪ್ರದೇಶದಲ್ಲಿ ಮಹಿಳೆಯವರು ಓಡಾಡುವುದು ಇರಲಿ ಕಾಲಿಡುವುದೇ ಕಷ್ಟಸಾಧ್ಯವಾಗಿದ್ದು ಈ ವಿಷಯವು ತಮ್ಮ ಗಮನಕ್ಕೆ ಬಂದಿಲ್ಲವೇ? ಕಳೆದ ಅಧಿವೇಶನದಲ್ಲಿ 04 ಹೊಸ ಮಹಿಳಾ ಠಾಣೆಗಳನ್ನು ಪ್ರಾರಂಭಿಸುವುದಾಗಿ ಭರವಸೆ ನೀಡಿದ್ದು ಕೇವಲ ಭರವಸೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತೇ? ದಯಮಾಡಿ ಈ ನನ್ನ ಪ್ರಶ್ನೆಗಳಿಗೆ ಗೃಹ ಸಚಿವರು ಭರವಸೆಯ ಮಾತುಗಳನ್ನು ಆಡದೇ ಪರಿಹಾರ ನೀಡಬೇಕೆಂದು ಹಾಗೂ ಸ್ಥಳಾಂತರ ಮಾಡಿದ ಪೊಲೀಸ್ ಠಾಣೆಯನ್ನು ಕೂಡಲೇ ಈ ಮುಂಚೆ ಇದ್ದ ಸ್ಥಳದಲ್ಲಿಯೇ ಮುಂದುವರೆಸಬೇಕೆಂದು ಹಾಗೂ ಈ ಹಿಂದಿನ ಅಧಿವೇಶನದಲ್ಲಿ ನೀಡಿದ ಭರವಸೆಯಂತೆ 04 ಹೊಸ ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ತಮ್ಮ ಮುಖಾಂತರ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಡಾಃಜಿ.ಪರಮೇಶ್ವರ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ನಾಳೆ ಉತ್ತರವನ್ನು ಕೊಡಿಸುತ್ತೇನೆ.

(ಮುಂದುವರಿದಿದೆ)

(281) 20.03.2017 ಟಿ.ಸಿ.ಹೆಚ್/ಜಿ.ಆರ್. 12.20 **(ಉಪ ಸಭಾಪತಿಯವರ ಉಪಸ್ಥಿತಿ)**

**ಆ) ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವವರಿಗೆ ದುಬಾರಿ ಶುಲ್ಕ ನಿಗದಿ ಮಾಡಿರುವ ಬಗ್ಗೆ.**

****

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪಿ.ಯು.ಸಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಶುಲ್ಕ ದುಬಾರಿ ಎಂದು ಪತ್ರಿಕೆಗಳಲ್ಲಿ ವರದಿಯಾದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇತ್ತೀಚೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ 1130 ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಸಾಮಾನ್ಯ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗೆ ಒಂದು ಅರ್ಜಿಗೆ ರೂ. 2500/- ಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಗೆ ರೂ. 2000/- ಗಳನ್ನು ನಿಗದಿಪಡಿಸಿದೆ. ಈ ರೀತಿ ರಾಜ್ಯ ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಉದ್ಯೋಗಕ್ಕಾಗಿ ಕಾಯುತ್ತಿರುವ ನಿರುದ್ಯೋಗಿ ಪದವೀಧರರಿಂದ ಹಣ ವಸೂಲಿ ಮಾಡುವುದು ಸರ್ಕಾರಕ್ಕೆ ಗೌರವ ತರುವಂತದ್ದಲ್ಲ.

ಇನ್ನೊಂದು ಮಹತ್ವದ ವಿಷಯವೇನೆಂದರೆ, ಪರೀಕ್ಷಾ ಪ್ರಾಧಿಕಾರವು ಅರ್ಜಿಗೆ ದುಬಾರಿ ಶುಲ್ಕ ನಿಗದಿಪಡಿಸುವುದರ ಜೊತೆಗೆ ಒಂದು ಹುದ್ದೆಗೆ ಒಂದೇ ಅರ್ಜಿ ಎಂಬ ವಿಚಿತ್ರ ನಿಯಮವನ್ನು ರೂಪಿಸಿದೆ. ಇದರಿಂದ ಯಾವುದಾದರೂ ಅಭ್ಯರ್ಥಿ ಒಂದಕ್ಕಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಹಾಕಬೇಕಿದ್ದಲ್ಲಿ ಮತ್ತೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ. 2500/- ಗಳ ಶುಲ್ಕ ತುಂಬಬೇಕಾಗುತ್ತದೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇಂತಹ ಸಮಸ್ಯೆ ಉಂಟಾದಾಗ ಅಲ್ಲಿ ಸುಧಾರಣೆ ತಂದು, ಒಂದೇ ಅರ್ಜಿ ಹಾಗೂ ಅದೇ ಶುಲ್ಕದಲ್ಲಿ ಎಷ್ಟು ಹುದ್ದೆಗಳಿಗಾದರೂ ಅರ್ಜಿ ಸಲ್ಲಿಸಬಹುದೆಂಬ ನಿಯಮಾವಳಿಯನ್ನು ತಿದ್ದುಪಡಿ ಮಾಡಿ ಜಾರಿಗೆ ತರಲಾಗಿದೆ. ಹೀಗಿರುವಾಗ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಇನ್ನು ಏಕೆ ಜ್ಞಾನೋದಯವಾಗಿಲ್ಲ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಈ ಹಿನ್ನೆಲೆಯಲ್ಲಿ, ನಿರುದ್ಯೋಗಿ ಪದವಿಧರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಿಸಿ, ರಾಜ್ಯದಲ್ಲಿನ ಕೆ.ಪಿ.ಎಸ್.ಸಿಯವರು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಅರ್ಜಿಗೆ ನಿಗದಿಪಡಿಸಿರುವಂತೆ ರೂ. 300/- ಗಳ ಶುಲ್ಕವನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕೇವಲ ರೂ.25/-ಗಳು ನಿಗದಿ ಮಾಡಿದಂತೆ ಪಿ.ಯು. ಉಪನ್ಯಾಸಕರ ಹುದ್ದೆ ಅರ್ಜಿ ಶುಲ್ಕವನ್ನು ಕಡಿಮೆಗೊಳಿಸಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಉತ್ತರಗಳನ್ನು ಒದಗಿಸಿಕೊಡಲಾಗುತ್ತದೆ.

**ಇ) ಶಿವಮೊಗ್ಗ ತಾಲ್ಲೂಕು ಹಾರನಹಳ್ಳಿ ಗ್ರಾಮದ ಶ್ರೀಮತಿ ವೀಣಾ.ಬಿ.ಎಂ. ಇವರಿಗೆ ಹುತಾತ್ಮ ಯೋಧರಿಗೆ ನೀಡುವ ಪರಿಹಾರ/ಸರ್ಕಾರಿ ಉದೋಗ ನೀಡುವ ಬಗ್ಗೆ.**

****

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಬ್ಬ ಹುತಾತ್ಮ ಯೋಧನ ಪತ್ನಿಯ ಸಮಸ್ಯೆಯ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಶಿವಮೊಗ್ಗ ತಾಲ್ಲೂಕು ಹಾರನಹಳ್ಳಿ ಗ್ರಾಮದ ಶ್ರೀಮತಿ ವೀಣಾ.ಬಿ.ಎಂ ರವರಿಗೆ ಅವರ ಅನೇಕ ಪ್ರಯತ್ನಗಳ ಹೊರತಾಗಿಯೂ ರಾಜ್ಯದ ಇತರ ಹುತಾತ್ಮ ಯೋಧರ ಪತ್ನಿಯವರಿಗೆ ನೀಡುವ ಅನುಕಂಪ ಆಧಾರಿತ ಪರಿಹಾರವನ್ನಾಗಲಿ, ಸರ್ಕಾರಿ ಉದ್ಯೋಗವನ್ನಾಗಲಿ ರಾಜ್ಯ ಸರಕಾರ ಒದಗಿಸದಿರುವುದರಿಂದ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನ್ಯಾಯ ಕೋರಿ ಧರಣಿ ನಡೆಸಲು ಮುಂದಾಗಿರುವುದು ಗೊಂದಲವನ್ನು ಸೃಷ್ಟಿ ಮಾಡಿದೆ. ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿ, ಹುತಾತ್ಮರಾದ ಸೈನಿಕರ ಕುಟುಂಬದವರಿಗೆ ಸೂಕ್ತ ಪರಿಹಾರ ಕಲ್ಪಿಸುವುದು ಜವಾಬ್ದಾರಿಯುತ ನಾಗರೀಕ ಸರಕಾರದ ಕರ್ತವ್ಯವಾಗಿದ್ದು, ಹುತಾತ್ಮ ಸೈನಿಕ ಕುಟುಂಬದವರು ಈ ಕುರಿತಾಗಿ ಪದೇ ಪದೇ ಧರಣಿ ಕೂರುತ್ತಿರುವುದು ರಾಜ್ಯಕ್ಕೆ ಶೋಭೆ ತರುವುದಿಲ್ಲ. ಆದುದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ವಿಠಗೊಂಡನಕೊಪ್ಪ ಗ್ರಾಮದ ಯೋಧ ಶ್ರೀ ಉಮೇಶಪ್ಪ ರವರ ಪತ್ನಿ ಶ್ರೀಮತಿ ವೀಣಾ.ಬಿ.ಎಂ ಇವರು ನಡೆಸುತ್ತಿರುವ ಧರಣಿಯನ್ನು ಕೊನೆಗೊಳಿಸುವಂತೆ ಸರಕಾರವು ಅವರನ್ನು ವಿನಂತಿಸಿ ಸೂಕ್ತ ಪರಿಹಾರವನ್ನು ಘೋಷಿಸಿ, ಈ ಕೂಡಲೇ ನ್ಯಾಯ ಒದಗಿಸಿವಂತೆ ಕೋರುತ್ತಾ, ಇನ್ನು ಮುಂದೆ ಸೇನೆಯಲ್ಲಿ ಕಾರ್ಯ ನಿರತರಾಗಿರುವ ಸಂದರ್ಭದಲ್ಲಿ ಹುತಾತ್ಮರಾದ ಅಥವಾ ಮೃತರಾದ ಸೈನಿಕ/ಅರೆಸೈನಿಕ ಹಾಗೂ ಪೊಲೀಸ್ ಸಿಬ್ಬಂದಿಗಳ ಕುಟುಂಬದವರಿಗೆ ಪರಿಹಾರ ಒದಗಿಸಲು ಏಕ ರೂಪದ ಮಾನದಂಡವನ್ನು ರೂಪಿಸುವಂತೆ ಶೂನ್ಯ ವೇಳೆಯಲ್ಲಿ ಸರಕಾರವನ್ನು ಒತ್ತಾಯಿಸುತ್ತೇನೆ.

**ಡಾ|| ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಂದ. . .

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ತಾವು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೊಡಿಸಿ, ಈ ಸೈನಿಕರು ಏನು ಸತ್ತು ಹೋಗುತ್ತಾರೆ. ಅವರಿಗೆ ಏನೂ ಮಾನದಂಡವಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ, ಅವರು ಸಾಕಷ್ಟು ಈ ಬಗ್ಗೆ ಹೇಳಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅಲ್ಲಿ ಅವರು ಧರಣಿ ಕುಳಿತಿದ್ದಾರೆ. ನಾನು ಶಿವಮೊಗ್ಗಕ್ಕೆ ಹೋಗುವುದಕ್ಕೆ ಆಗುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೆ, ಅವರು ಅದರ ಬಗ್ಗೆ ಹೇಳುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು ಏನು ಹೇಳಿದ್ದಾರೆ? ರಾಜ್ಯದಲ್ಲಿ ಸೈನಿಕರು ಸತ್ತಿರುವ ಬಗ್ಗೆ ಮನವಿ ಮಾನವಿ ಮಾಡುತ್ತಿದ್ದೇನೆ. ಒಬ್ಬ ವಿರೋಧಪಕ್ಷದ ನಾಯಕರಿಗೆ ಸದನದಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ನಾನು ಏನು ಮಾಡಲಿ ಹೇಳಿ? ಇಡೀ ಕರ್ನಾಟಕ ರಾಜ್ಯದಲ್ಲಿ ಸೈನಿಕರು ಏನಾದರೂ ತೀರಿಕೊಂಡರೆ, ಬರೀ ಒಂದು ಲಕ್ಷ, ಎರಡು ಲಕ್ಷ ಮತ್ತು 5 ಲಕ್ಷ ಎಷ್ಟು ಬೇಕೋ ಅಷ್ಟನ್ನು ಕೊಡುತ್ತಿದ್ದಾರೆ. ಅವರಿಗೆ ಒಂದು ಮಾನದಂಡ ಮಾಡಿ. ಅವರಿಗೆ ಪರಿಹಾರ ಕೊಡುತ್ತೀರಾ. ಅವರಿಗೆ ಅಪಾಯಿಂಟ್‌ಮೆಂಟ್ ಕೊಡುತ್ತೀರಾ. ಇದನ್ನು ಫಿಕ್ಸ್ ಮಾಡಿಸುವಂತಹ ವ್ಯವಸ್ಥೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅವರು ಧರಣಿ ಕುಳಿತಿದ್ದಾರೆ. ಸರ್ಕಾರ ಅವರ ಪರವಾಗಿದ್ದರೆ ಏನು ಮಾಡಲಿ ನಾನು.

**ಉಪ ಸಭಾಪತಿಯವರು:-** ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಚರ್ಚೆ ಅಲ್ಲ. ನಾನು ಮನವಿ ಮಾಡುತ್ತೇನೆ.

**ಡಾ|| ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಬೇರೆ ರೂಪದಲ್ಲಿ ಚರ್ಚೆ ಮಾಡಬಹುದಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಿಂದ ನಾಳೆ ಉತ್ತರ ಕೊಡಿಸಿ. ಉತ್ತರ ಕೊಡಿಸುವಂತಹ ಸಂದರ್ಭದಲ್ಲಿ ಒಂದು ಫಿಕ್ಸ್ ಮಾಡಿ, ಅವರಿಗೆ ಇಷ್ಟು ಹಣ ಕೊಡುತ್ತೇವೆಂದು. ಇಷ್ಟು ಅಪಾಯಿಂಟ್‌ಮೆಂಟ್ ಕೊಡುತ್ತೇವೆ. ಈ ರೀತಿ ಪರಿಹಾರಾತ್ಮಕವಾಗಿ ತಾವು ಮಾಡದೆಯೇ ಏನೋ ಒಂದು ಉತ್ತರವನ್ನು ದಯವಿಟ್ಟು ಕೊಡಿಸಬೇಡಿ ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

**ಡಾ|| ಜಿ.ಪರಮೇಶ್ವರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರಗಳನ್ನು ಒದಗಿಸಿಕೊಡಲಾಗುವುದು.

**ಈ) ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಇತರೆ ಭಾಷಾ ವಿಷಯಗಳ ಪ್ರಶ್ನೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮುದ್ರಿಸುವ ಕುರಿತು.**

****

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು.

ಕರ್ನಾಟಕ ರಾಜ್ಯದಲ್ಲಿ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆ(ಟಿ.ಇ.ಟಿ)ಯಲ್ಲಿ ಉಂಟಾಗಿರುವ ಸಮಸ್ಯೆಗಳು ಹಾಗೂ ಗೊಂದಲಗಳ ಕುರಿತು ಸಂಬಂಧಪಟ್ಟ ಅಭ್ಯರ್ಥಿಗಳಿಂದ ಅನೇಕ ದೂರುಗಳು ಬಂದಿರುತ್ತವೆ. ಇದೊಂದು ಸಾರ್ವಜನಿಕ ಮಹತ್ವದ ವಿಷಯವಾಗಿದ್ದು, ಈ ಅರ್ಹತಾ ಪರೀಕ್ಷೆಯಲ್ಲಿ ವಿವಿಧ ಭಾಷಾ ಮಾಧ್ಯಮಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ಪ್ರಸ್ತುತ ಅರ್ಹತಾ ಪರೀಕ್ಷೆಯಲ್ಲಿ ಕನ್ನಡ ಭಾಷೆಯ ಪ್ರಶ್ನೆಗಳು ಹಾಗೂ ಇನ್ನುಳಿದ ಭಾಷಾ ವಿಷಯಗಳಾದ ಗಣಿತ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಜ್ಞಾನ, ಪರಿಸರ ಅಧ್ಯಯನ ಸೇರಿದಂತೆ ಇನ್ನಿತರೆ ವಿಷಯಗಳ ಪ್ರಶ್ನೆಗಳನ್ನು ಕನ್ನಡ ಭಾಷಯಲ್ಲಿಯೇ ಪ್ರಕಟವಾಗಿರುತ್ತವೆ. ಇದರಿಂದಾಗಿ ಕನ್ನಡ ಮಾಧ್ಯಮವನ್ನು ಹೊರತುಪಡಿಸಿ, ಇತರೆ ಭಾಷಾ ಮಾಧ್ಯಮಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥೈಸಿಕೊಳ್ಳಲು ತೊಂದರೆಯಾಗುತ್ತದೆ. ಕರ್ನಾಟಕ ಲೋಕಸೇವಾ ಆಯೋಗವು ಪ್ರಸ್ತುತ ಕನ್ನಡ ಭಾಷಾ ಪರೀಕ್ಷೆಯನ್ನು ಹೊರತುಪಡಿಸಿ, ಇನ್ನಿತರೆ ವಿಷಯಗಳ ಪರೀಕ್ಷೆಯನ್ನು ಕನ್ನಡ ಹಾಗೂ ಆಂಗ್ಲ ಮಾಧ್ಯಮದಲ್ಲಿ ಪ್ರಶ್ನೆಗಳನ್ನು ಪ್ರಕಟಿಸಿರುತ್ತದೆ. ಅದರಂತೆ ಪೊಲೀಸ್ ಇಲಾಖೆಯ ಪರೀಕ್ಷೆಗಳು, ಅರಣ್ಯ ಇಲಾಖೆಯ ಪರೀಕ್ಷೆಗಳು, ಕರ್ನಾಟಕ ರಾಜ್ಯ ಪರೀಕ್ಷಾ ಪ್ರಾಧಿಕಾರ ನಡೆಸುವ ಪಿ.ಡಿ.ಓ ಹಾಗೂ ಕಾರ್ಯದರ್ಶಿ ಗ್ರೇಡ್-1 ಹುದ್ದೆಯ ನೇಮಕಾತಿ ಪರೀಕ್ಷೆಗಳು ಸೇರಿದಂತೆ ಎಲ್ಲಾ ಪರೀಕ್ಷೆಗಳ ಪ್ರಶ್ನೆಗಳು ಕನ್ನಡ ಹಾಗೂ ಆಂಗ್ಲ ಮಾಧ್ಯಮದಲ್ಲಿ ಪ್ರಕಟವಾಗಿರುತ್ತವೆ.

ಹಾಗಾಗಿ, ಶಿಕ್ಷಣ ಇಲಾಖೆಯು ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯವನ್ನು ಹೊರತುಪಡಿಸಿ, ಉಳಿದ ಇತರೆ ಭಾಷಾ ವಿಷಯಗಳ ಪ್ರಶ್ನೆಗಳನ್ನು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಮುದ್ರಿಸುವಂತೆ ಕ್ರಮಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಡಾ॥ ಜಿ.ಪರಮೇಶ್ವರ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**ಉ) ಕೊಡಗು ಜಿಲ್ಲೆಯ ಕುಶಾಲನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಕುರಿತು.**

****

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು.

ಕೊಡಗು ಜಿಲ್ಲೆಯ ಕುಶಾಲನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬುದು ಜಿಲ್ಲೆಯ ಜನಗಳ ಬಹುದಿನದ ಬೇಡಿಕೆಯಾಗಿತ್ತು. ಈ ವಿಷಯವಾಗಿ ಹಲವಾರು ಸಂಘ ಸಂಸ್ಥೆಗಳು ಹಾಗೂ ಜನ ಪ್ರತಿನಿಧಿಗಳು ಸರ್ಕಾರಕ್ಕೆ ಈ ಹಿಂದೆಯೇ ಮನವಿಯನ್ನು ಮಾಡಿದ್ದರು. ಅಲ್ಲದೆ ಕುಶಾಲನಗರವು ತಾಲ್ಲೂಕು ಕೇಂದ್ರವನ್ನು ಮಾಡಲು ಬೇಕಾದ ಎಲ್ಲಾ ಅರ್ಹತೆಯನ್ನು ಹೊಂದಿದ್ದು, ವೇಗವಾಗಿ ಬೆಳೆಯುತ್ತಿರುವ ಹೋಬಳಿಯಾಗಿದೆ. ತಾಲ್ಲೂಕಿಗೆ ಬೇಕಾಗಿರುವ ಎಲ್ಲಾ ಆಡಳಿತಾತ್ಮಕ ವ್ಯವಸ್ಥೆಯನ್ನು ಸಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೊಂದಿದೆ. ಈ ಸಾಲಿನ ಬಜೆಟ್‌ನಲ್ಲಿ 49 ತಾಲ್ಲೂಕುಗಳನ್ನು ಘೋಷಿಸುವ ಸಂದರ್ಭದಲ್ಲಿ ಕುಶಾಲನಗರವನ್ನು ಸಹ ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುತ್ತಾರೆ ಎಂದು ಭಾವಿಸಲಾಗಿತ್ತು. ಆದರೆ ವಿಪರ್ಯಾಸವೆಂಬಂತೆ ಅದು ಆಗಿರುವುದಿಲ್ಲ. ಈ ಕಾರಣಗಳಿಂದಾಗಿ ನಿನ್ನೆ ದಿನಾಂಕ: 19-03-2017ರಂದು ಪಕ್ಷಾತೀತವಾಗಿ ಎಲ್ಲಾ ಸಂಘ ಸಂಸ್ಥೆಗಳು ಸೇರಿ ಕುಶಾಲನಗರ ಬಂದ್ ಆಚರಿಸಿ, ಜನರ ಮನಸ್ಸಿನ ಇಂಗಿತವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೂ ಜಿಲ್ಲೆಯಲ್ಲಿ ಈ ಕುರಿತಾಗಿ ಪ್ರತಿಭಟನೆಗಳು ಸಹ ನಡೆಯುತ್ತಿವೆ ಜನಪರ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಕುಶಾಲನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲೇಬೇಕಾದ ಅನಿವಾರ್ಯತೆ ಇದೆ. ಆದುದರಿಂದ ಕುಶಾಲ ನಗರವನ್ನು ತಾಲ್ಲೂಕು ಕೇಂದ್ರ ಎಂದು ಘೋಷಿಸಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**(ಮುಂದು...)**

(282) 20.3.2017 12.30 ಪಿಕೆ:ಜಿಆರ್

**ಊ) ಗ್ರಾಮೀಣ ಪ್ರದೇಶದ ಬಡವರ ವಸತಿ ಯೋಜನೆಯು ಗ್ರಾಮಪಂಚಾಯಿತ್ ಮೂಲಕ ಅನುಷ್ಠಾನಗೊಳ್ಳುತ್ತಿದ್ದು, ವಸತಿ ಇಲಾಖೆಯ ಕ್ಷಣಕ್ಕೊಂದು ಆದೇಶದ ಹಿನ್ನೆಲೆಯಲ್ಲಿ ತಮಗಾಗುತ್ತಿರುವ ತೊಂದರೆ ಕುರಿತು ಪಂಚಾಯತ್ ಸಿಬ್ಬಂದಿಗಳು ಉಡುಪಿ ಜಿಲ್ಲೆಯಲ್ಲಿ ಮುಷ್ಕರ ನಡೆಸುತ್ತಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, ಗ್ರಾಮೀಣ ಪ್ರದೇಶದ ಬಡವರ ವಸತಿ ಯೋಜನೆಯು ಗ್ರಾಮಪಂಚಾಯಿತ್ ಮೂಲಕ ಅನುಷ್ಠಾನಗೊಳ್ಳುತ್ತಿದ್ದು, ವಸತಿ ಇಲಾಖೆಯ ಕ್ಷಣಕ್ಕೊಂದು ಆದೇಶದ ಹಿನ್ನೆಲೆಯಲ್ಲಿ ತಮಗಾಗುತ್ತಿರುವ ತೊಂದರೆ ಕುರಿತು ಪಂಚಾಯತ್ ಸಿಬ್ಬಂದಿಗಳು ಉಡುಪಿ ಜಿಲ್ಲೆಯಲ್ಲಿ ಮುಷ್ಕರ ನಡೆಸುತ್ತಿದ್ದಾರೆ.

ರಾಜ್ಯದಲ್ಲಿ ವಸತಿ ಇಲಾಖೆಯ ಮೂಲಕ ಬಡವರ ಮನೆ ಯೋಜನೆಗಳಾದ ಬಸವ ವಸತಿ, ಅಂಬೇಡ್ಕರ ಆವಾಸ್, ಇಂದಿರಾ ಆವಾಸ್ ಹಾಗೂ ವಿಶೇಷ ವರ್ಗದ ಮನೆಗಳು ಗ್ರಾಮ ಪಂಚಾಯತ್ ಮೂಲಕ ಅನುಷಾನಗೊಳ್ಳುತ್ತಿದ್ದು, ವಸತಿ ಇಲಾಖೆ ದಿನಕ್ಕೊಂದು, ಕ್ಷಣಕ್ಕೊಂದು ಸೂಚನೆ ನೀಡುತ್ತಿರುವ ಹಿನ್ನೆಲೆಯಲ್ಲಿ ಮನೆ ನಿರ್ಮಾಣ ವಿಳಂಬವಾಗುತ್ತಿದೆ. ಒಂದು ಲಕ್ಷಕ್ಕೂ ಮಿಕ್ಕಿ ಮನೆಗಳ ಜಿ.ಪಿ.ಎಸ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದ್ದು ನಿಗಮದಿಂದ ಫೋಟೋ ಆಡಿಟ್ ಮಾಡದೇ ಸಾವಿರಾರು ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಬಾಕಿ ಇದೆ.

ದುರಂತವೆಂದರೆ ಪಂಚಾಯತ್ ಪಿ.ಡಿ.ಒ.ಗಳು ಪಿ.ಡಿ.ಒ ಮೂಲಕ ಜಿ.ಪಿ.ಎಸ್. ಮಾಡಿ ಇಲಾಖೆಗೆ ಕಳುಹಿಸುತ್ತಿದ್ದಾರೆ. ಇದೀಗ ಪಿ.ಡಿ.ಒ ಆ್ಯಪ್, ಸೂಪರ್‌ವೈಸರ್ ಆ್ಯಪ್, ಇ.ಒ. ಆ್ಯಪ್, ಸೇರಿದಂತೆ 5 ಕ್ಕೂ ಹೆಚ್ಚು ಆ್ಯಪ್ ಮಾಡಲಾಗಿದ್ದು ಡಾಟಾ ಅಪ್‌ಲೋಡ್ ಮಾಡುವ ಸಂದರ್ಭಧಲ್ಲಿ ಮಿಸ್ ಮ್ಯಾಚ್ ಆಗುವುದು ಡಾಟಾ ಅಪ್‌ಲೋಡ್ ಆಗದಿರುವುದು, ವೆಬ್ ಸರ್ವರ್ ಸಮಸ್ಯೆಯಿಂದ ಪದೇ ಪದೇ ಜಿ.ಪಿ.ಎಸ್.ಮಾಡುವ ಸಂದರ್ಭ ಒದಗಿಬಂದಿದ್ದು ಫಲಾನುಭವಿಗಳಿಗೆ ಅನುದಾನ ವಿಳಂಬವಾಗುತ್ತಿದೆ. ಈ.ಪಿ.ಎಸ್.ಮಾಡುವ ಪಿ.ಡಿ.ಒಗಳು ಒಂದೇ ತಳಗಟ್ಟು, ಒಂದೇ ಗೋಡೆ ಚಾವಣಿಗಳ ಛಾಯಾಚಿತ್ರ 4-4 ಬಾರಿ ಬೇರೆ ಬೇರೆ ಆ್ಯಪ್‌ಗಳ ಮೂಲಕ ಜಿ.ಪಿ.ಎಸ್. ಮಾಡಬೇಕಾದ ಅನಿವಾರ್ಯತೆ ಒದಗಿಬಂದಿದೆ. ಒಮ್ಮೆ ಪೂರ್ಣವಾಗಿ ಮಾಡಿದ ಜಿ.ಪಿ.ಎಸ್.ಗಳು ತಂತ್ರಾಂಶದಲ್ಲಿನ ಲೋಪದಿಂದಾಗಿ ಅಪ್‌ಲೋಡ್ ಸಮಸ್ಯೆ ಉಂಟಾಗಿ ಮತ್ತೊಮ್ಮೆ ಜಿ.ಪಿ.ಎಸ್.ಮಾಡಬೇಕಾಗಿ ಬಂದು, ಪದೇ ಪದೇ ಕಚೇರಿ ಬಿಟ್ಟು ದೂರದ ಹಳ್ಳಿ ಕಡೆಗೆ ಓಡಬೇಕಾಗಿದೆ.

ಈ ಹಿಂದೆ ಜಿ.ಪಿ.ಎಸ್.ಮಾಡಿ ಹಣ ಪಾವತಿಯಾಗಿ ಪೂರ್ಣಗೊಂಡ ಮನೆಗಳನ್ನು ಪುನಃ ಜಿ.ಪಿ.ಎಸ್ ಮಾಡಲು ಆದೇಶಿಸಲಾಗುತ್ತಿದೆ. 3-4 ವರ್ಷಗಳ ಹಿಂದೆ 75000 ರೂಪಾಯಿ ಮಂಜೂರಾದ ಫಲಾನುಭವಿಗಳನ್ನು ಹಿಂದಿನ ಮೊತ್ತದಲ್ಲಿ ಮನೆ ನಿರ್ಮಾಣಗೊಳಿಸಲು ಕಡ್ಡಾಯವಾಗಿ ಒತ್ತಾಯಿಸಲಾಗುತ್ತಿದೆ. ಇದರಿಂದಾಗಿ ಬಡವರ ಮನೆ ನಿರ್ಮಾಣವನ್ನು ಪೂರ್ಣಗೊಳಿಸಲಾಗದೇ ತೊಂದರೆ ಅನುಭವಿಸುತ್ತಿದ್ದಾರೆ.

ಯೋಜನೆ ಅನುಷ್ಠಾನ ಪ್ರಗತಿಯಲ್ಲಿ 2-3ನೇ ಸ್ಥಾನದಲ್ಲಿರುವ ಉಡುಪಿಯಲ್ಲಿ ಯಾವುದೇ ಆರ್ಥಿಕ ಲೋಪವಿಲ್ಲದಿದ್ದರೂ ಕೇವಲ ಕುಂಠಿತ ಪ್ರಗತಿ ಕಾರಣ ನೀಡಿ, 1-2-4 ಶಿಸ್ತು ಕ್ರಮ, ಅಮಾನತ್ತು ಇಂತಹ ಕ್ರಮ ಕೈಗೊಳ್ಳಲು ಮುಂದಾಗಿದ್ದು, ವಿನಾ ಕಾರಣ ಪಂಚಾಯಿತಿ ಅಧಿಕಾರಿಗಳನ್ನು ಒತ್ತಡಕ್ಕೀಡು ಮಾಡುತ್ತಿದ್ದಾರೆ ಎಂದು ಆ ಅಧಿಕಾರಿಗಳು ದೂರು ನೀಡುತ್ತಿದ್ದಾರೆ.

ಕಾರಣವಿಲ್ಲದೇ ಪಂಚಾಯಿತಿ ಸಿಬ್ಬಂದಿಗಳಾದ ನಮಗೆ ಅನ್ಯ ಇಲಾಖೆಯವರು ದೌರ್ಜನ್ಯ ಮಾಡುವುದು, ಬಾಪೂಜಿ ಸೇವಾ ಕೇಂದ್ರದ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸದೇ ಇರುವುದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯತ್ ಕಾರ್ಯದರ್ಶಿಗಳು, ಲೆಕ್ಕ ಸಹಾಯಕರ ಬಡ್ತಿ ವಿಳಂಬ ನೀತಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪಿ.ಎಫ್ ಹಾಗೂ ಪಿ.ಎಸ್.ಐ ಸೌಲಭ್ಯಗಳನ್ನು ನೀಡಲು ಆದೇಶಿಸದೆ ಇರುವುದು, ಕಂಪ್ಯೂಟರ್ ನಿರ್ವಾಹಕ ಹುದ್ದೆಗಳನ್ನು ಸೃಜನೆ ಮಾಡದೇ ಇರುವುದು, ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಇಂದು ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಿಲ್ಲೆಯ ಎಲ್ಲಾ ಸಿಬ್ಬಂದಿಗಳು ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ.

ಪಿಡಿಓ ಗಳು ಸಹಿತ ಪಂಚಾಯುತ್‌ನ ಎಲ್ಲಾ ಸಿಬ್ಬಂದಿಗಳು ಈ ಧರಣಿಯಲ್ಲಿ ಭಾಗವಿಸುತ್ತಿದ್ದರೂ, ಗ್ರಾಮ ಪಂಚಾಯಿತಿಯ ಆಡಳಿತ ಸ್ಥಗಿತಗೊಳ್ಳುವ ವಾತಾವರಣ ನಿರ್ಮಾಣವಾಗಿದ್ದರೂ, ಧ್ವಜಾರೋಹಣ ಹಾಗೂ ಕುಡಿಯುವ ನೀರಿನ ಸರಬರಾಜಿಗೆ ತೊಂದರೆ ಆಗದಂತೆ ಮುಷ್ಕರ ನಿರತ ಸಿಬ್ಬಂದಿಗಳು ವಿವೇಚನೆಯಿಂದ ನಡೆದುಕೊಳ್ಳುತ್ತಿರುವುದು ಗಮನಾರ್ಹ. ಇಷ್ಟಾಗಿಯೂ ಒಟ್ಟಾರೆ ಉಡುಪಿ ಜಿಲ್ಲೆಯ ಪಂಚಾಯತ್ ಆಡಳಿತ ವ್ಯವಸ್ಥೆ ಸಿಬ್ಬಂದಿಗಳ ಮುಷ್ಕರದಿಂದ ಸ್ಥಗಿತವಾಗಿದ್ದು, ನಾನು ತಮ್ಮ ಮೂಲಕ ಆಗ್ರಹಿಸುವುದೇನೆಂದರೆ, ತಂತ್ರಾಂಶದ ಹೆಸರಿನಲ್ಲಿ ವಸತಿ ಇಲಾಖೆಯ ಗೊಂದಲ ಸರಿಪಡಿಸಬೇಕು ಹಾಗೂ ಮುಷ್ಕರ ನಿರತ ಪಂಚಾಯಿತಿ ಸಿಬ್ಬಂದಿಗಳ ಬೇಡಿಕೆಗೆ ನ್ಯಾಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ವಸತಿ ಹಾಗೂ ಪಂಚಾಯತ್ ರಾಜ್ ಸಚಿವರಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು):–** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರವನ್ನು ತರಿಸಿಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆ ಆ್ಯಪ್ ಅನ್ನು ಸರಿಮಾಡಬೇಕು . . .

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** 5 ಪ್ರಶ್ನೆಗಳನ್ನು ಕೇಳಿದರೆ ಕನಿಷ್ಠ ಒಂದು ಪ್ರಶ್ನೆಗಾದರೂ ಉತ್ತರಕೊಡಬೇಕು . . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನನ್ನ ಪರವಾಗಿ ಮಾತನಾಡುವುದಕ್ಕೆ ಎದ್ದು ನಿಂತರು. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಎದ್ದಿದ್ದಾರೆ, ದಯವಿಟ್ಟು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೃಷ್ಣಪ್ಪ:-** ನಾನು ನಿಮಗೆ ಉತ್ತರ ಕಳುಹಿಸಿ ಕೊಡುತ್ತೇನೆ. ಇದರಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಮಾತ್ರವಲ್ಲ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರ ವಿಷಯವೂ ಇದೆ. ಹಾಗಾಗಿ ನಾನು ಎರಡೂ ಇಲಾಖೆಗಳಿಂದ ಉತ್ತರ ತರಿಸಿ ತಮಗೆ ಕಳುಹಿಸಿ ಕೊಡುತ್ತೇನೆ.

**4. ಸಭೆಯ ಮುಂದಿಡಲಾದ ಕಾಗದಪತ್ರಗಳು**

**ಶ್ರೀ ಜಿ.ಪರಮೇಶ್ವರ್(ಸಭಾನಾಯಕರು):-**ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ;

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2016ಕ್ಕೆ ಕೊನೆಗಂಡ ವರ್ಷಕ್ಕೆ ನೀಡಿರುವ ಸಾಮಾನ್ಯ ಮತ್ತು ಸಾಮಾಜಿಕ ವಲಯದ ಮೇಲಿನ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2016ಕ್ಕೆ ಕೊನೆಗಂಡ ವರ್ಷಕ್ಕೆ ನೀಡಿರುವ ಆರ್ಥಿಕ ವಲಯದ ಮೇಲಿನ ವರದಿಯನ್ನು (ಸಂಖ್ಯೆ-3) ಸಭೆಯ ಮುಂದಿಡುತ್ತಿದ್ದೇನೆ.

ಉಪಸಭಾಪತಿಯವರು:- ಮುಂಡಿಸಲಾಯಿತು.

**ಉಪಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಗಳು. ಮೊದಲನೆಯದಾಗಿ ಮಾನ್ಯ ಪುಟ್ಟಣ್ಣನವರು ಗಮನಸೆಳೆಯಬೇಕು.

**ಶ್ರೀ ಪುಟ್ಟಣ್ಣ:-** ಮಾನ ಮುಖ್ಯಮಂತ್ರಿಗಳೇ ಇಲ್ಲ, ನಾನು ಯಾರ ಗಮನ ಸೆಳೆಯಲಿ?

**ಉಪಸಭಾಪತಿಯವರು:-** ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ.

**ಶ್ರೀ ಜಿ.ಪರಮೇಶ್ವರ್:-** ಮುಖ್ಯಮಂತ್ರಿಗಳ ಪರವಾಗಿ ನಾನು ಉತ್ತರ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ನೀವೇ ಉತ್ತರ ಕೊಡಬಹುದಾಗಿದ್ದರೆ ಆವತ್ತೇ ಕೊಡಬಹುದಾಗಿತ್ತು ಅಲ್ಲವೇ?

**ಶ್ರೀ ಜಿ.ಪರಮೇಶ್ವರ್:-** ಆವತ್ತು ಉತ್ತರ ಬಂದಿರಲಿಲ್ಲ. ಈಗ ಉತ್ತರ ಬಂದಿದೆ. ಮುಖ್ಯಮಂತ್ರಿಗಳ ಪರವಾಗಿ ನಾನು ಉತ್ತರ ಕೊಡುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ:-**ನೀವೇ ಮುಖ್ಯಮಂತ್ರಿಗಳಾಗಿ ಉತ್ತರ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಅಪೇಕ್ಷೆಯಾಗಿದೆ . . .

**ಶ್ರೀ ಜಿ.ಪರಮೇಶ್ವರ:-** ಇರಬಹುದು . . .

**ಶ್ರೀ ಕೆ.ಈಶ್ವರಪ್ಪ:-**ಮಾನ್ಯ ಅರುಣ ಶಹಾಪುರ ರವರು, ನೀವು ಮುಖ್ಯಮಂತ್ರಿಗಳಾಗಿ ಉತ್ತರ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಅಪೇಕ್ಷೆಯಾಗಿ ಎಂದು ಹೇಳಿದ್ದಕ್ಕೆ ತಾವು, ಇರಬಹುದು ಎಂಬ ಮಾತನ್ನು ಇವತ್ತು ಹೇಳುತ್ತಿದ್ದೀರಿ. ನಿಮ್ಮ ಅಪೇಕ್ಷೆ ಕೂಡ ಅದೇ ಆಗಿದೆಯೇ?

**ಶ್ರೀ ಜಿ.ಪರಮೇಶ್ವರ:-** ಮಾನ್ಯ ಈಶ್ವರಪ್ಪನವರು ಸದನದ ಹೊರಗಡೆ ಏಕೆ ಹೋರಾಟ ಮಾಡುತ್ತಿದ್ದಾರೆ ಎನ್ನುವುದು ನನಗೆ ಈಗ ಅರ್ಥವಾಗುತ್ತಿದೆ. ನೀವು ಮತ್ತು ಮಾನ್ಯ ಯಡಿಯೂರಪ್ಪನವರು ಹೋರಾಟ ಮಾಡುತ್ತಿರುವುದು ದಿನನಿತ್ಯ ಪತ್ರಿಕೆಯಲ್ಲಿ ಬರುತ್ತಿದೆ. ಅದು ಏಕೆ ಎನ್ನುವುದು ನನಗೀಗ ಅರ್ಥವಾಗುತ್ತಿದೆ. . .

**ಶ್ರೀ ಕೆ.ಈಶ್ವರಪ್ಪ:-**ಈಗಿರುವ ಮುಖ್ಯಮಂತ್ರಿಗಳನ್ನು ಇಳಿಸಿ ನಿಮ್ಮನ್ನು ಮುಖ್ಯಮಂತ್ರಿಯಾಗಿ ಮಾಡಲಿ ಎಂದು ನಾವು ಹೋರಾಟ ಮಾಡುತ್ತಿದ್ದೇವೆ ಎಂದು ಭಾವಿಸ್ಕುತ್ತಿದ್ದೀರಾ? ನಿಮ್ಮಿಬ್ಬರನ್ನೂ ತೆಗೆದು ಹಾಕಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಅವರನ್ನು ತೆಗೆದು ನಿಮ್ಮನ್ನು ಕೂರಿಸುತ್ತೇವೆ ಎಂದು ತಿಳಿದುಕೊಳ್ಳಬೇಡಿ. ಪೂರ ಕಾಂಗ್ರೆಸನ್ನೇ ತೆಗೆದು ಹಾಕಬೇಕು ಎನ್ನುವುದು ನಮ್ಮ ಆಸೆಯಾಗಿದೆ.

(ಸದನದಲ್ಲಿ ನಗು)

**ಶ್ರೀ ಹೆಚ್.ಎಂ.ರೇವಣ್ಣ:-** ಹಾಗಾದರೆ ಮೊಸಳೆ ಕಣ್ಣೀರು ಏಕೆ ಹಾಕುತ್ತಿದ್ದೀರಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಈಶ್ವರಪ್ಪ:-** ನಾನು ಮಾನ್ಯ ಸಭಾನಾಯಕರ ಅಪೇಕ್ಷೆ ಕೇಳಿದೆ ಅಷ್ಟೆ.

## 5. ಗಮನಸೆಳೆಯುವ ಸೂಚನೆಗಳು

**ವಿಷಯ:ರಾಜ್ಯದಲ್ಲಿ ಖಾಸಗಿ ಕೇಬಲ್ ನೆಟ್‌ವರ್ಕ್ ಏಜೆನ್ಸಿಗಳು ಸಾರ್ವಜನಿಕರಿಂದ ಹೆಚ್ಚಿನ ಹಣವನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕಾನೂನು ರೂಪಿಸುವ ಹಾಗೂ ಸರ್ಕಾರದಿಂದಲೇ ಕೇಬಲ್ ನೆಟ್‌ವರ್ಕ್ ವ್ಯವಸ್ಥೆಯನ್ನು ಜಾರಿಗೆ ತಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ.**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಖಾಸಗಿ ಕೇಬಲ್ ನೆಟ್‌ವರ್ಕ್ ಏಜೆನ್ಸಿಗಳು ಸಾರ್ವಜನಿಕರಿಂದ ಹೆಚ್ಚಿನ ಹಣವನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕಾನೂನು ರೂಪಿಸುವ ಹಾಗೂ ಸರ್ಕಾರದಿಂದಲೇ ಕೇಬಲ್ ನೆಟ್‌ವರ್ಕ್ ವ್ಯವಸ್ಥೆಯನ್ನು ಜಾರಿಗೆ ತಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಜಿ.ಪರಮೇಶ್ವರ್(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ಕೇಬಲ್ ನೆಟ್‌ವರ್ಕ್ ಏನು ಪ್ರತಿ ಮನೆಗೂ ತಲುಪುತ್ತಿದೆಯೋ ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ 1995ರಲ್ಲಿ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಬಗ್ಗೆ ಒಂದು ಅಧಿನಿಯಮವನ್ನು ಕೇಂದ್ರ ಸರ್ಕಾರ ತಂದಿತು. ಅದರ ಅಡಿಯಲ್ಲಿ, ಪ್ರತಿ ರಾಜ್ಯದಲ್ಲಿ ಒಂದೊಂದು ಸಮಿತಿ ಇರಬೇಕು, ಇದನ್ನು ಮೇಲುಸ್ತುವಾರಿ ಮಾಡುವುದಕ್ಕೆ ಪ್ರತಿ ರಾಜ್ಯದಲ್ಲಿ ಒಂದು ಸಮಿತಿ ಇರಬೇಕು ಎಂದು ಆದೇಶ ಮಾಡಿದ್ದಾರೆ. ಅದೇ ರೀತಿ ಜಿಲ್ಲಾ ಮಟ್ಟದಲ್ಲಿ ಕೂಡ ಅದನ್ನು ನಿರ್ವಹಣೆ ಮಾಡುವುದಕ್ಕೆ ಒಂದು ಸಮಿತಿ ಇರಬೇಕೆಂದು ಆದೇಶ ಮಾಡಿದ್ದಾರೆ. ಆ ಸಮಿತಿಯಲ್ಲಿ, ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ವಾರ್ತಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ರಾಜ್ಯ ಮಟ್ಟದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. 1995ರ ಅಧಿನಿಯಮದಲ್ಲಿ, ರೆಗ್ಯುಲೇಟ್ ಮಾಡುವುದಕ್ಕೆ ಮತ್ತು ದರ ನಿಗದಿ ಮಾಡುವುದಕ್ಕೆ ಕೇಂದ್ರಕ್ಕೆ ಅಧಿಕಾರ ಇದೆ. Telecom Regulatory Authority of India

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(TRAI) ಎಂದೇನಿದೆ, ಅವರು ಆಗಿಂದ್ದಾಗ್ಗೆ ಸಭೆ ಸೇರಿ ಈ ದರವನ್ನು ಫಿಕ್ಸ್ ಮಾಡುತ್ತಾರೆ. ರೆಗ್ಯುಲೇಟ್ ಮಾಡುವುದಕ್ಕೆ ಮತ್ತು ದರ ನಿಗದಿ ಮಾಡುವುದಕ್ಕೆ ಅವರು ಕ್ರಮ ಕೈಗೊಳ್ಳುತ್ತಾರೆ. ಇದೇ ಮಾರ್ಚ್ ತಿಂಗಳ 3ನೇ ದಿನಾಂಕದಂದು ಒಂದು ಸಭೆ ನಡೆಸಿದ್ದಾರೆ. ಆ ಸಭೆಯಲ್ಲಿ, ಲೇಟೆಸ್ಟ್ ಆಗಿ ದರವನ್ನು ಫಿಕ್ಸ್ ಮಾಡಿದ್ದಾರೆ. ಅದರ ಪ್ರಕಾರ, ಕೇಬಲ್ ನೆಟ್‌ವರ್ಕ್‌ನವರು 100 ಚಾನಲ್‌ಗಳನ್ನು ನೀಡುತ್ತಿದ್ದರೆ ಅವರು ರೂ. 130 ತಿಂಗಳೊಂದಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ. ಪೇ ಚಾನಲ್ಸ್ ಯಾವುದಾದರೂ ಇದ್ದರೆ ಅದಕ್ಕೆ ಹೆಚ್ಚುವರಿಯಾಗಿ ದರ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಲ್ಲದೇ, ದರವನ್ನೇನು ಬದಲಾಯಿಸುತ್ತಾರೋ ಅದನ್ನು ಆಯಾ ಚಾನೆಲ್‌ನವರೇ ನೋಟಿಫೈ ಮಾಡುತ್ತಾರೆ. ಕೇಬಲ್ ನೆಟ್‌ವರ್ಕ್‌ನವರು ದರ ಫಿಕ್ಸ್ ಮಾಡುವ ಹಾಗಿಲ್ಲ. ಒಂದು ವೇಳೆ ಆ ರೀತಿ ಮಾಡಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಬಹುದು. ದೂರುಗಳು ಬಂದರೆ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿರುವ ಸಮಿತಿಗಳು ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿರುತ್ತದೆ. ಈ ಸಮಿತಿಗಳಿಗೆ ಆ ಅಧಿಕಾರ ಕೊಟ್ಟಿದ್ದಾರೆ. ಕೇಬಲ್ ನೆಟ್‌ವರ್ಕ್ ಅವರಿಗೆ ದರ ಹೆಚ್ಚು ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರದಿಂದ ನೆಟ್‌ವರ್ಕ್ ಸಂಸ್ಥೆ ಜಾರಿಗೆ ತರುವ ಯಾವುದಾದರೂ ಪ್ರಸ್ತಾವನೆ ಇದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಕೇಬಲ್ ನೆಟ್‌ವರ್ಕ್ ಸಂಸ್ಥೆಯನ್ನು ರೆಗ್ಯುಲೇಟ್ ಮಾಡುವುದಕ್ಕೆ ಸಂಬಂಧಪಟ್ಟಂಥ ಯಾವುದೇ ಪ್ರಸ್ತಾವನೆ ನಮ್ಮ ಸರ್ಕಾರದ ಹಂತದಲ್ಲಿಲ್ಲ. ಇದು ಕೇಂದ್ರ ಸರ್ಕಾರದ ಸೌಮ್ಯದಲ್ಲಿದ್ದು, ಅವರೇ ರೆಗ್ಯುಲೇಟ್ ಮಾಡುವ ನಿಯಮಗಳನ್ನು ರೂಪಿಸಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ:-** ಹಿಂದೆ ಮಾನ್ಯ ರೋಷನ್‌ಬೇಗ್‌ರವರು ವಾರ್ತಾ ಮತ್ತು ಪ್ರಚಾರ ಮಂತ್ರಿಯಾಗಿದ್ದಾಗ, ಮುಂದಿನ ದಿನಗಳಲ್ಲಿ ಕೇಬಲ್ ನೆಟ್‌ವರ್ಕನ್ನು ಸರ್ಕಾರದಿಂದಲೇ ಕಡಿಮೆ ದರದಲ್ಲಿ ಮಾಡುತ್ತೇವೆ ಎಂದು ಇದೇ ಸದನದಲ್ಲಿ ಹೇಳಿದ್ದರು.

(ಮುಂದು . . .)

(283)20.03.2017 MM-MD-12.40

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಮುಂದು):-**

ನಾವು ಮುಂದಿನ ದಿನಗಳಲ್ಲಿ cable network ಅನ್ನು ಸರ್ಕಾರದಿಂದ ಕಡಿಮೆ ದರದಲ್ಲಿ ಮಾಡುತ್ತೇವೆ ಎಂದಿದ್ದರು. ಅದಕ್ಕಾಗಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಹಾಗೆ ಹೇಳಿರದಿದ್ದರೆ ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ನೀವು ಇಲ್ಲ ಎಂದು ಹೇಳುತ್ತೀರಿ. ಹಾಗಾದರೆ ಅವರು ಹಾಗೆ ಹೇಳಿದ್ದು ಏಕೆ?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರೇಕೆ ನಿಲ್ಲಿಸಿದರು? ಇಲ್ಲಿರುವ ತೊಂದರೆ ಏನೆಂದರೆ, ಇದು ಕೇಬಲ್ ಅಳವಡಿಸುವ ಹುಡುಗರ ಸಮಸ್ಯೆ ಅಲ್ಲ. ಈ cable network ವ್ಯವಸ್ಥೆ satellite ಮುಖಾಂತರ ಬರುತ್ತದೆ ಅದು ಈ ಹಿಂದೆ cable operators ಗೆ wire ಮುಖಾಂತರ ಬರುತ್ತಿತ್ತು. ಆದರೆ ಈಗ ಏನಾಗಿದೆ ಎಂದರೆ Set Top Box ಗಳನ್ನು ಅಳವಡಿಸಿದ್ದಾರೆ. ಅದೊಂದು ದೊಡ್ಡ ಮಾಫಿಯಾವಾಗಿದೆ. ಕೇಬಲ್ ಇಲ್ಲದಿದ್ದರೆ network ಬರುವುದೇ ಇಲ್ಲ. ಕೇಬಲ್ ಅನ್ನು supply ಮಾಡುವುದಕ್ಕೆ ಬೇಕಾದಷ್ಟು ಕಂಪನಿಗಳು ಹುಟ್ಟಿಕೊಂಡಿವೆ. Star Group, Zee TV, IndiaCast Media Distribution Private Limited, Sony companies ಈ ತರಹದ ಕಂಪನಿಗಳು ಹುಟ್ಟಿಕೊಂಡಿವೆ. ಅವರು ಒಂದು ತಿಂಗಳಿಗೆ 150 ರಿಂದ 600 ರೂಪಾಯಿಗಳನ್ನು charge ಮಾಡುತ್ತಿದ್ದಾರೆ. ಇದಲ್ಲದೇ DTH ಬಂತಲ್ಲಾ, ಇದರಲ್ಲಿ ED Digital, Siti Cable, Hathway, In Cable, ACT Digital Cable ಇವು ಒಂದು ತಿಂಗಳಿಗೆ 800 ರೂಪಾಯಿವರೆವಿಗೂ charge ಮಾಡುವ ಮೂಲಕ ಲೂಟಿ ಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ, ನೀವು ಸುಮಾರು ಎಲ್ಲಾ ಭಾಗ್ಯಗಳನ್ನೂ ಕೊಡುತ್ತಿದ್ದೀರಿ ಹಾಗೆ 'ಕೇಬಲ್ ಭಾಗ್ಯ' ಎಂಬ ಭಾಗ್ಯವನ್ನೂ ಕೊಡಿ. ನಾನು ಹೇಳುವುದೇನೆಂದರೆ, ಎಲ್ಲೆಲ್ಲಿ ದುಡ್ಡನ್ನು ಹೊಡೆಯುತ್ತಿದ್ದಾರೆ ಸರ್ಕಾರದವರಾದ ತಾವು ಅದನ್ನು ನಿಯಂತ್ರಣ ಮಾಡಿ. ಮಧ್ಯವರ್ತಿಗಳನ್ನು ತಪ್ಪಿಸಿ ಗ್ರಾಹಕರಿಗೆ ಅನುಕೂಲವಾಗುವ ರೀತಿಯಲ್ಲಿ ನೀವೇಕೆ ಮಾಡಬಾರದು? ಕೇಂದ್ರ ಸರ್ಕಾರದವರು ಮಾಡಬೇಡಿ ಎಂದು ನಿಮ್ಮ ಕೈಗಳನ್ನು ಕಟ್ಟಿ ಹಾಕಿದ್ದಾರೆಯೇ? ಕೈಗಳನ್ನು ಕಟ್ಟಿ ಹಾಕಿದರೆ ಮಾಡುವುದಕ್ಕಾಗುವುದಿಲ್ಲ. ಆದರೆ ನಮ್ಮಲ್ಲಿ ಯಾವುದೇ ಪ್ರಸ್ತಾಪನೆ ಇಲ್ಲ, ಅದು ಕೇಂದ್ರಸರ್ಕಾರಕ್ಕೆ ಸೇರಿದ್ದು ಎಂದು ಕೇಂದ್ರದ ಕಡೆ ತೋರಿಸಿದರೆ, ಕೇಂದ್ರದ ಕಡೆ ಏಕೆ ಕೈ ತೋರಿಸುತ್ತೀರಿ? ನಿಮ್ಮದು ಏನೂ ಇಲ್ಲವೇ? ಇದು ನಿಮಗೆ ಗೊತ್ತಿದೆಯೋ ಅಥವಾ ಗೊತ್ತಿಲ್ಲವೋ ಇದೊಂದು ದೊಡ್ಡ ಮಾಫಿಯಾ ಆಗಿದೆ. ಇದಕ್ಕೋಸ್ಕರ ಬೆಂಗಳೂರಿನಲ್ಲಿ ಕೊಲೆಗಳಾಗುತ್ತಿವೆ. ನಾನು ಹೇಳುವುದೇನೆಂದರೆ, ಇದನ್ನು ದಯವಿಟ್ಟು control ಮಾಡಿ. ಇದನ್ನು Control ಮಾಡುವುದಕ್ಕಾಗುವುದಿಲ್ಲ, ನಮ್ಮ ಕೈಯಲ್ಲಿ ಏನೂ ಆಗುವುದಿಲ್ಲ ಎಂದು ಕೈ ಚೆಲ್ಲಿದರೆ ಹೇಗೆ? ಇರುವಂತಹ ಅಧಿಕಾರವನ್ನು ಬಳಸಿಕೊಳ್ಳಿ. ನಿಮಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ಗುಡಿಸಲಿನಲ್ಲೂ ಕೂಡ cable network ಇದೆ. ಅಂದರೆ ಗುಡಿಸಲಿನಲ್ಲಿಯು ಟೀವಿ ಅನ್ನು ಇಟ್ಟುಕೊಂಡು ನೋಡುವ ವ್ಯವಸ್ಥೆ ಬಂದಿದೆ. ಮಧ್ಯವರ್ತಿಗಳು ಹಾಗೂ ಯಾವುದೋ Multi

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

National Companies ಹಣವನ್ನು ದೋಚಿಕೊಂಡು ಹೋದರೆ ಗ್ರಾಹಕರ ಜೇಬಿಗೆ ಕತ್ತರಿ ಹಾಕಿದರೆ ಏನು ಮಾಡಬೇಕು? ನಾನು ವಿನಂತಿಸಿಕೊಳ್ಳುವುದೇನೆಂದರೆ, ದಯಮಾಡಿ ಇದು ಅತ್ಯಂತ ಅಗತ್ಯವಾಗಿ ಬೇಕಾದುದಾಗಿದೆ. ಇವತ್ತಿನ ದಿವಸ ಎಲ್ಲಾ ಜನರಿಗೂ ಈ ಮಾಧ್ಯಮದ ಮುಖಾಂತರವೇ ಸುದ್ದಿ ಸಮಾಚಾರ ತಲುಪಬೇಕಾಗಿದೆ. ನೀವು ಏನಾದರೂ ಕಾರ್ಯಕ್ರಮಗಳನ್ನು ನಡೆಸಿದರೆ ಅವರು ಹೇಗೆ ನೋಡುತ್ತಾರೆ? ಕೆಲವರಿಗೆ ಪೇಪರ್ ಓದುವುದಕ್ಕೆ ಬರುವುದಿಲ್ಲ. ಟಿವಿಯನ್ನೇ ನೋಡುತ್ತಾರೆ. ಅವರಿಗೆ ಕಡಿಮೆ ದರದಲ್ಲಿ ಕೊಡುವುದಕ್ಕೆ ನಿಮಗೇನು ತೊಂದರೆ? ನಿಮ್ಮ ಕೈ ಯಿಂದ ಹಾಕಬೇಡಿ. ನೀವು ಕೈಯಿಂದ ಹಣವನ್ನು ಹಾಕಿ ಅಥವಾ ಸರ್ಕಾರವೇ ಕೊಡಲಿ ಎಂದು ಹೇಳುವುದಿಲ್ಲ. ಕಡೇಪಕ್ಷ Multi National Companies ಹೆಸರಿನಲ್ಲಿ ಲೂಟಿ ಮಾಡುತ್ತಿರುವುದನ್ನು ದಯವಿಟ್ಟು ತಪ್ಪಿಸಿ. ಕೇಬಲ್ ಅನ್ನು ಸರಬರಾಜು ಮಾಡುವವರು ಸರ್ಕಾರಕ್ಕೆ ಶೇ.25 ರಷ್ಟು ತೆರಿಗೆಯನ್ನು ಪಾವತಿಸುತ್ತೇವೆ ಎಂದು ಹೇಳುತ್ತಾರೆ. ಇದನ್ನೆಲ್ಲಾ ನಿಯಂತ್ರಣ ಮಾಡಿ ಬಡವರಿಗಾದರೂ, 'A-category, B-category ಇವುಗಳನ್ನು ಬಿಟ್ಟು C-category, D-category ಯವರಿಗಾದರೂ ಕೊಡಿ. ಅವರಿಗಾದರೂ ಉಚಿತವಾಗಿಯೋ ಅಥವಾ ಕಡಿಮೆ ದರದಲ್ಲಿ ಸರಬರಾಜು ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರ ಕೊಡುತ್ತಿರುವ ಮಾನ್ಯ ಗೃಹ ಮಂತ್ರಿಯವರೆ, ದಯವಿಟ್ಟು ನನಗೆ ಸ್ಪಷ್ಟವಾದ ಉತ್ತರ ಬೇಕು. ಇದಕ್ಕೆ ಬೇಕಾದರೆ ಒಂದು ಕಾಯಿದೆಯನ್ನೇ ಜಾರಿಗೆ ತರಲಿ. ಕಾಯಿದೆಯನ್ನು ಜಾರಿಗೆ ತಂದು ಗ್ರಾಹಕರಿಗೆ ಅನುಕೂಲವಾಗುವ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ರೂಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶ್ರೀ ಪುಟ್ಟಣ್ಣರವರು ಕೇಬಲ್ ನೆಟ್‌ವರ್ಕ್ ಬಗ್ಗೆ ಮಂಡಿಸಿರುವ ಪ್ರಸ್ತಾವನೆಯ ಬಗ್ಗೆ ಹೇಳುವುದಾದರೆ ನಿಜವಾಗಿಯೂ ರಾಜ್ಯದಲ್ಲಿ ಇದೊಂದು ದೊಡ್ಡ ಮಾಫಿಯಾವಾಗಿದೆ. Gangsters ಮತ್ತು ರೌಡಿಗಳ control ನಲ್ಲಿ ಇದು ನಡೆಯುತ್ತಿದೆಯೇ ಹೊರತು ಸಾರ್ವಜನಿಕವಾಗಿ ನಡೆಯುತ್ತಿಲ್ಲ. ಒಂದು ಮನೆಗೆ ಒಂದು ಸಂಪರ್ಕವನ್ನು ಕೊಟ್ಟಾಗ ರೂಮ್‌ನಲ್ಲಿ ಒಂದು, ಹಾಲ್‌ನಲ್ಲಿ ಮತ್ತೊಂದು ಟಿವಿ ಇದ್ದರೆ ಅದಕ್ಕೆ ಎರಡು ದರವನ್ನು ಹಾಕುತ್ತಾರೆ. ಒಂದೇ ಸಂಪರ್ಕದಲ್ಲಿ ಇದು ಬರುತ್ತದೆ. ಈ ರೀತಿ ಇದೊಂದು ಲೂಟಿಯಾಗುತ್ತಿದೆ. ಎರಡನೆಯದಾಗಿ Set Top Box ಬರುವುದಕ್ಕೆ ಮುಂಚೆಯೇ ನಮ್ಮ ಮನೆಯಲ್ಲಿ ಟೀವಿ ಇತ್ತು. ಮೊನ್ನೆ ಇಡೀ ಬೆಂಗಳೂರಿನಲ್ಲಿಯೇ Set Top Box ಇರಬೇಕೆಂದು change

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರು. ಅವರ ಬಳಿಯೇ ತೆಗೆದುಕೊಳ್ಳಬೇಕು ಮತ್ತು ಅವರು ಹೇಳಿದ ದರವೇ ಅಂತಿಮ. ಇದು ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಇದರಿಂದ Set Top Box ಕೂಡ ಒಂದು ದೊಡ್ಡ ದಂಧೆಯಾಯಿತು. ಇವೆಲ್ಲಕ್ಕಿಂತ ಹೆಚ್ಚಾಗಿ cable wire ಎಲ್ಲೆಲ್ಲಿ ಹೋಗುತ್ತವೆ ಅಂದರೆ ವಿದ್ಯುತ್ ಕಂಬಗಳ ಮೇಲೆಯೇ ಹೋಗುತ್ತವೆ. ರಾಜ್ಯದ ವಿದ್ಯುತ್ ಕಂಬಗಳ ಮೇಲೆ ರಿಂಗ್ ಮಾಡಿಕೊಂಡು ಹೋಗಿರುತ್ತವೆ. ಪಕ್ಕದ ಮನೆಯವನಿಗೆ ಕೇಬಲ್ ಸಂಪರ್ಕ ಬೇಕೆಂದರೆ ನಮ್ಮನ್ನು ಕೇಳುತ್ತಾನೋ ಬಿಡುತ್ತಾನೋ ನಾವು ಮನೆಯಲ್ಲಿ ಇರಲಿ ಇಲ್ಲದಿರಲಿ ಅವನಾಗಿಯೇ ನಮ್ಮ ಮನೆಯ ಮೇಲೆ ಹತ್ತಿ connection ಕೊಟ್ಟು ಹೋಗುತ್ತಾರೆ. ಬೇರೆ ಮನೆಗೆ ಕೇಬಲ್ ಸಂಪರ್ಕ ಹೋದರೂ ನಮ್ಮ ಮನೆಯ ಮೇಲೆ ನಮಗೆ ಬೇಡದಿದ್ದರೂ ಆ cable wire ಗಳನ್ನು ಇಟ್ಟುಕೊಳ್ಳಬೇಕು. ಉದಾಹರಣೆಗೆ Sun Cable ನಂತಹ ನೇರವಾಗಿ ಬರುವಂತಹವುಗಳೂ ಇವೆ. ಅದಿದ್ದರೂ ಕೂಡ ಕೇಬಲ್ ಹೋಗುವಂತಹವು ಇಡೀ ಬೆಂಗಳೂರಿನಲ್ಲಿಯೇ ಒಂದು ದೊಡ್ಡ ಜಾಲವಾಗಿದೆ. ಇದು ನಿಜವಾಗಿಯೂ ಕೂಡ ...

**ಶ್ರೀ ಎಸ್. ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೆ, ಇದು ಬೆಂಗಳೂರಿನಲ್ಲಿಯೇ ಅಲ್ಲ ಇಡೀ ರಾಜ್ಯದಲ್ಲಿದೆ. ಮಾನ್ಯ ರೇವಣ್ಣರವರೇ ತಾವು ಬೆಂಗಳೂರಿನಲ್ಲಿ ಇರುವುದರಿಂದ ಕೇವಲ ಬೆಂಗಳೂರಿಗೆ ಮಾತ್ರ ಹೇಳಬೇಡಿ ಈ ರೀತಿ ಇಡೀ ರಾಜ್ಯದಲ್ಲಿ ನಡೆಯುತ್ತಿದೆ.

**ಶ್ರೀ ಹೆಚ್.ಎಂ. ರೇವಣ್ಣ:-** ಆಯಿತು ಸಂದೇಶ್ ನಾಗರಾಜ್‌ರವರೇ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣರವರೇ, ನಿಮಗೆ ಮತ್ತೆ ಅವಕಾಶ ಕೊಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನನಗೆ technical ಆಗಿ ಗೊತ್ತಿಲ್ಲ. ಕೇಬಲ್ ತೆಗೆದುಕೊಳ್ಳುವುದಕ್ಕೆ ಮೂರಕ್ಕೆ ಮಾತ್ರ ಅವಕಾಶ ಇತ್ತು. ಆದರೆ 90 ವೈರ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅಂದರೆ ನಮಗೆ ಅದರ ಬಗ್ಗೆ idea ಇಲ್ಲ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಪುಟ್ಟಣ್ಣರವರೇ, ಈಗ ಇದನ್ನು ಮುಗಿಸಿಬಿಡುತ್ತೇನೆ.

**ಶ್ರೀ ಪುಟ್ಟಣ್ಣ:-** ದಯವಿಟ್ಟು ಅದರ ಬಗ್ಗೆ ಗಮನಹರಿಸಿ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ಸಭಾನಾಯಕರು ಕೇಬಲ್ ಶುಲ್ಕ 130 ರೂಪಾಯಿಗಳು ಎಂದು ಹೇಳಿದರು. ಆದರೆ ಇದು ಸತ್ಯಕ್ಕೆ ದೂರವಾಗಿದೆ. ಅವರು ಕನಿಷ್ಠ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ ವಾಸ್ತವವಾಗಿ ನಮ್ಮ ಮನೆಯಲ್ಲಿ ಮೂರು ಟಿವಿ ಗಳು ಇವೆ. 900 ರೂಪಾಯಿಗಳ ಕೇಬಲ್ ಶುಲ್ಕವನ್ನು ಪಾವತಿಸುತ್ತಿದ್ದೇನೆ. ಒಂದಕ್ಕೆ 300 ರೂಪಾಯಿ ಎಂದರೆ ಒಟ್ಟು 900 ರೂಪಾಯಿಗಳಾಗುತ್ತವೆ. 130 ರೂಪಾಯಿ ಎಲ್ಲಿ 900 ರೂಪಾಯಿಗಳೆಲ್ಲಿ? ಇದು ಎಲ್ಲರ ಮನೆಗೂ ಆಗುವಂತಹುದಾಗಿದೆ. ಇದರ ಜಾಲ ಹೇಗಿದೆ ಎಂದರೆ ನಾವು ಇದನ್ನು ಕೇಳುವುದಕ್ಕೆ ಹೋದರೆ ನಮ್ಮಂತಹ ಮನೆಗಳಾದರೆ ಪರವಾಗಿಲ್ಲ ಜನಗಳಿಗೆ ಉತ್ತರ ಕೊಡಬಹುದು. ಆದರೆ ರೌಡಿಗಳು ಮನೆಗಳಿಗೆ ಹೋಗಿ ಗಲಾಟೆ ಮಾಡಿ ಹಣವನ್ನು ವಸೂಲಿ ಮಾಡಿಕೊಂಡು ಬರುವುದಕ್ಕೆ ಒಂದು ವ್ಯವಸ್ಥಿತವಾದ ತಂಡವನ್ನು ಇಟ್ಟಿದ್ದಾರೆ. ಇದು ಬಹಳ ಅನ್ಯಾಯ. ಇದು ನಮಗೆ ಸಂಬಂಧವಿಲ್ಲ ಎನ್ನುವುದಾಗಲೀ ಅಥವಾ ಕೇಂದ್ರ ಸರ್ಕಾರ ಮಾಡಲಿ ಎನ್ನುವುದಾಗಲೀ ಸಮಂಜಸವಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕೂಡ ಇದರ ಕಡೆಗೆ ಗಮನ ಹರಿಸಬೇಕು. ನಾನು ತಿಳಿದ ಮಟ್ಟಿಗೆ ವಾರ್ತಾ ಇಲಾಖೆಯವರಾಗಲೀ, ಜಿಲ್ಲಾಧಿಕಾರಿಯೇ ಆಗಲೀ ಇದರ ಬಗ್ಗೆ ಒಂದು ಮೀಟಿಂಗ್ ನಡೆದಿದ್ದರೆ ಅದನ್ನು ಖಂಡಿತವಾಗಿ ತಿಳಿಸಬೇಕು. ಇವತ್ತು ಅಲ್ಲದಿದ್ದರೆ ಮುಂದಿನ ದಿನಗಳಲ್ಲಾದರೂ ತಿಳಿಸಬೇಕು. ನನ್ನ ಪ್ರಕಾರ ಒಂದು ಮೀಟಿಂಗ್ ಕೂಡ ನಡೆದಿಲ್ಲ. ಇದು ಒಂದು ತರಹ ತಿರಸ್ಕಾರವಾಗಿರುವ ವಿಷಯವಾಗಿದೆ. ಯಾರೂ ಕೂಡ ಇದರ ಬಗ್ಗೆ ಗಮನಹರಿಸುತ್ತಿಲ್ಲ. ಇದೊಂದು ವ್ಯವಸ್ಥಿತವಾದಂತಹ ಲೂಟಿಯಾಗಿದೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ, cable wire ವಿದ್ಯುತ್ ಕಂಬದ ಮೇಲೆ ಬಂದಿದ್ದರೆ ಕನಿಷ್ಠ ಸರ್ಕಾರವಾದರೂ ಮಾಡಲಿ ಅಥವಾ ಅದರ ಮೇಲೆ ನಿಯಂತ್ರಣವನ್ನಾದರೂ ಮಾಡಲಿ. ಹಾಗೆಯೇ ಬಿಟ್ಟು ಕೇಂದ್ರ ಸರ್ಕಾರದ ಮೇಲೆ ಕೈ ತೋರಿಸಿದರೆ ಹೇಗೆ? ಗುಡಿಸಲಿನಲ್ಲಿ ಇರುವ ಜನರು ಕೂಡ ಟಿವಿಯನ್ನು ನೋಡುತ್ತಾರೆ. ಬಡತನದಲ್ಲಿರುವವರೂ ಕೂಡ ಮನರಂಜನೆಗಾಗಿ, ಸಿನಿಮಾ ಮುಂತಾದವುಗಳನ್ನು ನೋಡುವುದಕ್ಕೆ ಟಿವಿಯನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಭಾನಾಯಕರನ್ನು ಕೇಳಿಕೊಳ್ಳುವುದೇನೆಂದರೆ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಹುಡುಕಲೇಬೇಕು. ನಮ್ಮ ಸರ್ಕಾರ ಇದಕ್ಕೆ ಗಮನಹರಿಸಬೇಕೆಂಬುದೇ ನನ್ನ ಒತ್ತಾಯ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಪದದಲ್ಲಿ ಹೇಳುವುದಾದರೆ, This is a nuisance. ಮನೆಯಲ್ಲಿ ಎಷ್ಟು ಟಿವಿ ಇದೆಯೆಂದು ಮನೆಯೊಳಗೆಲ್ಲಾ ಬಂದು ಹುಡುಕಿ ನೋಡುತ್ತಾರೆ. ಬಹಳ ಪ್ರಮುಖವಾದ ತೊಂದರೆ ಇದು. ಕೇಬಲ್ ಹಾಕಿಕೊಳ್ಳುವುದೇ ಬೇಡ ಎಂದರೆ ಬಹಳ ಪ್ರಮುಖವಾದ ಚಾನಲ್ ಆದ ದೂರದರ್ಶನವೂ ಬರುವುದಿಲ್ಲ. ಸಮಸ್ಯೆ ಏನೆಂದರೆ ನಮಗೆ ಏನು ಬೇಕೋ ಅದನ್ನು ತೆಗೆದುಕೊಳ್ಳಲು ಆಗುತ್ತಿಲ್ಲ. ನಾನು ಯಾರು ಮಾಡುತ್ತಿದ್ದಾರೆ ಏನನ್ನು ಬಿಡುತ್ತಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ರಾಜ್ಯ ಸರ್ಕಾರದಿಂದ ಇದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ನಿಯಂತ್ರಣ ಬೇಕು. ಮಾನ್ಯ ಪುಟ್ಟಣ್ಣರವರು ಬಹಳ ಚೆನ್ನಾಗಿ ಹೇಳಿದರು. ಎಲ್ಲಾ ಭಾಗ್ಯವನ್ನೂ ಕೊಡುತ್ತಿದ್ದೀರಿ ಹಾಗೆ ಒಂದು 'ಕೇಬಲ್ ಭಾಗ್ಯ'ವನ್ನೂ ಕೊಟ್ಟುಬಿಡಿ ಎಂದು ಹೇಳಿದರು. ಇದು ಬಹಳ ಒಳ್ಳೆಯ ಭಾಗ್ಯವಾಗಿದೆ. ಈ ಭಾಗ್ಯವನ್ನು ಕೊಟ್ಟರೆ ಎಲ್ಲರಿಗೂ ಆಗುತ್ತದೆ. ಇಡೀ ಬೆಂಗಳೂರಿಗೇ ಆಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಆಂಜನೇಯರವರೆ, ಮಾನ್ಯ ಸಚಿವರೇ ತಾವು ಮುಂದೆ ಬನ್ನಿ.

**ಶ್ರೀ ರಾಮಚಂದ್ರಗೌಡ:-** ಬೆಂಗಳೂರು ನಗರಕ್ಕೆ, ರಾಜ್ಯಕ್ಕೆ ಆಗುತ್ತದೆ. ನಾವೆಲ್ಲ ಮಕ್ಕಳಾಗಿದ್ದಾಗ Transistor or Radio ಇಟ್ಟುಕೊಂಡರೆ ತೆರಿಗೆ ಕಟ್ಟಬೇಕಾಗಿತ್ತು. Transistor or Radio ಗೆ ಇದ್ದ tax ಎಲ್ಲಾ ಈಗ ಹೋಯಿತು. ಟೀವಿಯ ಮೇಲೆ ತೆರಿಗೆಯನ್ನು ಕರ್ನಾಟಕದಲ್ಲಿ ಹಾಕುವುದಕ್ಕೆ ಆಗುತ್ತದೆಯೇ ಎಂದು ಯೋಚನೆ ಮಾಡಿ ಅಷ್ಟೊಂದು ಟೀವಿ ಚಾನಲ್‌ಗಳಿವೆ. ಉಚಿತ ಕೇಬಲ್ ಸಂಪರ್ಕ ಕೊಡುವ ಯೋಜನೆ ಮಾಡಿದರೆ ಸರ್ಕಾರಕ್ಕೆ ಆದಾಯವಾಗುತ್ತದೆ. ಒಳ್ಳೆಯದೂ ಆಗುತ್ತದೆ ಮತ್ತು ಅನಾವಶ್ಯಕ ವ್ಯಕ್ತಿಗಳ ಓಡಾಟ ಹಾರಾಟ ತಪ್ಪುತ್ತದೆ. ಮಾನ್ಯ ರೇವಣ್ಣರವರು ಹೇಳಿದ ಹಾಗೆ cable wire ಯಾರ ಮನೆಯ ಮೇಲೋ ಹೋಗುತ್ತದೆ ಎಲ್ಲಿಯೋ ಇಳಿಯುತ್ತದೆ. ರಸ್ತೆಯ ಮೇಲೆ ವಾಹನಗಳನ್ನು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಆಗಮಿಸಿದರು)**

ಮಾನ್ಯ ಮುಖ್ಯಮಂತ್ರಿಯವರೇ ಬರುತ್ತಿದ್ದಾರೆ ಬಹಳ ಸಂತೋಷ ... ಬನ್ನಿ.. ಖಾಸಗಿ ಕೇಬಲ್ ಇದೆಯಲ್ಲಾ, ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. it has become a nuisance. ಮನೆಯಲ್ಲಿ ಎಷ್ಟು ಟೀವಿ ಇದೆ, ಯಾವ ರೂಮಿನಲ್ಲಿ ಟೀವಿ ಇದೆ ಎಂದು ಬಂದು ಪರಿಶೀಲನೆ ಮಾಡುತ್ತಾರೆ. ಮಾನ್ಯ ಪುಟ್ಟಣ್ಣರವರು ಸದನದ ಮುಂದೆ ಒಳ್ಳೆಯ ವಿಷಯವನ್ನು ತಂದಿದ್ದಾರೆ.

(ಮುಂವ...

284/20-3-2017/12.50/ಡಿಎಸ್-ಎಂಡಿ

(ಉಪಸಭಾಪತಿಯವರ ಉಪಸ್ಥಿತಿ)

ಶ್ರೀ ರಾಮಚಂದ್ರಗೌಡ(ಮುಂದು):-

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳು ಬಂದಿರುವುದರಿಂದ ಮಾನ್ಯ ಪುಟ್ಟಣ್ಣನವರಿಗೆ ಸ್ಫೂರ್ತಿ ಬಂದು ಇನ್ನೂ ಅನೇಕ ವಿಚಾರಗಳನ್ನು ಹೇಳಬಹುದೆಂದು ಅನಿಸುತ್ತಿದೆ. ಮುಖ್ಯಮಂತ್ರಿಯವರು ಎಲ್ಲಾ ಭಾಗ್ಯ ಕೊಟ್ಟಿದ್ದಾರೆ. ಕೇಬಲ್ ಭಾಗ್ಯ ಒಂದನ್ನು ಕೊಡಬೇಕೆಂದು ಅವರು ಹೇಳಿದರು. ಬೆಂಗಳೂರಿನಲ್ಲಿ ಬೇರೆ ಅವಾಂತರಗಳಿವೆ ಅವರು ಯಾರು ಏನು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ರೇವಣ್ಣನವರು ಎಲ್ಲಾ ಚೆನ್ನಾಗಿ ಹೇಳಿದ್ದಾರೆ. ಏನೇನು ಪದ ಉಪಯೋಗಿಸಬೇಕು ಎಲ್ಲಾ ಉಪಯೋಗಿಸಿದ್ದಾರೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ಗಮನ ಸೆಳೆಯುವ ಸೂಚನೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಬೆಂಗಳೂರು ನಗರ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಕೇಬಲ್ ಹೆಸರಿನಲ್ಲಿ ಮಾಫಿಯಾ ಕೆಲಸ ಮಾಡುತ್ತಿದೆ. ಇದರಿಂದ ಬಹಳಷ್ಟು ಬಡವರಿಗೆ ತೊಂದರೆಯಾಗುತ್ತಿದೆ. ಒಂದು ಮನೆಯಲ್ಲಿ ಎರಡು-ಮೂರು ರೂಮುಗಳಿದ್ದರೆ ಪ್ರತಿಯೊಂದು connection ಗೂ ಕೂಡ ಒಂದೊಂದು Set Top Box ಅನ್ನು ಅಳವಡಿಸಿಕೊಳ್ಳಬೇಕಾಗಿದೆ. ಅದಕ್ಕೆ ಮೂರು ಸಾವಿರ-ನಾಲ್ಕು ಸಾವಿರ ರೂಪಾಯಿ ಎಂದು ಲೂಟಿ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕಾಗಿದ್ದರೆ, ಮಾನ್ಯ ರಾಮಚಂದ್ರಗೌಡರು ಬಹಳ ಸುಂದರವಾಗಿ ಹೇಳಿದ್ದಾರೆ. ಸರ್ವ ಭಾಗ್ಯವನ್ನು ಕೊಡುವಂತಹ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೆ, ಈ Cable and Set Top Box ಭಾಗ್ಯವನ್ನು ಕೊಟ್ಟರೆ ಖಂಡಿತ ಜನಗಳಿಗೆ ಒಳ್ಳೆಯದಾಗುತ್ತದೆ. ಬಹಳಷ್ಟು ಜನ ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಇವತ್ತು ಈ ಮಾಫಿಯಾ ಏನಿದೆ cable network ಕೊಡಬೇಕಾದರೆ ಮೇಲುಗಡೆ wires ಬರುತ್ತವೆ, Underground cable ಅಳವಡಿಸುವಾಗ ಸಾಕಷ್ಟು ಅನಾಹುತಗಳಾಗುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ಇದಕ್ಕೊಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ತೊಂದರೆಯಾಗುತ್ತಿದೆ. ಇದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇವತ್ತು ಅತ್ಯಂತ ಪ್ರಮುಖವಾದ ವಿಚಾರವನ್ನು ನಾವು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. 'ಆಡು ಮುಟ್ಟದ ಸೊಪ್ಪಿಲ್ಲ' ಎಂದು ಹಳ್ಳಿ ಕಡೆ ಒಂದು ಮಾತು ಇದೆ. ಹಾಗೆಯೇ 'ಟಿವಿ ಇಲ್ಲದ ಮನೆ ಇಲ್ಲ' ಎನ್ನುವ ಸ್ಥಿತಿ ಇವತ್ತು ನಾಡಿನಲ್ಲಿದೆ. ಇವತ್ತು ಬಹುತೇಕ ಮನೆಗಳಲ್ಲಿ ಟಿವಿ ಇದೆ. ರಾಜ್ಯದಲ್ಲಿ ಸುಮಾರು ಒಂದು ಕೋಟಿ ಇಪ್ಪತ್ತೈದು ಲಕ್ಷ ಮನೆಗಳಿವೆ. ಇವತ್ತು ಕನಿಷ್ಠವೆಂದರೂ ಒಂದು ಕೋಟಿ ಮನೆಗಳಲ್ಲಿ ಟಿವಿ ಗಳಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನಿಷ್ಠ ಒಂದೊಂದು ಮನೆಯಲ್ಲಿ ಒಂದು ಟಿವಿ ತೆಗೆದುಕೊಂಡರೂ ಒಂದು ಕೋಟಿ ಟಿವಿ ಗಳು ಲಭ್ಯ ಇವೆ. ನನ್ನ ಸ್ನೇಹಿತರಾದ ಮಾನ್ಯ ರೇವಣ್ಣನವರ ಮನೆಯಲ್ಲಿ ಮೂರು ಟಿವಿ ಇವೆ ಎಂದು ಹೇಳಿದರು.

(ಸದನದಲ್ಲಿ ನಗು)

**ಶ್ರೀ ಹೆಚ್.ಎಂ.ರೇವಣ್ಣ:-** ನನಗೆ ಒಂದೇ ಫ್ಯಾಮಿಲಿ ಇರುವುದು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಒಂದು ಮನೆಗೆ ಒಂದು ಟಿವಿ ಎಂದು. ಈಗ ರೇವಣ್ಣನವರು ನಮ್ಮ ಮನೆಯಲ್ಲಿ ಮೂರು ಟಿವಿ ಇವೆ ಎಂದು ಹೇಳಿದರು. ನಾನು ಯಾವ context ನಲ್ಲಿ ಹೇಳಿದ್ದೇನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಏನು ಹೇಳಲಿ?

**ಶ್ರೀ ಹೆಚ್.ಎಂ.ರೇವಣ್ಣ:-** ನೀವು 'ಟಿವಿ' ಎನ್ನುವ ಪದವನ್ನು ಉಪಯೋಗಿಸದೆ ರೇವಣ್ಣನವರ ಮನೆಯಲ್ಲೂ ಮೂರು ಇವೆ ಎಂದು ಹೇಳಿದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳನ್ನೇ clarify ಮಾಡುವುದಕ್ಕೆ ಹೇಳುತ್ತೇನೆ. ಅವರು ಮೂರು ಇದೆ ಎಂದು ಹೇಳುತ್ತಾರೆ, ಮಾನ್ಯ ಮುಖ್ಯಮಂತ್ರಿಗಳೇ ಎಷ್ಟಿದೆ ಎಂಬುದನ್ನು ಸ್ಪಷ್ಟ ಮಾಡಲಿ.

**ಶ್ರೀ ಸಿದ್ದರಾಮಯ್ಯ:-** ರೇವಣ್ಣನವರು ನನಗಿಂತಲೂ ಹೆಚ್ಚಾಗಿ ನಿಮಗೆ ಆಪ್ತರು. ನಿಮಗೆ ಗೊತ್ತಿಲ್ಲದಿರುವಂತಹ ವಿಚಾರ ನನಗೆ ಹೇಗೆ ಗೊತ್ತಾಗುತ್ತದೆ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಗೊತ್ತಿದೆಯೋ ಗೊತ್ತಿಲ್ಲ. ನನಗೆ ಇಷ್ಟು ಮಾತ್ರ ಗೊತ್ತಿದೆ, ಅವರ ಮನೆಯಲ್ಲಿ ಮೂರು ಟಿವಿ ಗಳಿವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ನಾನು ಆ ಟಿವಿ ಗಳಿಗೆ ಮಾತ್ರ ಸೀಮಿತವಾಗುತ್ತೇನೆ. ಮಿಕ್ಕಿದ್ದು ನನಗೇನೂ ಗೊತ್ತಿಲ್ಲ.

ಮಾನ್ಯ ಸಭಾಪತಿಯವರೆ, ಈಗ ರಾಜ್ಯದಲ್ಲಿ ಯಾವುದೇ angle ನಲ್ಲಿ ನೋಡಿದರೂ ಕನಿಷ್ಠ ಒಂದು ಕೋಟಿಗೂ ಹೆಚ್ಚು ಟಿವಿ ಗಳಿವೆ. ಇವತ್ತಿಗೂ ಕೂಡ ಟಿವಿ ಮತ್ತು ಆ ಟಿವಿ ಗೆ connection

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂಥ network ನ್ನು ನಿಯಂತ್ರಿಸುವುದಕ್ಕೆ, ಈ ಉತ್ತರವನ್ನು ನೋಡಿದರೆ ಯಾವುದೇ ರೀತಿಯ ಪ್ರಯತ್ನ ರಾಜ್ಯದಲ್ಲಿ ನಡೆದಿಲ್ಲ ಎನ್ನುವಂಥದ್ದು ಸ್ಪಷ್ಟವಾಗಿ ಕಾಣುತ್ತಿದೆ. ರಾಜ್ಯಕ್ಕೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ನಿಯಂತ್ರಣ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವುದಕ್ಕೆ ಉತ್ತರದ ಒಂದು, ಎರಡು, ಮತ್ತು ಮೂರನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಇದೆ. Television network ನ್ನು ಜಿಲ್ಲಾ ಮಟ್ಟದ ಸಮಿತಿಗಳೇನಿವೆ, ಆ ಸಮಿತಿಗಳ ಅಧ್ಯಕ್ಷರು ಜಿಲ್ಲಾ ಡಿಸಿ ಗಳಾಗಿದ್ದಾರೆ. ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಆ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಅದೇ ರೀತಿ ರಾಜ್ಯ ಮಟ್ಟದ ಸಮಿತಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರು. ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು ಕಾರ್ಯದರ್ಶಿಗಳಾಗಿದ್ದಾರೆ ಎಂದು ಉತ್ತರದಲ್ಲಿ ಇದೆ. ನನಗೆ ಗೊತ್ತಿರುವ ಹಾಗೆ ಜಿಲ್ಲಾ ಮಟ್ಟದಲ್ಲಾಗಲಿ ಅಥವಾ ರಾಜ್ಯ ಮಟ್ಟದಲ್ಲಾಗಲಿ, ಒಂದೇ ಒಂದು ಸಭೆಯಾಗಿರುವಂಥ ಮಾಹಿತಿಗಳಂತೂ ಇಲ್ಲ. ಒಂದು ಕಡೆ ಸಭೆಯಾಗಿಲ್ಲ ಎನ್ನುವಂಥದ್ದು, ಅದಕ್ಕಿಂತ ಪ್ರಮುಖವಾಗಿ ಈ ಸಮಿತಿಗೆ ಅಧ್ಯಕ್ಷರು, ಕಾರ್ಯದರ್ಶಿಗಳನ್ನು ಮಾಡುವಂತಹದಕ್ಕೆ ಅವಕಾಶ ಇರಬೇಕಾದರೆ ಅದರ ಅರ್ಥ Government has got powers to control the cable system. ಈ ಸಮಿತಿಗಳನ್ನು ಮಾಡುವುದಕ್ಕೆ ಅಧಿಕಾರ ಇದ್ದಾದ ಮೇಲೆ ಆ ಸಮಿತಿಗಳ ಮುಖಾಂತರ ಈ network ನ್ನು ನಿಯಂತ್ರಣ ಮಾಡುವುದಕ್ಕೆ ಅವಕಾಶ ಇದೆ. ಆ ನಿಯಂತ್ರಣ ಮಾಡುವುದಕ್ಕೆ ಯಾವ ಕಾನೂನಿನ ಅಡಿಯಲ್ಲಿ ಯಾವ Act, Rules or Notifications ಮುಖಾಂತರ ಮಾಡುವುದಕ್ಕೆ ಸಾಧ್ಯತೆ ಇದೆ? ಇದರ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಗಮನಹರಿಸಿಲ್ಲ ಎಂದು ಉತ್ತರದಿಂದ ಸ್ಪಷ್ಟವಾಗುತ್ತಿದೆ. ಇದನ್ನು ಏಕೆ ನಿಯಂತ್ರಿಸಬೇಕು? ಇದು ನನ್ನ ಪ್ರಕಾರ ಸಾವಿರಾರು ಕೋಟಿ, ಒಂದು ಕೋಟಿ ಟಿವಿ ಗಳಿಗೆ minimum at the rate of Rs. 300 per month ಎಂದರೆ 300 ಕೋಟಿ ಆಯಿತು. ವರ್ಷಕ್ಕೆ ಎಷ್ಟಾಯಿತು, 3600 ಕೋಟಿ ರೂಪಾಯಿ ಆಗುತ್ತದೆ. ಈ ರಾಜ್ಯದಲ್ಲಿ ಒಂದೊಂದು ಟಿವಿ ಇದ್ದರೆ ಸುಮಾರು 3600 ಕೋಟಿ ರೂಪಾಯಿಗಳ ಒಂದು ವರ್ಷದ ವಹಿವಾಟು ನಡೆಯುತ್ತಿದೆ. ಈ 3600 ಕೋಟಿ ರೂಪಾಯಿಗಳ ವಹಿವಾಟನ್ನು ನಿಯಂತ್ರಿಸುವುದಕ್ಕೆ ಕನಿಷ್ಠ ಶೇಕಡ ಒಂದು ಅಥವಾ ಎರಡರಷ್ಟು ತೆರಿಗೆ ಹಾಕಿದರೆ ಸರ್ಕಾರಕ್ಕೆ ಎಷ್ಟು ಬರಬಹುದು? ಇವತ್ತು ಆ cable network ವಹಿವಾಟಿನ ಮೇಲೆ ಯಾವುದೇ ವಿಧವಾದ ತೆರಿಗೆಯ ರೂಪ ಕಾಣುತ್ತಿಲ್ಲ. ಆಂಧ್ರ ಪ್ರದೇಶದಲ್ಲಿ ಸರ್ಕಾರವೇ ಈ ರೀತಿಯ cable network ನ್ನು ತೆರೆದಿರುವಂಥದ್ದು ನನಗೆ ಇರುವಂತಹ ಮಾಹಿತಿ. ಸುಮಾರು ಮೂರೂವರೆ-ನಾಲ್ಕು ಸಾವಿರ ಕೋಟಿ

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳ ದಂಧೆ ಏನಿದೆ, ಈ ದಂಧೆಯಲ್ಲಿ ಯಾವ ರೀತಿಯ ಜನ ಸೇರಿಕೊಂಡಿದ್ದಾರೆ, ಯಾವ ಯಾವ ರೀತಿಯ ಕೆಲಸಗಳು ನಡೆಯುತ್ತಿವೆ?

(ಮುಂದು)

(285) 20.03.2017/ 1.00/ ಕೆಹೆಚ್/ಎಕೆ

**ಶ್ರೀ ವಿ.ಎಸ್.ಉಗ್ರಪ್ಪ (ಮುಂದು):-** ನಾನು ಎಲ್ಲರನ್ನೂ ಸಹ ಸಮಾಜಘಾತುಕರೆಂದು ಹೇಳುವುದಕ್ಕೆ ಹೋಗುವುದಿಲ್ಲ. But majority of them, anti-social elements, muscle power ಇರುವಂತಹವರು ಇವತ್ತು ಈ ದಂಧೆಯನ್ನು ಮಾಡುತ್ತಿದ್ದಾರೆ. Not only in Bangalore, ಇಡೀ ರಾಜ್ಯದಲ್ಲಿ ಯಾವುದೇ ಹಳ್ಳಿಗಳಿಗೆ ಹೋದರೂ ಸಹ ಯಾರು ಕೇಬಲ್ ನೆಟ್‌ವರ್ಕ್‌ನ್ನು run ಮಾಡುತ್ತಿದ್ದಾರೆಂದು ಹೇಳಿದರೆ muscle power, ಇನ್ಯಾವುದೋ ಶಕ್ತಿ ಇರುವಂತಹವರು, majority ನಡೆಸುತ್ತಿರುವಂತಹವರು. ಮಾನ್ಯ ಅಧ್ಯಕ್ಷರೆ ಒಂದು ಕಡೆ ಮಾಸಿಕ ಶುಲ್ಕವನ್ನು 300 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಕಡ್ಡಾಯವಾಗಿ Set Top Box ಮಾಡಬೇಕೆಂದು ಸುಪ್ರೀಂ ಕೋರ್ಟ್‌ನ ಆದೇಶ ಬಂದ ಮೇಲೆ ಆ Set Top Box ಅವರ ಹತ್ತಿರವೇ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಾರೆ. ಒಬ್ಬ Set Top Box ಗೆ 3000 ರೂಪಾಯಿಗಳೆಂದು ಹೇಳುತ್ತಾನೆ. ಇನ್ನೊಬ್ಬ Set Top Box ಗೆ 1800 ರೂಪಾಯಿಗಳೆಂದು ಹೇಳುತ್ತಾನೆ. ಮತ್ತೊಬ್ಬ Set Top Box ಗೆ 2000 ರೂಪಾಯಿಗಳೆಂದು ಹೇಳುತ್ತಾನೆ. ಯಾವುದೇ ರೀತಿಯಿಂದ ನೋಡಿದರೂ ಒಂದು Set Top Box ಗೆ ಕನಿಷ್ಠ 2000 ರೂಪಾಯಿಗಳಾಗುತ್ತದೆ. ಮಾಸಿಕ ಶುಲ್ಕ ಬೇರೆ ಇರುವಂಥದ್ದು. ಈ ಯಾವುದೇ ಹಣ ನಮ್ಮ tax net ಕೆಳಗಡೆ ಬರುವುದಿಲ್ಲ. ಒಂದು ವರ್ಷದಲ್ಲಿ ಕನಿಷ್ಠ ಐದು ಸಾವಿರ ಕೋಟಿ ರೂಪಾಯಿಗಳ ವಹಿವಾಟು ನಡೆಯುವಂತದ್ದು. ಅದರ ಜೊತೆಗೆ channel subscriptions ಕೊಡುವಂತಹ ಅವಕಾಶವಿದೆ. ಒಂದು ಕಡೆ ಹಣದ ವಹಿವಾಟು ಇರಬೇಕಾದರೆ, ಜನಸಾಮಾನ್ಯರಿಗೆ ಇರುವಂತಹ ತೊಂದರೆಗಳೇನು? ಮಾನ್ಯ ಅಧ್ಯಕ್ಷರೆ, ಕೇಬಲ್ ಬಾಕ್ಸ್‌ನ್ನು ಹಾಕುವುದಕ್ಕೆ ಯಾರ ಅನುಮತಿಯನ್ನು ಕೇಳುವುದಿಲ್ಲ. ಈಗ ಉದಾಹರಣೆಗೆ ನಮ್ಮ ಮನೆಯ ಮೇಲೆ ಹಾಕಬೇಕಾದರೆ ನಮ್ಮ ಅನುಮತಿಯನ್ನೇ ಕೇಳುವುದಿಲ್ಲ. ಅಲ್ಲೊಂದು ಬಾಕ್ಸ್ ಹಾಕಿ ಅಕ್ಕ-ಪಕ್ಕದಲ್ಲಿರುವ ಮನೆಗಳಿಗೆ ಅಲ್ಲಿಂದ ಸಂಪರ್ಕವನ್ನು ತೆಗೆದುಕೊಂಡು ಹೋಗಿರುತ್ತಾರೆ. ಯಾರೋ ಪಕ್ಕದ ಮನೆಯಲ್ಲಿ ಟಿ.ವಿ. ಕೆಟ್ಟು ಹೋಗಿದೆಯೆಂದು ಪೋನ್ ಮಾಡಿದರೆ, ಎಲ್ಲಿ ಬಾಕ್ಸ್ ಇದೆಯೋ ಅಲ್ಲಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಾನೆ. ಅವರ ಮನೆಯವರನ್ನು ಸಹ ಕೇಳುವುದಿಲ್ಲ. ಯಾರ ಅನುಮತಿಯನ್ನು ಸಹ ಪಡೆಯುವುದಿಲ್ಲ. ಒಂದೊಂದು ಸಾರಿ ಸದ್ದುದ್ದೇಶದಿಂದಲೇ ಬರುತ್ತಾನೆ. ಒಳ್ಳೆಯವನು ಬರುತ್ತಾನೋ ಗೊತ್ತಿಲ್ಲ. ಕಳ್ಳತನ ಆಗುವುದಕ್ಕೆ, ಮನೆಗಳ ದರೋಡೆ ಆಗುವುದಕ್ಕೆ ಈ ರೀತಿಯ ಕಾರಣಗಳಿವೆ. ಆ ಮನೆಯಲ್ಲಿರುವಂತಹ ಮಕ್ಕಳ ಮೇಲೆ, ವಿಶೇಷವಾಗಿ ಹೆಣ್ಣು ಮಕ್ಕಳನ್ನು ಚುಡಾಯಿಸುವಂತಹದ್ದು, ಕೈ ಮಾಡುವಂತಹ ಸಂದರ್ಭಗಳಿವೆ. ಇದರ ಜೊತೆಗೆ ನಗರದಲ್ಲಿ ಎಷ್ಟು nuisance ಇದೆಯೆಂದ್ರರೆ, ಒಂದು ಟೆಲಿಫೋನ್ ಪೋಲ್‌ಗೆ ಕನಿಷ್ಠ 50–60 ಸಂಪರ್ಕ ಲೈನ್ ಅನ್ನು ಎಳೆದುಕೊಂಡು ಹೋಗಿರುತ್ತಾರೆ. ಇನ್ನು ಕೆಲವು ಕಡೆ ಕೇಬಲ್‌ಗಳನ್ನು ಹಾಕುವುದಕ್ಕೆ ರಸ್ತೆಗಳನ್ನು ಅಗೆದಿರುತ್ತಾರೆ. ಈ ಕಾರಣದಿಂದ ಒಂದು ಕಡೆ nuisance ಇನ್ನೊಂದು ಕಡೆ ಸಮಾಜಘಾತುಕ ಶಕ್ತಿಗಳು ಮನೆಗಳಿಗೆ ಉಚಿತವಾಗಿ ಪ್ರವೇಶ ಮಾಡುವುದರ ಮೂಲಕ ಸಮಾಜದ ಸ್ವಸ್ಥವನ್ನು ಕೆಡಿಸುವಂತಹವುದಕ್ಕೆ ಈ ಕೇಬಲ್ ನೆಟ್‌ವರ್ಕ್‌ಗಳೇ ಪ್ರಮುಖವಾದ ಕಾರಣವಾಗಿದೆ. ಆದ್ದರಿಂದ ಈ ಹಿನ್ನಲೆಯಲ್ಲಿ ನಾನು ಸರ್ಕಾರವನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯಿಸುತ್ತೇನೆ. ಒಂದು ಕಡೆ ಈ ರೀತಿಯ ಕಾನೂನು ಬಾಹಿರವಾದಂತಹ ಚಟುವಟಿಕೆಗಳನ್ನು ನಿಯಂತ್ರಿಸುವಂತದ್ದು, ರಾಜ್ಯ ಸರ್ಕಾರಕ್ಕೆ ದತ್ತಕವಾಗಿರುವಂತಹ ಅಧಿಕಾರವಾಗಿದೆ ಮತ್ತು ಅದರ ಜೊತೆಯಲ್ಲಿ ರಾಜ್ಯದಲ್ಲಿ ಈ ವಹಿವಾಟು ನಡೆಯುವಂತಹ ಹಿನ್ನಲೆಯಲ್ಲಿ ಈಗ ಮಾನ್ಯ ಮಂತ್ರಿಗಳು, ಗೃಹ ಸಚಿವರು ಆಗಲೇ ಹೇಳಿದರು. ಕೇಂದ್ರ ಸರ್ಕಾರದ T.R.A.I. (Telecom Regulatory Authority of India) ಇವರು ಒಂದು ಸಂಪರ್ಕಕ್ಕೆ 130 ರೂಪಾಯಿ ಫಿಕ್ಸ್ ಮಾಡಿರುವಂತದ್ದು, ಈಗಾಗಲೇ ಪ್ರಸ್ತಾಪವಾಗಿರುವಂತಹದ್ದು ಕನಿಷ್ಠ 300 ರೂಪಾಯಿ. ಗರಿಷ್ಠ 800 ರೂಪಾಯಿ ಹೋಗಿರುವಂತದ್ದು ಇದೆ. ಇಲ್ಲಿ ಯಾವುದೇ ನಿಯಂತ್ರಣವಿಲ್ಲ. ಹಾಗಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮೊದಲನೆಯದು ಇದಕ್ಕೆ ಏನಾದರೂ ತೆರಿಗೆ ಹಾಕಿ ರಾಜ್ಯದ ಹಿತದೃಷ್ಟಿಯಿಂದ ಹಣ ಪಡೆಯುವುದಕ್ಕೆ ಸಾಧ್ಯತೆ ಇದೆಯೇ? ಎರಡನೆಯದು Regulatory Authority ಯನ್ನು ರಾಜ್ಯ ಸರ್ಕಾರ ಮಾಡತಕ್ಕಂಹದ್ದು. ಮೂರನೆಯದು nuisance ತಪ್ಪಿಸುವುದಕ್ಕೆ ಸಾರ್ವಜನಿಕ ಪೋಲ್‌ಗಳ ಮೇಲೆ ಆಗುವಂತಹದ್ದು. ಮನೆಗಳ ಮೇಲೆ ಆಗುವಂತಹದನ್ನು ತಪ್ಪಿಸುವುದಕ್ಕೆ ಸರ್ಕಾರ ಕೂಡಲೇ ಒಂದು ಕಾನೂನು ತರುವುದಕ್ಕೆ ಮುಂದಾಗಬೇಕೆಂದು ಹೇಳಿ ಸರ್ಕಾರವನ್ನು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದಿಸುತ್ತಾ, ನಾನು ಬಹಳ ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳು ಈಗ ಉತ್ತರವನ್ನು ಕೊಟ್ಟಿದ್ದಾರೆ. ಸಮಿತಿಯನ್ನು 2012 ರಲ್ಲಿ ರಚನೆ ಮಾಡಿದ್ದಾರೆ. ಈ ಸಮಿತಿಯನ್ನು ಯಾವುದಕ್ಕೆ ರಚನೆ ಮಾಡಿದ್ದಾರೆಂದು ಹೇಳಿದರೆ Cable Television Network ಅಧಿನಿಯಮ 1995 ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳ ಜಾರಿಯನ್ನು ಮೇಲ್ವಿಚಾರಣೆ ಮಾಡಲು ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿಗಳನ್ನು ಸರ್ಕಾರ ಆದೇಶ ಸಂಖ್ಯೆಯಲ್ಲಿ ಮಾಡಿದ್ದೇವೆಂದು ಹೇಳಿದ್ದಾರೆ. ಈ ಸಮಿತಿಗಳು ಸರಿಯಾಗಿ ಕೆಲಸ ಮಾಡಿದ್ದರೆ, ಈ ಸಮಸ್ಯೆಗಳ ಎಲ್ಲಾ ಆಯಾಮಗಳು ಏನು ಚರ್ಚೆಯಾಯಿತು. ಇದರ ಬಗ್ಗೆ ಗಮನಹರಿಸಿದ್ದರೆ ಈ ಗೊಂದಲವಾಗುತ್ತಿರಲಿಲ್ಲ. ನನ್ನ ಪ್ರಶ್ನೆ ಇರುವಂತಹದ್ದು. ಈಗ ಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಸಮಿತಿಗಳು ಏನು ಕೆಲಸ ಮಾಡುತ್ತಿದೆ? ಅವರು ಕೆಲಸ ಮಾಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. 2012 ರಿಂದ 2017 ರವರೆಗೆ ಸಮಿತಿ ರಚನೆ ಮಾಡಿದ್ದೇವೆಂದು ಉತ್ತರ ಹೇಳುವುದಕ್ಕೆ ಸಾಧ್ಯನೇ ಇಲ್ಲ. ಮಾನ್ಯ ಪುಟ್ಟಣ್ಣನವರು ಬಹಳ ಗಂಭೀರವಾದ ವಿಷಯವನ್ನು ಎತ್ತಿದ್ದಾರೆ. ಮಾನ್ಯ ಉಗ್ರಪ್ಪನವರು ಅದರ ಬೇರೆ ಬೇರೆ ಆಯಾಮಗಳನ್ನು ಎಲ್ಲ ಸಂಗತಿಗಳನ್ನು ಉಲ್ಲೇಖ ಮಾಡಿದ್ದಾರೆ. ಆದರೆ ಎಲ್ಲೋ ಒಂದು ಕಡೆ ನಾವು ಸಮಿತಿ ರಚನೆ ಮಾಡಿದ್ದರೂ ಕೂಡ ಅವುಗಳು ಜಿಲ್ಲಾ ಮಟ್ಟದಲ್ಲಾಗಲಿ ಮತ್ತು ರಾಜ್ಯ ಮಟ್ಟದಲ್ಲಾಗಲಿ ಕೆಲಸ ಮಾಡುತ್ತಿಲ್ಲ. ಕೆಲಸ ಮಾಡದೇ ಇರುವುದರಿಂದ ಒಂದು ದೊಡ್ಡ ಮಾಫಿಯಾ ದಂಧೆಯಲ್ಲಿ ತೊಡಗಿಸಿಕೊಂಡಿದೆ. ಶ್ರೀ ಉಗ್ರಪ್ಪನವರು ಉಲ್ಲೇಖ ಮಾಡುವಾಗ ಹೇಳಿದರು ಇವತ್ತು ಕೇಬಲ್ ನೆಟ್‌ವರ್ಕ್‌ನ್ನು ಸರಿಮಾಡುವುದಕ್ಕೆ ಬಂದ ಹುಡುಗ ನಾಳೆ ಬರುವುದಿಲ್ಲ. ನಾಳೆ ಇನ್ಯಾರೋ ಬರುತ್ತಾನೆ. ಅವರು ಯಾರನ್ನು recruit ಮಾಡುತ್ತಾರೆ. ಯಾರಿಗೆ ಕೆಲಸ ಕೊಡುತ್ತಾರೆ. ಯಾರು ಮನೆಗೆ ಬರುತ್ತಾರೆ. ಯಾವುದರ ಮೇಲೂ ಸಹ, ಯಾರ ನಿಯಂತ್ರಣ ಕೂಡ ಇಲ್ಲ. ಹಾಗಾಗಿ ಯಾವ ಸಮಿತಿಯನ್ನು ಸರ್ಕಾರದ ಆದೇಶದ ಪ್ರಕಾರ ರಚನೆ ಮಾಡಿದ್ದೇವೆ, ಆ ಎಲ್ಲಾ ಸಮಿತಿಗಳು ಕೂಡಲೇ ಕಡ್ಡಾಯವಾಗಿ ಕೆಲಸ ಮಾಡಬೇಕು. ಇನ್ನು ಎರಡನೆಯ ಸಂಗತಿಯೇನೆಂದರೆ 3ನೇ ಮಾರ್ಚ್ 2017ಕ್ಕೆ T.R.A.I. ರವರು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಆದರೆ ಈ T.R.A.I. ನವರು ಪ್ರಚಾರವನ್ನೇ ಕೊಟ್ಟಿಲ್ಲ. 300 ರೂಪಾಯಿಯಿಂದ 800 ರೂಪಾಯಿಗಳೆಂದು ಏನು ಮಾತುಕತೆ ಮಾಡಿದ್ದೆವು. T.R.A.I. ನವರು ದಿನಾಂಕವನ್ನು ನಿರ್ಧರಿಸಿದ ಮೇಲೆ ಅದನ್ನು ಇಡೀ ದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಅವಶ್ಯಕತೆಯಿರುವುದರಿಂದ ಈ ಸಮಿತಿಗಳನ್ನು ಏಕೆ ಅನುಷ್ಠಾನಗೊಳಿಸುತ್ತಿಲ್ಲ. ಅವರ ಮೇಲೆ ಏಕೆ free hand ಕೊಟ್ಟಿದ್ದಾರೆ. ಈ ದೃಷ್ಟಿಯಲ್ಲಿ ಸರ್ಕಾರ ಖಂಡಿತವಾಗಿ T.R.A.I. ನ regulation ಪ್ರಕಾರ ಇವತ್ತು ಅವರು ಏನು ಮಾನದಂಡವನ್ನು ಫಿಕ್ಸ್ ಮಾಡಿದ್ದಾರೆ. ಅದರ ಪ್ರಕಾರ ಕೇಬಲ್ ಚಾರ್ಜ್‌ನ್ನು ವಸೂಲಿ ಮಾಡುವುದರ ಜೊತೆಗೆ ಇಡೀ ರಾಜ್ಯಕ್ಕೆ ಪ್ರಚಾರ ಕೊಡುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೃಷ್ಟಿಯಲ್ಲಿ ಇದನ್ನು ಜನರ ಗಮನಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ಅವರು ಈ ಸರ್ಕಾರಿ ವ್ಯವಸ್ಥೆಯನ್ನು ದುರುಪಯೋಗ ಮಾಡುತ್ತಿದ್ದಾರೆ. ಕೇಬಲ್‌ಗಳನ್ನು ಎಳೆಯಬೇಕಾದರೆ ಬೇರೆ ಕಂಬಗಳನ್ನು ಹಾಕುವುದಿಲ್ಲ. ಅವರು ಟೆಲಿಫೋನ್ ಪೋಲ್‌ಗಳನ್ನು ಮತ್ತು ಸರ್ಕಾರಿ ಎಲೆಕ್ಟ್ರಿಕಲ್ ಪೋಲ್‌ಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಅನುಮತಿ ತೆಗೆದುಕೊಳ್ಳಬೇಕೆಂಬ ಪದ್ಧತಿಯನ್ನು ಜಾರಿಗೆ ತರಬೇಕಾಗಿತ್ತು. ಸರ್ಕಾರದ ವತಿಯಿಂದ ಇದನ್ನು ಉಪಯೋಗ ಮಾಡಿದರೆ ಎಲ್ಲೋ ಒಂದು ಕಡೆ ದುಡ್ಡು ಕೊಡಬೇಕು. ಇಲ್ಲವೇ ಬಾಡಿಗೆಯಾದರೂ ಕೊಡಬೇಕಾಗುತ್ತದೆಂಬ ದೃಷ್ಟಿಯಿಂದ ಅವರು ಯಾರ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲ. ಯಾರನ್ನು ಕೇಳುವುದಿಲ್ಲ. ಸರ್ಕಾರಕ್ಕೆ ಯಾವ fees ಅನ್ನು ಕೊಡುವುದಿಲ್ಲ. ಅವರು ಹೇಳಿದ ಹಾಗೆ ಮನೆಯ ಮೇಲೆ ಮಾತ್ರ ಅಲ್ಲ. ಅವರು ಎಲ್ಲೆಲ್ಲಿ ಬೇಕೋ ಅಲ್ಲಿ ವೈರ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ. ಆ ದೃಷ್ಟಿಯಲ್ಲಿ ಸರ್ಕಾರಿ ವ್ಯವಸ್ಥೆಯನ್ನು ಉಪಯೋಗ ಮಾಡಬೇಕಾದರೆ ಅವರ ಅನುಮತಿಯಿಲ್ಲದೆ ಹಾಕಿದ್ದರೆ, ಅವರು ಸರ್ಕಾರಕ್ಕೆ ಚಾರ್ಜ್ ಕೊಡಬೇಕು. ಎರಡನೆಯದು ಅನುಮತಿಯಿಲ್ಲದೆ ಹಾಕಿರುವುದರ ಮೇಲೆ ದಂಡವನ್ನು ವಿಧಿಸಬೇಕು. ಇದರಿಂದಾಗಿ ಸರ್ಕಾರಕ್ಕೆ ಒಳ್ಳೆಯ revenue ಬರುತ್ತದೆ. ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚನೆ ಮಾಡಿದ್ದೀರಿ. ದಯವಿಟ್ಟು ಅವರಿಗೆ ಈ ನಿಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಹೇಳಿ. 2012 ರಿಂದ 2017ರವರೆಗೆ ಸಮಿತಿ ರಚನೆ ಮಾಡಿಕೊಂಡು, ಅದಕ್ಕೆ ನೀವು ಪ್ರಮುಖರು, ಅಧ್ಯಕ್ಷರು, ಕಾರ್ಯದರ್ಶಿಗಳೆಂದು ಮಾಡಿದ್ದೀರಿ. ಆದರೆ ಅವರು ಕೆಲಸವನ್ನೇ ಮಾಡದೇ ಇದ್ದರೆ ಈ ಸಮಿತಿಯನ್ನು ಏಕೆ ರಚನೆ ಮಾಡಬೇಕಾಗಿತ್ತು. ಈ ಸಮಿತಿಗಳು ಕೆಲಸ ಮಾಡಿಲ್ಲದಿರುವುದರಿಂದ, ಇದು ಕೇಬಲ್ ಮಾಫಿಯಾ ಆಗಿ ಇಡೀ ರಾಜ್ಯದಲ್ಲಿ ಜನರ ಶೋಷಣೆ ಮಾಡುತ್ತಿದೆ. ದಯವಿಟ್ಟು ಈ ಸಮಿತಿಗಳಿಗೆ ಅವರದ್ದೇ ಆದ ಜವಾಬ್ದಾರಿ ಏನಿದೆ. ಅದನ್ನು ವಹಿಸಿಕೊಳ್ಳುವುದಕ್ಕೆ ತಾವು ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಒಳ್ಳೆಯ ವಿಚಾರವನ್ನು ಚರ್ಚೆಗೆ ತಂದಿದ್ದಾರೆ. ಬಹಳ ಒಳ್ಳೆಯ ರೀತಿಯಲ್ಲಿ ಚರ್ಚೆಯಾಗುತ್ತಿದೆ. ನಮ್ಮ ಮಂಗಳೂರಿನಲ್ಲಿ ಸಮಸ್ಯೆಯಿದೆ. ನಮ್ಮಲ್ಲಿ ತಿಂಗಳಿಗೆ Set Top Box ಹಾಕುವುದಕ್ಕೆ 600 ರೂಪಾಯಿಯನ್ನು ತೆಗೆದುಕೊಳ್ಳುತ್ತಾರೆ. ಆ Set Top Box ನ್ನು ಬೇರೆಯವರ ಹತ್ತಿರ ತೆಗೆದುಕೊಳ್ಳುವ ಆಗಿಲ್ಲ. ಅವರ ಹತ್ತಿರವೇ ತೆಗೆದುಕೊಳ್ಳಬೇಕು. ಎರಡನೆಯದು ಆ Set Top Box ಗೆ remote ಕೊಡುತ್ತಾರೆ. ಆ remote ಟಿ.ವಿ. ಎದುರುಗಡೆಯೆ ಕುಳಿತುಕೊಂಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬೇಕು. ಸ್ವಲ್ಪ ದೂರಕ್ಕೆ ಹೋದರೆ ಆ remote ಕೆಲಸ ಮಾಡುವುದಿಲ್ಲ. ಎಲ್ಲ last class material. ಟಿ.ವಿ. ಚಾನೆಲ್‌ಗಳಲ್ಲಿ ಕೆಲವು ಚಾನೆಲ್‌ಗಳನ್ನು subscribe ಮಾಡಬೇಕೆಂದು ಮತ್ತೆ ಮತ್ತೆ ಟಿ.ವಿ.ಯಲ್ಲಿ ಲೈನ್ಸ್ ಕೊಡುತ್ತಾರೆ. ಯಾವಾಗ ಕ್ರಿಕೆಟ್ ಮ್ಯಾಚ್ ಇರುತ್ತದೆ. ಆಗ ಅದನ್ನು ತೆಗೆದುಬಿಡುತ್ತಾರೆ. Sports channel ಗಳಿಲ್ಲ. ಅವರನ್ನು ಕೇಳಿದರೆ ಸೆಂಟ್ರಲ್ ಚಾನೆಲ್‌ನವರು rate ಜಾಸ್ತಿ ಮಾಡಿದ್ದಾರೆ. ನೀವು rate ಜಾಸ್ತಿ ಕೊಟ್ಟರೆ ಮಾತ್ರ ನಿಮಗೆ ಆ ಚಾನೆಲ್‌ನ್ನು ಕೊಡುವುದಕ್ಕೆ ಸಾಧ್ಯವೆಂದು ಹೇಳುತ್ತಾರೆ. ಸರ್ಕಾರದಿಂದ ಎಲ್ಲ ಸೌಕರ್ಯಗಳನ್ನು ಪಡೆಯುತ್ತಾರೆ. ಕೇಬಲ್‌ಗಳನ್ನು ಮೆಸ್ಕಾಂನ ಕಂಬದ ಮೇಲೆ ಹಾಕುತ್ತಾರೆ. ನೆಲದಡಿಯಲ್ಲಿ ಹಾಕುವಾಗ ಒಂದೊಂದು ಚಾನೆಲ್‌ನವರು ಐದಾರು ಪೈಪ್‌ಗಳನ್ನು ಹಾಕುತ್ತಾರೆ. ಅವರಿಗೆ ಬೇಕಾಗಿರುವುದು ಒಂದೇ. ಐದಾರು ಪೈಪ್‌ಗಳನ್ನು ಏಕೆ ಹಾಕಿದ್ದೀರೆಂದು ಕೇಳಿದರೆ ಅದಕ್ಕೆ ಅವರು ಸಮಜಾಯಿಷಿ ನೀಡುವುದಿಲ್ಲ. ನಂತರ ಅದನ್ನು ಬೇರೆಯವರಿಗೆ ಮಾರಾಟ ಮಾಡುವುದು. ಅದರೊಳಗೂ ಸಹ ವ್ಯಾಪಾರ ಮಾಡುತ್ತಾರೆ ಮತ್ತು ಈ ಚಾನೆಲ್‌ಗಳ ದಂಧೆಯಿಂದ ಯಾರಿಗೂ ಸರಿಯಾಗಿ ಮನೆಯಲ್ಲಿ ಮನಃಶಾಂತಿಯಿಲ್ಲ. ಈಗಾಗಲೇ ಅನೇಕರು ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ನಮ್ಮ ಮನೆಯ ಮೇಲೆನೇ ಅವರ ಬಾಕ್ಸ್‌ನ್ನು ಇಟ್ಟುಕೊಂಡು ಹೋಗುವುದು. ಅದು ಹಾಳಾದರೆ ಅಲ್ಲಿ ಬಂದು ತೊಂದರೆ ಮಾಡುತ್ತಾರೆ. ಇವರು ಸೇವೆಯನ್ನು ಯಾರಿಗೂ ಸರಿಯಾಗಿ ಕೊಡುವುದಿಲ್ಲ. ಆದರೆ, ಇವರನ್ನು ಯಾರು ಕೇಳುವ ಹಾಗಿಲ್ಲ ಮತ್ತು ಬೇಕಾದಾಗ ಬೇಕಾದ rate ನ್ನು ಜಾಸ್ತಿ ಮಾಡಿಕೊಂಡು ಹೋಗುತ್ತಾರೆ. ಹಾಗಾಗಿ ಇದರ ಬಗ್ಗೆ ನಿಯಂತ್ರಣ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಸರಿಯಾದ ಕಾನೂನನ್ನು ತರಬೇಕು. ಜೊತೆಯಲ್ಲಿ ಸರ್ಕಾರವೇ ಈ ಕೇಬಲ್ ನೆಟ್‌ವರ್ಕ್ ಅನ್ನು run ಮಾಡಿದರೆ ಒಳ್ಳೆಯದು. ಶ್ರೀ ಉಗ್ರಪ್ಪನವರು ಹೇಳಿದ ಹಾಗೆ ಒಂದು ಕೋಟಿ ಮೂವತ್ತೈದು ಲಕ್ಷ ಮನೆಗಳಲ್ಲಿ, ಒಂದು ಕೋಟಿಗಿಂತಲೂ ಜಾಸ್ತಿ ಜನರು ಟಿ.ವಿ ಯನ್ನು ನೋಡುತ್ತಾರೆ.

(ಮುಂದು)

286/20-03-2017 1-10/bkp-ak

**ಶ್ರೀ ಐವನ್ ಡಿ’ಸೋಜಾ(ಮುಂದು. . .)**

ಇವತ್ತು ಇದು ಮೂಲಭೂತ ಸೌಲಭ್ಯಗಳಲ್ಲಿ ಒಂದಾಗಿದೆ. ಹೇಗೆ, ಎಲೆಕ್ಟ್ರಿಸಿಟಿ, ನೀರಿನ ಅವಶ್ಯಕತೆ ಇದೆ, ಅದರಂತೆಯೇ ಟಿ.ವಿ. ನೋಡುವುದು ಸಹ ಮನೆಗಳಲ್ಲಿ compulsory ಆಗಿದೆ. ಹಾಗಾಗಿ, ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ಒಂದು ಕಾನೂನನ್ನು ತರಬೇಕು ಮತ್ತು ರೇಟ್ ಅನ್ನು ಸಹ ರೆಗ್ಯೂಲೇಟ್ ಮಾಡಬೇಕು. ಅವರು ಮನಸ್ಸಿಗೆ ಬಂದಂತೆ ಹಣ ತೆಗೆದುಕೊಳ್ಳುವುದಲ್ಲ. ಮತ್ತೆ, ಅವರು ಏನು ಒಂದು Set Top Box ಕೊಡುತ್ತಾರೆ, ಒಂದು ಮನೆಯಲ್ಲಿ ಅವರು ಒಂದು ಟಿ.ವಿ.ಯನ್ನಿಟ್ಟರೆ, ಮತ್ತೊಂದು ರೂಮ್‌ನಲ್ಲಿ ಟಿ.ವಿ. ಇಡಬೇಕಾದರೆ ನೀವು ಪುನ: 600 ರೂಪಾಯಿಗಳನ್ನು ಕಟ್ಟಬೇಕು. ಈ ವಿಚಾರಗಳಿಗೆ ಎಲ್ಲಿಯೋ ಒಂದು ಕಡೆ ಒಂದು ಸರಿಯಾದಂತಹ ಸೂತ್ರವನ್ನು ತರಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟದ್ದಕ್ಕಾಗಿ, ತಮಗೆ ವಂದನೆಗಳು, ನಿಯಮ 72 ರಡಿಯಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀಮತಿ ಪುಟ್ಟಣ್ಣನವರು ಸಾರ್ವಜನಿಕ ಮಹತ್ವವಾದಂತಹ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವ ಸಲುವಾಗಿ ತಂದಿದ್ದಾರೆ. ಬಹಳ ಪ್ರಮುಖವಾಗಿ 4 ಉತ್ತರಗಳನ್ನು ಸರ್ಕಾರ ಕೊಟ್ಟಿದೆ. ಈ Cable Television Networks (Regulation) Act ಪ್ರಕಾರ ಮತ್ತು 1994-95ರ ನಿಯಮಗಳ ಪ್ರಕಾರ ರಾಜ್ಯ ಸರ್ಕಾರದವರು ಏನು ಇಲ್ಲಿ ಮಾಹಿತಿಯ ಉತ್ತರವನ್ನು ಕೊಟ್ಟಿದ್ದಾರೆ, ಈ ದರ ನಿಗದಿ ಮಾಡುವಂತಹದ್ದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದರ ಪ್ರಕಾರ T.R.A.I. (Telecom Regulatory Authority of India) ರವರು ದರವನ್ನು ನಿಗದಿ ಪಡಿಸಿದ್ದಾರೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅದೇ ಸಂದರ್ಭದಲ್ಲಿ 30-1-2012 ರಲ್ಲಿ ರಾಜ್ಯ ಸರ್ಕಾರ ಒಂದು ಆದೇಶದ ಮೂಲಕ ನಿಯಮಗಳನ್ನು ರಚನೆ ಮಾಡಿ ಜಿಲ್ಲಾ ಸಮಿತಿಗಳನ್ನು ಮಾಡಲಾಗಿದೆಯೆಂದು ರಾಜ್ಯ ಸರ್ಕಾರ ತನ್ನ ಉತ್ತರದ ಮೂಲಕ ತಿಳಿಸಿದೆ. ಆದರೆ, ಈ ವಿಚಾರದಲ್ಲಿ ನನಗೆ ಇರುವಂತಹ ಆತಂಕ ಏನೆಂದರೆ ದಯಮಾಡಿ, ಈ ರೀತಿಯ ಪ್ರಾಧಿಕಾರಗಳನ್ನು ಅಥವಾ ಸಮಿತಿಗಳನ್ನು ರಚನೆ ಮಾಡಬೇಕಾದರೆ, ಯಾವುದೇ ಕಾರಣಕ್ಕೂ ಸಹ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಡಬೇಡಿ. ಈಗಾಗಲೇ 75-80-85 ಸಮಿತಿಗಳಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಿದ್ದಾರೆ. ಬರುವಂತಹ ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ಅವರಿಗೆ ಸಮಯವಿಲ್ಲ. ಇವತ್ತಿನ ಬರಗಾಲ ಪರಿಸ್ಥಿತಿಯಲ್ಲಿ ಬೇರೆ ಸಭೆಗಳನ್ನು ಕರೆಯುತ್ತಿಲ್ಲ. ಇವತ್ತು, ಯಾವುದೇ ಇಲಾಖೆ ಇರಬಹುದು, ಅಂದರೆ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಅವರೇ ಅಧ್ಯಕ್ಷರಾಗಿರುತ್ತಾರೆ, ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ, ಅವರೇ ಅಧ್ಯಕ್ಷರಾಗಿರುತ್ತಾರೆ, ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ದೂರುಗಳು ಬಂದರೆ ಅವರೇ ಅಧ್ಯಕ್ಷರಾಗಿರುತ್ತಾರೆ. ಅಕ್ರಮ-ಸಕ್ರಮಕ್ಕೆ ಸಂಬಂಧಪಟ್ಟಂತೆ ದೂರುಗಳು ಬಂದರೆ ಅವರೇ ಅಧ್ಯಕ್ಷರು. ಈ ರೀತಿ ಮಾಡಿದರೆ, ಅವರಿಗೆ ಸಮಯ ಎಲ್ಲಿ ಇರುತ್ತದೆ? ಈ ವಿಚಾರವಾಗಿ ನಾನು ಪ್ರಶ್ನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿಲ್ಲ, ರಾಜ್ಯ ಸರ್ಕಾರ ಇದನ್ನು ದಯಮಾಡಿ ಬದಲಾವಣೆ ಮಾಡಬೇಕಾಗುತ್ತದೆ. ಇಂತಹ ಪ್ರಾಧಿಕಾರಗಳನ್ನು ರಚನೆ ಮಾಡಬೇಕಾದರೆ ಅಲ್ಲಿನ ಸೆಕೆಂಡ್ ಡಿ.ಸಿ.ಯವರನ್ನೋ ಅಥವಾ ಅಸಿಸ್ಟೆಂಟ್ ಕಮಿಷನರ್ ರವರನ್ನೋ ಪ್ರತಿ ನಿಯೋಜನೆ ಮಾಡಿ, ಡೆಪ್ಯೂಟ್ ಮಾಡಿ, power ಅನ್ನು delegate ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟರೆ ಅವರಿಗೆ ಬಂದಂತಹ ದೂರುಗಳನ್ನು ವಿಲೇವಾರಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದು ಒಂದು ಕಡೆ.

ಮತ್ತೆ, ಇವರು ಕೊಟ್ಟಿರುವಂತಹ ಉತ್ತರದಲ್ಲಿ ತಾಲ್ಲೂಕು ಸಮಿತಿಗಳ ಪ್ರಸ್ತಾಪ ಇಲ್ಲ. ಸಾಮಾನ್ಯವಾಗಿ ಕೇಬಲ್ ಎನ್ನುವುದು ಇವತ್ತು ಹಳ್ಳಿಯನ್ನೂ ಸಹ ಬಿಟ್ಟಿಲ್ಲ. ಸನ್ಮಾನ್ಯ ಉಗ್ರಪ್ಪನವರು ಹೇಳಿದಂತೆ ಇದು ಎಲ್ಲಾ ಕಡೆಯೂ ಹರಡಿದೆ. ಅವರು ತಾಲ್ಲೂಕಿನಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಬಂದು ಕೊಡುವಂತಹ ಅವಕಾಶಗಳು ಕಡಿಮೆ ಇರುತ್ತದೆ. ಆ ಕಾರಣಕ್ಕೋಸ್ಕರ ತಾಲ್ಲೂಕು ಸಮಿತಿಗಳನ್ನು ರಚನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ನಿಯಮಾವಳಿಗಳ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ಒಂದು ಕಾಲಮಿತಿಯನ್ನು ನಿಗದಿ ಮಾಡಬೇಕಾಗುತ್ತದೆ. ಒಂದು ದೂರನ್ನು ಕೊಟ್ಟಂತಹ ಸಮಯದಲ್ಲಿ ಸುಮ್ಮನೆ ದೂರನ್ನು ತೆಗೆದುಕೊಂಡು, ಸಂಬಂಧಪಟ್ಟವರಿಗೆ ಒಂದು ನೋಟೀಸ್ ಕೊಟ್ಟು ಅರ್ಜಿಯನ್ನು ಬಿಸಾಕಿದರೆ ಉಪಯೋಗ ಇರುವುದಿಲ್ಲ. ದಯಮಾಡಿ, ಕನಿಷ್ಠ 60 ದಿನಗಳ ಒಳಗಡೆ ಅರ್ಜಿಯನ್ನು ವಿಲೇವಾರಿ ಮಾಡಬೇಕು. ಮತ್ತೆ, ತಾವು ಕೊಟ್ಟಿರುವ ಉತ್ತರದಲ್ಲಿ ಸ್ಪಷ್ಟತೆ ಇರುವುದಿಲ್ಲ. ರಾಜ್ಯ ಸರ್ಕಾರಕ್ಕೆ ಕೇಬಲ್ ನಿಯಂತ್ರಣಕ್ಕೆ ಅಂದರೆ ದರ ನಿಯಂತ್ರಣಕ್ಕೆ ಅವಕಾಶ ಇದೆಯೇ ಇಲ್ಲವೇ ಎನ್ನುವುದನ್ನು ಈ ಉತ್ತರದಲ್ಲಿ ಸ್ಪಷ್ಟ ಮಾಡಿರುವುದಿಲ್ಲ. ಇವತ್ತು ಮಾನ್ಯ ಸದಸ್ಯರು ಮೂಲಭೂತ ಪ್ರಶ್ನೆಯನ್ನು ಮಾಡಿದ್ದಾರೆ. ಕೇಬಲ್‌ನವರು ಹೆಚ್ಚು ಹಣವನ್ನು ವಸೂಲಿ ಮಾಡುತ್ತಿದ್ದಾರೆ. ರಾಜ್ಯಕ್ಕೆ ಬರುವಂತಹ ರಾಜಸ್ವದ ಕೊರತೆಯಾಗುತ್ತಿದೆ. ಅವರನ್ನು ನಿಯಂತ್ರಣ ಮಾಡುವುದರ ಮೂಲಕ law and order ಸಹ ನಾವು maintain ಮಾಡಬೇಕು. ರಾಜ್ಯದ ರಾಜಸ್ವನ್ನು ಜಾಸ್ತಿ ಮಾಡಬೇಕೆನ್ನುವ ಒಂದು ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀಯುತ ಪುಟ್ಟಣ್ಣನವರು ಎತ್ತಿದ್ದಾರೆ. ದಯಮಾಡಿ, ರಾಜ್ಯ ಸರ್ಕಾರ ಈ ನಿಯಮಾವಳಿಗಳಲ್ಲಿ ತಮಗೆ ಅವಕಾಶವಿದ್ದರೆ ತಾಲ್ಲೂಕು ಸಮಿತಿಗಳನ್ನು ರಚನೆ ಮಾಡಿ, ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳನ್ನು ಈ ಅಧಿಕಾರದಿಂದ ಬಿಡುಗಡೆ ಮಾಡಿ. ಇಲ್ಲದಿದ್ದರೆ, ಈ ದೂರುಗಳು ದೂರವಾಗಿ ಉಳಿದುಕೊಳ್ಳುತ್ತವೆಯೇ ಹೊರತು, ಯಾವುದೇ ಪ್ರಯೋಜನವಾಗುವುದಿಲ್ಲ. ನಾಮಕಾವಸ್ತೆ ಸಮಿತಿಗಳಾಗುತ್ತವೆ. ಸುಮ್ಮನೆ ದೂರನ್ನು ಕೊಡುತ್ತಾರೆ, ಈಗಾಗಲೇ ಅಲ್ಲಿ ಮಾಫಿಯಾಗಳು ಸೇರಿಕೊಂಡಿದ್ದಾರೆ. ಅವರು ದೂರುಗಳನ್ನು ಕೊಡುವವರಿಗೆ ಬೆದರಿಕೆ ಹಾಕುವಂತಹದ್ದನ್ನು ಮತ್ತೊಂದನ್ನು ಮಾಡುತ್ತಿರುತ್ತಾರೆ. ಹೀಗಾಗಿ, ಜಿಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿಗಳಿಗೆ ದೂರುಗಳನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕೋಸ್ಕರ ಇನ್ನಷ್ಟು ಇದನ್ನು transparent ಮಾಡಿ, power delegate ಕೊಟ್ಟು, ತಾಲ್ಲೂಕು ಸಮಿತಿಗಳನ್ನು, ಜಿಲ್ಲಾ ಸಮಿತಿಗಳನ್ನು ಪುನರಚನೆ ಮಾಡಿ, ಇದನ್ನು monitor ಮಾಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ.

ಮತ್ತೆ, ಸರ್ಕಾರಕ್ಕೆ ನನ್ನ ಮತ್ತೊಂದು ವಿನಂತಿ ಏನೆಂದರೆ, ನಾವು ಬೇರೆ ರಾಜ್ಯಗಳಿಗೆ ಹೋದಂತಹ ಸಮಯದಲ್ಲಿ ನಾವು ಅಲ್ಲಿ ಎಲ್ಲಿಯಾದರೂ ಉಳಿದುಕೊಂಡಂತಹ ಸಮಯದಲ್ಲಿ ಆ ಪ್ರಾದೇಶಿಕ ಚಾನಲ್‌ಗಳು ಮತ್ತು ಅದನ್ನು ಬಿಟ್ಟರೆ ನ್ಯೂಸ್ ಚಾನಲ್‌ಗಳು, ಅಂದರೆ, ಇಂಗ್ಲೀಷ್ ಅಥವಾ ಹಿಂದಿ ಭಾಷೆಯದ್ದೋ, ಈ ರೀತಿಯಲ್ಲಿ 5–6 ಚಾನಲ್‌ಗಳು ಇರುತ್ತವೆ. ಆದರೆ, ಬೆಂಗಳೂರಿನಲ್ಲಿ ನಾವು ಒಂದು ಟಿ.ವಿಯನ್ನು 'On' ಮಾಡಿದರೆ 200–250 ಚಾನಲ್‌ಗಳು ಬರುತ್ತವೆ. ಕನ್ನಡೇತರ ಚಾನಲ್‌ಗಳು ಸುಮಾರು 60–70 ಚಾನಲ್‌ಗಳು ಒಂದೊಂದು ಭಾಷೆಯಲ್ಲಿ ಬರುತ್ತಿವೆ. ಕನ್ನಡಕ್ಕಿಂತ ಕನ್ನಡೇತರ ಚಾನಲ್‌ಗಳು ಜಾಸ್ತಿ ಬರುತ್ತಿವೆ. ಚಾನಲ್‌ಗಳು ಬರುವುದು ಬೇಡವೆಂದು ನಾವು ಹೇಳುತ್ತಿಲ್ಲ. ಅದಕ್ಕೆ ನೀವು ಏನಾದರೂ ತೆರಿಗೆಯನ್ನು ಹಾಕುವುದ್ದೋ, ರಾಜ್ಯದಿಂದ levy ಮಾಡುವುದನ್ನು ಮಾಡಿದರೆ ನಮ್ಮ ರೆವಿನ್ಯೂ ಜಾಸ್ತಿಯಾಗುತ್ತದೆ. ಎಲ್ಲಿ ಆ ರೀತಿಯಲ್ಲಿ ಟೆಲಿಕಾಸ್ಟ್ ಬರುತ್ತದೆ, cable operators ಗಳಿಗೆ ಕನ್ನಡೇತರ ಚಾನಲ್‌ಗಳಿಗೆ ಒಂದು ಹಣವನ್ನು ನಿಗದಿ ಮಾಡಿ, ಅಂತಹ ಚಾನಲ್‌ಗಳ ಮೂಲಕ ಹೆಚ್ಚು ಹಣವನ್ನು ಪಡೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಿದರೆ ರಾಜ್ಯ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಅವಕಾಶ ಕೊಟ್ಟಿದ್ದಕ್ಕೆ ನಾನು ವಂದಿಸುತ್ತೇನೆ. ಧನ್ಯವಾದಗಳು.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಷಯವನ್ನು ಸನ್ಮಾನ್ಯ ಸದಸ್ಯರುಗಳು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ cable network ನ ಈ ಒಂದು ವ್ಯವಸ್ಥೆಗೆ ರಾಜ್ಯ ಸರ್ಕಾರದಿಂದ ಒಂದು ಹೊಸ ಕಾನೂನನ್ನು ತರಲಿಕ್ಕೆ ಅವಕಾಶ ಇದೆಯೇ? ಅವಕಾಶ ಇದ್ದರೆ, ಅದಷ್ಟು ಬೇಗ ಈ ಒಂದು ಕಾನೂನನ್ನು ತರುವುದರ ಮೂಲಕ ಇದನ್ನು ನಿಯಂತ್ರಣ ಮಾಡುವಂತಹ ಕೆಲಸ ಮಾಡುವಲ್ಲಿ ಸರ್ಕಾರ ಮುಂದಾಗಬೇಕು. ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವಂತಹ ತೊಂದರೆಗಳು, ಮತ್ತು ಏನು ಇವತ್ತು ಅವೈಜ್ಞಾನಿಕವಾಗಿ ಸಾರ್ವಜನಿಕರಿಂದ ವಸೂಲು ಮಾಡುತ್ತಿರುವಂತಹ ಹಣದ ನಿರ್ವಹಣೆ ಮತ್ತು ರಾಜ್ಯ ಸರ್ಕಾರಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕಾಗಿರುವಂತಹ ಒಂದು ಹಣ direct ಆಗಿ ಮತ್ತು indirect ಆಗಿ ಬರುವಂತಹ ತೆರಿಗೆ ಹಣದ ವಿಚಾರದಲ್ಲಿಯೂ ಸಹ ಸರ್ಕಾರ ತನ್ನ ಧೋರಣೆಯನ್ನು ತೋರ್ಪಡಿಸಲಿಕ್ಕೆ ಒಂದು ಕಾನೂನನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಲಿಕ್ಕೆ ಬಯಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ(ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೆ, ನಮ್ಮ ಆತ್ಮೀಯರಾದ ಶ್ರೀಮಾನ್ ಪುಟ್ಟಣ್ಣನವರು ಅತ್ಯಂತ ಒಳ್ಳೆಯ ಒಂದು ಪ್ರಮುಖ ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈಗಾಗಲೇ ಎಲ್ಲಾ ಮಾನ್ಯ ಸದಸ್ಯರು ಈ ಕುರಿತಂತೆ ಮಾತನಾಡಿದ್ದಾರೆ. ಆದರೆ, ಇಲ್ಲಿ ಬಂದಿರುವಂತಹ ಒಂದೆರಡು ಪ್ರಶ್ನೆಗಳ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. Set Top Box ಬಗ್ಗೆ ಹಲವಾರು ಸದಸ್ಯರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ Set Top Box ಅನ್ನು ತಂದಿರುವಂತಹದ್ದೇ ಸರ್ಕಾರಕ್ಕೆ ತೆರಿಗೆ ಬರುತ್ತಿಲ್ಲ, Service Tax ಕಟ್ಟುವುದಿಲ್ಲ, ಒಂದು ಮನೆಯಲ್ಲಿ 3-4 ಟಿ.ವಿ.ಗಳನ್ನಿಟ್ಟಿರುತ್ತಾರೆ, ಅಂಗಡಿಗಳಲ್ಲಿ 8-10 ಟಿ.ವಿಗಳನ್ನಿಟ್ಟಿರುತ್ತಾರೆ ಎನ್ನುವುದಾಗಿದೆ. ಹೀಗಾಗಿ, ಈ ರೀತಿಯಲ್ಲಿ ಇಷ್ಟೊಂದು ಲಿಂಕ್ ತೆಗೆದುಕೊಂಡಾಗ ಅದು ಜನರಿಗೆ, ಸರ್ಕಾರಕ್ಕೆ ಗೊತ್ತಾಗದೆ, ಅವರೆಲ್ಲರೂ ಮೋಸ ಮಾಡುತ್ತಿದ್ದಾರೆ. Service Tax ಕಟ್ಟುವುದಿಲ್ಲವೆನ್ನುವ ನಿಟ್ಟಿನಲ್ಲಿ, ಇದು Service Tax ವ್ಯಾಪ್ತಿಯಲ್ಲಿ ಬರಬೇಕೆನ್ನುವ ಉದ್ದೇಶದಿಂದಲೇ ಒಂದೊಂದು Set Top Box ಅನ್ನು, ನಂಬರ್‌ಗಳನ್ನು count ಮಾಡಿ, ಪ್ರತಿಯೊಂದು ಏರಿಯಾದಲ್ಲಿಯೂ ಕೂಡ ಒಂದು ಮನೆಯಲ್ಲಿ 3 ಟಿ.ವಿಗಳಿದ್ದರೆ ಆ 3 ಟಿವಿ.ಗಳಿಗೂ ಸಹ ಪ್ರತ್ಯೇಕ-ಪ್ರತ್ಯೇಕವಾಗಿ ಹಣವನ್ನು ಕಟ್ಟಬೇಕು, ಮತ್ತು ಅದಕ್ಕೆ Service Tax ಕಟ್ಟಬೇಕು ಎನ್ನುವುದಾಗಿದೆ.

ಮಾನ್ಯ ಸಭಾಪತಿಯವರೆ, ಇದರಲ್ಲಿನ ಬಹಳ ಒಂದು ಒಳ್ಳೆಯ ವಿಷಯ ಏನೆಂದರೆ, Set Top Box ತಂದಿರುವಂತಹದ್ದು, ನಮಗೆ ಒಂದು accountability ಸಿಕ್ಕಿದೆ. ಆದರೆ, ಮೋಸ ಮಾಡುವಂತಹ ಜನರು ಏನು ಇದ್ದಾರೆ, ಅವರುಗಳನ್ನು ಇದರೊಳಗೆ ತರುವಂತಹ ಕೆಲಸವನ್ನು ನಾವು ಹೆಚ್ಚಿಗೆ ಮಾಡಬೇಕಾಗುತ್ತದೆ.

ಯಾರು ಈ Set Top Box ಅನ್ನು ಇಟ್ಟುಕೊಳ್ಳದೇ ಈಗಂತೂ ಸಿನಿಮಾವನ್ನು ತೋರಿಸಲಿಕ್ಕೆ ಸಾಧ್ಯವೇ ಇಲ್ಲ. ಟಿ.ವಿ.ಯನ್ನು ನೋಡಲಿಕ್ಕೆ ಸಾಧ್ಯವೇ ಇಲ್ಲ. ಆದರೆ, ಇದರ ಹೆಸರಿನಲ್ಲಿ ಮೋಸ ಮಾಡುವಂತಹದ್ದು ಎರಡು. Set Top Box ಅನ್ನು ನಾವು ಗೌರವಿಸುತ್ತೇವೆ. ಆದರೆ, ಕೆಟ್ಟ-ಕೆಟ್ಟ Set Top Box ಗಳನ್ನು, ಚೈನಾ ಮಾಡಲ್‌ಗಳನ್ನೆಲ್ಲಾ ತಂದು, ಜನರನ್ನು ಏನು ಮೋಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರ ಗಮನಕೊಟ್ಟು, ಅದು ಒಳ್ಳೆಯ ಗುಣಮಟ್ಟದ್ದೇ, ಅದಕ್ಕೆ ಎಷ್ಟು ದುಡ್ಡನ್ನು ಕೊಟ್ಟಿದ್ದಾರೆ, ಜನರ ಮೇಲೆ ಎಷ್ಟು ತೆರಿಗೆ ಬೀಳುತ್ತಿದೆ, ಎನ್ನುವುದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ. ಮತ್ತೆ, ಈ ವಿಚಾರವಾಗಿ ಮಾನ್ಯ ಸದಸ್ಯರು ಒಂದು ಅಂಶವನ್ನು ಹೇಳಿದರು. ಇದಕ್ಕೆ ಡಿ.ಸಿ.ಯವರು ಬೇಡವೆಂದು ಹೇಳಿದರು. ಡಿ.ಸಿ.ಯವರು ಬೇಡ ಎನ್ನುವುದಾದರೆ ನಮ್ಮ ಎಸ್.ಪಿ. ಅಂತಹವರು, ಸಿ.ಇ.ಓ ಅಥವಾ ಅದಕ್ಕೂ ಮೇಲಿನ ಅಧಿಕಾರಿಗಳು ಯಾರಿದ್ದಾರೆ, ಅವರ ನೇತೃತ್ವದಲ್ಲಿ ಈ ಒಂದು ಸಮಿತಿಯನ್ನು ಮಾಡಿದರೆ ತುಂಬಾ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಮತ್ತೆ, ಲಿಂಕ್ ಕೊಡುವಂತಹವರು, D.T.H. ಕೊಡುವಂತಹವರ ವಿಚಾರವಾಗಿ ಹೇಳಬೇಕಾಗುತ್ತದೆ. ಸಾರ್ವಜನಿಕರಿಗೆ ಈ ಲಿಂಕ್ ಕೊಡುವವರಿಂದ ತೊಂದರೆಯಾಗುತ್ತಿದೆ. ಲಕ್ಷಾಂತರ ರೂಪಾಯಿಗಳನ್ನು ಅವರು ಬಾಚಿಕೊಂಡು ಹೋಗುತ್ತಿದ್ದಾರೆ. D.T.H. ಹೆಸರಿನಲ್ಲಿ ಮೊದಲು ಬರಬೇಕಾದರೆ ಇವತ್ತು 300 ರೂಪಾಯಿಗಳಿಗೆ ಉಚಿತವೆಂದು ಹೇಳಿಕೊಂಡು ಬರುತ್ತಾರೆ, ನಂತರ ಅದನ್ನು ಸಾವಿರಾರು ರೂಪಾಯಿಗಳು ಮಾಡುತ್ತಾರೆ. ಇದು ಜನರನ್ನು ಕೊಳ್ಳೆ ಹೊಡೆಯುವಂತಹದ್ದಾಗಿದೆ. ಇದರ ಹಿಂದೆ multinational company ಗಳದ್ದು, ಒಂದು ದೃಷ್ಟಿ ಇದೆ. ಇದು ಸರ್ಕಾರದ ಗಮನಕ್ಕೆ ಬರಬೇಕು. ಸರ್ಕಾರ ಇದನ್ನು ಖಂಡಿತವಾಗಿ ಗಮನಹರಿಸಿದರೆ, ಇದು ಸರ್ಕಾರದ ಹಿಡಿತದಲ್ಲಿ ಬಂದರೆ ತುಂಬಾ ಒಳ್ಳೆಯದಾಗುತ್ತದೆ ಎಂದು ಹೇಳಿ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಷಯದ ಬಗ್ಗೆ ಗಮನಹರಿಸಿದ್ದಾರೆಂದು ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳು.

ಮುಂದು..

(287) 20.03.17 SPR RN 1.20

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತಿನ ದಿವಸ ಮಾನ್ಯ ಪುಟ್ಟಣ್ಣನವರು ಸದನದ ಮುಂದೆ ಒಳ್ಳೆಯ ವಿಷಯವನ್ನು ಚರ್ಚೆಗೆ ತಂದಿದ್ದಾರೆ. ಅದಕ್ಕೆ ನಾನು ಒಂದೇ ಒಂದು ಅಂಶವನ್ನು ಸೇರಿಸುವುದಕ್ಕೆ ಬಯಸುತ್ತೇನೆ. ಇದರಲ್ಲಿ The Cable Television Networks (Regulation) Act 1995 ಅನ್ನು ತಂದಿದ್ದು, ಮಾನ್ಯ ಮುಖ್ಯಮಂತ್ರಿಗಳು ಒದಗಿಸಿರುವ ಉತ್ತರದಲ್ಲಿನ ಮೂರನೆಯ ಕಂಡಿಕೆಯಲ್ಲಿ ಅದನ್ನು ನಮೂದಿಸಿದ್ದಾರೆ. ಆದರೆ, ಈಗಲೂ ಸಹ ನಾವು tax generation ಮಾಡುವುದಕ್ಕೂ ಕೂಡ ಅನುಕೂಲವಾಗುವಂತಹ ಒಳ್ಳೆಯ ಕಾಯ್ದೆಯಿದೆ. ಇದರಲ್ಲಿನ ಕಲಂ 2(ಜಿಐ) ರಲ್ಲಿ ಐದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

classifications ಮಾಡಿದ್ದಾರೆ. ಉಪ ನಿಯಮದಲ್ಲಿ *public authority means any authority, body or institutions of local self-government constituted or established by or under* ಎಂದು ನಮೂದಿಸಲಾಗಿದೆ. ಕಲಂ 2(ಜಿಐ) ರಲ್ಲಿಯೂ ಸಹ *(iii) any law made by a State Legislature;* ಎಂದು ನಮೂದಾಗಿದ್ದು, ಈ ಸಂಬಂಧ ನಮ್ಮಲ್ಲಿ ಇದುವರೆಗೆ ಯಾವುದೇ ಕಾನೂನನ್ನು ಮಾಡಿಲ್ಲ. We are relying upon the Central Act 1994. ಅದು 1994, 1995 ಅಥವಾ 2017 ನೇ ಸಾಲಿನ ಕಾಯ್ದೆಗಳಿರಬಹುದು. ಈಗ ನಾನು ಉಲ್ಲೇಖಿಸಿರುವುದು 1995 ನೇ ಸಾಲಿನ ಕಾಯ್ದೆ. ಇದರಲ್ಲಿ ಎಲ್ಲಾ ಮೂರು ಕಾಯ್ದೆಗಳು, ನಿಯಮಾವಳಿಗಳಿದ್ದರೂ ಸಹ ನಾವು Central Rules 1994, Central Act 1995, based on 1995 Act we have issued a notification on 30-01-2012. ಈಗ ನಾವು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಆದರೆ, ಈಗಲೂ ಸಹ ನಾವು ಕಲಂ 2(ಜಿಐ) ನ್ನು ಅವಲಂಬಿಸಿಕೊಂಡು, ಅದನ್ನೇ ಆಧಾರವಾಗಿಟ್ಟುಕೊಂಡು ಒಂದು ಹೊಸ ಕಾಯ್ದೆಯನ್ನು ಮಾಡಿ. ಮಾನ್ಯ ಸದಸ್ಯರಗಳಾದ ಶ್ರೀ ಐವನ್ ಡಿ'ಸೋಜಾ, ಶ್ರೀ ವಿ.ಎಸ್.ಉಗ್ರಪ್ಪ ರವರುಗಳು ಹೇಳಿದಂತೆ, ಹಾಗೂ ಶ್ರೀ ಪುಟ್ಟಣ್ಣ ರವರು ಪ್ರಸ್ತಾಪಿಸಿರುವ ವಿಷಯವಾಗಿರಬಹುದು. ಒಂದು ವಿಚಾರವೆಂದರೆ, set top box ಗೆ ಅವರುಗಳು ರೂಪಾಯಿ ಎರಡು ಸಾವಿರಗಳಿಂದ ರೂಪಾಯಿ ಮೂರು ಸಾವಿರಗಳವರೆಗೆ ವಿಧಿಸುವ ವಿಚಾರವಾಗಿರಬಹುದು. ಮತ್ತೊಂದು ವಿಚಾರವೆಂದರೆ, ತಿಂಗಳಿಗೆ ರೂಪಾಯಿ ಆರು ನೂರುಗಳನ್ನು ವಿಧಿಸುವುದು. It runs into 5000 Crores. ಪರಿಸ್ಥಿತಿ ಹೀಗಿರುವುದರಿಂದ ಇದರ ಮೇಲೆ ನಮಗೆ condition restrict ಮಾಡಿದ ಹಾಗೆ ಆಗುತ್ತದೆ. ತೆರಿಗೆಯನ್ನು ವಿಧಿಸಿ, ಸರ್ಕಾರದ ವತಿಯಿಂದಲೇ ಇದನ್ನು ನಡೆಸಿದರೆ, ಸಾಕಷ್ಟು ತೆರಿಗೆಯನ್ನು ಸಂಗ್ರಹಿಸಿದಂತಾಗುತ್ತದೆ ಎಂಬ ಸಲಹೆಯನ್ನು ನಾನು ಕೊಡಲಿಕ್ಕೆ ಬಯಸುತ್ತೇನೆ. ಹೊಸ ಕಾಯ್ದೆಯನ್ನು ತರುವಂತಹದ್ದು ಒಳ್ಳೆಯದು ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇಷ್ಟೊಂದು ಗೌರವಾನ್ವಿತ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದನ್ನು ನೋಡಿದರೆ, ಎಲ್ಲೋ ಒಂದು ಕಡೆ ಕೇಬಲ್‌ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಕೀರ್ಣ ವ್ಯವಸ್ಥೆಯನ್ನು ನಿಯಂತ್ರಿಸಲು ಇಲ್ಲಿಯವರೆಗೆ ಸರಿಯಾಗಿ ಆಗಲಿಲ್ಲವೆಂಬುದು ನಮಗೆ ಸ್ಪಷ್ಟವಾಗುತ್ತದೆ. ಇದು Ministry of Information and Broadcasting ಅಡಿ ಬರುವಂತಹದ್ದು. ನಾನು ಆಗಲೇ ಹೇಳಿದ ಹಾಗೆ, ಅವರು ಈ Regulatory Authority ಯನ್ನು ನೇಮಕ ಮಾಡುವಾಗ ಎರಡು ಹಂತದ Regulatory Authorities ಗಳನ್ನು ಮಾಡಿದ್ದಾರೆ. ಮೊದಲನೆಯದು ರಾಜ್ಯ ಮಟ್ಟದಲ್ಲಿ ಮತ್ತೊಂದು ಜಿಲ್ಲಾ ಮಟ್ಟದಲ್ಲಿ. ತಾಲ್ಲೂಕು ಮಟ್ಟದಲ್ಲಿ ಅವರು ಮಾಡಿಲ್ಲ. ಜಿಲ್ಲಾ ಮಟ್ಟದಲ್ಲಿ ಉಪ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಯ ಪೊಲೀಸ್ ಅಧೀಕ್ಷಕರಿದ್ದಾರೆ. Principal of one of the Women's College in the District to be selected by the D.C. Representative of a leading NGO working for children welfare to be nominated by the District Commissioner Academicians, Psychologists, Sociologists, one each to be nominated by the District Commissioner. Representative of a leading NGO working for women welfare again to be nominated by the District Commissioner. The Senior Assistant Director Information Department is the Member Secretary. ಸಮಾಜದ ಎಲ್ಲಾ ವರ್ಗದವರನ್ನು ಕೂಡ ಈ ಜಿಲ್ಲಾ ಸಮಿತಿಯಲ್ಲಿ ಸೇರಿಸಿದ್ದಾರೆ.

ಅದೇ ರೀತಿಯಾಗಿ ರಾಜ್ಯ ಮಟ್ಟದಲ್ಲಿಯೂ ಸಹ, The Secretary to Government, Kannada, Culture and Information Department ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. DG & IGP or his nominee, The Principal Secretary to Government, Social Welfare Department or his nominee, The Principal Secretary to Government, Women & Children Welfare Department or his nominee, Representative of a leading NGO of State Working for Women to be nominated by the Government. An academician, Psychologists, Sociologists, one each to be nominated again by the Government and Director of Information Department is the Member Secretary.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲ್ಕಂಡಂತೆ ಸಮಿತಿಗಳನ್ನು ಮಾಡಿ, ನಿರ್ದಿಷ್ಟವಾಗಿ ಅವರ ಕರ್ತವ್ಯಗಳೇನು ಎಂಬುದನ್ನೂ ಸಹ ವಿವರಿಸಿದ್ದಾರೆ. ನಾನು ರಾಜ್ಯ ಮಟ್ಟದ ಬಗ್ಗೆ ಮಾತ್ರ ಹೇಳುತ್ತೇನೆ. To see whether the District level Committees are meeting regularly; To see whether authorized officers are effectively performing their duty; To see how many cases are handled by them and what decisions are arrived at; To give suggestions, guidance to district level committee; To take decision on the matters referred to it by the district level committee; To collect data, all information from district level committee and forward it to Secretary, Government of India, Ministry of Information & Broadcasting; To recommend action and forward complaints against satellite channels; To the Ministry of Information & Broadcasting in cases of violation of Government of India's orders on the programmes and advertising codes. ಹೀಗೆ ನಿರ್ದಿಷ್ಟವಾದ ಕರ್ತವ್ಯಗಳನ್ನು ಅವರು ಕೊಟ್ಟಿದ್ದಾರೆ. ಇದರ ಜೊತೆಗೆ ದರ ನಿಗದಿ ಮಾಡತಕ್ಕಂತಹ ವಿಚಾರವೇನಿದೆ ಅದನ್ನು ರಾಜ್ಯ ಸರ್ಕಾರಕ್ಕೆ ನಿಯೋಜಿಸಿಲ್ಲ. ಇದನ್ನು ಕೇಂದ್ರ ಸರ್ಕಾರದವರೇ ಮಾಡಬೇಕು. ಕೇಂದ್ರ ಸರ್ಕಾರವೇ ಇದನ್ನು ಆಗಿಂದಾಗ್ಗೆ ನಿಯಂತ್ರಣ ಮಾಡುವಂತಹದ್ದು. ಇದನ್ನು ಒಂದೆರಡು ವರ್ಷಗಳಿಗೊಮ್ಮೆ ಮಾಡುತ್ತಾರೆ. ನಾನು ಆಗಲೇ ಹೇಳಿದ

ಹಾಗೆ, ಹಾಲಿಯಿರುವ ದರವನ್ನು ಕಳೆದ ಸಾಲಿನ ಮಾರ್ಚ್ 03 ರಂದು ನಿಗದಿಪಡಿಸಿದ್ದರು. ಅದರನ್ವಯ ಮಾಹೆಯಾನ ರೂಪಾಯಿ 130 ಗಳನ್ನು ಮಾಡಿದ್ದಾರೆ. Provided that the network capacity fee for the month for network capacity up to initial one hundred SD Channels shall in no case exceed rupees one hundred and thirty, excluding taxes. ರೂಪಾಯಿ 130 ಮತ್ತು ತೆರಿಗೆಗಳು. Provided further that the network capacity fee per month for network in the slabs of 25 SD channels. Each beyond initial one hundred channels capacity to be referred to the first proviso of sub-clause one, shall in no case exceeding rupees twenty

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

excluding taxes. ಅದೇನೆಂದರೆ, 25 ಎಸ್.ಡಿ. ಚಾನಲ್‌ಗಳಗೆ ರೂಪಾಯಿ 20 ಗಳನ್ನು ನಿಗದಿಪಡಿಸಿದ್ದಾರೆ. ಅದೇ ರೀತಿಯಾಗಿ 100 ಎಸ್.ಡಿ. ಚಾನಲ್‌ಗಳಗೆ ರೂಪಾಯಿ 130 ಗಳನ್ನು ನಿಗದಿಪಡಿಸಿದ್ದಾರೆ. ಇದಲ್ಲದೇ ಚಾನಲ್‌ಗಳವರು ಅವರಿಗೆ ಇಷ್ಟ ಬಂದ ಹಾಗೆ ದರಗಳನ್ನು ನಿಗದಿ ಪಡಿಸುತ್ತಿದ್ದಾರೆ ಎಂಬುದು ತಾವೆಲ್ಲರೂ ಹೇಳಿದನ್ವಯ ಗೊತ್ತಾಗುತ್ತಿದೆ. ಕೇಬಲ್‌ನ ದರ ನಿಯಂತ್ರಣ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರಕ್ಕೆ ಅವಕಾಶವಿಲ್ಲ. ಆದರೆ, ಒಂದು ಅಂಶವಂತೂ ನಿಜ. ಕೇಬಲ್‌ನವರು ವಿದ್ಯುತ್ ಕಂಬಗಳ ಮೇಲೆ, ಭೂಮಿಯ ಒಳಗಡೆ ಕೇಬಲ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಹಾಗೂ ತಾವು ಹೇಳಿದ ಹಾಗೆ ಅವರುಗಳು ತಮಗೆ ಇಷ್ಟ ಬಂದ ಹಾಗೆ ಒಂದು, ಮೂರು ಕೇಬಲ್‌ಗಳ ಸಂಪರ್ಕವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಮಾನ್ಯ ಸದಸ್ಯರಾದ ರೇವಣ್ಣ ರವರ ಮನೆಯಲ್ಲಿ ಮೂರು ಟಿ.ವಿ.ಚಾನೆಲ್‌ಗಳಿವೆ ಎಂದು ಹೇಳಿದರು. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ, ಮೂರು ಟಿ.ವಿ.ಚಾನೆಲ್ . . . . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾನಾಯಕರೆ, ತಾವು ಗೃಹ ಮಂತ್ರಿಗಳಾಗಿದ್ದೀರಿ. ಹೀಗಾಗಿ ಈ ಬಗ್ಗೆ ಸರಿಯಾಗಿ ತನಿಖೆಯನ್ನು ನಡೆಸಬೇಕು. ಅದು ಮೂರು ಟಿ.ವಿ.ಗಳು ಅಥವಾ ಬೇರೆ ಇನ್ನೇನ್ನಾದರೂ ಇದೆಯೇ?

**ಡಾ|| ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಮಾನ್ಯ ರೇವಣ್ಣನವರು ಮೂರು ಟಿ.ವಿ.ಗಳೆಂದು ಒಪ್ಪಿಕೊಂಡಿದ್ದಾರೆ ಹಾಗೂ ಇದನ್ನು ನಾನೂ ಸಹ ಸ್ಪಷ್ಟೀಕರಿಸುತ್ತೇನೆ. ಹೀಗಾಗಿ ಇವತ್ತಿನ ದಿವಸ ಇದಕ್ಕೆ ಏನಾದರೊಂದು ಕಾಯಕಲ್ಪವನ್ನು ಮಾಡುವಂತಹ ಅಗತ್ಯತೆ ಇದೆ. ಮಾನ್ಯ ಉಗ್ರಪ್ಪನವರು ಲೆಕ್ಕ ಹಾಕಿ ಸಾವಿರಾರು ಕೋಟಿ ರೂಪಾಯಿಗಳಾಗುತ್ತವೆಂದು ಹೇಳಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳಷ್ಟು ವ್ಯವಹಾರಗಳಾಗುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ತೆರಿಗೆ ಬರುತ್ತಿಲ್ಲ. ಯಾವ ರೂಪದಲ್ಲಿಯೂ ಕೂಡ ಇವತ್ತಿನ ದಿವಸ ತೆರಿಗೆ ಸಂಗ್ರಹವಾಗುತ್ತಿಲ್ಲ. ಮಾನ್ಯ ಸದಸ್ಯರು ನಾಲ್ಕೈದು ಸಾವಿರ ಕೋಟಿ ರೂಪಾಯಿಗಳೆಂದು ಲೆಕ್ಕ ಹಾಕಿದ್ದಾರೆ. ಅಂದಾಜು ಐದು ಸಾವಿರ ಕೋಟಿ ರೂಪಾಯಿಗಳ ವ್ಯವಹಾರವಾಗುವಂತಹ ಸಂದರ್ಭಗಳಲ್ಲಿ ರಾಜ್ಯ ಸರ್ಕಾರಕ್ಕೆ ಒಂದು ಪೈಸೆಯೂ ಸಹ ತೆರಿಗೆ ಸಂದಾಯವಾಗುವುದಿಲ್ಲವೆಂದು ಹೇಳಿದರೆ... I think, it needs to be looked into.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(288) 20.03.2017 1.30 MGN-RN

ಡಾ:ಜಿ.ಪರಮೇಶ್ವರ(ಮುಂದುವರೆದುದು ...

ಸನ್ಮಾನ್ಯ ಮುಖ್ಯಮಂತ್ರಿಯವರು ಹಣಕಾಸು ಸಚಿವರಿದ್ದಾರೆ, ಇವತ್ತು ನಮ್ಮ ರಾಜ್ಯ ಸರ್ಕಾರಕ್ಕೆ ಹಣದ ಅಗತ್ಯ ಇದೆ ಎನ್ನುವುದನ್ನು ನಾನೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಖಂಡಿತವಾಗಿಯೂ ಹಣದ ಅಗತ್ಯ ಇದೆ. ಆದರೆ ಇವತ್ತು ಇಂತಹ ಹೆಚ್ಚು ಹಣಕಾಸಿನ ವ್ಯವಹಾರ ಆಗುವಂಥದ್ದು ಕೈಸೋರಿ ಹೋಗುತ್ತಿದೆ ಎಂದರೆ, ಇದಕ್ಕೆ ಕಾಯಕಲ್ಪ ಮಾಡಲೇಬೇಕೆಂದು ಅನಿಸುತ್ತದೆ. ಹಾಗಾಗಿ ಸರ್ಕಾರ ನಮಗೆ within the limitations, ನಮಗೆ ಕೇಂದ್ರ ಸರ್ಕಾರದಿಂದ ಬಂದಿರುವ ಗೈಡ್‌ಲೈನ್ಸ್ ಮತ್ತು ಅಲ್ಲಿರುವಂತಹ ಕಾನೂನಿನ ಅಡಿಯಲ್ಲಿಯೇ ನಾವು ಸಹ ಏನಾದರೊಂದು ಕಾನೂನನ್ನು ರಚನೆ ಮಾಡಬೇಕಾಗುತ್ತದೆ. Or in conformity with the Central Government's orders. ಹಾಗಾಗಿ ರಾಜ್ಯ ಸರ್ಕಾರ ಬರುವಂತಹ ದಿವಸಗಳಲ್ಲಿ ಸಮಗ್ರವಾದಂತಹ ಒಂದು ತನಿಖೆ; ಪರಿಶೀಲನೆ; ಅಧ್ಯಯನ ಮಾಡಿ ಇದಕ್ಕೆ ಸೂಕ್ತವಾದಂತಹ ಒಂದು ಕಾನೂನನ್ನು ತರುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನ್ಯ ಉಗ್ರಪ್ಪನವರು ಯಾರ್‍ಯಾರ ಹಿನ್ನೆಲೆ ಯಾವ ರೀತಿಯಾಗಿದೆ, ಯಾರ್‍ಯಾರು ಸೇರಿಕೊಂಡಿದ್ದಾರೆ, ಸಮಾಜಘಾತುಕ ಶಕ್ತಿಗಳು ಕೂಡ ಈ ಕೇಬಲ್ ನೆಟ್‌ವರ್ಕಿಂಗ್ ಸಿಸ್ಟಮ್‌ನಲ್ಲಿ ಸೇರಿಬಿಟ್ಟಿದ್ದಾರೆ ಎನ್ನುವ ಮಾತನ್ನೇನು ತಿಳಿಸಿದ್ದಾರೆ, ಇದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದು ನಮಗೆ ಯಾರಿಗೂ ಗೊತ್ತಿಲ್ಲ ಎಂದೇನೂ ಅಲ್ಲ; ವಾಸ್ತವಿಕವಾಗಿ ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಮಾನ್ಯ ರಾಮಚಂದ್ರಗೌಡರು ತಿಳಿಸಿರುವಂತೆ ಈ ಕೇಬಲ್ ನೆಟ್‌ವರ್ಕ್ ಎನ್ನುವುದೇನಿದೆ, it's a nuisance. ಇದರಿಂದಾಗಿ ಸಮಾಜದಲ್ಲಿ ಜನರಿಗೆ ಬಹಳ ತೊಂದರೆಯಾಗುತ್ತಿದೆ ಎಂಬುದನ್ನು ತಾವೆಲ್ಲಾ ಏನು ಹೇಳಿದ್ದೀರಿ, ಆ ಹಿನ್ನೆಲೆಯಲ್ಲಿ ನಾವು ರಾಜ್ಯ ಸರ್ಕಾರದಿಂದ ಒಂದು ಸಮಗ್ರವಾದ ಕಾನೂನನ್ನು ಮುಂದಿನ ದಿನಗಳಲ್ಲಿ ಆದಷ್ಟೂ ಶೀಘ್ರವಾಗಿ ಜಾರಿಗೆ ತರುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಉತ್ತರವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದಕ್ಕೆ ಒಂದು ಕಾನೂನನ್ನು ಜಾರಿಗೆ ತರುವವರೆಗೆ, ಈಗಾಗಲೇ ಕೇಂದ್ರ ಸರ್ಕಾರ ಪ್ರತಿ ತಿಂಗಳು ರೂ.130/- ರಂತೆ ಶುಲ್ಕವನ್ನು ನಿಗದಿಪಡಿಸಿರುವುದಾಗಿ ಏನು ತಿಳಿಸಿದೆ, ಅದನ್ನು ಕಾಯ್ದುಕೊಳ್ಳುವಂತೆ ಸರ್ಕಾರ ನಿರ್ದೇಶನವನ್ನು ನೀಡಬೇಕಾಗುತ್ತದೆ. ಎಲ್ಲ ಜಿಲ್ಲೆಗಳ ಡಿ.ಸಿ.ಗಳಿಗೆ ಈ

ಬಗ್ಗೆ ತಿಳಿಸಿ ಕೇಂದ್ರ ಸರ್ಕಾರ ಏನು ನಿಗದಿಪಡಿಸಿದೆ, ಅದರ ಮೇಲೆ ಒಂದು ರೂಪಾಯಿಗಳಷ್ಟು ಹೆಚ್ಚು ಹಣವನ್ನು ವಸೂಲಿ ಮಾಡುವಂತಿಲ್ಲ. ಆದರೆ ಪ್ರಸ್ತುತ ರೂ. 130/- ರ ಜೊತೆಗೆ ತೆರಿಗೆ ಎಂದು ಹಣವನ್ನು ವಸೂಲಿ ಮಾಡಲಾಗುತ್ತಿದೆ. ಸರ್ಕಾರ ಇದಕ್ಕೆ ಒಂದು ಕಾಯಿದೆಯನ್ನು ಜಾರಿಗೆ ತರಲು ಸುಮಾರು ಒಂದು ವರ್ಷವಾಗುತ್ತದೆ. ಅಲ್ಲಿಯವರೆಗೆ ದಯವಿಟ್ಟು ಸರ್ಕಾರ ಪ್ರತಿ ತಿಂಗಳು ರೂ.130/- ರ ಜೊತೆಗೆ ತೆರಿಗೆ ಎಂದು ಏನಿದೆ, ಅದನ್ನು ಬಿಟ್ಟು ಇನ್ನು ಯಾವುದೇ ಹಣವನ್ನು ಕಲೆಕ್ಟ್ ಮಾಡುವಂತಿಲ್ಲ ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ಕೊಡಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ರೂ.130/- ರ ಜೊತೆಗೆ ಟ್ಯಾಕ್ಸ್ ಎಂದಿರುವುದು ಒಂದು ಮನೆಗೆ ಅಲ್ಲವೆ?

**ಶ್ರೀ ಪುಟ್ಟಣ್ಣ:-** ಹೌದು, ಒಂದು ಮನೆಗೆ. ಮಾನ್ಯ ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ Optic Fibre Cable ಹಾಕುವುದಕ್ಕೆ multi-national company ಗಳಿಗೆ ಉಚಿತವಾಗಿ ಅನುಮತಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಉಚಿತವಾಗಿ 2 ಫೈಬರ್‌ಗಳನ್ನು ಬಿಟ್ಟುಕೊಡಬೇಕು ಎಂದು ತಿಳಿಸಲಾಗಿತ್ತು. ಅದನ್ನು ಕ್ಯಾನ್ಸಲ್ ಮಾಡಿರುವುದಾಗಿ ತಿಳಿದುಬಂದಿದೆ. ಇದು ನನಗಿರುವ ಮಾಹಿತಿ. ಮತ್ತೊಂದು ವಿಚಾರವೆಂದರೆ, ಏನು duct ನ್ನು ಹಾಕಿದ್ದಾರೆ ಅದಕ್ಕೆ ಯಾವುದೇ ರೀತಿಯಾದ ಪ್ಲಾನ್ ಇಲ್ಲ. ಬಿ.ಬಿ.ಎಂ.ಪಿ.ಯಿಂದ ಯಾವುದೇ ಪ್ಲಾನ್‌ನ್ನು ತೆಗೆದುಕೊಂಡಿಲ್ಲ. ಅದಕ್ಕಾಗಿ ಅವರಿಂದ ಯಾವುದೇ ಹಣವನ್ನು ಕಟ್ಟಿಸಿಕೊಂಡಿಲ್ಲ. ಎಲ್ಲೆಂದರಲ್ಲಿ ಹಾಕುವುದಕ್ಕೆ ಅವರಿಗೆ ಫ್ರೀ ಆಗಿ ಬಿಟ್ಟಿದ್ದಾರೆ. ಅವರು ಒಂದಕ್ಕೆ ಪರ್ಮಿಷನ್ ಏನು ತೆಗೆದುಕೊಂಡಿರುತ್ತಾರೆ ಅದರಲ್ಲಿ 90 ಕನೆಕ್ಷನ್‌ಗಳಿರುತ್ತವೆ. ಅಪ್ರೂವಲ್ ಇಲ್ಲದೆ, ಪರ್ಮಿಷನ್ ಇಲ್ಲದೆ, ಇಷ್ಟೆಲ್ಲಾ ಏನು ಮಾಡುತ್ತಿದ್ದಾರೆ, ದಯವಿಟ್ಟು ಈ ಕಂಪನಿಗಳಿಗೆ ಕಡಿವಾಣ ಹಾಕಬೇಕಾಗುತ್ತದೆ. ಸರ್ಕಾರ ಇದಕ್ಕಾಗಿ ಒಂದು ಕಾಯಿದೆಯನ್ನು ತರುವುದಾಗಿ ಏನು ತಿಳಿಸಿದೆ, ಕನಿಷ್ಟಪಕ್ಷ ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿರಬಹುದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರಬಹುದು, ಅವರಿಗೂ ಸಹ ಆದಾಯ ಬರುವಂತಹ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ರೂಪಿಸುವುದು ಸೂಕ್ತವಾಗುತ್ತದೆ. ಆದ್ದರಿಂದ ದಯಮಾಡಿ ಒಂದು ಮನೆಗೆ ರೂ. 130/- ಶುಲ್ಕ ಮತ್ತು ತೆರಿಗೆ ಎಂದು ಏನಿದೆ, ಅದನ್ನು ದಾಟದಂತೆ ಅಷ್ಟನ್ನು ಮಾತ್ರ ಸಂಗ್ರಹಿಸುವ ವ್ಯವಸ್ಥೆಯಾಗಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ಕೊಟ್ಟಿರುವುದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಸಹ ಅರ್ಪಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ, ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್, ಬಿಎಂಆರ್‌ಡಿಎ, ನಗರ ಯೋಜನೆ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ಬಿ.ಬಿ.ಎಂ.ಪಿ. ಯಿಂದ ಆ ಚಾರ್ಜ್ ವಸೂಲಿ ಮಾಡುವುದಿಲ್ಲ ಎನ್ನುವಂತಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ನಾವು ಮಾಡುತ್ತಿದ್ದೇವೆ, ನಾನು ಸಹಿತ ಎರಡು-ಮೂರು ಮೀಟಿಂಗ್ ಮಾಡಿ optic fibre cable ಹಾಕುವವರನ್ನು ಕರೆದು ಮಾತನಾಡಿದ್ದೇನೆ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಸಹ ಮೀಟಿಂಗ್ ಮಾಡಿದ್ದಾರೆ, ನಾನು ಮತ್ತು ಇಂಧನ ಸಚಿವರಾದ ಮಾನ್ಯ ಡಿ.ಕೆ.ಶಿವಕುಮಾರ್ ಅವರು ಸಹ ಮೀಟಿಂಗ್ ಮಾಡಿದ್ದೇವೆ. ಇಡೀ ಬೆಂಗಳೂರಿನಲ್ಲಿ ಮರಗಳು, ಮನೆಗಳು, ವಿದ್ಯುತ್ ಕಂಬಗಳು ಈ ರೀತಿ ಎಲ್ಲದರ ಮೇಲೂ ಕೇಬಲ್ ಲೈನ್ ಎಳೆದಿರುವುದರಿಂದ ಅದನ್ನು ನೋಡುವುದಕ್ಕಾಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಅಧಿಕೃತವಾಗಿ ಏನು ಸಂಪರ್ಕ ಇದೆ, ಅದಕ್ಕೆ ಚಾರ್ಜ್ ಪಾವತಿಸುತ್ತಿದ್ದಾರೆ. ಆದರೆ ಅಧಿಕೃತವಾಗಿ ಸಂಪರ್ಕ ಪಡೆದಿರುವುದಕ್ಕಿಂತ ಹೆಚ್ಚಾಗಿ ಅನಧಿಕೃತವಾಗಿ ಸಂಪರ್ಕಗಳನ್ನೇನು ಪಡೆಯಲಾಗಿದೆ, ಇದು ಕಾನೂನುಬಾಹಿರವಾಗಿ ನಡೆಯುತ್ತಿದೆ. ಅಂತಹವರಿಗೆ ಈಗಾಗಲೇ ನಾವು ಕೊನೆಯದಾಗಿ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಏನೇ ಇದ್ದರೂ ನೀವು ಡಿಕ್ಲೇರ್ ಮಾಡಬೇಕೆಂದು ತಿಳಿಸಿದ್ದೇವೆ, ಅವರು ಡಿಕ್ಲೇರ್ ಮಾಡುವುದಾಗಿ ತಿಳಿಸಿದ್ದಾರೆ. ಅನಧಿಕೃತ ಸಂಪರ್ಕ ಎಂದು ಡಿಕ್ಲೇರ್ ಮಾಡಿದ ನಂತರ ಆ ಸಂಪರ್ಕಗಳನ್ನೆಲ್ಲಾ ಸ್ಥಗಿತಗೊಳಿಸುವ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದೇವೆ. ಅಂತಹ ಸಂಪರ್ಕಗಳನ್ನೆಲ್ಲಾ ಸ್ಥಗಿತಗೊಳಿಸಬೇಕಾಗುತ್ತದೆ. ಅಲ್ಲದೆ ಹೊಸ ರಸ್ತೆಗಳಲ್ಲಿ ಈ ಕೇಬಲ್‌ಗಳನ್ನು ಹಾಕಬಾರದು ಎನ್ನುವಂತಹ ವಿಚಾರವನ್ನು ಸಹ ತಿಳಿಸಿದ್ದೇವೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಸ್ಥಳೀಯರನ್ನು ಉಪಯೋಗಿಸಿಕೊಂಡು ರಾತ್ರೋರಾತ್ರಿ ಕೇಬಲ್‌ಗಳನ್ನೆಲ್ಲಾ ಏನು ಎಳೆಯಲಾಗುತ್ತದೆ ಅದನ್ನೆಲ್ಲಾ ನಿಲ್ಲಿಸಬೇಕೆಂದು ತಿಳಿಸಿದ್ದು, ಅದರ ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇಲ್ಲಿರುವ ಒಂದು legal point ಎಂದರೆ, ಕೇಂದ್ರ ಸರ್ಕಾರದ ಕಾಯಿದೆ, 1995 ಏನಿದೆ, ಅದರಲ್ಲಿ ಒಂದು ಪ್ರಾವಿಜನ್ ಇದೆ. ಅದರ ಪ್ರಕಾರ ರಾಜ್ಯ ಸರ್ಕಾರ ಕಾನೂನು ಮಾಡುವುದಕ್ಕೆ Section.2(gi), ಇದರಲ್ಲಿ ಪ್ರಾವಿಜನ್ ಇದೆ. By invoking that provision, we can have legislation. ಇದನ್ನು ಸರ್ಕಾರ ಮಾಡಬೇಕಾಗುತ್ತದೆ. ಏಕೆಂದರೆ ಕೇಂದ್ರ ಸರ್ಕಾರದ ಕಾಯಿದೆ 1995ರಿಂದ ಇದೆ, ಆ ಕಾಯಿದೆ ಜಾರಿಗೆ ಬಂದು ಈಗಾಗಲೇ ಸುಮಾರು 20 ರಿಂದ 25 ವರ್ಷಗಳಾಗಿವೆ. ದಯಮಾಡಿ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೃಷ್ಟಿಕೋನದಲ್ಲಿ ಸರ್ಕಾರ ಯೋಚನೆ ಮಾಡಬೇಕು. ಇನ್ನು ಎರಡನೆಯ ವಿಚಾರವೆಂದರೆ, ಈಗಾಗಲೇ ಪ್ರತಿ ತಿಂಗಳಿಗೆ ರೂ. 130/- ಮತ್ತು ತೆರಿಗೆ ಎಂದು ದರವನ್ನು ನಿಗದಿಪಡಿಸಲಾಗಿದೆಯಾದರೂ, ಕೆಲವರು ಅದರ ಎರಡು ಪಟ್ಟು – ಮೂರು ಪಟ್ಟು ದರವನ್ನೇನು ವಸೂಲು ಮಾಡುತ್ತಿದ್ದಾರೆ, ಅವರ ಮೇಲೆ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಕ್ಕೆ squad ಅನ್ನು ಕ್ರಿಯೇಟ್ ಮಾಡುವುದು ಸೂಕ್ತವಾಗಿದ್ದು, ಆ ದಿಕ್ಕಿನಲ್ಲಿ ಸರ್ಕಾರ ಯೋಜನೆ ಮಾಡಬೇಕೆಂದು ವಿನಂತಿಸುತ್ತೇನೆ.

**ಡಾ||ಜಿ.ಪರಮೇಶ್ವರ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ಮತ್ತು ಇನ್ನಿತರೆ ಸದಸ್ಯರು ಪ್ರಸ್ತಾಪಿಸಿರುವಂತೆ ಕೇಂದ್ರ ಸರ್ಕಾರ ಈ ದರವನ್ನೇನು ನಿಗದಿ ಪಡಿಸಿದೆ, ಅದಕ್ಕಿಂತ ಹೆಚ್ಚು ದರವನ್ನು ವಸೂಲಿ ಮಾಡಲಾಗುತ್ತಿದೆ ಎಂದು ಏನು ಹೇಳಲಾಗಿದೆ, ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ ನಾವು ರಾಜ್ಯ ಸರ್ಕಾರದಿಂದ ರಾಜ್ಯದ ಸಮಿತಿಗಳಿಗೆ ಮತ್ತು ಜಿಲ್ಲಾ ಸಮಿತಿಗಳಿಗೆ ಅವರು Regulatory Authority ಯನ್ನು ಆ ಸಮಿತಿಗಳಿಗೆ ಕೊಡಲಾಗಿದೆ. ಹಾಗಾಗಿ ಅವರಿಗೆ ಸೂಚನೆ ಕೊಡುತ್ತೇವೆ, ಕೇಂದ್ರ ಸರ್ಕಾರ ಏನು ದರವನ್ನು ನಿಗದಿಪಡಿಸಿದೆ ಅದಕ್ಕಿಂತ ಹೆಚ್ಚಿನ ದರವನ್ನು ಯಾವುದೇ ಕಾರಣಕ್ಕೂ ತೆಗೆದುಕೊಳ್ಳಬಾರದು, ಅದನ್ನು ನಿಯಂತ್ರಣ ಮಾಡಬೇಕು ಎಂದು ಅವರಿಗೆ ಸೂಚನೆ ಕೊಡುತ್ತೇವೆ. ಇನ್ನು ಎರಡನೆಯದಾಗಿ ಮಾನ್ಯ ಸದಸ್ಯರು ಎರಡು ಕೇಬಲ್‌ಗಳನ್ನು ಮೊದಲು Optical Fibre Cable ರಲ್ಲಿ ಕೊಡಬೇಕು ಎಂದು ಏನು ತೀರ್ಮಾನವಾಗಿತ್ತು, ಅದನ್ನು ನಿಲ್ಲಿಸಿದ್ದಾರೆ ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ಅದನ್ನು ಕೂಡ we will examine and if possible we will see how best the State Government can use those two lines. ಅದನ್ನು ಕೂಡ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6. <u>ನಿಯಮ 330ರ ಮೇರೆಗೆ</u>**

**"ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಜೀವಂತ ಕೆರೆಗಳು, ರಾಸಾಯನಿಕ ಹಾಗೂ ಕೈಗಾರಿಕಾ ತ್ಯಾಜ್ಯ ವಸ್ತುಗಳಿಂದ ಮಲಿನಗೊಂಡು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ."**

– – –

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದಿಸುತ್ತಾ, ಮೊನ್ನೆ ಗುರುವಾರ ಈ ಸಮಸ್ಯೆಯನ್ನು ನಾನು ಪ್ರಶ್ನೆಯೊಂದರ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆ. ನಿಯಮ 330ರ ಅಡಿಯಲ್ಲಿ ಈ ವಿಚಾರದ ಬಗ್ಗೆ ಚರ್ಚಿಸಲು ಬಯಸುವುದಕ್ಕೆ ಕಾರಣವೆಂದರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರವಾಗಿಯೇ ಬಿ.ಎಂ.ಪಿ. ವಶದಲ್ಲಿ 120 ಕೆರೆಗಳು, ಬಿ.ಬಿ.ಎಂ.ಪಿ. ವಶದಲ್ಲಿ 90 ಕೆರೆಗಳೇನಿವೆ, ಈ ಜಲಮೂಲಗಳಿಗೆ ಬೆಂಗಳೂರಿನ ಎಲ್ಲ ಕಲ್ಮಶ ಮತ್ತು ಕೊಳಚೆ ನೀರು ತುಂಬಿಕೊಳ್ಳುತ್ತಿವೆ. ಈಗಾಗಲೇ ಸುಮಾರು 161 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯಾದರೂ, ಕೊಳಚೆ ನೀರು ಪ್ರತಿ ದಿವಸ ಈ ಕೆರೆಗಳಿಗೆ ಹರಿದುಬರುತ್ತಿರುವುದರಿಂದ ಎಷ್ಟೇ ಹಣವನ್ನು ಖರ್ಚು ಮಾಡಿದರು ಸಹ ಈ ಕೆರೆಗಳನ್ನು ಸರಿಪಡಿಸುವುದಕ್ಕಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಪರಿಸ್ಥಿತಿ ಯಾವ ರೀತಿಯಾಗಿದೆ ಎಂದರೆ, ಮಳೆಯಲ್ಲಿ ನೆನೆಯುತ್ತಾ ಮೈ ಒರೆಸಿಕೊಳ್ಳುತ್ತಿದ್ದರೆ ಹೇಗಿರುತ್ತದೆಯೋ ಹಾಗಾಗಿದೆ.

(ಮುಂದುವರೆದಿದೆ...

(289) 20.03.2017 01.40 SV-VK

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಾಮಚಂದ್ರಗೌಡ(ಮುಂದು):-**

ಮಳೆ ಬರುತ್ತಲೇ ಇರುತ್ತದೆ, ಮೈಯನ್ನು ಒರೆಸಿಕೊಳ್ಳುತ್ತಲೇ ಇರುತ್ತಾರೆ. ಆದ್ದರಿಂದ ಮೈಯನ್ನು ಒರೆಸಿಕೊಳ್ಳುವುದಕ್ಕೂ ಆಗುವುದಿಲ್ಲ, ಆ ಮಳೆಯನ್ನು ಬಿಟ್ಟು ಹೊರಗಡೆ ಬರುವುದಕ್ಕೂ ಆಗುವುದಿಲ್ಲ. ಕೆರೆಗೆ ಬಂದು ಸೇರತಕ್ಕಂತಹ ಕೊಳಚೆ ನೀರನ್ನು ತಡೆಯಬೇಕು. ತಡೆಯದಿದ್ದ ಪಕ್ಷದಲ್ಲಿ ಅದು ಬೇರೆ ಮಾರ್ಗದಲ್ಲಿ ಹೋಗುವಂತಹ ಒಂದು ವ್ಯವಸ್ಥೆಯನ್ನು ಚಿಂತನೆ ಮಾಡಬೇಕು. ಇದು ಬಹಳ ಪ್ರಮುಖವಾದಂತಹ ವಿಚಾರ. ಉದಾಹರಣೆಗೆ ಕೆಂಪಾಂಬುಧಿ ಕೆರೆ. ಈ ಕೆರೆಯು ನಗರದೊಳಗೇ ಇದೆ. ಆ ಕೆಂಪಾಂಬುಧಿ ಕೆರೆಗೆ ನಗರದ ಎಲ್ಲಾ ಕೊಳಚೆ ನೀರು ಬಂದು ಸೇರುತ್ತದೆ. ಹಾಗೆಯೇ ತಿಪ್ಪಗೊಂಡನಹಳ್ಳಿ ಕೆರೆಯ ಸ್ಥಿತಿ ಇವತ್ತು ಹೇಗಿದೆ ಎಂದರೆ ಅರ್ಕಾವತಿ ನದಿಯ ಎರಡೂ ಬದಿಗಳಲ್ಲಿ ಊರುಗಳು ಬಂದಿವೆ, ಮನೆಗಳನ್ನು ಕಟ್ಟಿರುವುದರಿಂದ ಮನುಷ್ಯನ ಮಲವೆಲ್ಲಾ ಅದರಲ್ಲಿಯೇ ಬರುತ್ತದೆ. ಎಷ್ಟೇ ಮಳೆ ಬಂದು ತಿಪ್ಪಗೊಂಡನಹಳ್ಳಿ ಕೆರೆ ತುಂಬಿದರೂ ಸಹಿತ ಅದು ಇವತ್ತು ಕುಡಿಯುವುದಕ್ಕೆ ಯೋಗ್ಯವಾಗಿರುವುದಿಲ್ಲ. ಆ ಸ್ಥಿತಿಗೆ ಬಂದಿದೆ. ಮಾನ್ಯ ಸಚಿವರು buffer zone ಎಂದು ಹೇಳುತ್ತಿದ್ದಾರೆ. Buffer zone ಎಂದು ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಉದಾಹರಣೆಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಧದಕೋಟಿ ಕೆರೆ (Sankey Tank). Sankey Tank ಗೆ ಎಷ್ಟು excellent buffer zone ಇದೆ ಎಂದರೆ ಒಂದು ಚೂರು ಕೊಳಚೆ ನೀರು ಬಂದು ಅದಕ್ಕೆ ಸೇರುವುದಿಲ್ಲ. ಈ ಕೆರೆಗೆ ಮಳೆನೀರನ್ನು ಬಿಟ್ಟು ಬೇರೆ ಯಾವುದೇ ನೀರು ಬರುವುದಿಲ್ಲ. ಬೆಂಗಳೂರಿನಲ್ಲಿ ಯಾವುದಾದರೊಂದು ಕೆರೆಯನ್ನು ಚೆನ್ನಾಗಿ ನಿರ್ವಹಣೆ ಮಾಡಲಾಗಿದೆ ಎಂದರೆ Sankey Tank. ಅದನ್ನು ಹಿಂದೆ ಗಂಧದಕೋಟಿ ಕೆರೆ ಎಂದು ಕರೆಯಲಾಗುತ್ತಿತ್ತು. ಅಲಸೂರು ಕೆರೆಯನ್ನು ತೆಗೆದುಕೊಂಡರೆ, ಅದರಲ್ಲಿ ಎಷ್ಟು ಕೊಳಚೆ ನೀರು ಬರುತ್ತದೆ, human soil ಬರುತ್ತದೆ ಎಂಬುದು ಭಗವಂತನಿಗೆ ಮಾತ್ರ ಅರ್ಥವಾಗಬೇಕು. ನೀವು ಕೆರೆ ಶುದ್ಧಿ ಮಾಡುತ್ತೇವೆ ಎನ್ನುವ ಕಾರ್ಯಕ್ಕಿಂತ ಮಿಗಿಲಾಗಿ ನೀವು ಮಾಡಬೇಕಾಗಿರುವುದು ಬೆಂಗಳೂರಿನಲ್ಲಿ ಹರಿಯತಕ್ಕಂತಹ ಎಲ್ಲಾ ಮೋರಿಗಳ ಪಕ್ಕದಲ್ಲಿ ಎರಡೂ ಬದಿಗಳಲ್ಲಿ ರಸ್ತೆಯನ್ನು ಮಾಡಿಕೊಳ್ಳಬೇಕು. ಎರಡೂ ಬದಿಯಲ್ಲಿ ರಸ್ತೆಯನ್ನು ಮಾಡಿ ಒಂದೊಂದು ಬದಿಯಲ್ಲಿ ಬರುವಂತಹ ನೀರಿಗೆ ಒಂದೊಂದು ಪ್ರತ್ಯೇಕ ಕಾಲುವೆಯನ್ನು ಮಾಡಬೇಕು. ಅದನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಹೋದರೆ ಮಾತ್ರ ಕೆರೆಗಳು ಬದುಕುತ್ತವೆ. ಬೆಂಗಳೂರು ನಗರದ ಕೋರಮಂಗಲ ಕೆರೆಯೊಂದರಿಂದ ಇಡೀ ಕೋಲಾರ ಜಿಲ್ಲೆಗೆ ನೀರು ಪೂರೈಸಬಹುದು. ಹೊಸಕೋಟೆ ಕೆರೆಗೆ ಎಲೆಮಲ್ಲಪ್ಪನ ಕೆರೆಯಿಂದ ನೀರನ್ನು ಪಂಪ್ ಮಾಡಲಾಗುತ್ತಿದೆ. ಎಲೆಮಲ್ಲಪ್ಪನ ಕೆರೆಗೂ ಸಹ ಸುತ್ತಮುತ್ತಲ ಹಳ್ಳಿಯಿಂದ ಕೊಳಚೆ ನೀರು ಬರುತ್ತಿದೆ. ಇಷ್ಟಾದರೂ ಕೂಡ ಹೊಸಕೋಟೆಯ ಭೂಮಿಯಲ್ಲಿ ನೀರಿಲ್ಲದಿರುವುದರಿಂದ ಎಲೆಮಲ್ಲಪ್ಪನ ಕೆರೆಯಿಂದ ನೀರನ್ನು ಅಲ್ಲಿಗೆ ಕಳುಹಿಸುತ್ತಿರುವುದರಿಂದ ಸ್ವಲ್ಪಮಟ್ಟಿಗೆ ಜಲ ಮೇಲಕ್ಕೆ ಬಂದಿರುತ್ತದೆ. ಈ ರೀತಿ ನಾವು ಮಾಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಈ ರೀತಿಯ ಅನೇಕ ವಿಚಾರಗಳು ಪತ್ರಿಕೆಯಲ್ಲಿ ಬಂದಿವೆ. ಮಾನ್ಯ ಸಚಿವರೂ ಸಹ ಇದನ್ನು ಗಮನಿಸಿರುತ್ತಾರೆ. ಕೋಳಿ ಮಾಂಸ, ಕಸ ಇತ್ಯಾದಿಗಳನ್ನು ಮೋರಿಯೊಳಗೆ ಹಾಕುತ್ತಿದ್ದಾರೆ. ನೀವು ಅಪಾರ್ಟ್‌ಮೆಂಟ್‌ನವರುಗಳಿಗೆ ಕ್ಲೀನ್ ಮಾಡಬೇಕೆಂದು ನೋಟೀಸ್ ಕೊಟ್ಟಿದ್ದೀರಿ. ಅಪಾರ್ಟ್‌ಮೆಂಟ್‌ನವರು ಕ್ಲೀನ್ ಮಾಡಿ ಅದನ್ನು ಎಲ್ಲಿಗೆ ಬಿಡಬೇಕು? ಕಸವನ್ನು ಎಲ್ಲಿಗೆ ಹಾಕುವುದು? ಶ್ರೀ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಮೈಸೂರು ರಸ್ತೆಯಲ್ಲಿ ಹರಿಯುವ ಕೊಳಚೆ ಮೋರಿಯನ್ನು ಶುದ್ಧಗೊಳಿಸಿದ್ದರು. ಈಗ ಪುನಃ ಅದು ಕೆಟ್ಟು ಹೋಗಿದೆ. ನೀರನ್ನು ಶುದ್ಧ ಮಾಡಿ ಬಿಡಲಾಗುತ್ತದೆ. ಆದರೆ ಬಂದಂತಹ ಕಲ್ಮಶವನ್ನು ಎತ್ತಿಕೊಂಡು ಹೋಗುವಂತಹ ವ್ಯವಸ್ಥೆ ಇಲ್ಲ. ಎತ್ತಿಕೊಂಡು ಹೋಗುವಂತಹ ವ್ಯವಸ್ಥೆ ಇದ್ದರೂ ಸಹ ಅದನ್ನು ಎಲ್ಲಿ ಹಾಕಬೇಕು ಎಂದು ಜಾಗವಿಲ್ಲ. ಇವತ್ತು ಬೆಂಗಳೂರಿನ ಪ್ರಮುಖ ಸಮಸ್ಯೆ ಕಸದ ಒಂದು ದೊಡ್ಡ ಹೊರೆ ಮತ್ತು ಕೊಳಚೆಯ ಒಂದು ದೊಡ್ಡ ನೊರೆ. ಕೊಳಚೆ ನೊರೆ ಮತ್ತು ಕಸದ ಗುಡ್ಡೆ ಈ ಎರಡೂ ಬೆಂಗಳೂರಿನವರಿಗೆ ದೊಡ್ಡ ಸಮಸ್ಯೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಳಚೆ ನೀರು ಇವತ್ತು ಜಾಸ್ತಿಯಾಗುತ್ತಿದೆ. Human soil ಪೂರ್ತಿ ಅದರಲ್ಲಿಯೇ ಹೋಗುತ್ತಿದೆ. ವ್ಯವಸ್ಥೆ ಸರಿಯಾಗಿ ಮಾಡುತ್ತಿಲ್ಲ. ವೃಷಭಾವತಿ ನದಿಯಲ್ಲಿಯೂ ಕೂಡ ಇದೇ ರೀತಿ ಆಗಿಬಿಟ್ಟಿದೆ. ಬಹಳ ಮುಖ್ಯವಾಗಿ ಸರ್ಕಾರ ಏನನ್ನು ಅಭಿವೃದ್ಧಿ ಮಾಡುತ್ತದೆಯೋ, ರಸ್ತೆಯನ್ನು ಮಾಡುತ್ತದೆಯೋ, ವಿದ್ಯುತ್ ನೀಡುವುದೋ ನನಗೆ ಗೊತ್ತಿಲ್ಲ. ಕೊಳಚೆ ನೀರು ಕೆರೆಗಳಿಗೆ ಹೋಗದಂತಹ ರೀತಿಯಲ್ಲಿ ಅದಕ್ಕೆಂದೇ ವಿಶೇಷವಾದಂತಹ ಮೋರಿಯನ್ನೋ ಅಥವಾ ಕಾಲುವೆಯನ್ನೋ ಮಾಡಿದ್ದರೆ ಯಶಸ್ವಿಯಾಗುತ್ತದೆ ಎಂದು ನನಗನ್ನಿಸುತ್ತದೆ. ಆದ್ದರಿಂದ ಈ ಬಗ್ಗೆ ಚಿಂತನೆ ಮಾಡಿ ಕೆಲಸ ಮಾಡಬೇಕಾಗುತ್ತದೆ ಎನ್ನುವ ಕಾರಣದಿಂದ ನಿಯಮ 330ರ ಅಡಿಯಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಶ್ರೀ ರಾಮಚಂದ್ರಗೌಡರು ಈಗಾಗಲೇ ಈ ವಿಷಯವನ್ನು ಚುಕ್ಕೆ ಗುರುತಿನ ಪ್ರಶ್ನೆಯಡಿಯಲ್ಲಿ ಕೇಳಿದ್ದು, ಅದಕ್ಕೆ ನಾನು ವಿವರವಾದ ಉತ್ತರವನ್ನು ನೀಡಿರುತ್ತೇನೆ. ಈಗ ನಿಯಮ 330ರ ಅಡಿಯಲ್ಲಿ ಕೂಡ ಸವಿಸ್ತಾರವಾದ ಉತ್ತರವನ್ನು ಕೊಟ್ಟಿರುತ್ತೇನೆ. ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಬಹಳ ದೊಡ್ಡ ಸಮಸ್ಯೆ ಎಂದರೆ ಕೊಳಚೆ ನೀರಿನ ಸಮಸ್ಯೆ. ಇಲ್ಲಿ ಏನಾಗುತ್ತಿದೆಯೆಂದರೆ ಕಾವೇರಿ ನದಿಯಿಂದ 1350 Million Liters per day, ಬೋರ್‌ವೆಲ್‌ನಿಂದ ಸುಮಾರು 400 ಎಂಎಲ್‌ಡಿ ನೀರು ಬೆಂಗಳೂರಿಗೆ ಬರುತ್ತಿದೆ. ಇದರಲ್ಲಿ ಶೇ.20ರಷ್ಟು ನೀರನ್ನು ಮಾತ್ರ ನಾವು ಉಪಯೋಗಿಸುತ್ತೇವೆ. ಬಾಕಿ 80ರಷ್ಟು ಕೊಳಚೆ ನೀರಾಗಿ ಬರುತ್ತದೆ. ಈ ಕೊಳಚೆ ನೀರು ಮಳೆ ನೀರು ಕಾಲುವೆಗೆ ಸೇರಬಾರದು. ಅದಕ್ಕೆಂದೇ ಇರುವ ಪೈಪುಗಳಲ್ಲಿ ಹೋಗಬೇಕು. That is the norms. ಈಗ ನಮ್ಮಲ್ಲಿ ಏನಾಗಿದೆಯೆಂದರೆ ಸುಮಾರು 721 ಎಂ.ಎಲ್.ಡಿ.ದನ್ನು ಮಾಡಲಿಕ್ಕೆ ನಮ್ಮ ಹತ್ತಿರ facilities ಇವೆ. ಇದರೊಟ್ಟಿಗೆ ಮುಂಬರುವ ಜುಲೈನಲ್ಲಿ 150 ಎಂ.ಎಲ್.ಡಿ. STP (Sewage Treatment Plant) ಶುದ್ಧೀಕರಣ ಘಟಕ ಮಾಡುವವರಿದ್ದೇವೆ. ಅದಾದ ಮೇಲೆ 880 ಎಂ.ಎಲ್.ಡಿ. ಸುಮಾರು 336 ಎಂ.ಎಲ್.ಡಿ ಹತ್ತು ಜಾಗದಲ್ಲಿ ಮಾಡಲಿಕ್ಕೆ ಡಿಸೆಂಬರ್ 2017ನಲ್ಲಿ ಆಗುತ್ತದೆ. ಅದಾದ ಮೇಲೆ ನಮ್ಮ ಬಳಿ ಬಾಕಿ ಇರುವುದು 60 ಎಂ.ಎಲ್.ಡಿ. 2018ನಲ್ಲಿ ಪ್ರಾರಂಭವಾಗುತ್ತದೆ. ಅದೇ ರೀತಿಯಲ್ಲಿ ಸುಮಾರು 400 ಎಂ.ಎಲ್.ಡಿ.ಗೆ ಈಗಾಗಲೇ ನಾವು ಟೆಂಡರ್ ಅನ್ನು ಕರೆದಿದ್ದೇವೆ. 2020ರಲ್ಲಿ ಈ ಎಲ್ಲಾ ಎಸ್.ಟಿ.ಪಿ.ಗಳು ಕಾರ್ಯ ನಿರ್ವಹಿಸುವಂತೆ ಒಂದು ಯೋಜನೆಯನ್ನು ಹಾಕಿ ಈಗಾಗಲೇ ಟೆಂಡರ್‌ಗಳನ್ನು ಕರೆದಿದ್ದೇವೆ. 2020ರಲ್ಲಿ ನಮ್ಮಲ್ಲಿರುವ ಕೊಳಚೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರೆಲ್ಲಾ ಶುದ್ಧೀಕರಣಗೊಳ್ಳುತ್ತದೆ. ಅದಾದ ಮೇಲೆ ಕೊಳಚೆ ನೀರು ಶುದ್ಧೀಕರಣ ಘಟಕಕ್ಕೆ ಪೈಪ್‌ಲೈನಿನಲ್ಲಿಯೇ ಹೋಗಬೇಕು. ಅದು storm water drain ನಲ್ಲಿ ಹೋಗಬಾರದು. ಕಾನೂನು ಆ ರೀತಿ ಇದೆ. ಅದೇ ರೀತಿ ಮಾಡುತ್ತೇವೆ. ತಾವು ಹೇಳಿದ ಹಾಗೆ ಕೆಲವು ಕೆರೆಗಳನ್ನು ಈಗಾಗಲೇ ಶುದ್ಧೀಕರಣ ಮಾಡಿದ್ದೇವೆ. ಅದನ್ನು diverse ಮಾಡುವುದಕ್ಕೆ ಕಾಲುವೆ ಸಹಿತ ಮಾಡಿದ್ದೇವೆ. ಬೆಳ್ಳಂದೂರು ಕೆರೆಯದ್ದು ಒಂದು ದೊಡ್ಡ ಪ್ರಶ್ನೆಯಾಗಿದೆ. ಈಗಾಗಲೇ ಒಂದು expert committee ಮಾಡಿ ಆ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಬಹುಶಃ ಆ expert committee ಅವರು ಏನು ಹೇಳುತ್ತಾರೆಂದರೆ preliminary ಆಗಿ ಒಂದನ್ನು short term ಮಾಡಿ ಒಂದನ್ನು long term ಮಾಡಿ ಎಂದು. Short term ಈಗಾಗಲೇ ಅದನ್ನು ವೀಡಿಯೋ ತೆಗೆಯಲಿಕ್ಕೆ ಹೇಳಿದ್ದಾರೆ ಮತ್ತು area tress ಮಾಡುವುದಕ್ಕೆ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ನಾವು ಬಿ.ಡಿ.ಎ.ಯಿಂದ ಟೆಂಡರ್ ಅನ್ನು ಕರೆದಿದ್ದು, ಇನ್ನು ಕೆಲವೇ ದಿನಗಳಲ್ಲಿ ಟೆಂಡರರ್‌ಗೆ ಕೊಡಲಿದ್ದೇವೆ. Long term ಎಂದು ಹೇಳಿದ್ದರೆ ಅದರಲ್ಲಿ ಎಲ್ಲಾ ಎಸ್.ಟಿ.ಪಿ.ಗಳೂ ಸೇರಿ ಕೊಳಚೆ ನೀರು ಕೆರೆ ಒಳಗೆ ಹೋಗದಂತಹ ಕೆಲಸವನ್ನು ಮಾಡುತ್ತೇವೆ. ಶೇ.80ರಷ್ಟು ಈ 2017ನಲ್ಲಿ ಮುಗಿಯುತ್ತದೆ. ಇನ್ನು ಶೇ.20 ಮುಗಿಯಬೇಕಾದರೆ 2020ರವರೆಗೆ ಕಾಯಬೇಕು. ಅದಕ್ಕೆ ಈಗಾಗಲೇ ನಾವು Bangalore Water Supply ಅವರಿಗೆ ಹೇಳಿದ್ದೇವೆ. Diversification of canal ಮಾಡಿ ಎಂದು ಕೇಳಿದ್ದೇವೆ. ಅದರಲ್ಲಿಯೂ ಸಹಿತ wetland technology ಮಾಡಿ ಎಂದು ಹೇಳಿದ್ದೇವೆ. ಅದರ ಮೂಲಕ ಬೆಳ್ಳಂದೂರು ಮತ್ತು ವರ್ತೂರಿಗೆ ಸಂಬಂಧಿಸಿದಂತೆ ಬಾಕಿ ಇರುವ ಶೇ.20ರಷ್ಟು ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ರಾಮಚಂದ್ರಗೌಡರು ಹೇಳಿದ ರೀತಿಯಲ್ಲಿ ರಾಜ್ಯ ಸರ್ಕಾರ minor irrigation ಅವರಿಗೆ 1200 ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಶುದ್ಧೀಕರಣ ಮಾಡಿದ ನೀರನ್ನು ಬೆಂಗಳೂರಿನ ಸುತ್ತಲಿನ ಹೊಸಕೋಟೆ, ಆನೇಕಲ್, ಕೋಲಾರದ ಕೆರೆಗಳಿಗೆ ತುಂಬುವ ಸಲುವಾಗಿ ಕ್ರಮವನ್ನು ಕೈಗೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುತ್ತಿದ್ದೇವೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ಒಂದು ಸಲಹೆಯೇನೆಂದರೆ ಬೆಂಗಳೂರಿನಲ್ಲಿ ಕೊಳಚೆ ನೀರಿನ ಎಷ್ಟು ದೊಡ್ಡ ಮೋರಿಗಳಿವೆ? ಎಂದು point out ಮಾಡಿಕೊಳ್ಳಬೇಕು. ಒಂದು long term plan ಇಟ್ಟುಕೊಳ್ಳಬೇಕು. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಇಂದೇ ಮಾಡಬೇಕೆಂದು ನಾನು ಹೇಳುವುದಿಲ್ಲ. ಒಂದು long term plan ಇಟ್ಟುಕೊಂಡು ಯಾವ ಯಾವ ಮೋರಿಗಳಿಗೆ ಕೊಳಚೆ ನೀರು ಬರುತ್ತದೆ, ಅದನ್ನು ಹೇಗೆ ತಡೆಯಬಹುದು? ಮಾನ್ಯ ಸಚಿವರು ಕೆರೆಗಳನ್ನೇ ತಲೆಯಲ್ಲಿಟ್ಟುಕೊಳ್ಳಬಾರದು. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕಾಲುವೆಗಳು, ಮೋರಿಗಳು ಬೇಕಾದಷ್ಟು ಹರಿಯುತ್ತಿವೆ. ನಾವು ಮಕ್ಕಳಾಗಿದ್ದಾಗ ಶೇಷಾದ್ರಿಪುರದಲ್ಲಿ ಹೋಗುವಂತಹ ಕಾಲುವೆಯೊಳಗೆ ಈಜಾಡುತ್ತಿದ್ದೆವು. ಅಂತಹದರಲ್ಲಿ ಇವತ್ತು ಅಷ್ಟು ಕಸ ಬರುತ್ತಿದೆ. ಎರಡೂ ಮಗ್ಗುಲಲ್ಲಿ ಕಲುಷಿತ ನೀರು ಅದರೊಳಗೆ ಹೋಗದಂತೆ ಒಂದು long term plan ಇಟ್ಟುಕೊಳ್ಳಬೇಕು. 20 ವರ್ಷದ ಪ್ಲಾನ್ ಇಟ್ಟುಕೊಳ್ಳಬೇಕು. ಯಾವ ಯಾವ ಮನೆಗಳನ್ನು ಖಾಲಿ ಮಾಡಿಸಬಹುದು, ಯಾವ ಯಾವ ಮನೆಗಳನ್ನು ಬಿಡಬಹುದು ಎಂದು long term plan ಮಾಡದೆ ಹೋದರೆ Bangalore is going to be a dead city. ಬೆಂಗಳೂರಿನ ಅಭಿವೃದ್ಧಿಗಾಗಿ ಮಾನ್ಯ ಸಚಿವರು ಬಹಳ ಪ್ರಮುಖವಾಗಿ ಮಾಡಬೇಕಾದುದು ಪ್ಲಾನ್ ಮಾಡಿಕೊಳ್ಳುವುದು. Including arkavathy very much near, ಎರಡೂ ಮಗ್ಗುಲೊಳಗೆ ನದಿ ಆದರೆ ಕನಿಷ್ಠ 50 ಅಡಿ, ಮೋರಿಗಳಾದರೆ 25 ಅಡಿಗಳಾದರೂ ಜಾಗ ಬಿಡಬೇಕು.

(...ಮುಂದು)

(290) 20-3-2017/1-50/RC-VK

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ರಾಮಚಂದ್ರಗೌಡ(ಮುಂದು):-**

ಪ್ರತಿಯೊಂದು ಮೋರಿಯ ಎರಡೂ ಬದಿಯಲ್ಲಿಯೂ ಸಹ 25 ಅಡಿ ನೀರು ಬಿಡುವಂತಹ ಪ್ಲಾನ್ ಮಾಡಿದರೆ ಅಂದರೆ ಹೇಗೆ road widening scheme ಮಾಡುತ್ತಾರೆ, ಆ ರೀತಿ ಮಾಡಿ ಇಟ್ಟುಕೊಂಡರೆ ಒಳ್ಳೆಯದಾಗುತ್ತದೆ. ದಯಮಾಡಿ ತಾವು ಇದರ ಬಗ್ಗೆ ಚಿಂತನೆ ಮಾಡಬೇಕು. ಕೇವಲ ಕೆರೆಯನ್ನು ಶುದ್ಧಿ ಮಾಡುತ್ತೇವೆಂದರೆ ಇದು ಆಗದೆ ಇರುವಂತಹ ಕೆಲಸ. ಆ ರೀತಿ ಮಾಡಿದರೆ ಮಳೆಯಲ್ಲಿ ಮೈ ಹೊರೆಸಿಕೊಂಡಂತೆ ಆಗುತ್ತದೆ. ಆದುದರಿಂದ ನೀವು ಮೊದಲು ಮಾಡಬೇಕಾದಂತಹ ಕೆಲಸವೇನೆಂದರೆ, ಒಳಗಡೆ ನೀರು ಹೋದಂತೆ ಇರಲು ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದು long term ವಿಚಾರ. ನಾವು ಕೇವಲ ಕೆರೆ ಶುದ್ಧೀಕರಣ ಮಾಡುವುದಕ್ಕೆ ಮಾತ್ರ priority ಕೊಡುತ್ತಿಲ್ಲ. ಕೊಳಚೆ ನೀರು ಏನು ಬರುತ್ತಿದೆ, ನಮ್ಮ ಲೆಕ್ಕದ ಪ್ರಕಾರ ಸುಮಾರು 1,750 ರಲ್ಲಿ 1,300 ಎಂಎಲ್‌ಡಿ ನೀರು ಪ್ರತೀ ದಿವಸ ಬರುತ್ತಿದೆ. ಆ ನೀರು ವಾಸ್ತವವಾಗಿ ಹೇಳಬೇಕೆಂದರೆ ಮಳೆ ನೀರು ಕಾಲುವೆಯಲ್ಲಿ ಹೋಗಬಾರದು. ಆ ನೀರನ್ನು ಬೇಕಾದರೆ ಶುದ್ಧೀಕರಣ ಮಾಡಿ ಮಳೆ ನೀರು ಕಾಲುವೆಗೆ ಬಿಡಬಹುದು. ಆ ರೀತಿಯಾದಂತಹ ವ್ಯವಸ್ಥೆ ನಾವು ಮಾಡುತ್ತಿದ್ದೇವೆ. ಈಗಾಗಲೇ ನಾನು ಹೇಳಿದಂತೆ ಸುಮಾರು 721 ಎಂಎಲ್‌ಡಿ ನೀರು treat ಆಗುತ್ತಿದೆ. ಸುಮಾರು 1,350 ರಿಂದ 1,400 ಎಂಎಲ್‌ಡಿ ನೀರಿನಲ್ಲಿ ಅರ್ಧದಷ್ಟು ನೀರು treat ಆಗುತ್ತಿದೆ. ಅದಕ್ಕೋಸ್ಕರವಾಗಿಯೇ 150 ಎಂಎಲ್‌ಡಿ ನೀರು ಈ ಜುಲೈ ತಿಂಗಳಿನಲ್ಲಿ STP ಆಗುತ್ತದೆ. ಅದರಲ್ಲಿ 880 ಎಂಎಲ್‌ಡಿ ನೀರು ಶುದ್ಧೀಕರಣ ಆಗುತ್ತದೆ. ಬಾಕಿ ಇರುವಂತಹ 336 ಎಂಎಲ್‌ಡಿಗೆ ಹತ್ತು ಜಾಗದಲ್ಲಿ ಈಗಾಗಲೇ ಕೆಲಸಗಳು ನಡೆಯುತ್ತಿವೆ. ಅದು ಸುಮಾರು ಡಿಸೆಂಬರ್ 2017ಕ್ಕೆ ಆ ಕೆಲಸ ಮುಗಿಯುತ್ತದೆ. ನಂತರ 270 ಎಂಎಲ್‌ಡಿ. In that 60 MLD will be completed by 2018. ಇದೆಲ್ಲವನ್ನೂ ಮಾಡುತ್ತಿದ್ದೇವೆ. ಈಗಾಗಲೇ 2020ನೇ ಸಾಲಿಗೆ ಸಂಪೂರ್ಣವಾಗಿ ಬೆಂಗಳೂರಿನಲ್ಲಿ ಉತ್ಪಾದನೆಯಾಗುವಂತಹ ಎಲ್ಲಾ ಕೊಳಚೆ ನೀರನ್ನೂ treat ಮಾಡಿ ಮಳೆ ಕಾಲುವೆಗೆ ಬಿಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಾನು ಈಗಾಗಲೇ ಹೇಳಿದಂತೆ ಕೆಲವು ಜಾಗದಲ್ಲಿ ಕೆರೆಗಳಿಗೆ diverse ಮಾಡುವುದಕ್ಕೆ ಕಾಲುವೆಗಳನ್ನು ಮಾಡುತ್ತಿದ್ದೇವೆ. ಅಲ್ಲಿಯೂ ಸಹ wetland technology ಉಪಯೋಗಿಸಿ ಅದು ಸ್ವಾಭಾವಿಕವಾಗಿ treat ಆಗುವಂತಹ ಕೆಲಸವನ್ನು ನಾವು ಮಾಡುತ್ತೇವೆ. 2020ನೇ ಸಾಲಿನವರೆಗೂ ನಾವು ಕಾಯುತ್ತಿಲ್ಲ, ಅದಕ್ಕಿಂತ ಮೊದಲು ವರ್ತೂರು ಮತ್ತು ಬೆಳ್ಳಂದೂರು ಕೆರೆಗೂ ಸಹ ಎಲ್ಲಾ ರೀತಿಯಾದಂತಹ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ತಾವು ಹೇಳಿದಂತೆ long term planಗಳನ್ನೇ ಮಾಡಿದ್ದೇವೆ. ಬಹುಶಃ 2020ನೇ ಸಾಲಿಗೆ ನಮ್ಮ ಎಲ್ಲಾ STPಗಳು ಸಹ ಚಾಲನೆಗೆ ಬರುತ್ತದೆ. ಅದು ಆದಮೇಲೆ ಈ ಸಮಸ್ಯೆ ಪರಿಹಾರವಾಗುತ್ತದೆ.

**ಉಪ ಸಭಾಪತಿಯವರು:-** ಧನ್ಯವಾದಗಳು. ಈಗ ನಿಯಮ 330ರ ಚರ್ಚೆ ಮುಕ್ತಾಯಗೊಂಡಿದೆ. ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಗಿದೆ.

(291) 20.03.2017 03.20 LL-GR

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನವು ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು, 3 ಗಂಟೆ 21 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು.)**

## 7. ವಿತ್ತೀಯ ಕಾರ್ಯಕಲಾಪ

## 2017–18ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ

**ಉಪ ಸಭಾಪತಿಯವರು:–** ವಿತ್ತೀಯ ಕಾರ್ಯಕಲಾಪ ಸಂಬಂಧ ಚರ್ಚೆ ಮುಂದುವರೆಯುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ, ಎಲ್ಲಾ ಕ್ಷೇತ್ರದಲ್ಲಿಯೂ ಕೂಡ ಬರೀ ಘೋಷಣೆಗಳನ್ನು ಮಾತ್ರ ಮಾಡಿದ್ದಾರೆಯೇ ವಿನಹಃ ಸಾಧನೆಗಳಿಲ್ಲ. ಒಂದು ರೀತಿಯಲ್ಲಿ ಖುಷಿಯಾಯಿತು. ಕಾಂಗ್ರೆಸ್ ಪಕ್ಷ ಹೊಸದಾಗಿ ಅಧಿಕಾರಕ್ಕೆ ಬಂದಾಗ, ಅಗಸ ಗೋಣಿ ಎತ್ತಿ ಎತ್ತಿ ಒಗೆದ ಎನ್ನುವಂತಹ ಒಂದು ಕಥೆಯಿದೆ. ಆ ರೀತಿ ಆಗಿದೆ. 2013–14ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂತು. ಆ ಸಂದರ್ಭದಲ್ಲಿ ಮಾನ್ಯ ಸಭಾನಾಯಕರೆ, 50 ಸಾವಿರ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಸುಮಾರು 9,25,805ಹೆಕ್ಟೇರ್ ನೀರಾವರಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಮುಂದಿನ 5 ವರ್ಷಗಳಲ್ಲಿ ಪೂರ್ಣಗೊಳಿಸಲು ಒಂದು ಕ್ರಿಯಾ ಯೋಜನೆಯನ್ನು ತಯಾರಿಸಲಾಗುವುದೆಂದು ಹೇಳಿದ್ದರು. 4 ವರ್ಷ ಮುಗಿಯುತ್ತಾ ಬಂತು. 5ವರ್ಷಕ್ಕೆ ಇವರ ಸರ್ಕಾರದ ಗುರಿ 9,25,805 ಹೆಕ್ಟೇರ್‌ಗಳು. ಆ ಪೈಕಿ ಈಗಾಗಲೇ 4ವರ್ಷಗಳು ಮುಗಿಯಿತು. 2013–14ನೇ ಸಾಲಿನಲ್ಲಿ ಕೊಟ್ಟಿದ್ದಂತಹ 9,25,805 ಹೆಕ್ಟೇರ್‌ಗಳಿಗೆ ನೀರಾವರಿಯ ಸೌಲಭ್ಯವನ್ನು ಮಾಡಿಕೊಡುತ್ತೇವೆಂದು ಬಹಳ ಚೆನ್ನಾಗಿ ಈ ವರ್ಷದ ಮಲ್ಟಿ–ಕಲರ್‌ನಲ್ಲಿ ಪ್ರಿಂಟ್ ಆಗಿರುವ ಬಜೆಟ್ ಪುಸ್ತಕದಲ್ಲಿ ಹೇಳುತ್ತಿದ್ದಾರೆ, "ಕಳೆದ 4 ವರ್ಷಗಳಲ್ಲಿ ನೀರಾವರಿ ವಲಯದಿಂದ 6.2 ಲಕ್ಷ ಎಕರೆ ಪ್ರದೇಶಕ್ಕೆ ಮಾತ್ರ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ". ಮಾನ್ಯ ಸಭಾನಾಯಕರು ಗಮನಿಸಬೇಕು. 9,25,805 ಹೆಕ್ಟೇರ್ ಗುರಿ ಇಟ್ಟುಕೊಂಡಂತಹ ಸಂದರ್ಭದಲ್ಲಿ, ಅಷ್ಟು ಹೆಕ್ಟೇರ್‌ಗಳ ಪೈಕಿ ಕೇವಲ 6.2ಲಕ್ಷ ಎಕರೆಗೆ ಮಾತ್ರ ನೀರಾವರಿ ಸೌಲಭ್ಯ ನೀಡಲಾಗಿದೆ. 9,25,805 ಹೆಕ್ಟೇರ್ ನೀರಾವರಿ ಗುರಿ ಸಾಧಿಸುತ್ತೇವೆಂದು ಹೇಳುತ್ತಾರೆ. ಅದನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಹೆಕ್ಟೇರ್ ಮರೆತುಬಿಟ್ಟರು, ಎಕರೆ. 6.2 ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಈ ರೀತಿಯ ಕಾರ್ಯವನ್ನು ಮಾಡುವ ಮೂಲಕ ಸರ್ಕಾರ ಯಾರನ್ನು ಮುಟ್ಠಾಳರನ್ನಾಗಿ ಮಾಡುವುದಕ್ಕೆ ಹೊರಟಿದೆಯೆಂದು ಕೇಳಬಯಸುತ್ತೇನೆ? ರೈತರ ಬದುಕಿನ ಬಗ್ಗೆ ಈ ಸರ್ಕಾರಕ್ಕೆ ಸ್ವಲ್ಪವಾದರೂ ಕಾಳಜಿಯಿದೆಯೇ? ಈ ಮಾತನ್ನು ನಾನು ತುಂಬಾ ನೋವಿನಿಂದ ಹೇಳುತ್ತಿದ್ದೇನೆ. ನನಗೆ ಬಹಳ ಖುಷಿಯಾಯಿತು. ನಾನು ಕೂಡ ನೀರಾವರಿ ಮಂತ್ರಿಯಾಗಿದ್ದೆ. 9,25,805

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಸಾಮರ್ಥ್ಯವನ್ನು ಮಾಡಿ ತೋರಿಸುತ್ತೇವೆಂದು ಸರ್ಕಾರ ಹೇಳಿದಾಗ ಮಾನ್ಯ ಸಿದ್ದರಾಮಯ್ಯನವರಿಗೆ ಶಹಬಾಸ್ ಒಳ್ಳೆಯ ಕೆಲಸ ಮಾಡುತ್ತಾರೆಂದು ಅಂದುಕೊಂಡಿದ್ದೆ. ಆಯವ್ಯಯ ಪುಸ್ತಕವನ್ನು ನಾನು ಓದಿದೆನು. ಓದಿದಂತಹ ಸಂದರ್ಭದಲ್ಲಿ 6.2 ಲಕ್ಷ ಎಕರೆ ಎಂದ ತಕ್ಷಣ ಅದು ಹೆಕ್ಟೇರ್ ಇರಬಹುದೆಂದು ಭಾವಿಸಿ ನಾನು ಬಹಳ ಸಂತೋಷಪಟ್ಟೆನು. ಆದರೆ, ಈ ಸರ್ಕಾರ ಗುರಿ ಇಟ್ಟುಕೊಳ್ಳಬೇಕಾದರೆ ಹೆಕ್ಟೇರ್ ಎಂದು ಹೇಳುತ್ತಾರೆ. ಆದರೆ ಸಾಧನೆ ತೋರಿಸಬೇಕಾದರೆ ಲಕ್ಷ ಎಕರೆ ಸಾಧನೆ ತೋರಿಸುತ್ತಾರೆ. ಈ ರೀತಿ ಮಾಡುವ ಮೂಲಕ ರೈತರನ್ನು ಮೋಸ ಮಾಡುವಂತಹ ಒಂದು ಪ್ರಯತ್ನ ನಡೆಯುತ್ತಿದೆಯಲ್ಲ..? ಇದು ಯಾವ ನ್ಯಾಯ? ನೀರಾವರಿ ಕ್ಷೇತ್ರದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜಿಲ್ಲಾ ಪಂಚಾಯತಿ ಚುನಾವಣಾ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಷಣದಲ್ಲಿಯೂ ಕೂಡ 50 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಕಾವೇರಿ 3ನೇ ಹಂತಕ್ಕೆ ನಾವು ಖರ್ಚು ಮಾಡುತ್ತೇವೆಂದು" ಹೇಳಿದರು. ಕೃಷ್ಣಾ 3ನೇ ಹಂತದ ಯೋಜನೆಯನ್ನು ಜಾರಿಗೆ ತರಬೇಕಾದರೆ ಭೂಸ್ವಾಧೀನ ಮತ್ತು ಪುನರ್‌ವಸತಿ ಕಲ್ಪಿಸುವುದಕ್ಕೆ ಎಷ್ಟು ದುಡ್ಡು ಬೇಕು ಗೊತ್ತೇ?. ಭೂ ಸ್ವಾಧೀನ ಮತ್ತು ಪುನರ್‌ವಸತಿಗೆ ಸುಮಾರು 30 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಈ ಕಾಮಗಾರಿಗಾಗಿ ಕನಿಷ್ಟ ಎಂದರೂ 22 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ, ರೈತರಿಂದ the Karnataka Land Acquisition Act ಪ್ರಕಾರ ಇನ್ನು ಅಧಿಕೃತವಾಗಿ ಭೂಮಿಯನ್ನೇ ಪಡೆದುಕೊಂಡಿರುವುದಿಲ್ಲ. ಜನರಿಗೆ ಮೋಸ ಮಾಡುವುದಕ್ಕೂ ಕೂಡ ಏನಾದರೂ ಒಂದು ಸ್ವಲ್ಪವಾದರೂ ಮಿತಿಯಿರಬೇಕು. ಭೂಮಿಯನ್ನೇ ತೆಗೆದುಕೊಂಡಿರುವುದಿಲ್ಲ. ಆದರೆ, ಅನಧಿಕೃತವಾಗಿ ಆ ಗುತ್ತಿಗೆದಾರರು ದಾದಾಗಿರಿ ಮಾಡುತ್ತಿದ್ದಾರೆ. ಬಡ ರೈತರು, ಏನೋ ದುಡ್ಡು ಬಂದುಬಿಡುತ್ತದೆ. ನನ್ನ ಭೂಮಿಯನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ. ನನಗೆ ದುಡ್ಡು ಕೊಡುತ್ತಾರೆಂದು ನಿರೀಕ್ಷೆ ಇಟ್ಟುಕೊಂಡಿರುತ್ತಾರೆ. ಅದರ ಬಗ್ಗೆ ಏನು ಮಾಡಿಲ್ಲ. ರೈತರಿಂದ ಭೂಮಿಯನ್ನೇ ತೆಗೆದುಕೊಂಡಿಲ್ಲ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಕ್ಷಣ ಆ ಭೂಮಿಯ ಒಡೆಯ ಯಾರಿದ್ದಾರೆ? ಅಂದರೆ, ರೈತರು, ಬಡವರು ಅವರ ಭೂಮಿಯನ್ನು ವಶ ಮಾಡಿಕೊಳ್ಳುವುದಕೋಸ್ಕರ ಆ ಕಾಯ್ದೆ ಪ್ರಕಾರ ಮಾಡಿ, ಆ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತಂದು ಅವರಿಗೆ ಏನು ದುಡ್ಡು ಕೊಡಬೇಕೋ, ಆ ದುಡ್ಡನ್ನು ಕೊಡಿ. ಅವರಿಗೆ ಆ ದುಡ್ಡನ್ನು ಕೊಡುವುದಕ್ಕೆ 30 ಸಾವಿರ ಕೋಟಿ ರೂಪಾಯಿಗಳು ಬೇಕು. ಇನ್ನು ಕಾಮಗಾರಿಗಾಗಿ 20 ಸಾವಿರ ಕೋಟಿ ರೂಪಾಯಿಗಳು ಬೇಕು. ಇಷ್ಟೊಂದು ಮೊತ್ತದ ದುಡ್ಡನ್ನು ಎಲ್ಲಿಂದ ತರುತ್ತಾರೆ? ಏಕೆಂದರೆ, ನೀರಾವರಿಗೆ ಎಷ್ಟು ದುಡ್ಡು ಸರ್ಕಾರಕ್ಕೆ ಬೇಕು ಎನ್ನುವ ಯೋಚನೆಯನ್ನು ಮಾಡಿಲ್ಲ. ಒಟ್ಟಾರೆ 2017-18ನೇ ಸಾಲಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾವರಿ ಯೋಜನೆಗಳಿಗೆ 15,929ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಇವರೇ ಹೇಳುತ್ತಿರುವ ಪ್ರಕಾರ ಈಗಾಗಲೇ 2017–18ನೇ ಸಾಲಿನಲ್ಲಿ 6ಸಾವಿರ ಕೋಟಿ ರೂಪಾಯಿಗಳು ಅಂದಾಜು ಮೊತ್ತದಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ. 6 ಸಾವಿರ ಕೋಟಿ ರೂಪಾಯಿಗಳಲ್ಲಿ ಯೋಜನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸಂತೋಷ. ಆಮೇಲೆ 2017–18ನೇ ಸಾಲಿನಲ್ಲಿ ಮತ್ತೆ ಹೊಸದಾಗಿ ಈ ಕೆಳಕಂಡ ಕಾಮಗಾರಿಗಳನ್ನು ಅಂದಾಜು ಮೊತ್ತ 3 ಸಾವಿರ ಕೋಟಿ ರೂಪಾಯಿಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆಯೆಂದು ಹೇಳಿದ್ದಾರೆ. ಅರ್ಧಕ್ಕೆ ನಿಂತಿರುವ ಯೋಜನೆಗಳಿಗೆ ಸುಮಾರು 6 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಈಗ ತೆಗೆದುಕೊಳ್ಳುತ್ತಿರುವುದಕ್ಕೆ 3 ಸಾವಿರ ಕೋಟಿ ರೂಪಾಯಿಗಳು. ಓ.ಕೆ., ಒಟ್ಟು 9 ಸಾವಿರ ಕೋಟಿ ರೂಪಾಯಿಗಳು. ಆದರೆ, ಇಟ್ಟುಕೊಂಡಿರುವುದೆಷ್ಟು 15,929 ಕೋಟಿ ರೂಪಾಯಿಗಳಲ್ಲಿ 9 ಸಾವಿರ ಕೋಟಿ ರೂಪಾಯಿಗಳು ಇದಕ್ಕೆ ಹೋದರೆ, ಉಳಿದ ಯೋಜನೆಗಳಿಗೆ ಏನು ಮಾಡುತ್ತೀರಿ? ಕಡಿಮೆ ಬೀಳುವ ಹಣವನ್ನು ಸರಿದೂಗಿಸಲು ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ತಿಳಿಸಬೇಕು. ಕೃಷ್ಣಾ 3ನೇ ಹಂತಕ್ಕೆ ಏನು ಮಾಡುತ್ತೀರಿ? ಇದಲ್ಲದೇ ಯುಕೆಪಿ(ಭದ್ರಾ ಮೇಲ್ದಂಡೆ ಯೋಜನೆ)ಗೆ ಏನು ಮಾಡುತ್ತೀರಿ? ಭದ್ರಾ ಮೇಲ್ದಂಡೆ ಯೋಜನೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಚಿತ್ರದುರ್ಗಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಏನು ಅವರ ಘೋಷಣೆಗಳನ್ನು ಕೇಳಿದರೆ, ರೈತರ ಜಮೀನಿಗೆ ನೀರು ಹರಿದುಹೋಗುತ್ತದೆಯೇನೋ? ಅವರು ತಮ್ಮ ಜಮೀನಿನಲ್ಲಿ ಬೆಳೆದಂತಹ ಪೈರುಗಳನ್ನು ಇವತ್ತು ಅಥವಾ ನಾಳೆ ಕೊಚ್ಚಿಕೊಂಡು ಹೋಗುತ್ತದೆಯೇನೋ ಎನ್ನುವಂತಹ ರೀತಿಯಲ್ಲಿ ಆಶ್ವಾಸನೆಗಳನ್ನು ಕೊಡುತ್ತಾರೆ.

(ಮುಂದು...)

(292)/20-3-2017/ಎಲ್‌ಎಂ/ಜಿಆರ್/3-30

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):–** ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದೆಯೇ, ಹಾಲಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದೆಯೇ ಅಥವಾ ದುಡ್ಡಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದೆಯೇ ಒಂದು ಗೊತ್ತಿಲ್ಲ. ಇವರ ಹತ್ತಿರ ಉಳಿಯುವುದು 7000 ಕೋಟಿ ರೂ.ಗಳು ಮಾತ್ರ. 3000 ಕೋಟಿ ರೂ.ಗಳು ಯುಕೆಪಿಯ ಭೂಸ್ವಾಧೀನಕ್ಕೆ ಹಣ ಬೇಕು. ನೀವೇ ಆಶ್ವಾಸನೆ ಕೊಟ್ಟಿರುವ ಪ್ರಕಾರ 5 ವರ್ಷಕ್ಕೆ 20000 ಕೋಟಿ ರೂ.ಗಳು ಕಾಮಗಾರಿಗೆ ಬೇಕು. ಅಪರ ಭದ್ರಾಕ್ಕೆ ಏನು ಮಾಡುತ್ತೀರಿ? ಮಹದಾಯಿ ಕುಡಿಯುವ ನೀರಿಗಾಗಿ ಏನು ಮಾಡುತ್ತೀರಿ. ಮಹದಾಯಿ ಬಗ್ಗೆ ಚರ್ಚೆ ನಡೆಯುತ್ತಿದೆ. ಯಾವುದೇ ಗೊತ್ತು ಗುರಿ ಇಲ್ಲದೆ ನೀರಾವರಿ ಬಗ್ಗೆ ಘೋಷಣೆ ಮಾಡಿಕೊಂಡು ಇಡೀ ಕರ್ನಾಟಕ ರಾಜ್ಯದ ರೈತರಿಗೆ ಮೋಸ ಮಾಡಿರುವಂತಹ ಮೊದಲನೆಯ ಸರ್ಕಾರ ಇದು ಎಂದು ಬಹಳ ನೊಂದು ಹೇಳುತ್ತೇನೆ. ಅಂಕಿ–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಶಗಳ ಸಮೇತ ಹೇಳುತ್ತಿದ್ದೇನೆ. ಗುರಿ ಹೆಕ್ಟೇರ್‌ನಲ್ಲಿ ಹೇಳುವುದು, ಸಾಧನೆ ಎಕರೆಯಲ್ಲಿ ಹೇಳುವುದು. ಸ್ವಾತಂತ್ರ ಬಂದಾಗಿನಿಂದ ಇವತ್ತಿನವರೆಗಿನ ಎಲ್ಲಾ ಪುಸ್ತಕಗಳನ್ನು ನಾನು ತೆಗೆದು ನೋಡಿದೆ, ಯಾವುದೇ ಸರ್ಕಾರದವರು ಅಧಿಕಾರದಲ್ಲಿ ಇರಲಿ ಗುರಿ ಹೆಕ್ಟೇರ್‌ನಲ್ಲಿ ಇಟ್ಟುಕೊಂಡಿದ್ದರೆ ಸಾಧನೆಯನ್ನು ಹೆಕ್ಟೇರ್‌ನಲ್ಲಿಯೇ ತೋರಿಸಿದ್ದಾರೆ. ಎಕರೆಯಲ್ಲಿ ಇಟ್ಟುಕೊಂಡುಕೊಂಡಿದ್ದರೆ ಎಕರೆಯಲ್ಲಿಯೇ ಸಾಧನೆಯನ್ನು ತೋರಿಸಿದ್ದಾರೆ. ಹೆಕ್ಟೇರ್‌ನಲ್ಲಿ ಗುರಿ ಇಟ್ಟುಕೊಂಡು ಎಕರೆಯಲ್ಲಿ ಸಾಧನೆಯನ್ನು ತೋರಿಸಿರುವ ಮೊದಲನೆಯ ಬುದ್ಧಿವಂತ ಸರ್ಕಾರ ಇದು. ನಾಲ್ಕು ವರ್ಷಗಳಲ್ಲಿ 20% ಸಾಧನೆ ಮಾಡಿದ್ದಾರೆ ಎಂದರೆ... ನೀರಾವರಿ ಬಗ್ಗೆಯೇ ಇವರಿಗೆ ಆಸಕ್ತಿ ಇಲ್ಲ ಎಂದರೆ ಮತ್ತೆ ಇನ್ನು ಯಾವುದರ ಬಗ್ಗೆ ಇವರಿಗೆ ಆಸಕ್ತಿ ಇದೆ ಎಂದು ಕೇಳಬೇಕಾಗುತ್ತದೆ. ಅನೇಕ ಯೋಜನೆಗಳಿಗೆ ಭೂ ಸ್ವಾಧೀನ ಮಾಡಿಕೊಂಡು ಆ ಭೂ ರೈತರಿಗೆ ಹಣವನ್ನು ಕೊಟ್ಟಿರುವುದಿಲ್ಲ. ನಾನು ಆಲಮಟ್ಟಿಗೆ ಹೋದಾಗ ನೋಡಿದೆ, ನಮ್ಮ ಹಣ ನಮಗೆ ಕೊಡಿ ಎಂದು ಅಲ್ಲಿಯೇ ರೈತರು ಒಂದು ವರ್ಷದಿಂದ ಧರಣಿ ಕುಳಿತ್ತಿದ್ದಾರೆ. ತಾವು ಹೋಗಿ ನೋಡಿರಬಹುದು. ಬೆಳ್ಳುಬ್ಬಿ ಹೀಗೆ ಉಳಿದ ಎಲ್ಲ ಊರಿನಲ್ಲಿ ನಮ್ಮ ನಾಯಕರು ಧರಣಿ ಕುಳಿತ್ತಿದ್ದಾರೆ. ರೈತರಿಗೆ ಇನ್ನು ಹಣ ಕೊಟ್ಟಿರುವುದಿಲ್ಲ. ಅಲ್ಲೇ ಪಕ್ಕದಲ್ಲಿರುವ ಮಾನ್ಯ ಎಂ.ಬಿ.ಪಾಟೀಲ್‌ರವರು ಕೇಳಲು ಹೋಗುವುದಿಲ್ಲ. ಕೇಳಲು ಹೋದರೆ ಹಣ ಕೊಡಬೇಕಾಗುತ್ತದೆ. ಕೊಡಲು ಹಣ ಎಲ್ಲಿದೆ? ಕಾಡಾಕ್ಕೂ ಕೊಡಬೇಕು, ಸಂಬಳ ಕೊಡಬೇಕು, ಆಡಳಿತ ವೆಚ್ಚ ಮಾಡಬೇಕು. ಮಾಡಿರುವ ಸಾಲದ ಮರುಪಾವತಿ ಮಾಡಬೇಕು. ಹಣವನ್ನು ಎಲ್ಲಿಂದ ತರುತ್ತಾರೆ ಇವರು? ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ನೀರಾವರಿ ಸಚಿವರಿಗೆ ಹೇಳುವುದು, ನಿಮಗೆ ಇರುವುದು ಇನ್ನು ಒಂದು ವರ್ಷ. ದಯಮಾಡಿ ನೀರಾವರಿಗೆ ಆದ್ಯತೆಯನ್ನು ಕೊಡಿ. ಸುಮ್ಮ-ಸುಮ್ಮನೆ ಬಹಳ ಘೋಷಣೆಗಳನ್ನು ಮಾಡಿದ್ದೀರಿ. ಘೋಷಣೆ ಮಾಡಿರುವುದರಲ್ಲಿ ಯಾವುದು ಬೇಡ ಎನ್ನಿಸುತ್ತದೆ ಅದನ್ನು ಪಕ್ಕಕೆ ಇಡಿ. ಮೊದಲ ಆದ್ಯತೆ ನೀರಾವರಿಗೆ ಕೊಡಿ. ಇದರಿಂದ ಮುಂದೆ ಜನರು ನಿಮ್ಮನ್ನು ನೆನೆಪಿಸಿಕೊಳ್ಳುತ್ತಾರೆ. ನಾನು ನೀರಾವರಿ ಸಚಿವನಾಗಿದ್ದಾಗ ಇಂದಿನ ಮಾನ್ಯ ನೀರಾವರಿ ಸಚಿವರು ವಿರೋಧ ಪಕ್ಷದಲ್ಲಿದರು. ಆಗ ನಾನು ಬಿಜಾಪುರ ಮತ್ತು ಬಾಗಲಕೋಟೆಗೆ ಹೋದಾಗ ಮಾನ್ಯ ಎಂ.ಬಿ.ಪಾಟೀಲ್‌ರವರು ಧರಣಿ ಕುಳಿತಿದ್ದರು. ಆಗ ನಾನು ಬೇರ ವಿಚಾರಗಳನ್ನು ಪಕ್ಕಕ್ಕೆ ಸರಿಸಿ, ಕೆರೆ ತುಂಬಿಸಲು ಹಣವನ್ನು ಬಿಡುಗಡೆ ಮಾಡಲಾಯಿತು. ಇವತ್ತು ಇಡೀ ಅಖಂಡ ಬಿಜಾಪುರ, ಬಾಗಲಕೋಟೆ ಜನರು ನಮ್ಮ ಕೆರೆಗಳನ್ನು ನೀವು ತುಂಬಿಸಿ ಕುಡಿಯುವ ನೀರನ್ನು ಕೊಟ್ಟಿದ್ದಿರಿ ಎಂದು ನಮ್ಮನ್ನು ನೆನೆಪಿಸಿಕೊಳ್ಳುತ್ತಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದು ಏನೆಂದರೆ, ನೀರಾವರಿಗಾಗಿ ಆದ್ಯತೆಯನ್ನು ಕೊಡಿ. ತಾವು ತುಂಬಾ ಘೋಷಣೆಗಳನ್ನು ಮಾಡಿದ್ದೀರಿ. 6000 ಕೋಟಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.ಗಳಲ್ಲಿ ನಾರಾಯಣಪುರ ಎಡದಂಡೆ ಕಾಲುವೆಗೆ, ಕೆಂಪವಾಡಾ ಏತ ನೀರಾವರಿ ಯೋಜನೆ, ಹಗರಿಬೊಮ್ಮನಳ್ಳಿ, ಸಾಸ್ವೆಹಳ್ಳಿ , ಪಿರಿಯಾಪಟ್ಟಣ, ಕನಕಪುರ ತಾಲ್ಲೂಕಿನ ಗರಳಾಪುರ, ಮದ್ದೂರು ಹೀಗೆ ಉದ್ದಕ್ಕೆ ಪಟ್ಟಿ ಇಟ್ಟುಕೊಂಡಿದ್ದಾರೆ. ಪಟ್ಟಿಗಳನ್ನು ಇಟ್ಟುಕೊಂಡರೆ ಉಪಯೋಗುವಿಲ್ಲ. 9.25 ಸಾವಿರ ಹೆಕ್ಟೇರ್ ಇಟ್ಟುಕೊಂಡ ಹಾಗೆ ಆಗುತ್ತದೆ. ಪಟ್ಟಿ ಬೇಡ ನಮಗೆ. ಒಂದೊಂದು ಯೋಜನೆಗೆ ಒಬ್ಬೊಬ್ಬ ಅಧಿಕಾರಿಯನ್ನು ನೇಮಕ ಮಾಡಿ. ನಿನಗೆ ಈ ವರ್ಷದಲ್ಲಿ ಇಷ್ಟು ಹಣವನ್ನು ಕೊಡುತ್ತೇವೆ, ಈ ಕೆಲಸವನ್ನು ಮುಗಿಸಿ, ನಿಮಗೆ ಬೇಕಾದ ಅಧಿಕಾರಿಗಳನ್ನು ತೆಗೆದುಕೊಂಡು ಇಷ್ಟು ಸಮಯದಲ್ಲಿ ಕೆಲಸ ಮಾಡಿ ಮುಗಿಸಿ ಎಂದು ಹೇಳಿ. ಹೇಗೂ 6000 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಮೂರು ತಿಂಗಳಿಗೆ ಒಮ್ಮೆ ಅಧಿಕಾರಿಗಳನ್ನು ಕೂಡಿಸಿಕೊಂಡು ಏನೇನು ಪ್ರಗತಿ ಮಾಡಿದ್ದಾರೆ, ಎನ್ನುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ಮಾಡಿ. ಈ ಸರ್ಕಾರದಲ್ಲಿ ಏನು ಆಗಿದೆ ಎಂದರೆ, ಅಧಿಕಾರಿಗಳು ಮಂತ್ರಿಗಳ ಹತ್ತಿರ ಯಾವಾಗ ಹೋಗುತ್ತಾರೆ ಎಂದರೆ, ಕೆಲಸ ಬಿಗಿಯಾದ್ದಾಗ, ಅವರು ಇರುವ ಇಲಾಖೆಯಲ್ಲಿ ಗಿಂಬಳ ಬರದೆ ಇದ್ದಾಗ, ಯಾವ ಇಲಾಖೆಗೆ ಹೋದರೆ ಹಣ ಸಿಗುತ್ತದೆ ಅಂತಹ ಇಲಾಖೆಗೆ ಹಾಕಿಸಿಕೊಳ್ಳಲು ಮಂತ್ರಿಗಳ ಹತ್ತಿರ ಹೋಗುತ್ತಾರೆ. ಸಂಬಳ ತೆಗೆದುಕೊಳ್ಳುತ್ತಿದ್ದೇನೆ ಅದಕ್ಕಾದರೂ ರೈತರು ಅವರ ಮಕ್ಕಳು ಉದ್ಧಾರವಾಗುವಂತಹ ಕೆಲಸವನ್ನು ಮಾಡಬೇಕು ಎನ್ನುವ ಪರಿಜ್ಞಾನ ಅನೇಕ ಅಧಿಕಾರಿಗಳಲ್ಲಿ ಇಲ್ಲ. ಪ್ರಾಮಾಣಿಕ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ. ನಾನು ನೀರಾವರಿ ಮಂತ್ರಿಯಾಗಿದ್ದಾಗ 37 ಯೋಜನೆಗಳನ್ನು ಹಾಕಿಕೊಂಡಿದ್ದೆ. ಒಬ್ಬ ಅಧಿಕಾರಿಗೆ ನೀನು ಈ ಒಂದು ಯೋಜನೆಯನ್ನು ಮಾಡಬೇಕು, ಎಷ್ಟು ಸಮಯ ಬೇಕು, ಎಷ್ಟು ಹಣ ಬೇಕು, ಎಷ್ಟು ಸಿಬ್ಬಂದಿ ಬೇಕು ತೆಗೆದುಕೊಂಡು ಕೆಲಸ ಮಾಡಿ ಎಂದು ಎಲ್ಲವನ್ನು ಕೊಡಲಾಯಿತು. ಪ್ರತಿ ತಿಂಗಳು ನಾನು ಕೆಲಸವನ್ನು ನೋಡಲು ಹೋಗುತ್ತಿದೆ. ಸರ್ ಈ ಸಾರಿ ಇಷ್ಟು ಕೆಲಸ ಮಾಡಿದ್ದೇವೆ, ಹೋದ ಸಾರಿ ಇಷ್ಟು ಆಗಿತ್ತು, ಇಷ್ಟು ಹಣವನ್ನು ಕೊಡಲಾಗಿತ್ತು, ಇಷ್ಟು ಖರ್ಚಾಗಿದೆ, ಎಂದು ಅಧಿಕಾರಿಗಳು ವಿವರಿಸಿದ್ದಾಗ ಖುಷಿಯಾಗುತ್ತಿತ್ತು ನನಗೆ. ಆ ಗುತ್ತಿಗೆದಾರ ಸರಿ ಇಲ್ಲ ಅವನನ್ನು blacklist ಮಾಡಿ, ಕ್ರಿಮಿನಲ್ ಕೇಸ್ ಹಾಕಿ ಸರ್ ಎಂದು ಹೇಳುತ್ತಿದ್ದರು. ನಾಲ್ಕು ಜನ ಗುತ್ತಿಗೆದಾರರನ್ನು blacklist ಮಾಡಿ ಕ್ರಿಮಿನಲ್ ಕೇಸ್ ಹಾಕಿದರೆ ಉಳಿದೆ ಗುತ್ತಿಗೆದಾರರು ಹುಷಾರಾಗುತ್ತಾರೆ. ಆದರೆ ಈಗ ಈ ಸರ್ಕಾರದಲ್ಲಿಯ ಯಾವ ಗುತ್ತಿಗೆದಾರರಿಗೂ ಭಯವಿಲ್ಲ. ಆಗಬೇಕಾಗಿರುವ ಕಾಮಗಾರಿಗಳನ್ನು ಮಾಡುವುದಿಲ್ಲ, ಅದಕ್ಕಿಂತ ಮೊದಲು ಮೆಟೀರಿಯಲ್‌ಗಳನ್ನು ಖರೀದಿ ಮಾಡುತ್ತಾರೆ. ಇದರಿಂದ ಅಧಿಕಾರಿಗಳಿಗೂ ಮತ್ತು ಗುತ್ತಿಗೆದಾರರಿಬ್ಬರಿಗೂ ಖುಷಿ. ಎತ್ತಿನ ಹೊಳೆ ಯೋಜನೆಯಲ್ಲಿ ಖರ್ಚಾಗಿರುವ ಹಣವನ್ನು ನೋಡಿದರೆ ನೀರು ಬಂದೆ ಬಿಟ್ಟಿತ್ತೇನೋ ಅಂದುಕೊಳ್ಳಬೇಕು. ಇಲ್ಲಿ ಕಾಮಗಾರಿಯನ್ನು ಮಾಡಲು ಹೋಗಿರುವುದಿಲ್ಲ, ಬೇಕಾದಂತಹ ಮೆಟೀರಿಯಲ್ ಖರೀದಿ ಮಾಡಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟುಬಿಟ್ಟಿದ್ದಾರೆ. ಹೀಗೆ ಮಾಡಿದರೆ ಅಧಿಕಾರಿಗಳಿಗೂ ಕಮಿಶನ್ ಸಿಗುತ್ತದೆ, ಗುತ್ತಿಗೆದಾರರಿಗೂ ಕಮಿಶನ್ ಸಿಗುತ್ತದೆ. ನೀರಾವರಿಗಾಗಿ 6000 ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದೀರಿ. 2017–18ನೇ ಸಾಲಿನಲ್ಲಿ 68,264 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ, 35,000 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣ, 28,000 ಹೆಕ್ಟೇರ್ ಪ್ರದೇಶಕ್ಕೆ ಬಸಿಗಾಲುವೆ ನಿರ್ಮಾಣ ಮತ್ತು 12,500 ಹೆಕ್ಟೇರ್ ಪ್ರದೇಶದ ಸವಳು–ಜವಳು ಭೂಮಿ ಅಭಿವೃದ್ಧಿ ಈ ಎಲ್ಲಾ ಯೋಜನೆಗಳನ್ನು ಇಟ್ಟುಕೊಂಡಿದ್ದೀರಿ ಸಂತೋಷ. ಆದರೆ ತಾವು ಸಾಧನೆಯನ್ನು ಇಟ್ಟುಕೊಂಡಿರುವುದು ಹೆಕ್ಟೇರ್‌ನಲ್ಲಿ, ಆದರೆ ಸಾಧನೆ ಮಾಡಿರುವುದನ್ನು ಎಕರೆಯಲ್ಲಿ ಹೇಳುವುದು. ಏನೇ ಇರಲಿ 6000 ಕೋಟಿರ ರೂ.ಗಳನ್ನು ಇಟ್ಟುಕೊಂಡಿದ್ದಾರೆ. ನೀರಾವರಿ ಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಎಂದರೆ, ಅಧಿಕಾರಿಗಳನ್ನು ಕೂಡಿಸಿಕೊಂಡು ಚರ್ಚೆ ಮಾಡಿ ಅವರಿಗೆ ಟಾರ್ಗೆಟ್ ಕೊಡಿ ಎಂದು ಅವರಿಗೆ ಗುರಿ ಕೊಡದಿದ್ದರೆ ಏನು ಉಪಯೋಗವಿಲ್ಲ. 17 ಯೋಜನೆಗಳನ್ನು ಇಟ್ಟುಕೊಂಡಿದ್ದೀರಿ. ಅದಕ್ಕಾಗಿ 6000 ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದೀರಿ ಇದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ನೀರಾವರಿಗಾಗಿ ಹಣ ಇಡುವುದರಿಂದ ನಮಗೆ ಖುಷಿಯಾಗುತ್ತದೆ. ಆದರೆ 17 ಯೋಜನೆಗಳಲ್ಲಿ 7 ಯೋಜನೆಗಳಾದರೂ ಮುಗಿಯಬೇಕು. ಈ ದಿಕ್ಕಿನಲ್ಲಿ ಗುರಿ ಇಟ್ಟುಕೊಂಡು ಕೆಲಸ ಮಾಡಿಸಿ. ಇದೇ ರೀತಿ ಮುಂದಿನ ಸಾಲಿನಲ್ಲಿ 3000 ಕೋಟಿ ರೂ.ಗಳನ್ನು ಮತ್ತು 14 ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ದಯಮಾಡಿ ಈ ಯೋಜನೆಗಳನ್ನು ಆದಷ್ಟು ಬೇಗ ಅಂದಾಜು, ಯೋಜನೆ ಏನು ಮಾಡಬೇಕು ಮಾಡಿ ಆ ಯೋಜನೆಗಳನ್ನು ಪ್ರಾರಂಭ ಮಾಡುವ ಕಡೆಗೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಒಂಬತ್ತು ಕಾಲು ಸಾವಿರ ಹೆಕ್ಟೇರ್ ನಾವು ಸಾಧನೆ ಮಾಡುತ್ತೇವೆ ಎಂದು ಘೋಷಣೆ ಮಾತ್ರ ಮಾಡಿ ಆರು ಲಕ್ಷ ಎರಡು ಸಾವಿರ ಎಕರೆ ಭೂಮಿಯಲ್ಲಿ ಕೆಲಸ ಮಾಡಲು ಹೊರಟ್ಟಿದ್ದೀರಿ. ಇದನ್ನು ನಾನು ಖಂಡಿಸುತ್ತೇನೆ. ಈ ರೀತಿ ಮೋಸ ಮಾಡುವ ವ್ಯವಸ್ಥೆಯನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಇದರ ಕಡೆಗೆ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮಹದಾಯಿ ಬಗ್ಗೆ ಹೇಳುವುದಾದ್ದರೆ ಕರ್ನಾಟಕ ರಾಜ್ಯದಲ್ಲಿ ಮಹದಾಯಿ ಯೋಜನೆ ಎನ್ನುವುದು ಆಟದ ಗೊಂಬೆಯಾಗಿದೆ. ನೀರು ತರಬೇಕು ಎನ್ನುವ ಮಹದಾಸೆ ಇದ್ದರೆ ಇಷ್ಟೊತ್ತಿಗೆ ಈ ಸಮಸ್ಯೆ ಪರಿಹಾರವಾಗುತ್ತಿತ್ತು. ನಾನು ದೆಹಲಿಗೆ ಹತ್ತಾರು ಬಾರಿ ಹೋಗಿದ್ದೇನೆ. ಮಾನ್ಯ ಸೈಫುದ್ದೀನ್ ಸೋಜ್ ಎನ್ನುವ ಒಬ್ಬರು ಮುಸ್ಲಿಂ ಮಂತ್ರಿಗಳು ಅವರನ್ನು ಇವತ್ತು ನೆನೆಪಿಸಿಕೊಳ್ಳುತ್ತೇನೆ. ಅವರು ಈ ವಿಚಾರವಾಗಿ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದರು. ಗೋವಾ ಸರ್ಕಾರದವರು ಅವತ್ತು ಬರಲಿಲ್ಲ. ಒತ್ತಾಯ ಮಾಡಿ ಕೊನೆಗೆ ಸುಪ್ರೀಮ್ ಕೋರ್ಟ್‌ಗೆ ಹಾಕಿಸಿದರು. ನ್ಯಾಯಾಧೀಕರಣಕ್ಕೆ ಹಾಕಿಸಿದರು. ನಾನು ಇಲ್ಲಿಯ ಕಾಂಗ್ರೆಸ್ ನಾಯಕರಾದ ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರಿಗೆ, ಮಾನ್ಯ ಧರ್ಮಸಿಂಗ್‌ರವರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೆಹಲಿಗೆ ಹೋಗೋಣ ಬನ್ನಿ ಸಾರ್ ಎಂದು ಹೇಳಿದೆ. ಆದರೆ ನಮ್ಮನ್ನು ಬಿಟ್ಟು ಹೋದರು. ತಾವೇ ಹೋಗಿ ಶ್ರೀಮತಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿಕೊಂಡು ಶ್ರೀಮತಿ ಸೋನಿಯಾ ಗಾಂಧಿಯವರು ಮಹದಾಯಿಯಿಂದ ಕರ್ನಾಟಕಕ್ಕೆ ನೀರು ಕೊಡಲು ಒಪ್ಪಿದ್ದಾರೆ ಎಂದು ಹೊರಗೆ ಬಂದು ನಮಗೆ ಹೇಳಿದರು. ಇದರಿಂದ ನಮಗೆ ಸಂತೋಷವಾಯಿತು. ಆದರೆ ಅದೇ ಶ್ರೀಮತಿ ಸೋನಿಯಾ ಗಾಂಧಿಯವರು ಗೋವಾ ಚುನಾವಣೆಗೆ ಹೋಗಿ ಮಹದಾಯಿಯಿಂದ ಕರ್ನಾಟಕಕ್ಕೆ ಒಂದು ಹನಿ ನೀರನ್ನು ಬಿಡುವುದಿಲ್ಲ ಎಂದು ಹೇಳಿದ್ದಾರೆ. ಈ ರೀತಿ ರಾಜಕಾರಣ ಮಾಡಿಕೊಂಡು ಕುಳಿತರೆ ಮಹದಾಯಿ ಸಮಸ್ಯೆ ಪರಿಹಾರವಾಗುವುದಿಲ್ಲ. ನಾನು ಈಗಲೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಎರಡು ಪಕ್ಷಗಳು ಕುಳಿತು ಚರ್ಚೆ ಮಾಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲದಿದ್ದರೆ ಇದು ಪರಿಹಾರವಾಗುವುದಿಲ್ಲ.

(293) YL-MD 20.03.2017 3.40

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):-** ಗೋವಾ ರಾಜ್ಯದವರು ಅಕಸ್ಮಾತ್ ನೀರು ಬಿಟ್ಟರೆ ಕಾಂಗ್ರೆಸ್ ಪಕ್ಷದವರನ್ನು ಬಿಜೆಪಿ ಪಕ್ಷದವರು ನೀರು ಬಿಟ್ಟರೆಂದು ದಾಖಲಾಗಿಟ್ಟುಕೊಳ್ಳುತ್ತಾರೆ. ನೀರು ಬಿಡಲಿಲ್ಲವೆಂದರೆ ಕರ್ನಾಟಕದಲ್ಲಿ ಹೋರಾಟಗಳು ನಡೆಯುತ್ತದೆ. ಗೋವಾದಿಂದ ನೀರು ಬಿಡುವ ಬಗ್ಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲರೂ ಒಟ್ಟಿಗೆ ಕುಳಿತು ಚರ್ಚೆ ಮಾಡಿದರೆ ಏಕೆ ಈ ಸಮಸ್ಯೆ ಪರಿಹಾರವಾಗುವುದಿಲ್ಲವೆಂಬುದನ್ನು ನೋಡೋಣ. ನಾನು ಅದಕ್ಕೋಸ್ಕರ ಈ ಮಹಾದಾಯಿ ವಿಚಾರದಲ್ಲಿ ರಾಜಕೀಯ ಮಾಡದೇ ಪಕ್ಷಾತೀತವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಉತ್ತರ ಕರ್ನಾಟಕಕ್ಕೆ ಪರಿಹಾರ ಮಾಡಬೇಕೆನ್ನುವ ದಿಕ್ಕಿನಲ್ಲಿ ಯೋಜನೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಏಕೆಂದರೆ ನಮ್ಮ ಮುಖ್ಯ ಸಚೇತಕರು ಈಗಾಗಲೇ ಬಹಳ ಸ್ವಲ್ಪ ಸ್ವಲ್ಪ ವಿಚಾರದಲ್ಲಿ ಮಾತನ್ನು ಮುಗಿಸಿ ಎಂದು ಹೇಳಿದ್ದಾರೆ. ತಾವು ಮಹಾದಾಯಿ ಬಗ್ಗೆ ಬೆಂಬಲವನ್ನು ಕೊಟ್ಟಿದ್ದೀರಿ. ನಾನು ಇದನ್ನು ಅಷ್ಟಕ್ಕೆ ನಿಲ್ಲಿಸುತ್ತೇನೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮತ್ತು ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಇದ್ದಿದ್ದರೆ ಕೆಲವು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಚೆನ್ನಾಗಿರುತ್ತಿತ್ತು ಅಂದುಕೊಂಡಿದ್ದೇನೆ.

**ಉಪ ಸಭಾಪತಿಯವರು:-** ನೀವು ನಿಮ್ಮ ಮಾತನ್ನು ಮುಂದುವರೆಸಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ನನ್ನ ಮಾತನ್ನು ಮುಂದುವರೆಸಲೇಬೇಕು. ಬೇರೆ ದಾರಿಯೇ ಇಲ್ಲ. ನೀವು ವಿಧಿಯಿಲ್ಲದೇ ಕುಳಿತುಕೊಂಡು ಕೇಳಲೇಬೇಕು. ಏಕೆಂದರೆ ಸಭಾಪತಿಯವರು ಇಲ್ಲ. ತಾವು ಇನ್ಯಾರನ್ನೋ ಕರೆದು ಸಭಾಪತಿಯವರ ಪೀಠದಲ್ಲಿ ಕೂರಿಸುವುದಕ್ಕಾಗುವುದಿಲ್ಲ. ಹಾಗೆಯೇ ಸಭಾನಾಯಕರ ಹಣೆಬರಹವೂ ಅಷ್ಟೇ. ಯಾರೇ ಎದ್ದು ಹೋದರು ಅವರು ಕೂರಲೇಬೇಕು, ಪತ್ರಕರ್ತರು ಸಂಬಳ ತೆಗೆದುಕೊಳ್ಳಬೇಕೆಂದರೆ ಕೂರಲೇಬೇಕು. ನಮ್ಮ ಮುಖ್ಯ ಸಚೇತಕರ ಕಾಟಕ್ಕೆ ನಮ್ಮ ಶಾಸಕರು ಕೂರಲೇಬೇಕು. ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ, ರಾಜ್ಯ ಹಿತದೃಷ್ಟಿಯಿಂದ ಪ್ರಶ್ನೆ ಇದೆ. ನಾನು ಕುಳಿತಿರತಕ್ಕಂಥ ಎಲ್ಲಾ ಶಾಸಕರನ್ನು ಸಂತೋಷಪಡಿಸುತ್ತೇನೆ ಹಾಗೂ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇಲ್ಲಿ ಇಲ್ಲಿ ಕುಳಿತಿರತಕ್ಕಂಥ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರು ಯಾರ ಕಾಟಕ್ಕೂ ಕುಳಿತಿಲ್ಲ. ಎಲ್ಲರೂ ಸಹ ಆಸಕ್ತಿಯಿಂದ ಬಂದು ಕುಳಿತು ಸದನದಲ್ಲಿ ಭಾಗವಹಿಸಿ ಮಾತನಾಡುತ್ತಾರೆ. ಗೌರವ ತರುವ ರೀತಿಯಲ್ಲಿ ವಿಧಾನ ಪರಿಷತ್ತಿನ ಅಧಿವೇಶನವೂ ನಡೆಯುತ್ತಿದೆ ಎಂದು ನನ್ನಗನಿಸುತ್ತದೆ. ಇದಕ್ಕೆ ನಾನು ಸಂತೋಷಪಡುತ್ತೇನೆ. ಸಚಿವರಿಬ್ಬರೂ ಬಂದ ಮೇಲೆ ಅವರಿಗೆ ಸಂಬಂಧಪಟ್ಟ ವಿಚಾರವನ್ನು ತೆಗೆದುಕೊಳ್ಳಬೇಕೆಂದು ಭಾವಿಸಿದ್ದೇನೆ. ಈಗ ಸಚಿವರುಗಳಿಗೆ ಸಂಬಂಧಪಟ್ಟ ವಿಚಾರವನ್ನು ಬಿಟ್ಟು ಮುಂದೆ ಹೋಗುತ್ತೇನೆ. ಯಾವ ಸಚಿವರಿದ್ದಾರೆ ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ.

**ಉಪ ಸಭಾಪತಿಯವರು:–** ಮಾನ್ಯ ಎ.ಮಂಜುರವರಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಎ.ಮಂಜುರವರಿಗೆ ಸಂಬಂಧಪಟ್ಟಂತೆ ಒಂದೇ ಒಂದು ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. 2014–15ನೇ ಸಾಲಿನ ಬಜೆಟ್‌ನಲ್ಲಿ 100 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗುವುದೆಂದು ಘೋಷಣೆ ಮಾಡಲಾಗಿತ್ತು. ಇದಕ್ಕೂ ಮೊದಲು ಸಚಿವರು ಘೋಷಣೆ ಮಾಡಿರುವುದೇನೆಂದರೆ, 1850 ಪಶು ಆಸ್ಪತ್ರೆಗಳಿದ್ದಾವೆ. ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಪಶು ಆಸ್ಪತ್ರೆ ಎಂದು ಘೋಷಣೆ ಮಾಡಿದ್ದಾರೆ. ಆದರೆ, 6022 ಗ್ರಾಮ ಪಂಚಾಯಿತಿಗಳಿದ್ದಾವೆ. ಮಾನ್ಯ ಸಚಿವರು ಬರುವ ಮೊದಲು 1850 ಪಶು ಆಸ್ಪತ್ರೆಗಳಿತ್ತು. ಆದರೆ, ಮಾನ್ಯ ಸಚಿವರು ಬಂದ ಮೇಲೆ 100 ಪಶು ಆಸ್ಪತ್ರೆಗಳು ಪ್ರಾರಂಭಗೊಂಡಿದೆ. 2014–15ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ಒಂದು ಪಶು ಆಸ್ಪತ್ರೆಯನ್ನು ಕಲ್ಪಿಸುವುದು ಮಾನ್ಯ ಸಚಿವರ ಗುರಿ. 1850 ಪಶು ಆಸ್ಪತ್ರೆಯೂ ಸಚಿವರು ಬರುವ ಮೊದಲು ಪ್ರಾರಂಭಗೊಂಡಿತ್ತು. ಆದರೆ, ಸಚಿವರು ಬಂದ ಮೇಲೆ 100 ಪಶು ಆಸ್ಪತ್ರೆಗಳನ್ನು ಮಾಡಿದ್ದಾರೆ. ಒಟ್ಟಾರೆಯಾಗಿ 2000 ಪಶು ಆಸ್ಪತ್ರೆಗಳೆಂದು ತಿಳಿದುಕೊಳ್ಳಿ. 6022 ಗ್ರಾಮ ಪಂಚಾಯಿತಿಗಳ ಪೈಕಿ, 4000 ಗ್ರಾಮ ಪಂಚಾಯಿತಿಗೆ ನಿಮ್ಮ ಪಶುವೈದ್ಯಕೀಯ ಆಸ್ಪತ್ರೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭಿಸಬೇಕಾಗಿದೆ. ನಾನು ಈ ಮಾತನ್ನು ಮಾನ್ಯ ಸಚಿವರಿಗೆ ಏಕೆ ಹೇಳುತ್ತಿದ್ದೇನೆಂದರೆ, ಅಧಿಕಾರಿಗಳು ಪುಸ್ತಕವನ್ನು ಕೊಟ್ಟಿದ ತಕ್ಷಣ ದಯವಿಟ್ಟು ಮುದ್ರಿಸುವುದಕ್ಕೆ ಕಳುಹಿಸಬೇಡಿ. ನಮ್ಮ ಹತ್ತಿರ ಎಷ್ಟು ಅನುದಾನವಿದೆ. ಎಷ್ಟು ಆಸ್ಪತ್ರೆಗಳನ್ನು ತೆರೆಯಬಹುದು. ಅದಕ್ಕೆ ಎಷ್ಟು ಅಧಿಕಾರಿಗಳಿದ್ದಾರೆ. ಎಷ್ಟರ ಮಟ್ಟಿಗೆ ಇದು ನಮ್ಮ ಕೈಯಲ್ಲಿ ಆಗುತ್ತದೆಯೇ ಎಂದು ವಿಚಾರ ಮಾಡಬೇಕಾಗುತ್ತದೆ.

100 ಪಶು ಆಸ್ಪತ್ರೆಗಳನ್ನು ಮಾಡಬೇಕೆಂದು ಇದ್ದರೆ, 120 ಪಶು ಆಸ್ಪತ್ರೆಗಳನ್ನು ಮಾನ್ಯ ಸಚಿವರು ಮಾಡಲಿ. 150, 200 ಬೇಕಾದರೂ ಹೇಳಲಿ. ಅದನ್ನು ಬಿಟ್ಟು ಮಾನ್ಯ ಸಚಿವರು 6022 ಗ್ರಾಮ ಪಂಚಾಯಿತಿಗಳಿಗೆ 2000 ದಷ್ಟು ಪಶು ಆಸ್ಪತ್ರೆಗಳನ್ನು ಮಾಡಿಕೊಂಡು, 4000 ಗ್ರಾಮ ಪಂಚಾಯಿತಿಗಳಿಗೆ ಪಶು ಆಸ್ಪತ್ರೆಗಳನ್ನು ಮಾಡಲಿಲ್ಲವೆಂದರೆ, ಸರ್ಕಾರಕ್ಕೆ ಗೊತ್ತು ಗುರಿಯೇನಾದರೂ ಇದೆಯೇ ಎಂಬುದನ್ನು ನೀವೇ ಹೇಳಿ ನೋಡೋಣ. ಗೊತ್ತು ಗುರಿಯಿಲ್ಲದೇ ಬಜೆಟ್‌ನಲ್ಲಿ ಏನು ಬೇಕಾದರೂ ಹೇಳಬಹುದು. ಬಜೆಟ್ ಘೋಷಣೆಯಾಗುತ್ತಿದ್ದಂತೆ ಇಷ್ಟೊಂದು ಕಾಮಗಾರಿಗಳನ್ನು ಮಾಡುವುದಕ್ಕೆ ಹೊರಟಿದ್ದಾರೆಂದು ಪತ್ರಿಕೆಗಳಲ್ಲಿ, ಟಿವಿ ಗಳಲ್ಲಿ ಬೊಂಬಾಟ್ ಪ್ರಚಾರವಾಗುತ್ತದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ಪ್ರಚಾರ ಮಾಡುವುದಕ್ಕೋಸ್ಕರ ಬಜೆಟ್ ಘೋಷಣೆಯನ್ನು ಮಾಡಬಾರದು. ಜನ ಸಾಮಾನ್ಯರಿಗೆ ಬಜೆಟ್ ಘೋಷಣೆಯಲ್ಲಿ 10%, 20%, 50% ಆದರೂ ಮುಟ್ಟಿದರೆ ಜನರಿಗೂ ಸಮಾಧಾನವಾಗುತ್ತದೆಂದು ನನ್ನಗನಿಸುತ್ತದೆ. ನಾನು ಇನ್ನುಳಿದ ವಿಚಾರಕ್ಕೆ ಮುಂದೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಹೈದ್ರಾಬಾದ್ – ಕರ್ನಾಟಕ ಅಭಿವೃದ್ಧಿಗಾಗಿ "ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರಾದೇಶಿಕ ಅಸಮತೋಲನಗಳ ಅಂತರವನ್ನು ಸರಿಪಡಿಸಲು ಹೈದರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷ ರೂ.1,500 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು." ಎಂದು ಹೇಳಿ ಮಂಡಿಸಿರತಕ್ಕಂಥ ಘೋಷಣೆಯನ್ನು ಕೇಳುವುದಕ್ಕೆ ಬಹಳ ಖುಷಿಯಾಗುತ್ತದೆ. ಘೋಷಣೆಯಾದ ಮೇಲೆ ಏನು ಕೇಳುವುದಕ್ಕೆ ಹೋಗಬಾರದು. ಏಕೆಂದರೆ, 2013–14ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ರೂ.150.00 ಕೋಟಿ. ಆದರೆ, ಬಿಡುಗಡೆಯಾದ ಅನುದಾನ ರೂ. 0.00 ಆಗಿರುತ್ತದೆ.

ಏಕೆಂದರೆ, ಹೈದ್ರಾಬಾದ್ – ಕರ್ನಾಟಕ ಅಭಿವೃದ್ಧಿ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಲೋಕಸಭೆಯಲ್ಲಿ ಸಾಕಷ್ಟು ಮಾತನಾಡುತ್ತಾರೆ. ಸದರಿ ಭಾಗವನ್ನು ನಾವೇ ಅಭಿವೃದ್ಧಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಮಗೂ ಸಂತೋಷವಾಗುತ್ತದೆ. 2014–15ನೇ ಸಾಲಿನ ಬಜೆಟ್‌ನಲ್ಲಿ ರೂ. 862.00 ಕೋಟಿ ಘೋಷಣೆಯಾಗಿದ್ದು, ಬಿಡುಗಡೆಯಾದ ಅನುದಾನ ರೂ.300.00 ಕೋಟಿ. ಅದಕ್ಕಿಂತ ಮಜಾ ಎಂದರೆ ಖರ್ಚಾಗಿದ್ದ ಅನುದಾನ ರೂ.123.00 ಕೋಟಿ. ರೂ.862.00

ಕೋಟಿ ಅನುದಾನ ಎಲ್ಲಿ? ರೂ.123.00 ಕೋಟಿ ಅನುದಾನ ಎಲ್ಲಿ? 2015-16ನೇ ಸಾಲಿನ ಬಜೆಟ್‌ನಲ್ಲಿ ಸದರಿ ಭಾಗಕ್ಕೆ 1000.00 ಕೋಟಿ ಅನುದಾನ ಘೋಷಿಸಲಾಗಿದೆ. ಇದೊಂದು ಭಾಗ್ಯಗಳ ಸರ್ಕಾರವಲ್ಲ, ಘೋಷಣಾ ಸರ್ಕಾರವಾಗಿದೆ. 2015-16ನೇ ಸಾಲಿನಲ್ಲಿ ರೂ.1000.00 ಅನುದಾನ ಘೋಷಣೆಯಾಗಿದ್ದು, ಆದರೆ, ಖರ್ಚಾಗಿದ್ದ ಅನುದಾನ ರೂ.388.00 ಕೋಟಿ. 2016-17ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದು ರೂ.1000.00 ಕೋಟಿ. ಆದರೆ, ಜನವರಿ ಅಂತ್ಯದವರೆಗೂ ರೂ.697.00 ಕೋಟಿ. ಅಂದರೆ, ಇವತ್ತಿನವರೆಗೂ ಒಟ್ಟು ಘೋಷಣೆಯಾದ ಅನುದಾನ ರೂ.3012.00 ಕೋಟಿ. ಬಿಡುಗಡೆಯಾದ ಅನುದಾನ ರೂ.1200.00 ಕೋಟಿ. ಇದಕ್ಕೇನು ಹೇಳಬೇಕು. 50% ಆದರೂ ಬೇಡವೇ? ಆದರೆ, ನೀವುಗಳು ಮಾತನಾಡುವಾಗ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ನಮ್ಮಿಂದಲೇ ಎಂದು ಹೇಳುತ್ತೀರಿ. ಇದು ಸರಿಯಲ್ಲ.

2015-16 ಮತ್ತು 2016-17ನೇ ಸಾಲಿನಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಅನುದಾನ ಘೋಷಣೆ ಮಾಡಿದ್ದರೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಯಾವುದಕ್ಕೂ ನಾವು ಕಡಿಮೆಯಿಲ್ಲವೆಂದು ಈ ವರ್ಷದ ಬಜೆಟ್‌ನಲ್ಲಿ ರೂ.1500.00 ಕೋಟಿ ಅನುದಾನವನ್ನು ಘೋಷಣೆ ಮಾಡಿದ್ದಾರೆ. ನಮ್ಮ ಕೈಯಲ್ಲಿರುವಾಗ ಬರೆಯುವುದಕ್ಕೆ ಏನು ಎಂದು ಈ ರೀತಿ ಘೋಷಣೆ ಮಾಡಿದ್ದಾರೆ. ಇದಕ್ಕೇನ್ನಾದರೂ ಅರ್ಥ ಇದೆಯೇ? ಈ ರೀತಿ ಘೋಷಣೆಯನ್ನು ಮಾತ್ರ ಮಾಡಿಕೊಂಡು ಕುಳಿತರೆ ಸರಿಯಾಗುವುದಿಲ್ಲ. ಬಂದಂತಹ ಅನುದಾನದಲ್ಲಿ 50% ಆದರೂ ಖರ್ಚಾಗುವುದು ಬೇಡವೇ? ಇದರಲ್ಲಿ ಇನ್ನೊಂದು ವಿಶೇಷವೇನೆಂದರೆ ಖರ್ಚು ಮಾಡಬೇಕೆಂದು ಸರ್ಕಾರದವರು ಅನುದಾನವನ್ನು ಕೊಟ್ಟರೂ, ಕೆಲಸ ಮಾಡುವವರ್‍ಯಾರು? ಅನುಚ್ಛೇದ 371(ಜೆ) ರಡಿಯಲ್ಲಿ ಸುಮಾರು ಐವತ್ತು ಸಾವಿರ ಖಾಲಿ ಹುದ್ದೆಗಳನ್ನು 2015ನೇ ಜೂನ್ ತಿಂಗಳಿನೊಳಗಾಗಿ ಭರ್ತಿ ಮಾಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ಇಲ್ಲಿಯೇ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಒಟ್ಟು 9500 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ವಾಸ್ತವವಾಗಿ ಕೇವಲ ಎರಡು ಇಲಾಖೆಗಳಲ್ಲಿ ಕ್ರಮವಾಗಿ 1582 ಹಾಗೂ 432 ಹುದ್ದೆಗಳ ನೇಮಕಾತಿಗಾಗಿ ಆದೇಶ ನೀಡಲಾಗಿದೆ. ಒಂದೆರಡು ಹೆಜ್ಜೆ ಮುಂದೆ ಹೋಗಿ ನೋಡಿದರೆ, ಆ ಪೈಕಿ 2000 ಹುದ್ದೆ ಮಾತ್ರ ಭರ್ತಿಯಾಗಿದೆ. 50000 ಖಾಲಿ ಹುದ್ದೆಗೆ 2000 ಹುದ್ದೆ ಮಾತ್ರ ಭರ್ತಿ ಎಂದರೆ ಹೇಗೆ?

(ಮುಂದು) . . .



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ** (ಮುಂದು):- ಯಾರಿಗೆ ಹೇಳಬೇಕು ನಾವು? ಇಲ್ಲಿ ನಿಂತು ಭಾಷಣ ಮಾಡಬೇಕೆ? ನೀವು ಎರಡು ಗಂಟೆಗೆ ಸದನವನ್ನು ಭೋಜನಕ್ಕೆ ಮುಂದೂಡಿ, ಮತ್ತೆ ಮೂರು ಗಂಟೆಗೆ ಬನ್ನಿ ಎಂದು ಹೇಳುತ್ತೀರಿ, ಊಟ ಮಾಡಲು ಆಗುವುದಿಲ್ಲ, ಮಲಗಲು ಆಗುವುದಿಲ್ಲ. ಇಲ್ಲಿ ಬಂದು ಈ ರೀತಿ ಕಂಠ ಶೋಷಣೆ ಮಾಡಿಕೊಳ್ಳುವುದರಿಂದ ಏನು ಲಾಭ? ಇವರು ಏನಾದರೂ ಸ್ವಲ್ಪ ಅರ್ಥ ಮಾಡಿಕೊಳ್ಳುತ್ತಾರೆ ಎನ್ನುವುದಾದ್ದರೆ ನಾವು ಹೇಳಬಹುದು. ಉತ್ತರ ಕರ್ನಾಟಕದ ಗುಲ್ಬರ್ಗಾಕ್ಕೆ ಹೋಗಿ ಅಲ್ಲಿ ವಿಶೇಷ ಸಂಪುಟ ಸಭೆಯನ್ನು ನಡೆಸಿ 50,000 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದು ಘೋಷಣೆ ಮಾಡಿದ್ದಾರೆ. ಅಲ್ಲಿಯ ಪ್ರಜಾವಾಣಿ ಪತ್ರಿಕೆಯನ್ನು ನಾನು ಓದಿದೆ. ಓದಿ ಖುಷಿಯಾಯಿತು. ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಲಾಭ, ಕಲಬುರಗಿ ಸಂಪುಟ ಸಭೆಯಲ್ಲಿ ನಿರ್ಧಾರ. 50,000 ಹುದ್ದೆಗಳ ಭರ್ತಿ, ಪ್ರಜಾವಾಣಿಯ ಮುಖಪುಟದಲ್ಲಿ, banner headline ನಲ್ಲಿ ಈ ಸುದ್ದಿ ಬಂದಿದೆ. ಏನು ಹೇಳುವುದು, ಏನು ಬಿಡುವುದು ಭಾಷಣ ಮಾಡಬೇಕೆ, ಬೇಡವೆ. ಇವರ ಬಜೆಟ್ ಹೀಗೆ, ಇವರ ಚುನಾವಣಾ ಪ್ರಣಾಳಿಕೆ ಹೇಗೋ, ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆ ನೋಡಿದರೆ ಇವರು ಏನೇನು ಸಾಧನೆ ಮಾಡಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ನಾನು ಕೈಮುಗಿದು ಕೇಳುತ್ತೇನೆ, ನೀವು ರಸ್ತೆ ಕೊಡಬೇಡಿ, ನೀರು ಕೊಡಬೇಡಿ, ಅದೇನು 165 ಯೋಜನೆಗಳ ಗುರಿಯನ್ನು ಇಟ್ಟುಕೊಂಡಿದ್ದವು, 124 ಸಾಧನೆ ಮಾಡಿದ್ದೇವೆ ಎಂದು ಹೇಳಿದ್ದಿರಲ್ಲ, ನಿಮ್ಮ ಕಾಲಿಗೆ ಬಿದ್ದು ಕೇಳುತ್ತೇನೆ ಅದರ ಒಂದು ಪಟ್ಟಿ ಕೊಟ್ಟುಬಿಡಿ. ಅದು ಯಾವುದು ಎನ್ನುವುದನ್ನು ಕಣ್ಣಿನಿಂದಾದರೂ ನೋಡಿ ಬಿಡುತ್ತೇನೆ. ಪುಸ್ತಕದ ಪ್ರಕಾರವು ಮೋಸ.

**ಶ್ರೀ ಬಸವರಾಜ ಹೊರಟ್ಟಿ**:- ಮಾನ್ಯ ಸಭಾನಾಯಕರು ಸುಮ್ಮನೆ ಕುಳಿತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಪಾಪ ಅವರೇನು ಮಾಡುತ್ತಾರೆ. ಅವರು ಹಾಳಾಗಿ ಹೋಗಲಿ ಎನ್ನುವುದೆ ಅವರ ಆಸೆ.

**ಶ್ರೀ ಎಂ.ನಾರಾಯಣಸ್ವಾಮಿ**:-ಸರಿಯಾಗಿ ಮಾತನಾಡಿ. ಹಾಳಾಗಿ ಹೋಗಲಿ ಎಂದರೆ ಏನು ಅರ್ಥ?

**ಶ್ರೀ ಧರ್ಮಸೇನಾ**:- ನೀವು ಹಾಗೆ ತಿಳಿದುಕೊಂಡರೆ ನೀವೆ...

**ಡಾ:ಜಿ.ಪರಮೇಶ್ವರ್(ಸಭಾನಾಯಕರು)**:- ನೀವು ಎಷ್ಟು ಸುಳ್ಳು ಹೇಳಬೇಕು ಅಷ್ಟು ಹೇಳಿ. ಅದಕ್ಕೆ ಉತ್ತರವನ್ನು ಆಮೇಲೆ ಕೊಡುತ್ತೇನೆ. ಆಮೇಲೆ ಮಾತನಾಡಬೇಕು ಎಂದೇ ನಾನು ಸುಮ್ಮನೆ ಕುಳಿತ್ತಿದ್ದೆನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದರಲ್ಲಿ ಯಾವುದಾದ್ದರೂ ಒಂದು ಅಂಕಿ–ಅಂಶ ಸುಳ್ಳು ಎನ್ನಿಸಿದ್ದರೆ ನೀವು ಹೇಳಿ.

**ಡಾ:ಜಿ.ಪರಮೇಶ್ವರ್:–** ಆಮೇಲೆ ಹೇಳುತ್ತೇನೆ.

**( ಈ ಹಂತದಲ್ಲಿ ಸಚಿವರಾದ ಮಾನ್ಯ ಆಂಜನೇಯರವರು ಸದನಕ್ಕೆ ಆಗಮಿಸಿದರು)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಬಂದರು ನೋಡಿ ನಮ್ಮ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಆಂಜನೇಯನವರು. ನಾನು ನನ್ನ ಊರಿಗೆ ಹೋಗುವಾಗ ಚಿತ್ರದುರ್ಗದ ಮೇಲೆಯೇ ಹೋಗುತ್ತೇನೆ. ಅಲ್ಲಿ ಒಂದು ಒಳ್ಳೆಯ ಹೋಟೆಲ್ ಇದೆ. ಅಲ್ಲಿ ಕಾಫಿ ಕುಡಿಯುತ್ತೇನೆ. ಅಲ್ಲಿ ಯಾವಾಗಲೂ ಇವರದೊಂದು ಹೇಳಿಕೆ ಇದ್ದೇ ಇರುತ್ತದೆ. ಏನು ಎಂದರೆ, ಅಪ್ಪರ್ ಭದ್ರಾ ಯೋಜನೆ..

**ಶ್ರೀ ಎಂ.ನಾರಾಯಣಸ್ವಾಮಿ:–** ಯಾವ ಹೋಟೆಲ್ ಅದು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸಸ್ಯಾಹಾರಿ ಹೋಟೆಲ್. ಮಾಂಸಾಹಾರಿ ಹೋಟೆಲ್‌ಗೆ ಹೋಗಬೇಕು ಎನ್ನಿಸಿದರೆ ಹೋಗುತ್ತೇನೆ. ನನಗೇನು ಮುಲಾಜು. ನನ್ನ ಹಣ ನಮ್ಮ ಹೋಟೆಲ್‌ಗೆ ಹೋಗಲು ಏನು ಮುಲಾಜಿಲ್ಲ. ಮಾನ್ಯ ಸಭಾನಾಯಕರಿಗೆ ಮಾಂಸಾಹಾರಿ ಹೋಟೆಲ್‌ಗೆ ಹೋಗಲು ಏನಾದರೂ ಮುಲಾಜು ಇದೆಯೇ?

**ಡಾ:ಜಿ.ಪರಮೇಶ್ವರ್:–** ಏನು ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಏಕೆಂದರೆ ಅವರು ಚೆನ್ನಾಗಿ ಮಾಂಸಾಹಾರಿ ಊಟ ಮಾಡುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಆರ್‌ಎಸ್‌ಎಸ್ ನವರು ಮಾಂಸಾಹಾರಿ ಊಟ ಮಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಮೊನ್ನೆ ಉತ್ತರ ಪ್ರದೇಶದ ಮುಸ್ಲಿಂ ಬಂಧುಗಳೆಲ್ಲರೂ ಬಿಜೆಪಿ ಗೆ ಮತವನ್ನು ಕೊಟ್ಟಿದ್ದಾರೆ. ಕರ್ನಾಟದಲ್ಲಿಯೂ ಹಾಗೆ ಆಗುತ್ತದೆ. ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ಬಿಜೆಪಿಗೆ ಮತವನ್ನು ಕೊಟ್ಟಿದ್ದಾರೆ. ಉತ್ತರ ಪ್ರದೇಶದಲ್ಲಿ ಮುಸ್ಲಿಂ ಬಂಧುಗಳು ಬಿಜೆಪಿಗೆ ಮತವನ್ನು ಕೊಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ಮತ ಕೊಟ್ಟಿದ್ದರಿಂದಲೇ ಅಲ್ಲಿ 13 ಸೀಟ್‌ಗಳು ಬಂದಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಬಿಬಿಎಂಪಿ ಯಲ್ಲಿ ಬಹುಮತ ತೆಗೆದುಕೊಂಡಿದ್ದಿರಾ ಆಂಜನೇಯನವರೆ?

**ಶ್ರೀ ಎಚ್.ಆಂಜನೇಯ:–** ಬಹುಮತ ಬಂದಿತ್ತು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸರಿ ಬಿಡಿ. ಸುಳ್ಳು ಹೇಳುವುದರಲ್ಲಿ ಇದು ಒಂದು.

**ಶ್ರೀ ಐವಾನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಬಿಬಿಎಂಪಿ ಚುನಾವಣೆಗೂ, ಬೇರೆ ಚುನಾವಣೆಗೂ ವ್ಯತ್ಯಾಸವಿದೆ.

(ಗೊಂದಲ)

ಬಿಬಿಎಂಪಿ ಚುನಾವಣೆಯಲ್ಲಿ ಮೇಯರ್ ಮತ್ತು ಉಪಮೇಯರ್‌ಗೆ nomination ಆಗಿ ಯಾರು ಅಭ್ಯರ್ಥಿ ಎಂದು ಘೋಷಣೆ ಮಾಡಿದ ಮೇಲೆ ಅಲ್ಲಿ ಮತ ಹಾಕಲಾಗುತ್ತದೆ. ಆದರೆ ಶಾಸನಸಭೆಯಲ್ಲಿ ರಾಜ್ಯಪಾಲರು ಅವರಿಗೆ ಬಹುಮತ ಇದೆ ಎಂದು ನಿರೀಕ್ಷೆ ಮಾಡಿ ಅನುಮತಿ ಕೊಡುವುದು. That is the difference between Legislators and the Local Bodies. ನೀವು ಅದನ್ನು ಉದಾಹರಣೆ ಕೊಡುತ್ತೀರಲ್ಲಾ.

**ಶ್ರೀ ಎಂ.ಕೆ.ಪ್ರಾಣೇಶ್:–** ಈ ಕಡೆಯಿಂದ ಊಟ ಮಾಡಿದರು ಅದು ಊಟವೇ, ಆ ಕಡೆಯಿಂದ ಊಟ ಮಾಡಿದರು ಅದು ಊಟವೇ?

(ಗೊಂದಲ)

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಗಳೆ, ಹೊಂದಾಣಿಕೆ ಬಗ್ಗೆ ಯಾರೂ ಹೇಳಬಾರದು. ರಾಜಕಾರಣದಲ್ಲಿ ಅದೊಂದು ಅನಿವಾರ್ಯವಾಗಿ ಎಲ್ಲರಿಗೂ ಬಂದಿದೆ. ಅದನ್ನು 60 ವರ್ಷದಿಂದ ಜಾಸ್ತಿ ಮಾಡಿದವರು ಕಾಂಗ್ರೆಸ್‌ನವರು. ಒಂದೇ ದಿನದಲ್ಲಿ ನಾಂದೇಡ್ ಭಾಸ್ಕರ್‌ರಾವ್ ಈ ಕಡೆಯಿಂದ ಆ ಕಡೆ ಹೋಗಿದ್ದಾರೆ. ಜನತಾದಳದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ನಾವು ಹೊಂದಾಣಿಕೆ ಮಾಡಿಕೊಂಡಿದ್ದೇವೆ. ನಾವು ಮಾಡಿಕೊಂಡರೆ ಮದುವೆ ನೀವು ಮಾಡಿಕೊಂಡರೆ ಇನ್ನೊಂದು ಎಂದು ಏಕೆ ಹೇಳುತ್ತೀರಿ? ಸುಮ್ಮನೆ ಇರಿ, ನೀವು ಮಾಡಿಕೊಂಡರು ಮದುವೆನೆ, ನಾವು ಮಾಡಿಕೊಂಡರು ಮದುವೆನೆ. ಅದಕ್ಕೆ ಗೌರವ ಕೊಡಿ. ಹೊಂದಾಣಿಕೆ ರಾಜಕೀಯ ಇವತ್ತು ಅನಿವಾರ್ಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವಾನ್ ಡಿ'ಸೋಜಾ:-** ಪರ್ವತ ಪವೃತ್ತಿ ನಿಮ್ಮದು. 'ಆಪರೇಶನ್ ಕಮಲ' ಮಾಡುವಲ್ಲಿ ಬಿಜೆಪಿ ಅಷ್ಟು ಪ್ರವೀಣರು ಈ ದೇಶದಲ್ಲಿ ಬೇರೆ ಯಾರು ಇಲ್ಲ.

**ಶ್ರೀ ಭಾನುಪ್ರಕಾಶ್:-** ಬಿಜೆಪಿ ಯವರಷ್ಟು ಮಾಡದೆ ಇರಬಹುದು. ಆದರೆ ಅದನ್ನು 60 ವರ್ಷದಿಂದ ಹೆಚ್ಚು ಮಾಡಿದವರು ಕಾಂಗ್ರೆಸ್‌ನವರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ಬಿಜೆಪಿಗೆ ಅತಿ ಹೆಚ್ಚು ಮತಗಳನ್ನು ಕೊಟ್ಟಿದ್ದಾರೆ. ಉತ್ತರ ಪ್ರದೇಶದಲ್ಲಿ ಏಕೆ ಒಂದು seat ಬರಲಿಲ್ಲ ಎಂದು ಕೇಳುತ್ತಿದ್ದರು. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. No Vote No Seat. ನೀವು vote ಕೊಡದಿದ್ದರೆ ನಾವು seat ಕೊಡಬೇಕಾ? ಗೋವಾದಲ್ಲಿ vote ಕೊಟ್ಟರು ಕ್ರಿಶ್ಚಿಯನ್ ಬಂಧುಗಳನ್ನು ಮಂತ್ರಿಗಳಾಗಿ ಮಾಡಿಕೊಂಡಿದ್ದೇವೆ. ಈಗ ಮುಸ್ಲಿಂ ಬಂಧುಗಳು ನಮ್ಮ ಜೊತೆಗೆ ಬಂದಿದ್ದಾರೆ. ಅವರನ್ನು ಮಂತ್ರಿಗಳಾಗಿ ಮಾಡಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ದೇಶದಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಹಿಂದೂಗಳು ಎಲ್ಲರೂ ಒಟ್ಟಾಗಿ ಬಿಜೆಪಿ ಪಕ್ಷಕ್ಕೆ ಮತವನ್ನು ಕೊಡುತ್ತಾರೆ. ಈಗ ವಿಷಯ ಬಿಡಿ. ನಾನು ಬಜೆಟ್ ಮೇಲೆ ಭಾಷಣವನ್ನು ಮುಂದುವರೆಸುತ್ತೇನೆ.

**ಶ್ರೀ ಐವಾನ್ ಡಿ'ಸೋಜಾ:-** ನೀವು No Vote No Seat ಎಂದು ಹೇಳಿರುವುದು ನನಗೆ ಅರ್ಥವಾಗಲಿಲ್ಲ. Seat ಮೊದಲು ಕೊಟ್ಟು ನಂತರ Vote ಪಡೆಯುವುದು ಎಂದೇ? ಇದನ್ನು ಹೇಗೆ presume ಮಾಡಲು ಬರುತ್ತದೆ? ಅದರ ಅರ್ಥ ನೀವು ಕೊಡುವುದಿಲ್ಲ ಎಂದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ನಮಗೆ ಮತವನ್ನು ಕೊಟ್ಟರು. ಅವರಿಗೆ seat ಕೊಡಲಾಯಿತು. ಮಂತ್ರಿಗಳಾಗಿ ಮಾಡಿಕೊಳ್ಳಲಾಯಿತು. ಉತ್ತರ ಪ್ರದೇಶದಲ್ಲಿ ಇಷ್ಟು ದಿನ ಕೊಟ್ಟಿರಲಿಲ್ಲ. ಈಗ ಕೊಟ್ಟಿದ್ದಾರೆ. ಮುಸ್ಲಿಂ ಬಂಧುಗಳಿಗೆ seat ಕೊಡುತ್ತೇವೆ, ಮಂತ್ರಿಗಳಾಗಿ ಮಾಡಿಕೊಳ್ಳುತ್ತೇವೆ. ಇಡೀ ದೇಶದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್ಖ್ ಮತ್ತು ಹಿಂದೂಗಳನ್ನು ದೂರ-ದೂರ ಇಡಬೇಕು ಎನ್ನುವ ಪ್ರಯತ್ನವನ್ನು 70 ವರ್ಷಗಳಿಂದ ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಈಗ ನಿಧಾನಕ್ಕೆ ವಿಫಲರಾಗುತ್ತಿದ್ದೀರಿ. ಹಿಂದೂಗಳ ಜೊತೆಗೆ ದಲಿತರನ್ನು, ಹಿಂದುಳಿದ ವರ್ಗದವರನ್ನು ದೂರ ಇಟ್ಟಿದ್ದೀರಿ. ಈಗ ಅವರು ನಮ್ಮ ಕಡೆಗೆ ಬರಲು ಪ್ರಾರಂಭ ಮಾಡಿದ್ದಾರೆ. ಈಗ ಏನು ಮಾಡಬೇಕು ಎಂದು ಗೊತ್ತಾಗದೆ ಇವರು ಕೈ ಹಿಚುಕಿಕೊಳ್ಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವಾನ್ ಡಿ'ಸೋಜಾ:–** ಉತ್ತರ ಪ್ರದೇಶದಲ್ಲಿ 20%ರಷ್ಟು ಮುಸ್ಲಿಂರಿದ್ದರೂ ಒಬ್ಬ ಅಭ್ಯರ್ಥಿಯನ್ನು ಕೊಡಲು ನಿಮಗೆ ಆಗಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಆಗಲೇ No Vote No Seat ಎಂದು ಹೇಳಿದೆ. ಈಗ vote ಕೊಟ್ಟಿದ್ದಾರೆ, ಮುಂದಿನ ದಿನಗಳಲ್ಲಿ ಕಾದುನೋಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಗೋವಾದಲ್ಲಿ 42% ಕ್ರಿಶ್ಚಿಯನ್ ಇದ್ದಾರೆ.

**ಉಪಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಬಜೆಟ್ ಮೇಲೆ ಮಾತನಾಡಿ. ಇದೇನು ಬೇರೆ ವಿಷಯ ಮಾತನಾಡುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಬಜೆಟ್‌ನಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ದಲಿತರು, ಹಿಂದುಳಿದವರು ಎಲ್ಲರೂ ಬರುತ್ತಾರೆ. ಈ ಎಲ್ಲ ಸಮುದಾಯದವರನ್ನು ಕಾಂಗ್ರೆಸ್‌ನವರು ನಮ್ಮಿಂದ ದೂರ ಇಟ್ಟಿದ್ದರಿಂದ ಅವರು ನಮ್ಮ ಹತ್ತಿರ ಬಂದಿರಲಿಲ್ಲ. ಈಗ ಬರುತ್ತಿದ್ದಾರೆ, ಅದಕ್ಕಾಗಿ ಬಿಜೆಪಿ ಸರ್ಕಾರ ಬರುತ್ತಿದೆ. ನಾವು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ.

ಇನ್ನು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ, ಸೋಮವಾರ ಮಾರ್ಚ್ 13 2017ರ ಉದಯವಾಣಿ ಪತ್ರಿಕೆಯಲ್ಲಿ ಬಂದಿರುವ ಸುದ್ದಿಯನ್ನು ಓದುತ್ತೇನೆ, "ಅಹಿಂದಾಕ್ಕೆ ಘೋಷಣೆಯೇ ಎಲ್ಲಾ, ಅನುಷ್ಠಾನವಿಲ್ಲ" ಸಾಕು ಇದರ ಬಗ್ಗೆ ಏನು ಹೇಳವುದೇ ಬೇಡ. "2016–17ನೇ ಸಾಲಿನಲ್ಲಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನದಲ್ಲಿ 45% ರಷ್ಟು ಬಳಕೆಯಾಗಿರುವುದಿಲ್ಲ" "ಯೋಜನೆಯ ದುರುಪಯೋಗ" "ಹಾಸ್ಟೆಲ್ ಸಿಗದಿರುವ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 1500 ರೂ.ಗಳನ್ನು ನೀಡುವ 'ವಿದ್ಯಾ ಸಿರಿ ಯೋಜನೆ' ಸ್ವಲ್ಪ ಮಟ್ಟಿನ ಯಶಸ್ಸು ಕಂಡಿದ್ದು, ಇದರ ದುರುಪಯೋಗವು ಆಗುತ್ತಿರುವ ಆರೋಪ ಕೇಳಿಬಂದಿದೆ" ಸತ್ಯವನ್ನು ಬರೆದಿದ್ದಾರೆ. ಅದರ ಬಗ್ಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. "ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಸಾವಿರಾರು ಸಣ್ಣ ಮತ್ತು ಅತಿಸಣ್ಣ ರೈತರು ಅರ್ಜಿ ಸಲ್ಲಿಸಿ ಎರಡು ವರ್ಷ ಕಳೆದರೂ ಸರಿಯಾದ ಸಮಯಕ್ಕೆ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿರುವ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸದೆ ಇರುವುದರಿಂದ ದಲಿತ ಮತ್ತು ಹಿಂದುಳಿದ ರೈತ ಸಮುದಾಯಕ್ಕೆ ಯೋಜನೆ ಇದ್ದರೂ ಫಲ ದೊರೆಯದಂತೆ ಆಗಿದೆ" "ಅಲ್ಪಸಂಖ್ಯಾತರ ಮೂಗಿಗೆ ತುಪ್ಪ" ಇನ್ನು ಎಷ್ಟು ಅಂತ ಹೇಳಲಿ, ಎಷ್ಟು ಅಂತ ಓದಲಿ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಮಾನ್ಯ ಆಂಜನೇಯನವರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಮ್ಮನ್ನು ಟೀಕೆ ಮಾಡಬೇಕು ಎಂದು ಅಲ್ಲ. ನೀವು ಸ್ವಲ್ಪ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೀರಿ. ನೀವು ಇಡೀ ರಾಜ್ಯವನ್ನು ಸುತ್ತುತ್ತಿದ್ದೀರಿ.

## (295) 20-03-2017 SK-AK 4.00

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮುಂದು. **(ಉಪಸಭಾಪತಿವರ ಉಪಸ್ಥಿತಿ)**

ಹಾಡಿಗಳಿಗೆ ಹೋಗುತ್ತಿದ್ದೀರಿ. ಆ ದಲಿತರು ವಾಸ ಮಾಡುವ ಮನೆಗಳಿಗೆ ಹೋಗಿ ಊಟವನ್ನು ಮಾಡಿ ಮಲಗುತ್ತಿದ್ದೀರಿ. ನಾನು ವೈಯಕ್ತಿಕವಾಗಿ ನಿಮಗೆ ಹೇಳುತ್ತಿಲ್ಲ. ಇಲ್ಲಿ ಪ್ರಶ್ನೆ ಇರುವುದೇನೆಂದರೆ ನಿಮ್ಮ ಸರ್ಕಾರ, ನಿಮ್ಮ ಅಧಿಕಾರಿಗಳಿಗೆ ನಿಮ್ಮ ಭಯ ಇದೆಯೇ? ನಿಮ್ಮ ಬಗ್ಗೆ ನಿಮ್ಮ ಅಧಿಕಾರಿಗಳಿಗೆ ಭಯವಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಾಗುವ ತನಕ ಸಂಗೊಳ್ಳಿ ರಾಯಣ್ಣ, ವಾಲ್ಮೀಕಿ, ಕನಕದಾಸ ಎಂದು ಹೇಳುತ್ತಿದ್ದರು. .....

(ಗೊಂದಲ)

**ಶ್ರೀ ಎಚ್. ಆಂಜನೇಯ:-** ಸಂಗೊಳ್ಳಿರಾಯಣ್ಣ ಬ್ರಿಗೇಡ್ ಅನ್ನು ನೀವು ಬಿಡಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಬಿಡಬಾರದಾ? ನಾನು ಈ ಸಭೆಯ ಮುಖಾಂತರ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅದೇನೆಂದರೆ ಕರ್ನಾಟಕ ರಾಜ್ಯದಲ್ಲಿರುವ ಐದು ಸಾವಿರ ಜೂನಿಯರ್ ಕಾಲೇಜುಗಳೇನಿವೆ ಆ ಪ್ರತಿಯೊಂದು ಕಾಲೇಜುಗಳಿಂದ ಎರಡು ಮೆರಿಟ್ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಒಬ್ಬೊಬ್ಬರಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಜನರಿಂದ ಭಿಕ್ಷೆಯನ್ನಾದರೂ ಎತ್ತಿ ಅಭಿನಂದನೆಯನ್ನು ಸಲ್ಲಿಸಿ ಅವರಿಗೆ ಹಣವನ್ನು ಕೊಡುತ್ತೇವೆ.

**ಶ್ರೀ ಎಚ್. ಆಂಜನೇಯ:-** ಸನ್ಮಾನ್ಯ ಸಭಾಪತಿಯವರೇ, ಬ್ರಿಗೇಡ್‌ನಿಂದ ಕೊಡುತ್ತೀರಾ? ಅದಕ್ಕೆ ಯಡಿಯೂರಪ್ಪನವರು ಬರುತ್ತಾರೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸ್ವಲ್ಪ ತಡೆಯಿರಿ, ಅವರ ಹೆಸರನ್ನು ಏಕೆ ಹೇಳುತ್ತಿದ್ದೀರಿ. ನೀವು ಆ ಕಾರ್ಯಕ್ರಮಕ್ಕೆ ಬರುತ್ತೀರಾ? ದಲಿತರು, ಹಿಂದುಳಿದವರು ಎಲ್ಲರೂ ಇರುವ ಆ ಕಾರ್ಯಕ್ರಮಕ್ಕೆ ನೀವು ಬರುತ್ತೀರಾ? ಆ ಕಾರ್ಯಕ್ರಮಕ್ಕೆ ಬರುವುದಕ್ಕೆ ನಿಮಗೆ ತಾಕತ್ತು ಇದೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್. ಆಂಜನೇಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರನ್ನು ಕರೆದುಕೊಂಡು ಹೋಗಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಕರೆದುಕೊಂಡು ಹೋಗೇ ಹೋಗುತ್ತೇನೆ. ನೀವು ಆ ಕಾರ್ಯಕ್ರಮಕ್ಕೆ ಬರುತ್ತೀರಾ?

**ಶ್ರೀ ಹೆಚ್.ಎಂ.ರೇವಣ್ಣ:-** ಪಕ್ಷಾತೀತವಾಗಿ ಕಾರ್ಯಕ್ರಮವನ್ನು ಮಾಡಿದರೆ ಅವರೇ ಅಲ್ಲ ಎಲ್ಲರೂ ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅದು ಪಕ್ಷಾತೀತವಾದ ಕಾರ್ಯಕ್ರಮವೇ ಆಗಿರುತ್ತದೆ. ಬ್ರಿಗೇಡ್ ಯಾವ ಪಕ್ಷದ್ದೂ ಅಲ್ಲ. ಅವರು ಆ ಕಾರ್ಯಕ್ರಮಕ್ಕೆ ಬರುತ್ತೇನೆಂದು ಹೇಳಲಿ. ನೀವು ಇನ್ನು ಮಂತ್ರಿಯಾಗಿಲ್ಲ ಅದಕ್ಕೆ ಹೇಳುತ್ತೀರಿ. ಅವರು ಮಂತ್ರಿಗಳಿದ್ದಾರೆ. ಹಾಗೆ ಹೇಳುತ್ತಾರೆಯೇ? ಅವರು ಹೇಳುತ್ತೇನೆಂದರೆ ಇವೊತ್ತೆ ಮಂತ್ರಿಯಾಗಿರುವುದಿಲ್ಲ. ಅದು ಏನೇ ಇರಲಿ. ನಾನು ಹೇಳುವುದೇನೆಂದರೆ ಬ್ರಿಗೇಡ್ ಸುದ್ದಿಗೆ ಯಾರು ಯಾರು ಬರುತ್ತಾರೆ ಅವರೆಲ್ಲಾ ಹಾಳಾಗಿ ಹೋಗುತ್ತಾರೆ ಹುಷಾರಾಗಿರಿ. ನಿಮ್ಮನ್ನೂ ಸೇರಿಸಿ ಹೇಳುತ್ತಿದ್ದೇನೆ. ಇದನ್ನು ಒಪ್ಪುತ್ತೀರಾ?

**ಶ್ರೀ ಶ್ರೀನಿವಾಸ್ ಮಾನೆ:-** ಹೌದು ಹೌದು ನಾನು ಒಪ್ಪುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅವರು ಹೌದು ಎಂದು ಹೇಳುತ್ತಿದ್ದಾರೆ. ಅಂದರೆ ಅವರು ಒಪ್ಪುತ್ತಾರೆ. Right.

(ಗೊಂದಲ)

**ಶ್ರೀ ಎಚ್. ಆಂಜನೇಯ:-** ಸನ್ಮಾನ್ಯ ಸಭಾಪತಿಯವರೇ, ಸಂಗೊಳ್ಳಿ ರಾಯಣ್ಣ ಅತ್ಯಂತ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರ.

**ಡಾ. ಜಿ. ಪರಮೇಶ್ವರ್:-** ಸನ್ಮಾನ್ಯ ಸಭಾಪತಿಯವರೇ, ನನಗೆ ಈಗ ಗೊತ್ತಾಯಿತು....

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸಭಾನಾಯಕರು ಅಪರೂಪಕ್ಕೆ ಒಮ್ಮೆ ಏಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್. ಆಂಜನೇಯ:-** ಸನ್ಮಾನ್ಯ ಸಭಾಪತಿಯವರೆ, ನಮ್ಮ ಅಧ್ಯಕ್ಷರು ನಿಂತಿದ್ದಾರೆ. ಅವರು ಏನು ಹೇಳುತ್ತಾರೆ ನೋಡೋಣ.

**ಉಪಸಭಾಪತಿಯವರು:-** ಸಭಾನಾಯಕರೆ ತಾವು ಹೇಳಿ.

**ಡಾ. ಜಿ. ಪರಮೇಶ್ವರ್:-** ಸನ್ಮಾನ್ಯ ಸಭಾಪತಿಯವರೇ, ಬ್ರಿಗೇಡ್‌ನವರ ಸುದ್ದಿಗೆ ಯಾರು ಯಾರು ಬರುತ್ತಾರೆ ಅವರೆಲ್ಲಾ ಹಾಳಾಗಿ ಹೋಗುತ್ತಾರೆ ಎಂದು ಹೇಳಿದ್ದೀರಿ. ನಮಗೆ ಉತ್ತರ ಗೊತ್ತಾಯಿತು. ಮಾನ್ಯ ಯಡಿಯೂರಪ್ಪನವರು ಹಾಳಾಗಿ ಹೋಗುತ್ತಾರೆಂದು ತಾವು ಹೇಳಿದ್ದು ನಮಗೆ ಗೊತ್ತಾಯಿತು. ನೇರವಾಗಿ ಹೇಳಿಬಿಡಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ರಾಷ್ಟ್ರೀಯ ಅಧ್ಯಕ್ಷರಾದ ಮಾನ್ಯ ಅಮಿತ್ ಷಾರವರ ಎದುರುಗಡೆ ನಾನು ಹಾಗೂ ಮಾನ್ಯ ಯಡಿಯೂರಪ್ಪನವರು ಕುಳಿತು ರಾಜಕೀಯವಾಗಿ ಇದನ್ನು ಮಾಡಕೂಡದು ಆದರೆ ಸಾಮಾಜಿಕವಾಗಿ ಎಲ್ಲಾ ಮಾಡಬೇಕೆಂದು ಇಬ್ಬರು ಸೇರಿ ಒಟ್ಟಿಗೆ ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಮತ್ತು ಕೇಂದ್ರದ ಸಚಿವರು, ಮುಖ್ಯಮಂತ್ರಿಗಳು ಎಲ್ಲರೂ ಬರುತ್ತಾರೆ. ನೀವು ಬರುತ್ತೀರಾ? ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಹರಿಪ್ರಸಾದ್‌ರವರು ಮತ್ತು ಮಾನ್ಯ ವೀರಪ್ಪ ಮೊಯ್ಲಿಯವರು ಎಲ್ಲರೂ 'ಬ್ರಿಗೇಡ್ ಬ್ರಿಗೇಡ್' ಎಂದು ಕೂಗುತ್ತಾರೆ. ನಿಮಗೆ ಏನಾಗಿದೆ? ದಲಿತರು ಮತ್ತು ಹಿಂದುಳಿದವರು ನಿಮ್ಮ ಆಸ್ತಿನಾ? ನೀವು ಅದಕ್ಕೆ ವಾರಸುದಾರರೇ?

**ಶ್ರೀ ಐವನ್ ಡಿಸೋಜ:-** ಸನ್ಮಾನ್ಯ ಸಭಾಪತಿಯವರೇ, ಬಹಳ ಜೋರಾಗಿ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ ನಾವು ಜೋರಾಗಿ ಮಾಡುತ್ತೇವೆ ಅದರ ಬಗ್ಗೆ ಅನುಮಾನ ಬೇಡ. ನಾವು ಎಷ್ಟು ಜೋರಾಗಿ ಮಾಡುತ್ತೇವೆಂದು ನೀವು ನೋಡುತ್ತಾ ಇರಿ. ಇದರ ಬಗ್ಗೆ ಏನು ಉತ್ತರ ಕೊಡುತ್ತೀರಾ ಅದನ್ನು ಮೊದಲು ಕೊಡಿ. ಮಾನ್ಯ ಸಭಾನಾಯಕರೆ ಆಗಲೇ ಒಂದು ವಿಚಾರಕ್ಕೆ ತಾವು ಎದ್ದು ನಿಂತು ಮಾತನಾಡಿದ್ದೀರಿ. ಈಗ ನಾನು ಹೇಳುವ ವಿಚಾರಕ್ಕೂ ಕೂಡ ನೀವು ಎದ್ದು ನಿಲ್ಲಬೇಕಾಗುತ್ತದೆ.

ಚುನಾವಣೆ ಪೂರ್ವದಲ್ಲಿ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಬಗ್ಗೆ ಏನು ಕಾಳಜಿ, ಏನು ಸಭೆಗಳು, ಏನು ಸಮಾರಂಭಗಳು, ಏನು ಸಮ್ಮೇಳನಗಳು ನಡೆದವು ಅಂದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುವುದಕ್ಕಾಗುವುದಿಲ್ಲ. ಅವುಗಳನ್ನು ನೋಡಿ ನನಗೆ ಬಹಳ ಖುಷಿಯಾಯಿತು. ಹಿಂದುಳಿದವರು, ದಲಿತರು ಮತ್ತು ಅಲ್ಪಸಂಖ್ಯಾತರ ಬಗ್ಗೆ ಆಸಕ್ತಿ ಇರುವಂತಹ ಒಬ್ಬ ವ್ಯಕ್ತಿ ಮುಖ್ಯಮಂತ್ರಿಯಾದರಲ್ಲಾ ಎಂಬುದು ನನಗೆ ಬಹಳ ಸಂತೋಷವಾಯಿತು. ಬಿಜೆಪಿ ಮತ್ತು KJP ಒಡೆದಿರಲಿಲ್ಲವೆಂದರೆ ಇವರ ವಿಳಾಸವೇ ಇರುತ್ತಿರಲಿಲ್ಲ ಎಂದು ನಾನು ಮೊನ್ನೆ ಹೇಳಿದ್ದೆ. ಅದು ಇರಲಿ ಅವರು ಅಧಿಕಾರಕ್ಕೆ ಬಂದಿದ್ದಾರೆ. ಆದರೆ ಇವರು ಮುಖ್ಯಮಂತ್ರಿಯಾದ ನಂತರ 2013-14ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ. ಅದರ ಪುಟ ಸಂಖ್ಯೆ 68, ಕಂಡಿಕೆ 288ಅನ್ನು ನೋಡಿ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನದ ವತಿಯಿಂದ ಅನುಷ್ಠಾನಗೊಳಿಸಿದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರಸಕ್ತ ಸಾಲಿನಲ್ಲಿ ಕೈಬಿಟ್ಟಿದ್ದಾರೆ. 2013-14 ನೇ ವರ್ಷದ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ. ಯಾವ ವರ್ಷ ಕೂಡ ಈ ವಾಕ್ಯವನ್ನು ಎಲ್ಲೂ ತಪ್ಪಿಸಲಿಲ್ಲ. 2013-14 ಆಯಿತು. ನಂತರ 2014-15 ಆಯಿತು. ಅದರ ನಂತರ 2015-16 ಆಯಿತು. ಆದರೆ ಏಕೋ ಏನೋ ಈ ವರ್ಷ ಅದನ್ನು ಕೈ ಬಿಟ್ಟು ಬಿಟ್ಟಿದ್ದಾರೆ. ನಾನು ಮೊನ್ನೆ ನಂದಗಡಕ್ಕೆ ಹೋಗಿದ್ದೆ. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಐದು ಸಾವಿರ ಬ್ರಿಗೇಡ್ ಕಾರ್ಯಕರ್ತರು ಸೇರಿ ಅಲ್ಲಿಗೆ ಹೋಗಿದ್ದೆವು.

**ಶ್ರೀ ಎಚ್. ಆಂಜನೇಯ:-** ಸನ್ಮಾನ್ಯ ಸಭಾಪತಿಯವರೇ, ಏನು ಮಾಡಬೇಕೆಂದು ಇದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸ್ವಲ್ಪ ತಡೆಯಿರಿ. ನಾನು ಏನು ಹೇಳುತ್ತೇನೆಂದು ಸ್ವಲ್ಪ ಕೇಳಿ ಸಾರ್. ಶ್ರೀ ಮಾದಾರ ಚೆನ್ನಯ್ಯ ಸ್ವಾಮಿಯವರು ನಂದಗಡಕ್ಕೆ ಬಂದು ನಮಗೆ ಅಲ್ಲೊಂದು ಪ್ರತಿಜ್ಞೆಯನ್ನು ಮಾಡಿಸಿದರು. ಏನು ಪ್ರತಿಜ್ಞೆಯನ್ನು ಮಾಡಿಸಿದರೆಂದರೆ ದೇಶ, ಧರ್ಮ, ಹಿಂದುಳಿದವರು ಮತ್ತು ದಲಿತರನ್ನು ರಕ್ಷಣೆ ಮಾಡುವ ದಿಕ್ಕಿನಲ್ಲಿ ಪ್ರತಿಜ್ಞೆ ಮಾಡಿಸಿದರು. ನಂದಗಡದಲ್ಲಿ ಸಂಗೊಳ್ಳಿ ರಾಯಣ್ಣನನ್ನು ನೇಣು ಹಾಕಿದ ಜಾಗದಲ್ಲಿ ನಿಂತರೆ ಕಣ್ಣಲ್ಲಿ ನೀರು ಬರುತ್ತದೆ ಒಂದೇ ಒಂದು ಅಭಿವೃದ್ಧಿ ಇಲ್ಲ. ಚುನಾವಣೆ ಪೂರ್ವದಲ್ಲಿ ಡಾ. ಬಿ.ಆರ್. ಅಂಬೇಡ್ಕರ್, ವಾಲ್ಮೀಕಿ, ಸಂಗೊಳ್ಳಿ ರಾಯಣ್ಣ, ಕನಕದಾಸ ಯಾರು ಯಾರು ಹಿಂದುಳಿದ ವರ್ಗದವರ ಬಗ್ಗೆ ಭಾಷಣ ಮಾಡಿದರಲ್ಲಾ ಈಗ ಅವರೆಲ್ಲರೂ ಏನಾದರು? ಅವರೆಲ್ಲಾ ಬರೀ ಭಾಷಣಕ್ಕೆ ಸೀಮಿತರೇ? ಈಗಲೂ ನಾನು ಹೇಳುತ್ತೇನೆ. ನೀವು ಕೆಲವು ಅಧಿಕಾರಿಗಳ ಒಂದು ಸಮಿತಿ ಕಳುಹಿಸಿದ್ದೀರೆಂದು ನನಗೆ ಗೊತ್ತಿದೆ. ಅದರಲ್ಲಿ ಮಾನ್ಯ ಹೆಚ್. ಎಂ. ರೇವಣ್ಣನವರು ಕೂಡ ನಂದಗಡಕ್ಕೆ ಹೋಗಿದ್ದರೆಂದು ನಾನು ಅಂದುಕೊಂಡಿದ್ದೇನೆ. ಸುಮಾರು 450 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟನ್ನು ಮಾಡಿರುವುದು ಕೂಡ ನನಗೆ ಗೊತ್ತಿದೆ. ನೀವು ಉತ್ತರ ಕೊಡುವಂತಹ ಸಂದರ್ಭದಲ್ಲಿ ದಯವಿಟ್ಟು ಆ ಯೋಜನೆಯನ್ನು ಯಶಸ್ವಿಯಾಗಿಸಿರುವ ಬಗ್ಗೆ ಉತ್ತರವನ್ನು ಕೊಡಿ. ಸಂಗೊಳ್ಳಿ ರಾಯಣ್ಣನನ್ನು ನೇಣು ಹಾಕಿದ ಜಾಗದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಆತನನ್ನು ಸಮಾಧಿ ಮಾಡಿದ ಜಾಗದಲ್ಲಿ ಎಲ್ಲಾ ಅಭಿವೃದ್ಧಿಯನ್ನು ಮಾಡಿ. ಸಂಗೊಳ್ಳಿ ರಾಯಣ್ಣ ಬರೀ ಕುರುಬ ಜಾತಿಗೆ ಮಾತ್ರ ಸೀಮಿತನಲ್ಲ. ಅವರು ಇಡೀ ರಾಜ್ಯದ ಮತ್ತು ದೇಶದ ಮಹಾಪುರುಷರು. ರಾಣಿ ಚನ್ನಮ್ಮನನ್ನು 'ಅಮ್ಮ' ಎಂದು ಕರೆಯುತ್ತಿದ್ದರು.

ನಿಮಗೆ ಅಂಕಿ ಅಂಶಗಳನ್ನು ಕೊಟ್ಟರೆ ಸಮಾಧಾನವಾಗುವುದಿಲ್ಲ. ನೀವೇ ಈ ಪುಸ್ತಕವನ್ನು ಬರೆದಿದ್ದು ತಾನೇ. ಇದನ್ನು ಓದಿದರೂ ಸಮಾಧಾನವಾಗುವುದಿಲ್ಲ ಎಂದು ಹೇಳಬೇಡಿ. ಟೀಕೆ ಮಾತ್ರ ಮಾಡಬೇಡಿ. ನಾವು ಮಾಡಿರುವುದು ತಪ್ಪು ಎಂದು ಇದ್ದರೆ ಹೇಳಿ ಅದನ್ನು ಅಂದರೆ ಆ ತಪ್ಪನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನಾವು ಹೇಳಿದ್ದನ್ನು ಸ್ವಲ್ಪ ಯೋಚನೆ ಮಾಡಿ. ನಿಮ್ಮ ಕೈಯಲ್ಲಿ ಸರ್ಕಾರವಿದೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ ಸಭಾ ನಾಯಕರೇ ನಾನು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡು ಅದಕ್ಕೆ ಉತ್ತರವನ್ನು ಹೇಳಿ. ಸಂಗೊಳ್ಳಿ ರಾಯಣ್ಣ ಇಡೀ ಸ್ವಾತಂತ್ರ್ಯಕೋಸ್ಕರ ಹೋರಾಟ ಮಾಡಿದಂತಹ ಕಿಚ್ಚು ಹಚ್ಚಿದಂತಹ ಒಬ್ಬ ವ್ಯಕ್ತಿ. ಆತ ಆ ಜಾತಿಗೆ ಮಾತ್ರ ಸೀಮಿತವಾಗಿರುವಂಥ ವ್ಯಕ್ತಿಯಲ್ಲ. ರಾಣಿ ಚನ್ನಮ್ಮನನ್ನು 'ಅಮ್ಮ' ಎಂದು ಕರೆಯುತ್ತಿದ್ದನು. ರಾಣಿ ಚನ್ನಮ್ಮನು ಕೂಡ ಸಂಗೊಳ್ಳಿ ರಾಯಣ್ಣನನ್ನು 'ಮಗನೇ' ಎಂದು ಕರೆಯುತ್ತಿದ್ದಳು. ಅವರಿಬ್ಬರ ಮಧ್ಯೆ ತಾಯಿ ಮಗನ ಸಂಬಂಧ ಇತ್ತು. ಆದರೆ ಮಾನ್ಯ ಸಭಾಪತಿಯವರೆ, ಇವರನ್ನು ಸಂಗೊಳ್ಳಿ ರಾಯಣ್ಣ ಮತ್ತು ಕಿತ್ತೂರು ರಾಣಿ ಚನ್ನಮ್ಮ ಯಾರು ಎಂದು ಕೇಳಿದರೆ ಇವರು ಕಿತ್ತೂರು ರಾಣಿ ಚನ್ನಮ್ಮ ಲಿಂಗಾಯಿತರು, ಅದರಲ್ಲಿ ಪಂಚಮಸಾಲಿ ಮತ್ತು ಸಂಗೊಳ್ಳಿ ರಾಯಣ್ಣ ಕುರುಬ ಜನಾಂಗದವರು ಎಂದು ಹೇಳುತ್ತಾರೆ. ಅದಕ್ಕಾಗಿಯೇ ನಾನು ಸಂಗೊಳ್ಳಿ ರಾಯಣ್ಣರವರನ್ನು ಜಾತಿಗೆ ಸೀಮಿತರನ್ನಾಗಿ ಮಾಡಬೇಡಿ. ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಟ ಮಾಡಿದ ಆ ಮಹಾಪುರುಷರನ್ನು ಇಡೀ ರಾಜ್ಯ ಮತ್ತು ದೇಶ ಮೆಚ್ಚುವ ರೀತಿಯಲ್ಲಿ ಆ ಜಾಗವನ್ನು ಅಭಿವೃದ್ಧಿ ಮಾಡಿ. ನಾನು ಬೇರೆ ಏನು ಕೇಳುವುದಿಲ್ಲ. ದಲಿತರು ಮತ್ತು ಹಿಂದುಳಿದವರು ಎಂದು ಘೋಷಣೆ ಮಾಡಿದ್ದೀರಲ್ಲಾ, ದಯವಿಟ್ಟು ಇದನ್ನು ಜಾರಿಗೆ ತರುವಂತಹ ಪ್ರಯತ್ನ ಮಾಡಿ. ಮಾನ್ಯ ಆಂಜನೇಯವರು ಮೊದಲನೇ ವರ್ಷದಲ್ಲಿ ಹಿಂದುಳಿದ ಮತ್ತು ದಲಿತ ಹಾಸ್ಟೆಲ್‌ಗಳಿಗೆ laptop ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಎಷ್ಟು ಕೊಟ್ಟಿದ್ದೀರಿ? ಏಕೆ ಮೋಸ ಮಾಡುತ್ತೀರಿ? ನಾನು ಏನು ಹೇಳುತ್ತೇನೆಂದರೆ ನಿಮಗೆ ಒಂದು ಪೆನ್ಸಿಲ್ ಕೊಡುವುದಕ್ಕಾಗುತ್ತದೆಯೇ, ಪೆನ್ಸಿಲ್ ಕೊಡುತ್ತೇವೆಂದು ಹೇಳಿ. ಪೆನ್ಸಿಲ್ ಕೊಡವುದಕ್ಕಾಗುವುದಿಲ್ಲ ಬಳಪ ಕೊಡುತ್ತೇವೆಂದು ಹೇಳಿ. ಬಳಪ ಕೊಡುವುದಕ್ಕಾಗುವುದಿಲ್ಲವೇ ಅದನ್ನು ಅರ್ಧ ತುಂಡು ಮಾಡಿಕೊಡುತ್ತೇವೆಂದು ಹೇಳಿ. ಅವರು ಅಷ್ಟನ್ನೆ ತೆಗೆದುಕೊಳ್ಳುತ್ತಾರೆ. ಆದರೆ ದಲಿತರಿಗೆ ಮತ್ತು ಹಿಂದುಳಿದವರಿಗೆ ಈ ರೀತಿ ಏಕೆ ಮೋಸ ಮಾಡುತ್ತೀರಿ. ಒಂದು ಸಂದರ್ಭದಲ್ಲಿ ಇಲ್ಲಿ ಮುಖ್ಯ ಮಂತ್ರಿಗಳು ಕುಳಿತಿದ್ದರು. ನೀವು ಅಲ್ಲಿ ಕುಳಿತಿದ್ದೀರಿ. ಮಾನ್ಯ ಸಭಾಪತಿಯವರೇ ನೀವು ಇಲ್ಲಿ ಇದ್ದಿರಿ. ಆಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನವರಿ ಅಥವಾ ಡಿಸೆಂಬರ್ ಅಂತ್ಯದಲ್ಲಿ ಹಿಂದುಳಿದ ಆಯೋಗದ ವರದಿಯನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಇದು ಸುಳ್ಳೇ? ಇದೇ ಸದನದಲ್ಲಿ ಘೋಷಣೆ ಮಾಡಿದ್ದೀರಿ. ಆಗಲೇ ಮಾನ್ಯ ಸಭಾ ನಾಯಕರು ನಿಮ್ಮ ಸುಳ್ಳಿಗೆ ಉತ್ತರವನ್ನು ಕೊಡುತ್ತೇವೆಂದು ಹೇಳಿದರು. ಇಲ್ಲಿ ನಾನು ಏತಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ ನಾವು ನಿಮ್ಮನ್ನು ಟೀಕೆ ಮಾಡುವುದು, ನೀವು ನಮ್ಮನ್ನು ಟೀಕೆ ಮಾಡುವುದು ವಿಶೇಷವಲ್ಲ. ಟೀಕೆ ಮಾಡುವುದಕ್ಕೋಸ್ಕರನೇ ಒಂದೊಂದು ರಾಜಕೀಯ ಪಕ್ಷ ಇರಬೇಕು ಮತ್ತು ಸ್ನೇಹವಾಗಿಯೇ ಇರಬೇಕು. ಆಗ ನಮ್ಮ ಮತ್ತು ನಿಮ್ಮ ಸ್ನೇಹ ಖಂಡಿತ ಕೆಡುವುದಿಲ್ಲ. ಸ್ನೇಹ ಹಾಗೆಯೇ ಇರಬೇಕು ಏಕೆಂದರೆ ನೀವು ಆ ಪಕ್ಷಲ್ಲಿದ್ದೀರಿ, ನಾಳೆ ನಮ್ಮ ಪಕ್ಷಕ್ಕೆ ಬರುತ್ತೀರಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಬಿಡಿ ಮಾನ್ಯ ಸಿದ್ಧರಾಮಯ್ಯನವರು ಹೇಳಿದ್ದು.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಅವರು ನಿಮ್ಮ ಕಡೆ ಬರುವುದಿಲ್ಲ ಅವರು ನಮ್ಮ ಕಡೆ ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನೀವು ಯಾವ ಕಡೆ ಹೋಗುತ್ತೀರೆಂಬುದು ಯಾರಿಗೂ ಗೊತ್ತಿಲ್ಲ.

(ಮುಂದು..)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

296/20.03.2017/4.10/hv.ak

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, 2006ನೇ ಇಸವಿಯಲ್ಲಿ 'ನಮ್ಮನ್ನು ಮಂತ್ರಿಗಳನ್ನಾಗಿ ಮಾಡಿ' ಎಂದು ಅವರ ಪಕ್ಷದವರು ಯಾರ್‍ಯಾರು ಯಾವಯಾವ ಪಕ್ಷದ ಬಾಗಿಲನ್ನು ತಟ್ಟಿದ್ದರು ಎನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರಬಹುದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಆ ಬಗ್ಗೆ ನನಗೆ ಗೊತ್ತಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಆ ಬಗ್ಗೆ ತಿಳಿದಿದ್ದರೆ, ಅದು ರಾಜ್ಯದ ಜನತೆಗೂ ಗೊತ್ತಾಗಬೇಕಾಗಿದೆ. ಆದ್ದರಿಂದ ಅವರು ಆ ವ್ಯಕ್ತಿಗಳ ಹೆಸರನ್ನು ಹೇಳಿದರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅದನ್ನು ಅವರೇ ಹೇಳಲಿಬಿಡಲಿ, ಅದಕ್ಕಾಗಿಯೇ ಅವರು ಬದುಕಿರುವುದು.

**ಶ್ರೀ ಎಂ.ಕೆ.ಪ್ರಾಣೇಶ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರಿಗೆ ನೆನಪಿನ ಶಕ್ತಿ ಹೆಚ್ಚು. ಅವರೇ ಆ ವಿಷಯವನ್ನು ಹೇಳಿದರೆ ಒಳ್ಳೆಯದು.

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಒಮ್ಮೆ ಅವರ ಪಕ್ಷಕ್ಕೆ ಹೋಗಿ ಮಂತ್ರಿಗಳಾಗುತ್ತಾರೆ. ಮತ್ತೊಮ್ಮೆ, 'ಭಾರತೀಯ ಜನತಾ ಪಕ್ಷವನ್ನು ಮುಗಿಸುವುದೇ ನಮ್ಮ ಉದ್ದೇಶ' ಎಂದು ಹೇಳಿಕೊಂಡು ಕೆ.ಜೆ.ಪಿ. ಎನ್ನುವ ಹೆಸರಿನಲ್ಲಿ ಪ್ರತ್ಯೇಕವಾದ ಒಂದು ಪಕ್ಷವನ್ನು ಸ್ಥಾಪನೆ ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಮ್ಮ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಬಹಳ ಮುಕ್ತವಾಗಿ ಚರ್ಚೆ ಮಾಡಿದರೆ ರಾಜ್ಯದ ರಾಜಕಾರಣ ಬಹಳ ಮುಕ್ತವಾಗುತ್ತದೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಸಹ ಜನತಾ ದಳದಿಂದ ಕಾಂಗ್ರೆಸ್ ಪಕ್ಷಕ್ಕೆ ಬಂದವರು ಎನ್ನುವುದನ್ನು ಅವರು ಮರೆಯಬಾರದು.

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಇಲ್ಲವೆಂದು ಹೇಳುವುದಿಲ್ಲ. 1975ರಲ್ಲಿ. . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಅನಂತರ ಅವರು ಮಾತನಾಡಲಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ yield ಆಗಿದ್ದಾರೆ. ಒಂದು ವಿಷಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಅದನ್ನು ಮುಕ್ತಾಯಗೊಳಿಸುವುದಕ್ಕೆ ಅವರು ಅವಕಾಶವನ್ನು ನೀಡಬೇಕು. ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಂತ್ರಿಗಳಾಗುವುದಕ್ಕೆ ಅವರ ಪಕ್ಷದ ನಾಯಕರು ಯಾವ ಪಕ್ಷದ ಬಾಗಿಲು ತಟ್ಟಿದರು ಎನ್ನುವುದರ ಬಗ್ಗೆ ಅವರು ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಎರಡು ನಿಮಿಷಗಳ ಕಾಲ ನಾನು ಮಾತನಾಡಿದ ನಂತರ ಇದೇ ವಿಚಾರದ ಮೇಲಿನ ಚರ್ಚೆಯನ್ನು ಅವರು ಮುಂದುವರೆಸಲಿ. ನಮ್ಮ ದೇಶದಲ್ಲಿ ಆರ್.ಎಸ್.ಎಸ್., ಎ.ಬಿ.ವಿ.ಪಿ., ಮತ್ತು ಜನತಾ ದಳ ಹೀಗೆ ಅನೇಕ ಸಂಘಟನೆಗಳು ಮತ್ತು ಪಕ್ಷಗಳು ಇವೆ. ಇವೆಲ್ಲವೂ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿಯವರನ್ನು 'ಸರ್ವಾಧಿಕಾರಿ' ಎಂದು ಯಾವಯಾವ ಭಾಷೆಗಳಲ್ಲಿ ಬೈದಿದ್ದಾರೋ ಆ ಎಲ್ಲ ಭಾಷೆಗಳನ್ನು ಮೀರಿದ ಭಾಷೆಯಲ್ಲಿ ಮಾತನಾಡಿ ಭಾಷಣ ಮಾಡಿ ಶ್ರೀಮತಿ ಇಂದಿರಾಗಾಂಧಿಯವರನ್ನು ಬೈದು ಇವತ್ತು ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಾರೆ. ಎಷ್ಟೊಂದು ಸಂಘಟನೆ ಮತ್ತು ಎಷ್ಟೊಂದು ಪಕ್ಷಗಳನ್ನು ಬದಲಾಯಿಸಿರುವವರಿಗೆ ನಮ್ಮ ನಾಯಕರ ಬಗ್ಗೆ ಮಾತನಾಡುವ ನೈತಿಕತೆ ಏನಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, MISA (Maintenance of Internal Security Act) detenues ನಲ್ಲಿ ಅತ್ಯಂತ ಚಿಕ್ಕವನು. Youngest MISA detenues ನಲ್ಲಿ ನಾನು ಮತ್ತು ಮಾನ್ಯ ಸುರೇಶ್‌ಕುಮಾರ್‌ರವರು ಇದ್ದೆವು. ಹಿಂದೆ ನಮ್ಮ ದೇಶದಲ್ಲಿ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಂದಂತಹ ಸಂದರ್ಭದಲ್ಲಿ ಜೈಲಿಗೆ ಹೋಗಿ ಹೋರಾಟ ಮಾಡಿದ್ದೆವು. ನಾವು ಜೈಲಿನಲ್ಲಿ ಇದ್ದಾಗ ಮಾನ್ಯ ವಿರೋಧ ಪಕ್ಷದ ನಾಯಕರ ಮೂಲ ಸಂಸ್ಕೃತಿಯ ನಾಯಕರು ನಾವು ಊಟಕ್ಕೆ ಹೋದಂತಹ ಸಂದರ್ಭದಲ್ಲಿ, 'ಮಾಂಸಾಹಾರಿಗಳು ಎರಡನೆಯ ಬ್ಯಾಚ್‌ಗೆ ಬನ್ನಿ, ಸಸ್ಯಾಹಾರಿಗಳು ಮಾತ್ರ ಮೊದಲನೆಯ ಬ್ಯಾಚ್‌ಗೆ ಬರಬೇಕು' ಎಂದು ಆರ್.ಎಸ್.ಎಸ್.ನ ದಕ್ಷಿಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾರತದ ಪ್ರಚಾರಕರಾಗಿದ್ದವರು ಹೇಳಿದ ಮೇಲೆ ಇದನ್ನು ವಿರೋಧಿಸಿ ನಾನು, ಶ್ರೀಯುತರುಗಳಾದ ಪಿ.ಜಿ.ಆರ್.ಸಿಂಧ್ಯಾರವರು, ಶಿವರಾಂರವರು, ಗೋವರ್ಧನ್ ಮತ್ತು ಇನ್ನಿತರರು ಜೈಲಿನಲ್ಲಿ ಒಂದು ದಿನ ಉಪವಾಸ ಮತ್ತು ಮೌನವ್ರತವನ್ನು ಆಚರಣೆ ಮಾಡಿದ್ದೆವು. ಆಗ ನಮಗೆ ಈ ತಾರತಮ್ಯದ ಅರಿವಾಯಿತು. ತುರ್ತು ಪರಿಸ್ಥಿತಿ ಘೋಷಣೆ ಮಾಡಿರುವುದರ ಬಗ್ಗೆ ನಮ್ಮ ಪಕ್ಷ C.W.C. (Congress Working Committee) ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ(ಎ.ಐ.ಸಿ.ಸಿ)ಯಲ್ಲಿ ವಿಷಾದವನ್ನು ವ್ಯಕ್ತಪಡಿಸಿದೆ. ನಾವು ಅದರಿಂದ ಪಾಠವನ್ನು ಕಲಿತಿದ್ದೇವೆ. ಈ ದೇಶದ ಸ್ವಾತಂತ್ರ್ಯ ಗಳಿಸುವಲ್ಲಿ ಆ ಪಕ್ಷದ ಪಾತ್ರ, ಈ ದೇಶದ secular credentials ನ್ನು ರಕ್ಷಣೆ ಮಾಡುವಲ್ಲಿ ತ್ಯಾಗ ಬಲಿದಾನಗಳನ್ನು ಕಾಂಗ್ರೆಸ್ ಪಕ್ಷ ಎಷ್ಟು ಮಾಡಿದೆ ಎನ್ನುವುದನ್ನು ಅರ್ಥ ಮಾಡಿಕೊಂಡು ನಾನು ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದೇನೆ. ಆದರೆ, ಅವರ ಪಕ್ಷದ ನಾಯಕರಿಗೆ ಮಂತ್ರಿ ಪದವಿ ಸಿಕ್ಕಿದರೆ ಸಾಕು ಬೇರೆ ಪಕ್ಷಕ್ಕೆ ಸೇರುತ್ತೇವೆಂದು ಹೇಳುತ್ತಾರೆ. ಅಧಿಕಾರದಿಂದ ಪದಚ್ಯುತಿಗೊಳಿಸಿದ ನಂತರ ಕೆ.ಜೆ.ಪಿ ಎನ್ನುವ ಬೇರೆ ಪಕ್ಷವನ್ನು ಕಟ್ಟಿ ಬಿ.ಜೆ.ಪಿ.ಯನ್ನು ಮುಗಿಸುತ್ತೇವೆಂದು ಹೊರಟಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರ ರಾಯಣ್ಣ ಬ್ರಿಗೇಡ್ ಅನ್ನು ಮುಗಿಸುವಂತಹ ಪ್ರಯತ್ನವನ್ನು ಮಾಡಿದರು. ಆದರೂ ಸಹ ಮಾನ್ಯ ಈಶ್ವರಪ್ಪನವರು ಇವತ್ತು ಅವರನ್ನು ವಹಿಸಿಕೊಂಡು ಮಾತನಾಡುತ್ತಿದ್ದಾರೆ. ಇದಕ್ಕೆ ನಾವೇನು ಹೇಳಬೇಕು?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ,. . . .

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರ ರೀತಿ ನಾನು ಪದೇ ಪದೇ ಎದ್ದು ಮಾತನಾಡುವುದಿಲ್ಲ. ನಾನು ಎದ್ದು ನಿಂತು ಮಾತನಾಡುವುದೇ ಅಪರೂಪ. ಆದರೂ ಸಹ ನನಗೆ ಕುಳಿತುಕೊಳ್ಳುವಂತೆ ತಾವು ತಿಳಿಸುತ್ತಿದ್ದೀರಿ. ಆ ಕಡೆಯವರು ಭಾಷಣ ಮಾಡುತ್ತಿದ್ದರೆ ಸುಮ್ಮನೆ ಇರುತ್ತೀರಿ. ಭಾಷಣ ಮಾಡುವುದನ್ನು ಕೇಳುವುದಕ್ಕೆ ನಾವಿಲ್ಲಿದ್ದೇವೆಯೇ? ಕಾಂಗ್ರೆಸ್ ಪಕ್ಷಕ್ಕೆ ಇವರೆಲ್ಲರೂ ಹೋಗಿ ಸೇರಿಕೊಂಡು ಕಾಂಗ್ರೆಸ್ ಮತ್ತು ಜನತಾದಳ ಎನ್ನುವುದು ಹಾಗೇ ಉಳಿದುಕೊಂಡಿದೆ. ಮಾನ್ಯ ಸಿದ್ದರಾಮಯ್ಯನವರು, 'ಇನ್ನು ಹತ್ತು ವರ್ಷಗಳಾದರು ನನ್ನನ್ನು ಕಾಂಗ್ರೆಸ್ ಪಕ್ಷದವನು ಎಂದು ಹೇಳುವುದಿಲ್ಲ' ಎಂದು ಹೇಳುತ್ತಾರೆ. ಮಾನ್ಯ ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರಕ್ಕೋಸ್ಕರ ಹೋಗಿದ್ದಾರೆಯೇ ಅಥವಾ ಕಸಗುಡಿಸುವುದಕ್ಕೆ ಹೋಗಿದ್ದಾರೆಯೇ? ಸುಮ್ಮನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಿದರೆ ಬಾಯಿಗೆ ಬರುವುದನ್ನೆಲ್ಲ ಮಾತನಾಡಬಹುದು. ಮಾನ್ಯ ಜಿ.ಪರಮೇಶ್ವರ್‌ರವರು ಮುಖ್ಯಮಂತ್ರಿಗಳಾಗಬೇಕಾಗಿತ್ತು. ಅವರು ಆ ಪಕ್ಷಕ್ಕೆ ಹೆಗಲಿಗೆ ಹೆಗಲು ಕೊಟ್ಟು ದುಡಿದವರು. ಅವರನ್ನು ಮೂಲೆ ಗುಂಪು ಮಾಡಿದ್ದಾರೆ. ಯಾಕೆ ಮಾಡಿದರು? ಅವರು ಕಸ ಗುಡಿಸುವವರು. ಅದನ್ನು ನಾನು ಹೇಳುತ್ತಿಲ್ಲ. ಹೊರಗಡೆಯಿಂದ ಬಂದವರು ಅಧಿಕಾರಕ್ಕೆ ಬರುತ್ತಾರೆಂದು ಅವರು ಹೇಳುತ್ತಿದ್ದಾರೆ. ಹಾಗಾದರೆ ಮಾನ್ಯ ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷಕ್ಕೆ ಏತಕ್ಕೋಸ್ಕರ ಹೋಗಿದ್ದಾರೆ? ಕಸ ಗುಡಿಸುವುದಕ್ಕೆ ಹೋಗಿದ್ದಾರೆಯೇ ಅಥವಾ ಮುಖ್ಯಮಂತ್ರಿಗಳಾಗುವುದಕ್ಕೆ ಹೋಗಿದ್ದಾರೆಯೇ ಎಂದು ನಾನು ಕೇಳುತ್ತಿದ್ದೇನೆ. ಸುಮ್ಮನೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮೊದಲು ಅವರು ಭಾರತೀಯ ಜನತಾ ಪಕ್ಷದ ಕಛೇರಿಯಿಂದ ಪ್ರಾರಂಭ ಮಾಡಲಿ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಜನತಾದಳವನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಏತಕ್ಕಾಗಿ ಬಂದಿದ್ದಾರೆ ಎನ್ನುವುದನ್ನು ಹೇಳಬೇಕು. ಅವರ ಪಕ್ಷದಲ್ಲಿಯೇ ಕಾಂಗ್ರೆಸ್ ಮತ್ತು ಜನತಾದಳ ಎಂದು ಎರಡು ರೀತಿ ಇದೆ. ಕಾಂಗ್ರೆಸ್ ಪಕ್ಷ ಎನ್ನುವುದು ಇಲ್ಲಿ ಇಲ್ಲವೇ ಇಲ್ಲ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದಲ್ಲಿದ್ದು, ಕಾಂಗ್ರೆಸ್ ಪಕ್ಷದ ಮೂಲಕ ಈ ಸದನಕ್ಕೆ ಬಂದವರು, ಇವತ್ತು ಬಹಳ ಮಾತನಾಡುತ್ತಿದ್ದಾರೆ. ತಾತ್ವಿಕವಾಗಿ ಅವರು ಕಾಂಗ್ರೆಸ್ ಪಕ್ಷದಿಂದ ಬಂದವರು.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, 'ನನ್ನನ್ನು ಕಾಂಗ್ರೆಸ್‌ನವರು ಇನ್ನೂ ಒಪ್ಪಿಕೊಂಡೇ ಇಲ್ಲ. ಜನತಾದಳದವನೆಂದು ಹೇಳುತ್ತಿದ್ದಾರೆ' ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದಕ್ಕಾಗಿ ನಮ್ಮ ಪಕ್ಷ ವಿಷಾದ ವ್ಯಕ್ತಪಡಿಸಿದೆ ಎಂದು ನಾನು ಸ್ಪಷ್ಟನೆಯನ್ನು ನೀಡಿದ್ದೇನೆ. ಅದೇ ರೀತಿ ನಾನು ಕಾಂಗ್ರೆಸ್ ಪಕ್ಷಕ್ಕೆ ಬರಲು ಕಾರಣವೇನು ಎನ್ನುವುದರ ಬಗ್ಗೆ ಕಾರಣವನ್ನು ಸಹ ನೀಡಿದ್ದೇನೆ. ಯಾವ ಕಾರಣದ ಹಿನ್ನಲೆಯಲ್ಲಿ ಅವರ ನಾಯಕರು ಮಂತ್ರಿಯಾಗುವುದಕ್ಕೆ ಬೇರೆ ಪಕ್ಷಕ್ಕೆ ಹೋಗಲು ಕಾರಣವೇನು; ಯಾವ ಕಾರಣದ ಹಿನ್ನಲೆಯಲ್ಲಿ ಅವರು ಹೊಸ ಪಕ್ಷವನ್ನು ಕಟ್ಟಿದರು ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣವನ್ನು ನೀಡಬೇಕು.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷದಲ್ಲಿರುವವರು ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಬಹಳ ಕೆಟ್ಟ ಮಾತುಗಳನ್ನು ಆಡಿದ್ದವರು. ಅವರುಗಳು ಏನೇನು ಮಾತುಗಳನ್ನಾಡಿದ್ದರು ಎನ್ನುವುದು ನಮಗೂ ಗೊತ್ತಿದೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಸತ್ಯವನ್ನು ಹೇಳುತ್ತಿದ್ದೇನೆ. ಅವರ ರೀತಿ ಸಮಯಕ್ಕೊಂದು ನಿಲುವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅವರು ಸತ್ಯವನ್ನು ಮಾತ್ರ ಹೇಳುತ್ತಾರೆ. ಸತ್ಯವನ್ನು ಬಿಟ್ಟು ಬೇರೇನನ್ನು ಹೇಳುವುದಿಲ್ಲ. ಅವರ ಅನುಭವ ಏನು ಎನ್ನುವುದು ನನಗೆ ಗೊತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಉಗ್ರಪ್ಪನವರನ್ನು ಕುರಿತು ಮಾತನಾಡುವುದು ಬೇಡ. ಆಯವ್ಯಯದ ಮೇಲೆ ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೇ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, . . . . . .

**ಉಪ ಸಭಾಪತಿಯವರುಃ–** ಮಾನ್ಯ ಶ್ರೀಕಂಠೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಪಕ್ಷದ ಉಪ ನಾಯಕರಿಗೆ ಈ ರೀತಿ ಮಾಡಿದರೆ ಹೇಗೆ?

**ಶ್ರೀ ವಿ.ಎಸ್.ಉಗ್ರಪ್ಪಃ–** ಅದು ಸಂಸದೀಯ ವ್ಯವಸ್ಥೆ.

**ಉಪ ಸಭಾಪತಿಯವರುಃ–** ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ಮಧ್ಯಪ್ರವೇಶ ಮಾಡಿ ಮಾತನಾಡಿದ ಕಾರಣದಿಂದಾಗಿ ಅವರು ಆಯವ್ಯಯದ ಮೇಲೆ ಮಾತನಾಡುವ ಅವಕಾಶವನ್ನು ಕಳೆದುಕೊಂಡಿದ್ದಾರೆ. ಬೇರೆ ಸದಸ್ಯರು ಮಧ್ಯೆ ಪ್ರವೇಶ ಮಾಡಿ ಮಾತನಾಡಿದರೆ ಅವರು ಆಯವ್ಯಯದ ಮೇಲೆ ಮಾತನಾಡುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ನಾನು ಚಿಕ್ಕ ಹುಡುಗನಿಂದಲೂ ಆರ್.ಎಸ್.ಎಸ್.ನಲ್ಲಿಯೇ ಬೆಳೆದು ಬಂದಿರುವವನು.

**ಉಪ ಸಭಾಪತಿಯವರುಃ–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವುಗಳು ಬಹಳ ಅನುಭವಿಗಳು ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ವಿಷಯವನ್ನು ಪ್ರಸ್ತಾಪ ಮಾಡಿ ಹಾಗೇ ನಿಲ್ಲಿಸುವುದಕ್ಕೆ ಬರುವುದಿಲ್ಲ. ನಾನು ಒಂದು ನಿಮಿಷಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ನಾನು ಚಿಕ್ಕ ವಯಸ್ಸಿನಿಂದಲೂ ಆರ್.ಎಸ್.ಎಸ್.ಗೆ ಹೋಗುತ್ತಿದ್ದೇನೆ. ನಮ್ಮ ತಂದೆಯವರಿಗೆ ಯಾರೋ ಹೇಳಿ, ಆ ವಿಚಾರ ಗೊತ್ತಾಗಿ ನನಗೆ ಬಹಳಷ್ಟು ಹೊಡೆದರು. ಅಲ್ಲಿ ಮುಂದುವರೆದ ಜನಾಂಗ ಬೇರೆ, ಹಿಂದುಳಿದ ಜನಾಂಗದವರು ಬೇರೆಯೆಂದು ತಾರತಮ್ಯ ಮಾಡುತ್ತಾರೆಂದು ಏನೇನೋ ಹೇಳಿದರಿಂದ ಅವರು ನನ್ನನ್ನು ಆರ್.ಎಸ್.ಎಸ್.ಗೆ ಹೋಗದಂತೆ ಹೊಡೆಯುತ್ತಿದ್ದರು. ಅವರ ಹೊಡೆತವನ್ನು ತಡೆಯುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾಗದೇ ನಾನು ಮನೆ ಬಿಟ್ಟು ಹೋಗಿದ್ದೆ. ಮೂರು ದಿನಗಳ ಕಾಲ ನಾನು ಮನೆಗೆ ಹೋಗಿರಲಿಲ್ಲ. 'ಅವನು ಎಲ್ಲಿಗೆ ಹೋಗಿದ್ದಾನೆಯೋ, ಊಟ ಮಾಡಿದ್ದಾನೆಯೋ ಇಲ್ಲವೋ' ಎಂದು ನಮ್ಮ ತಾಯಿ ಅಳುತ್ತಾ ಕುಳಿತಿದ್ದರು. ಆಗ ಅಪ್ಪ ಅಮ್ಮ ನನ್ನನ್ನು ಹುಡುಕಿಕೊಂಡು ಬಂದರು. ಶಿವಮೊಗ್ಗದಲ್ಲಿರುವ ಆಂಜನೇಯ ದೇವಸ್ಥಾನದ ಅರ್ಚಕರ ಮನೆಯಲ್ಲಿ ಅರ್ಚಕರ ಮಕ್ಕಳ ಜೊತೆಗೆ ನಾನು ಊಟ ಮಾಡುತ್ತಾ ಕುಳಿತಿದ್ದೆ. ಆ ದೃಶ್ಯವನ್ನು ನಮ್ಮ ಅಪ್ಪ ಅಮ್ಮ ನೋಡಿದ ಕೂಡಲೇ ನಮ್ಮ ತಂದೆಯ ಕಣ್ಣಿನಲ್ಲಿ ನೀರು ಬರುವುದಕ್ಕೆ ಪ್ರಾರಂಭವಾಯಿತು. ಎಲ್ಲರೂ 'ಆರ್.ಎಸ್.ಎಸ್. ಮೇಲ್ಜಾತಿಗೆ ಸೇರಿರುವುದು, ಕೆಳ ಜಾತಿಯವರನ್ನು ಜೊತೆಗೆ ಊಟಕ್ಕೆ ಕೂರಿಸಿಕೊಳ್ಳುವುದಿಲ್ಲ' ಎನ್ನುವ ಮಾತನ್ನು ಹೇಳುತ್ತಾರೆ. ಆದರೆ, ನಮ್ಮ ಅಪ್ಪ ತಮ್ಮ ಕಣ್ಣಾರೆ ಆ ರೀತಿಯ ಯಾವುದೇ ಭೇದಭಾವ ಇಲ್ಲದೇ ಇರುವುದನ್ನು ನೋಡಿ, 'ಯಾರು ಏನು ಬೇಕಾದರು ಹೇಳಿಕೊಳ್ಳಲಿ, ನೀನು ಆರ್.ಎಸ್.ಎಸ್.ಗೆ ಹೋಗು' ಎಂದು ಹೇಳಿದರು. ಅವತ್ತಿನ ದಿನ ನಾನು ಆರ್.ಎಸ್.ಎಸ್.ಗೆ ಹೋಗಿದ್ದರಿಂದ ಇವತ್ತು ನಾನು ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೇನೆ. ಇಲ್ಲಿ ಹಿಂದುಳಿದವರು, ದಲಿತರು ಎನ್ನುವ ಪ್ರಶ್ನೆಯೇ ಇಲ್ಲ. ಮಹಾತ್ಮ ಗಾಂಧಿಜೀಯವರು ಆರ್.ಎಸ್.ಎಸ್. ಕ್ಯಾಂಪ್‌ಗೆ ಬಂದಾಗ, 'ಇಲ್ಲಿ ದಲಿತರು ಎಲ್ಲಿದ್ದಾರೆ?' ಎಂದು ಕೇಳಿದರು. 'ಇಲ್ಲಿ ಯಾರೂ ದಲಿತರು ಇಲ್ಲ' ಎಂದು ಹೇಳಿದಾಗ 'ಇವರೆಲ್ಲ ಯಾರು?' ಎಂದು ಕೇಳಿದರು. 'ಇವರೆಲ್ಲರೂ ಹಿಂದುಗಳು' ಎನ್ನುವ ಉತ್ತರವನ್ನು ಹೇಳಿದರು. ಆರ್.ಎಸ್.ಎಸ್.ನಲ್ಲಿ ಹಿಂದುಳಿದವರು ದಲಿತರು ಎನ್ನುವ ತಾರತಮ್ಯವಿಲ್ಲ. ಎಲ್ಲರೂ ಒಂದೇ. ಆ ರೀತಿ ನಡೆಯುತ್ತಿದೆ.

ಈ ವಿಚಾರವನ್ನು ಇಲ್ಲಿಗೆ ಬಿಡುತ್ತಿದ್ದೇನೆ. ಈಗ ಆಯವ್ಯಯದ ಮೇಲಿನ ಚರ್ಚೆಯನ್ನು ಮುಂದುವರೆಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಈಶ್ವರಪ್ಪನವರೇ, ತಾವು ಮತ್ತು ಮಾನ್ಯ ಉಗ್ರಪ್ಪನವರು ಮಾಡಿರುವ ಚರ್ಚೆಗೆ ಯಾರು ಉತ್ತರ ಕೊಡುತ್ತಾರೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರೇ ಉತ್ತರ ಕೊಡಬೇಕಾಗುತ್ತದೆ. ನಮ್ಮ ನಾಯಕರನ್ನು ವಹಿಸಿಕೊಳ್ಳಬೇಕೋ ಬೇಡವೋ ಎನ್ನುವುದನ್ನು ಅವರೇ ತೀರ್ಮಾನ ಮಾಡಬೇಕು.

**ಉಪ ಸಭಾಪತಿಯವರು:–** ತಾವುಗಳು ತಮ್ಮ ತಮ್ಮ ಪರಿಚಯವನ್ನು ಯಾಕೆ ಈ ರೀತಿ ಮಾಡಿಕೊಳ್ಳುತ್ತಿದ್ದೀರಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಚರ್ಚೆಯಾಗಿರುವ ವಿಚಾರಗಳಿಗೆ ಬೆಲೆ ಇದೆಯೋ ಇಲ್ಲವೋ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾನು ಮತ್ತು ಮಾನ್ಯ ಉಗ್ರಪ್ಪನವರು ಮಾತನಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ ಯಾರು ಉತ್ತರವನ್ನು ಕೊಡಬೇಕು ಎನ್ನುವ ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಆದರೆ, ಸದನದಲ್ಲಿ ಚರ್ಚೆ ಮಾಡಿದಂತಹ ವಿಚಾರಗಳಿಗೆ ಬೆಲೆಯಿಲ್ಲವೆಂದರೆ, ಇದಕ್ಕೆ ಯಾರು ಉತ್ತರವನ್ನು ಕೊಡುತ್ತಾರೆ?

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಚಾರಕ್ಕೆ ಬನ್ನಿ.

**ಶ್ರೀ ಹೆಚ್.ಆಂಜನೇಯ:-** ಸನ್ಮಾನ್ಯ ಸಭಾಪತಿಯವರೇ,. . . . .

**ಉಪ ಸಭಾಪತಿಯವರು:-** ಮಾನ್ಯ ಆಂಜನೇಯರವರೇ ಮತ್ತು ಮಾನ್ಯ ಮಟ್ಟೂರ್‌ರವರೇ ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾವು ಘೋಷಣೆ ಮಾಡಿರುವ ಯೋಜನೆಗಳಲ್ಲಿ ಏನಾಗಿದೆ, ಏನಾಗಿಲ್ಲ ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಅದಕ್ಕೆ ಸರಿಯಾಗಿ ನಾವು ಉತ್ತರವನ್ನು ತಯಾರು ಮಾಡಿಕೊಂಡು ಬಂದು ಹೇಳುತ್ತೇವೆ. ವಿರೋಧ ಪಕ್ಷದ ನಾಯಕರಾಗಿ ಮಾತನಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯವಿದೆ, ಮಾತನಾಡಲಿ.

**ಉಪ ಸಭಾಪತಿಯವರು:-** ಮಾನ್ಯ ಆಂಜನೇಯರವರೇ, ಅದಕ್ಕೆ ಉತ್ತರವನ್ನು ಮಾನ್ಯ ಸಭಾ ನಾಯಕರು ನೀಡುತ್ತಾರೆ. ತಾವು ಮಾತನಾಡುವುದು ಬೇಡ, ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡಬೇಕು ಎನ್ನುವ ದೃಷ್ಟಿಯಿಂದಲೇ ನಾನು ಮಾತನಾಡುತ್ತಿರುವುದು. ಉತ್ತರ ಕೊಡದಿದ್ದರೆ ನಾನು ಬಿಡುವುದಿಲ್ಲ. ದಿನಾಂಕ:29.11.2016ರಂದು ಮಧ್ಯಾಹ್ನ 4 ಗಂಟೆ 10 ನಿಮಿಷದಲ್ಲಿ ಇದೇ ಸದನದಲ್ಲಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮತ್ತು ಸಮಾಜ ಕಲ್ಯಾಣ ಸಚಿವರಾಗಿರುವ ಮಾನ್ಯ ಆಂಜನೇಯನವರು ಏನು ಹೇಳಿದ್ದಾರೆ ಎನ್ನುವುದನ್ನು ಸಭೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ.

(ಮುಂದುವರಿದಿದೆ)

(297) 20.03.2017 ಟಿ.ಸಿ.ಹೆಚ್/ಆರ್.ಎನ್, 4.20

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):–**

ಮಾನ್ಯ ಮುಖ್ಯ ಮಂತ್ರಿಗಳು, either in the month of December, or in the month of January ತಿಂಗಳೊಳಗೆ ವರದಿ ಬರುತ್ತದೆ ಎಂದು ಹೇಳಿದ್ದರು. ಬರುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಆ ವರದಿಯನ್ನು ಸದನದಲ್ಲಿ ಮಂಡಿಸಲಿ, ಅದರ ಮೇಲೂ ಬೆಳಕು ಚೆಲ್ಲೋಣ. ಸ್ವಾತಂತ್ರ್ಯ ಬಂದು ಸುಮಾರು 70 ವರ್ಷ ಆದಮೇಲೆ ಮಾನ್ಯ ಅಂಬೇಡ್ಕರ್‌ರವರು ಹೇಳಿದಂತಹ ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯ ಯಾರ್ಯಾರಿಗೆ ಎಷ್ಟು ಸಿಕ್ಕಿದೆ. ರಾಜಕೀಯ ಅಧಿಕಾರ ಯಾರ್ಯಾರಿಗೆ ಎಷ್ಟು ಪಾಲು ಸಿಕ್ಕಿದೆ ಎನ್ನುವುದು ಎಲ್ಲರಿಗೂ ಗೊತ್ತಾಗಬೇಕು. ಇದು ಗೊತ್ತಾಗಲಿ ಎಂತಲೇ ಇದನ್ನು ಮಾಡಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿದರು. ಇದು ಭಾಷಣ ಅಲ್ಲ, ಸ್ವಾಮಿ. ನಿಮ್ಮ ಭಾಷಣವನ್ನು ಕೇಳುವುದಕ್ಕೋಸ್ಕರ ನಾವು ಇಲ್ಲಿಗೆ ಬರಬೇಕೇನು? ನೀವು ಸುಳ್ಳು ಹೇಳುವುದನ್ನು ಕೇಳುವುದಕೋಸ್ಕರ ನಾವು ಬರಬೇಕೇನು? ನೀವು ಸುಳ್ಳು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಹೋಗುವುದಕ್ಕೆ ನಾವು ಸದನಕ್ಕೆ ಬರುವುದಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ವರ್ಗದ ಜನ ನೋಡುತ್ತಿದ್ದಾರೆ. ಆ ಕಾಂತರಾಜು ರವರ ವರದಿ, ಯಾವ್ಯಾವ ವಿಚಾರಗಳು ಎಷ್ಟೆಷ್ಟಿದೆ ಏನು ಎಂದು ಹೇಳುತ್ತೀರಾ? ಆಮೇಲೆ ವಿಧಾನ ಪರಿಷತ್ತಿನಲ್ಲಿ ಈ ವಿಚಾರದ ಬಗ್ಗೆ ಗಲಾಟೆ ಮಾಡಿದ ಮೇಲೆ ಮತ್ತೇ ಅದನ್ನೇ ಹೇಳುತ್ತೀರಿ. ಮತ್ತೆ ಮತ್ತೆ ಅದನ್ನು ಕೇಳಿದ ಮೇಲೆ ನಿಮ್ಮ ಉತ್ತರವೇನು? ಏಕೆಂದರೆ, ವಿಧಾನ ಮಂಡಲದಲ್ಲೂ ಕೂಡ ಒಂದು ಏನು ಬೇಕಾದರೂ ಹೇಳಿ ಹೋಗಿಬಿಡಬಹುದು ಎನ್ನುವಂತಹ ಪರಿಸ್ಥಿತಿ ಬಂದಿದೆಯಲ್ಲಾ. ಇದು ಯಾವ ನ್ಯಾಯ ಸ್ವಾಮಿ. ಇಲ್ಲಿ ಬಂದು ಹೇಳಿದಂತಹ ಅಂಶದ ಬಗ್ಗೆಯೂ ಸಹ, ಇಲ್ಲೇ ಬೆಲೆ ಇಲ್ಲವೆನ್ನುವುದಾದರೆ, ಈ ಸದನಕ್ಕೆ ಬಂದು ನಾವು ಏನು ಮಾತನಾಡಬೇಕು?

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಪತ್ರಿಕೆಯಲ್ಲಿ ಪ್ರಕಟಿಸಲಾದ ಲೇಖನದ ನಕಲು ಪ್ರತಿಯನ್ನು ಸದನದ ಮೂಲಕ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತಂದರು)**

ನೋಡಿ ಇದರಲ್ಲಿ ಮಾನ್ಯ ಆಂಜನೇಯವರ ಉತ್ತರ, ಫೋಟೋ ಬೇರೆ ನಿಮ್ಮದು. ಬಜೆಟ್ ನಂತರ ಜಾತಿ ವರದಿ ಖಚಿತ. ಅದು ಖಚಿತವೋ ವಿಧಾನ ಪರಿಷತ್ತಿನಲ್ಲಿ ಕೊಟ್ಟಿದ್ದು. ಇದು ಖಚಿತವೋ. ನಾವು ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ತಾವು ಹೇಳಿಬಿಡಿ. ಅನೇಕರು ಸಭೆಗಳಲ್ಲಿ ಅವರ ನಾಯಕರುಗಳು ಈ ಬಗ್ಗೆ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ತಮ್ಮ ಪಕ್ಷದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯಲ್ಲಿ ಮಾತನಾಡಿದ್ದಕ್ಕೆ ಅವರಿಗೆ ಸ್ವಾತಂತ್ರ್ಯವಿದೆ. ಅವರು ಏತಕ್ಕೆ ಮಾತನಾಡಿದರು ಎಂದು ನಾನು ಕೇಳುವುದಿಲ್ಲ. ಅವರ ನಾಯಕರುಗಳು ಇದನ್ನು ಬಹಿರಂಗಪಡಿಸಬೇಡಿ ಎಂದು ಮಾತನಾಡಿದರಲ್ಲ. ಅದಕ್ಕೋಸ್ಕರ ತಾವು ನಿಲ್ಲಿಸಿಬಿಟ್ಟಿದ್ದೀರಾ. 1ನೇ ತಾರೀಖು, 15ನೇ ತಾರೀಖು ಮತ್ತು 30ನೇ ತಾರೀಖು ಈ ಮೂರು ತಾರೀಖುಗಳನ್ನು ಕೇಳಿ, ಕೇಳಿ, ಕೇಳಿ ಸಾಕಾಗಿ ಹೋಗಿದೆ ನಮಗೆ. ನಾಳೆ ಬಾ ಎಂದು ಅನೇಕ ಮನೆಗಳಲ್ಲಿ ಭೂತ ಬರುತ್ತದೆಂದು ಬರೆದಿರುತ್ತಾರೆ. ಹಾಗೆಯೇ ತಾವು ಹಾಕಿ ಬಿಡಿ. ಅನೇಕ ಮೋಸಗಳನ್ನು ಮಾಡಿದ್ದೇವೆ. ದಲಿತರಿಗೆ, ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಇದು ಒಂದು ಮೋಸ. ನಾವು ಕೊಡುವುದಿಲ್ಲವೆಂದು ಹೇಳಿಬಿಡಿ. ನಾವು ಕೇಳುವುದಿಲ್ಲ. ಅದನ್ನು ಬಿಟ್ಟುಬಿಡುತ್ತೇವೆ. ಮತ್ತೆ ತಮ್ಮ ಭಾಷಣಗಳಲ್ಲಿ ಹೇಳುತ್ತೀರಿ. ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ನೆನಪು ಮಾಡಿಕೊಳ್ಳುತ್ತೀರಿ. ಸ್ವಾತಂತ್ರ್ಯ ಬಂದು ಸುಮಾರು 70 ವರ್ಷವಾದ ಮೇಲೆ ಮಾನ್ಯ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಹೇಳಿದಂತಹ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಯಾರ್ಯಾರಿಗೆ ಎಷ್ಟು ಪಾಲು ಸಿಕ್ಕಿದೆ. ರಾಜಕೀಯ ಅಧಿಕಾರ ಯಾರ್ಯಾರಿಗೆ ಎಷ್ಟು ಪಾಲು ಸಿಕ್ಕಿದೆ ಎನ್ನುವುದು ಎಲ್ಲರಿಗೂ ಗೊತ್ತಾಗಬೇಕು. ಇಷ್ಟು ಗೊತ್ತಾಗಲಿ ಎಂತಲೇ ಇದನ್ನು ಮಾಡಿದ್ದೇವೆ. ಹೇಗೆ ಮಾಡಿದ್ದೀರಿ. ದುಡ್ಡು ಇದಕ್ಕೆ ಎಷ್ಟು ಖರ್ಚಾಯಿತು. ಅದು ಯಾರ ದುಡ್ಡು. ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇರಬೇಕು ಮಾನ್ಯ ಮಂತ್ರಿಗಳೇ. ಉತ್ತರ ಕೊಡುವ ತರಹ ಹೇಳಬೇಕು. ನಾನು ತಮಗೆ Calling Attention ನಲ್ಲೂ ಅಥವಾ ನಿಯಮ 330ರಡಿಯಲ್ಲಿ ತೆಗೆದುಕೊಳ್ಳಿ ಎಂದು ಪತ್ರ ಕಳುಹಿಸಿದ್ದೆನು. ಅದರಲ್ಲಿ ಅದು ಬರಲಿಲ್ಲ. ಏತಕ್ಕೆ ಅದರಲ್ಲಿ ಬರಲಿಲ್ಲ. ತಾವು ಮತ್ತೇ ಉತ್ತರ ಕೊಡಬೇಕಾಗುತ್ತದೆ. ನಾವು ಬಿಡುತ್ತೇವೆಯೇ, ಈಗ ಹಿಡಿದುಕೊಳ್ಳುತ್ತೇವೆ. ಅದಕ್ಕೆ ನಾನು ಹೇಳುತ್ತಿರುವುದು ಯಾವುದೇ ಒಂದು ವಿಚಾರ, ವಿಧಾನ ಪರಿಷತ್ತು ಮತ್ತು ವಿಧಾನ ಸಭೆ " ಪ್ರಜಾಪ್ರಭುತ್ವದ ದೇವಾಲಯ" ಈ ದೇವಾಲಯದಲ್ಲಿ ಬರುವಂತಹ ಪ್ರತಿಯೊಂದು ಮಾತು ಸಹ "ದೇವರಿಗೆ ಅರ್ಪಿತವಾದುದು". ಸುಳ್ಳು ಹೇಳುವುದಕ್ಕಲ್ಲ. ಇದನ್ನು ನೆನಪು ಇಟ್ಟುಕೊಂಡು ತಾವು ನಾಳೆ ಉತ್ತರ ಕೊಡಬೇಕಾದರೆ ಹೇಳಬೇಕು. ಅಥವಾ ತಾವು ಆ ವರದಿಯನ್ನು ಯಾವಾಗ ಜಾರಿಗೆ ತರುತ್ತೀರಿ ಎಂದು ಈಗಲೇ ಉತ್ತರವನ್ನು ಕೊಡುವುದಾದರೆ ಕೊಡಿ. ಈಗಲೂ ಉತ್ತರ ಕೊಡುವುದಾದರೆ ತಾವು ಕೊಡಬಹುದು.

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ ತಾವು ಎಲ್ಲವನ್ನು ಮಾತನಾಡಿ ಮುಗಿಸಿಬಿಡಿ. ನಾನು ಆಮೇಲೆ ಹೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಏಕೆ ಹೇಳಿ, ಈಗ ಉತ್ತರ ಕೊಡುವುದಕ್ಕೆ ಇಲ್ಲವಲ್ಲ. ಎಲ್ಲಾ ಮಾತನಾಡಿ ಮುಗಿಸಿ, ನಾವು ಆಮೇಲೆ ಕೊಡುತ್ತೇವೆ ಎಂದು ಈಗ ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಷ್ಟು ಹೊತ್ತಿನ ತನಕ ನಾನು ಮಾತನಾಡಿದೆನಲ್ಲ. ಆಗ ಏತಕ್ಕೆ ಉತ್ತರ ಕೊಟ್ಟಿರಿ, ಸದನದಲ್ಲಿ ಎದ್ದು ಎದ್ದು ಕುಣಿಯುತ್ತಿದ್ದರು. ಕುಣಿದಿದ್ದೇ ಕುಣಿದಿದ್ದು.

**(ಸದನದಲ್ಲಿ ನಗು)**

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ರಾಯಣ್ಣ ಆಗಲಿ ಎಂದು.. ..

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ರಾಯಣ್ಣ, ರಾಯಣ್ಣನನ್ನು ಹಿಡಿದು ಕೊಟ್ಟವರಾ. ರಾಯಣ್ಣನನ್ನು ಯಾರೋ ಹಿಡಿದುಕೊಟ್ಟರಲ್ಲ ಅವರ ಹೆಸರು ನನಗೆ ಗೊತ್ತಿಲ್ಲ, ಭೀಮಣ್ಣ ಅಲ್ಲ.. . .

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಜೈ ಭೀಮ್.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ ಛೇ, ಛೇ, ಛೇ ಆ ಡಾ|| ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಎಷ್ಟು ನಾವು ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸಿದರೂ ಸಾಕಾಗುವುದಿಲ್ಲ. ಆದರೆ ಅವರ ಹೆಸರನ್ನು ಹೇಳಿಕೊಂಡು ಅಂಬೇಡ್ಕರ್, ರಾಯಣ್ಣ, ಕನಕದಾಸ ಮತ್ತು ವಾಲ್ಮೀಕಿ ಅವರಿಗೇಕೆ ಮೋಸ ಮಾಡುತ್ತೀರಿ. ಇಲ್ಲಿ ಹೇಳಲ್ಲವೇ ಇಷ್ಟು ಹೊತ್ತಿನ ತನಕ, ಮತ್ತೆ ಏಕೆ ಎದ್ದು ಕೇಳುತ್ತೀರಿ. ಎಲ್ಲಾ ಕೊಟ್ಟಿದ್ದಾರಂತೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಎಲ್ಲಾ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಎಲ್ಲಾ ಕೊಟ್ಟಿದ್ದಾರಂತೆ, ಸಂಗೊಳ್ಳಿರಾಯಣ್ಣನ ನಂದಗಡಕ್ಕೆ ಹೋಗಿಬಿಟ್ಟರೆ, ಇಲ್ಲಿಂದಲೇ ಒಂದು ಬಸ್ ಅನ್ನು ಮಾಡಿ, ಎಲ್ಲರೂ ಹೋಗೋಣ. ಏನು ಹಾಗೆ ದೇಶದ, ಪ್ರಪಂಚದ ನಾನಾ ಭಾಗಗಳಿಂದ ಬಂದ ಯುವಕರಿಗೆ ಉತ್ಸಾಹ ಬರುತ್ತದೆ. ಸ್ಫೂರ್ತಿ ಬರುತ್ತದೆ. ಆ ರೀತಿ ಮಾಡಿ ಬಿಟ್ಟುಬಿಟ್ಟಿದ್ದಾರೆ. ರೀ ಅಲ್ಲಿ ಕತ್ತೆ ಮೇಯುತ್ತಿದೆ ಕಸ ಅಲ್ಲಿ ಇದೆ. ರಾಯಣ್ಣನವರನ್ನು ನೇಣು ಹಾಕಿದ ಜಾಗವನ್ನು ನಾನು ನೋಡಿದೆ. ರಾಯಣ್ಣನವರನ್ನು ನೇಣು ಹಾಕಿದ ಜಾಗದಲ್ಲಿ ಹೋಗಿ ನೋಡಿದರೆ ಹೊಟ್ಟೆ ಉರಿಯುತ್ತದೆ. ಕಸ ಬಿದ್ದಿದೆ, ಕತ್ತೆಗಳು ತಿನ್ನುತ್ತಿವೆ. ಇರಲಿ, ಆದರೆ ನಾವು ಎಲ್ಲವನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ ಮಾಡಲಿ. ನಾನು ಅದಕ್ಕಿಂತ ಮುಂದೆ ಹೋಗುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅಲ್ಲ ಇದು ಇಷ್ಟು ಲೇಟಾಗಿ ಹೇಗೆ ನನಪು ಆಯಿತು ಎಂದು ನನಗೆ ತಿಳಿಯುತ್ತಿಲ್ಲ. ಸಂಗೊಳ್ಳಿ ರಾಯಣ್ಣನ ಸ್ಥಳ 2008 ರಿಂದ 2013ನೇ ಸಾಲಿನವರೆಗೆ ಇದರ ನೆನಪು ಆಗಲಿಲ್ಲ. ಈಗ ಏಕೆ ನೆನಪು ಆಯಿತು ಎಂಬುದು ನನ್ನ ವಿನಂತಿ ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸುಮಾರು 70 ವರ್ಷಗಳಿಂದ ಅಧಿಕಾರದಲ್ಲಿದ್ದವರು, ಮಾನ ಮರ್ಯಾದೆ ಇಲ್ಲದಂಗೆ ಹೇಳುತ್ತಿರಲ್ಲ ರೀ. 70 ವರ್ಷಗಳಿಂದ ಈ ರಾಜ್ಯದಲ್ಲಿ ದಲಿತರು, ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರು ಎಂದು ಹೇಳಿ, ಹೇಳಿ ಅವರ ಓಟನ್ನು ತೆಗೆದುಕೊಂಡು ಅವರಿಗೆ ಮೋಸ ಮಾಡಿ ಅದನ್ನು ಹೇಳುತ್ತಿದ್ದೀರಿ. ನಾನು ಹೇಳುತ್ತಿದ್ದೇನೆ. ನಾವು ಅಧಿಕಾರದಲ್ಲಿದ್ದಾಗ 10 ಕೋಟಿ ರೂಪಾಯಿಗಳ ಹಣವನ್ನು ಮೀಸಲಿಟ್ಟು, ರಸ್ತೆ ಮಾಡಿಸಿ ಅಭಿವೃದ್ಧಿ ಪಡಿಸಿದ್ದೇವೆ. ಸ್ವಾತಂತ್ರ್ಯ ಹೋರಾಟಗಾರ ಆ ಸಂಗೊಳ್ಳಿ ರಾಯಣ್ಣನನ್ನು ಪ್ರತಿಷ್ಠಾನ ಮಾಡಿಸಿದವರು ನಾವು. ಈ ಸದನದಲ್ಲಿ ರೇವಣ್ಣವರು ಇದ್ದಾರೆ ಅವರನ್ನು ಕೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಐದು ವರ್ಷ ಬೇಕಾಯಿತೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಿಮಗೆ ಅದೂ ಇಲ್ಲವಲ್ಲರೀ. ಒಂದು ರೂಪಾಯಿಯನ್ನೂ ಮೀಸಲು ಇಟ್ಟಿಲ್ಲವಲ್ಲ ರೀ. ಬರೀ ಘೋಷಣೆ ಪ್ರತಿ ವರ್ಷ. ಏನು ಮಾತನಾಡುತ್ತೀರಿ. ನೀವು ಹೋಗಿದ್ದೀರಿ. ಅದಕ್ಕೆ ನಾನು ಸಂತೋಷಪಡುತ್ತೇನೆ. ನೀವು ಶ್ರೀ ಕೆಂಪಯ್ಯನವರನ್ನು ಕೇಳಿ ಆ ಸುದ್ದಿಯ ಬಗ್ಗೆ ನನಗೆ ಪೂರ್ಣವಾಗಿ ಗೊತ್ತಿಲ್ಲ. ನೀವು ನಂದಗಡಕ್ಕೆ ಹೋಗಿದ್ದಿರಿ ಹಾಗೂ ಒಂದು ವಿಶೇಷವಾದ ಒಂದು ಪ್ರಾಜೆಕ್ಟ್ ಅನ್ನು ಮಾಡುತ್ತಿದ್ದೀರೆಂದು ಕೇಳಿದೆ. 400 ಕೋಟಿ ರೂಪಾಯಿಗಳು ಎಂದು ಕೇಳಿದೆ. ಅದು ಏನು ವಿಷಯ ಎಂಬುದನ್ನು ಹೇಳಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾದರೆ, ಅದನ್ನು ಕೊಡಿಸಿದರೆ ಸಮಾಧಾನ ಎಂದು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ ರಚನೆಯಾಗಿದೆ. ಅದರ ಜೊತೆಗೆ ಅದರ infrastructure ಬಗ್ಗೆ ಈಗಾಗಲೇ ಕೆಲವು ಮೀಟಿಂಗ್‌ಗಳು ನಡೆದಿವೆ. ಸ್ಥಳ ಪರಿಶೀಲನೆ ಆಗಿದೆ. ಅಲ್ಲಿ ಮೂರು ಭಾಗ ಇದೆ. ಅವರು ಹುಟ್ಟಿದ ಸ್ಥಳ ಸಂಗೊಳ್ಳಿ. ಅಲ್ಲಿ ಒಂದು "ಶೌರ್ಯ ಅಕಾಡಮಿ ಅಡಿಯಲ್ಲಿ ಸೈನಿಕ ಶಾಲೆ" ಮಾಡಬೇಕೆಂದು ತೀರ್ಮಾನಿಸಲಾಗಿದೆ. ಮೊದಲನೇ ಹಂತದಲ್ಲಿ 100 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಎರಡನೆಯದು, ಅವರನ್ನು ನೇಣು ಹಾಕಿದ ಜಾಗವನ್ನು "ವೀರಭೂಮಿ" ಎಂದು ಪರಿಗಣಿಸಿ ಅಲ್ಲಿ ಹನ್ನೆರಡೂವರೆ ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಮ್ಯೂಜಿಯಂ ಹಾಗೂ ಇನ್ನಿತರ ಚಟುವಟಿಕೆಗಳ ಬಗ್ಗೆ ರೂಪುರೇಷೆಗಳನ್ನು ತಯಾರು ಮಾಡಲಾಗಿದ್ದು, ಅದನ್ನು ಸಲ್ಲಿಸಿದ್ದೇವೆ. ಮೂರನೆಯದು, ಏನು ಇವತ್ತು ನಂದಗಡದಲ್ಲಿ ಜಾಗ ಇದೆ ಅದನ್ನೂ ಸಹ ಅಭಿವೃದ್ಧಿ ಪಡಿಸಬೇಕೆಂದು ನಾವು ತಯಾರು ಮಾಡಿದ್ದೇವೆ. ಅಲ್ಲಿ ಒಂದು ಕೆರೆ ಇದೆ. ಆ ಕೆರೆಯನ್ನು ನವೀಕರಿಸಿ,

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ಬೋಟ್ ವಿಹಾರ ಕೇಂದ್ರವಾಗಿ" ಮಾಡಬೇಕೆಂದು ಇವೆಲ್ಲವೂ ಮಾಡಲು ಸಹ ಪ್ರಯತ್ನವಾಗಿದೆ. ಅಲ್ಲಿ ನಾಲ್ಕು ಎಕರೆ ಜಾಗ ಪಡೆದು, ಅಲ್ಲಿ ಯಾತ್ರೀ ನಿವಾಸ ಮತ್ತು ವಿದ್ಯಾರ್ಥಿಗಳಾಗಲಿ, ಸಂಶೋಧನೆ ಮಾಡುವವರಾಗಲೀ ಮತ್ತು ಅಲ್ಲಿಗೆ ಬಂದಂತಹ ಜನರು ಉಳಿದುಕೊಳ್ಳುವುದಕ್ಕೆ ಅಲ್ಲಿ ವಸತಿಯನ್ನು ಮಾಡುವುದಕ್ಕೂ ಸಹ ರೂಪುರೇಷೆಯನ್ನು ತಯಾರು ಮಾಡಿದ್ದೇವೆ. ಜೊತೆಗೆ ಕಾರ್ಯಕ್ರಮಗಳು ನಡೆಯುವುದಕ್ಕೆ ಅಲ್ಲಿ ಒಂದು ಆಡಿಟೋರಿಯಂ ಈಗಾಗಲೇ ಸಿದ್ದವಾಗಿದೆ. ಇಷ್ಟು ಕೆಲಸವನ್ನು ನಾವು ಮಾಡಿದ್ದೇವೆ. ನೀವು ರಾಯಣ್ಣರವರ ಹೆಸರಿನಲ್ಲಿ ಬರೀ ಸಭೆಯನ್ನು ಮಾಡುತ್ತಿದ್ದೀರೇ ಹೊರತು, ಅವರ ಹೆಸರನ್ನು ರಾಜಕೀಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೀರೇ ಹೊರತು, ರಾಯಣ್ಣವರ ಪರವಾಗಿ ನಿಮ್ಮ ಕಡೆಯಿಂದ ಏನು ಆಗಿಲ್ಲವೆಂದು ಸಭೆಯ ಮೂಲಕ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬಹಳ ಸಂತೋಷ, ನಾನು ಹೇಳುತ್ತಿರುವುದು ಮಾನ್ಯ ಶ್ರೀ ರೇವಣ್ಣರವರು ಹೇಳಿದ ಮಾತಿಗೆ ನಾನು ಸ್ವಾಗತ ಮಾಡುತ್ತೇನೆ. ತಾವು ಇಷ್ಟೆಲ್ಲಾ ಮಾಡಿದ್ದೀರಿ ಅದಕ್ಕೆ ತುಂಬಾ ಸಂತೋಷ. ಆದರೆ ಬಜೆಟ್‌ನಲ್ಲಿ ಅದಕ್ಕೆ ಒಂದು ರೂಪಾಯಿ ಮೀಸಲಿಟ್ಟಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಆಯವ್ಯಯದಲ್ಲಿ ಸೇರಿಸಲಾಗಿದೆ. ಅದನ್ನು ನೀವು ನೋಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವೇ ತೋರಿಸಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಬಜೆಟ್‌ನಲ್ಲಿ ರೂಪುರೇಷೆಯನ್ನು ಸಿದ್ಧಪಡಿಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸರ್, ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಬರೀ ಇದು ಒಂದು ಘೋಷಣೆ. ಮಾನ್ಯ ರೇವಣ್ಣರವರೇ ನಿಮ್ಮ ಕಳಕಳಿಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಾನು ಅದಕ್ಕೇ ಹೇಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಈ ಜಾಗಗಳನ್ನು ಖರೀದಿಸಿರುವವರು ಯಾರು ಅಲ್ಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಿಮ್ಮ ಕಳಕಳಿಯ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಹೇಳುವುದಕ್ಕೆ ಹೊರಟಿರುವುದು 2013–14ರಿಂದಲೂ ಸಹ ಹೀಗೆ ಹೇಳಿಕೊಂಡು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿದ್ದೀರಿ. ನನ್ನ ಆಸೆ ನಿಮ್ಮ ಆಸೆ ಒಂದೇನೆ. ನೀವು ಅದನ್ನು ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಅದನ್ನು ಬಿಟ್ಟು ಖಂಡಿತ ಬೇರೆ ಏನೂ ಕೇಳುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ನಾವು ಅದನ್ನು ಮಾಡಲು ಕಾರ್ಯೋನ್ಮುಖರಾಗಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯ ಮಂತ್ರಿಯವರ ಬಾಯಿಂದ ಅದನ್ನು ಹೇಳಲಿ. ಅದನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ನಾನು ಅದರ ರೂಪುರೇಷೆ ತಯಾರು ಮಾಡುವುದರ ಅಧ್ಯಕ್ಷನಾಗಿದ್ದೇನೆ. ಅದರಿಂದ ನಾನು ಹೇಳಿದೆ ಅಷ್ಟೆ. Infrastructure ಮಾಡುವುದಕ್ಕೆ ನಾನೇ ಅಧ್ಯಕ್ಷನಾಗಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹೌದು, ನೀವು ಅಧ್ಯಕ್ಷರಾಗಿರುವುದಕ್ಕೆ ಅಧಿಕೃತವಾಗಿ ಏನು ಇಲ್ಲ. ಇವರೇನು ಉದ್ದಕ್ಕೂ ಪಟ್ಟಿ ಹಾಕಿಕೊಂಡಿದ್ದಾರೆ. ಅಲ್ಲಿಂದ ಇಲ್ಲಿಯ ತನಕ ಮಾಡುತ್ತೇವೆಂದು ಹೇಳುತ್ತಿರುವ ಬಗ್ಗೆ ಸಂತೋಷ. ಅದನ್ನು ಬಜೆಟ್ ಬುಕ್‌ನಲ್ಲಿ ತಂದು ಅದಕ್ಕೆ ಒಂದು ರೂಪಾಯಿಯಾದರು ಮೀಸಲಿಟ್ಟರೆ, ಮುಂದಿನ ವರ್ಷಕ್ಕೆ ಅದಕ್ಕೆ 2 ರೂಪಾಯಿ ಸೇರಬಹುದು ಎನ್ನುವುದು ಅಷ್ಟೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದನ್ನು ಮಾಡಿ ನನ್ನದೇನು ಅಭ್ಯಂತರವಿಲ್ಲ.

**(ಮುಂದು.)**

(298) 20.3.2017 4.30 ಪಿಕೆ:ಆರ್‌ಎನ್

ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದಿದೆ)

ಮಾನ್ಯ ಆಂಜನೇಯನವರು ಸಮಾಜ ಕಲ್ಯಾಣ ಸಚಿವರು. 2016-17ನೇ ಸಾಲಿಗೆ, ಎಸ್‌ಸಿಪಿ/ಟಿಎಸ್‌ಪಿಗೆ, ಎಸ್.ಸಿ.ಗೆ ಇಟ್ಟಿದ್ದು ರೂ. 14405 ಕೋಟಿ, ಖರ್ಚಾಗಿದ್ದು ರೂ. 5648 ಕೋಟಿ. ಎಸ್.ಟಿ.ಗೆ ಇಟ್ಟಿದ್ದು ರೂ.7628 ಕೋಟಿ, ಖರ್ಚಾಗಿದ್ದು ರೂ. 2963 ಕೋಟಿ. ಅಂದರೆ ಶೇಕಡ 53 ಎಸ್.ಸಿ.ಗೆ ಮತ್ತು ಶೇಕಡ 52ರಷ್ಟು ಎಸ್.ಟಿ.ಗೆ ಎಂದಾಯಿತು. ನೀವು ದುಡ್ಡು ಇಟ್ಟಿದ್ದೀರಿ. ಆದರೆ ಆ ದುಡ್ಡು ಖರ್ಚು ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಭೆಗಳಲ್ಲಿ, ದಲಿತರಿಗೆ, ಹಿಂದುಳಿದವರಿಗೆ ಇಟ್ಟಂಥ ದುಡ್ಡು ಖರ್ಚು ಮಾಡದೇ ಇದ್ದರೆ ಗಲ್ಲಿಗೇರಿಸುವುದೊಂದನ್ನು ಬಿಟ್ಟು ಎಲ್ಲಾ ರೀತಿ ಶಿಕ್ಷೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತೇವೆ ಎಂದು ಅರ್ಥ ಬರುವ ರೀತಿಯಲ್ಲಿ ಹೇಳುತ್ತಾರೆ. ದಲಿತರಿಗೆ, ಹಿಂದುಳಿದವರಿಗೆ ಇಟ್ಟಿರುವ ಹಣ ಖರ್ಚು ಆಗಲೇಬೇಕು ಎಂದು ಹೇಳುತ್ತಾರೆ. ಅಧಿಕಾರಿಗಳು ಅದನ್ನು ಕೇಳಿಕೊಂಡು, ಹುಂ ಎಂದು ಹೇಳಿ ಸಭೆ ಮುಗಿಸಿಕೊಂಡು ಮನೆಗೆ ಹೋಗುತ್ತಾರೆ. 4 ವರ್ಷವಾಯಿತು. ಈ ನಾಲ್ಕು ವರ್ಷದ ಅವಧಿಯಲ್ಲಿ ಎಷ್ಟು ಜನ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿದ್ದೀರಿ? ನಿಮಗೆ ಬದ್ಧತೆ ಇದೆಯೇ? ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಂಬ ಮೂರು ಪದಗಳು 70 ವರ್ಷದಿಂದ ಇವರ ಬಾಯಿಗೆ ಸಿಕ್ಕಿ ಸಿಕ್ಕಿ ಮೆತ್ತಗಾಗಿ ಹೋಗಿವೆ. ಏನೂ ಲಾಭವಿಲ್ಲ. ಈ ಬಾರಿ ಬಜೆಟ್‌ನಲ್ಲಿ ಬುದ್ಧಿವಂತಿಕೆ ಪ್ರದರ್ಶನ ಮಾಡಿದ್ದಾರೆ, ಎಷ್ಟು ದುಡ್ಡು ಇಟ್ಟಿದ್ದೇವೆ ಎಂದು ಹೇಳುವುದಕ್ಕೆ ಹೋಗಿಲ್ಲ. ಒಟ್ಟು ಯೋಜನೆಯಲ್ಲಿ ಶೇಕಡ 24.1 ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಏನೇನು ಯೋಜನೆ ಮಾಡುತ್ತೀರಿ? ಇದು ಫಲಾನುಭವಿಗಳಿಗೆ ತಲುಪುತ್ತಿದೆಯೇ? ಅಥವಾ ಇದನ್ನು ಬೇರೆಯದಕ್ಕೆ ಡೈವರ್ಟ್ ಮಾಡುತ್ತಿದ್ದಾರೆಯೇ? ಅಧಿಕಾರಿಗಳು ಕೆಲಸ ಮಾಡಲಿಲ್ಲ, ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದು ಹೇಳುವ ಬದಲು ಇದಕ್ಕೊಂದು ಸದನ ಸಮಿತಿ ಮಾಡಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಹಣ ಇಟ್ಟಿದ್ದಾರೆ? ಕಳೆದ ನಾಲ್ಕು ವರ್ಷದಲ್ಲಿ ಏಕೆ ಹಣ ಖರ್ಚು ಮಾಡಿಲ್ಲ ಎನ್ನುವುದು ಗೊತ್ತಾಗಬೇಕು. ನೀವು ಇಲ್ಲಿ ಒಂದು ಬುದ್ಧಿವಂತಿಕೆ ತೋರಿಸಿದ್ದೀರಿ. ಈ ವರ್ಷ ಇಟ್ಟ ದುಡ್ಡು ಖರ್ಚು ಮಾಡುವುದಕ್ಕೆ ಆಗಲಿಲ್ಲ ಎಂದರೆ ಮುಂದಿನ ವರ್ಷ ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. ಅಂದರೆ ಇದರ ಬಗ್ಗೆ ಇನ್ನು ಪ್ರಶ್ನೆಯೇ ಕೇಳುವ ಹಾಗಿಲ್ಲ. ಕೇಳಿದರೆ, ಹೌದು ಉಳಿದಿದೆ, ಮುಂದಿನ ವರ್ಷ ಅದನ್ನು ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ಭಂಡತನದ ಪರಮಾವಧಿ. ಇದಕ್ಕೆ ಒಂದು ಸದನ ಸಮಿತಿ ಮಾಡಿ.

**ಶ್ರೀ ಹೆಚ್.ಆಂಜನೇಯ:-**ನಿಮ್ಮ 5 ವರ್ಷದ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಕಲ್ಯಾಣಕ್ಕೆ ನೀವು 22 ಸಾವಿರ ಕೋಟಿ ಖರ್ಚು ಮಾಡಿದ್ದೀರಿ. ನಾವು, ಈ ವರ್ಷದ ಮೊತ್ತವನ್ನೂ ಸೇರಿಸಿದರೆ ಒಟ್ಟು 60 ಸಾವಿರ ಕೋಟಿ ರೂಪಾಯಿ ಇಟ್ಟಿದ್ದೇವೆ. ಸುಮಾರು ರೂ. 50 ಸಾವಿರ ಕೋಟಿ ವೆಚ್ಚ ಮಾಡಿದ್ದೇವೆ. ನಾವೆಲ್ಲೂ ಕಳಪೆ ಮಟ್ಟದ ಕೆಲಸ ಮಾಡಿಲ್ಲ, ಪ್ರಗತಿ ಮಾಡಿದ್ದೇವೆ. ಈ ಕುರಿತು ಅಂಕಿಅಂಶಗಳ ಸಮೇತ ನಿಮಗೆ ಮಾಹಿತಿ ಕೊಡುತ್ತೇವೆ. ನೀವು, ಅವರಿಗೆ ಮೋಸ ಮಾಡಿದೆವು, ವಂಚನೆ ಮಾಡಿದೆವು ಎಂದು ನಮ್ಮ ವಿರುದ್ಧ ಭಾಷಣ ಮಾಡುತ್ತಿದ್ದೀರಿ. 5 ವರ್ಷದ ಅವಧಿಯಲ್ಲಿ ನೀವು ಮಾಡಿದ ಖರ್ಚು ರೂ.22 ಸಾವಿರ ಕೋಟಿ. ನಾವು ಈ ಮಾರ್ಚ್‌ನ ಅವಧಿಯೂ ಸೇರಿ ಒಟ್ಟು ನಾಲ್ಕು ವರ್ಷಗಳಲ್ಲಿ ರೂ. 50 ಸಾವಿರ ಕೋಟಿ ಖರ್ಚು ಮಾಡುತ್ತೇವೆ. ಇದರ ಅಂಕಿಅಂಶಗಳ ಸಮೇತ ವಿವರ ಕೊಡುತ್ತೇವೆ. ಎಲ್ಲೂ ಕಳಪೆ ಮಟ್ಟದ ಕೆಲಸವಾಗಿಲ್ಲ, ಪ್ರಗತಿಯಾಗಿದೆ. ನೀವು ಏನೇನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆಗಳನ್ನು ಕೇಳುತ್ತಿದ್ದೀರೋ ಅವೆಲ್ಲಕ್ಕೂ ನಾವು ಉತ್ತರ ಕೊಡುತ್ತೇವೆ. ಇಡೀ ರಾಷ್ಟ್ರದಲ್ಲಿ ಇರದೇ ಇರುವಂತಹ ಒಂದು ಕ್ರಾಂತಿಕಾರಕ ಕಾಯಿದೆಯನ್ನು ತಂದಿದ್ದೇವೆ. ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಪಿ/ಟಿಎಸ್‌ಪಿ ಕಾಯಿದೆ ಮಾಡಿದ್ದರಿಂದ ಅವರ ಕಲ್ಯಾಣಕ್ಕೆ, ಉದ್ಧಾರಕ್ಕೆ ಇವತ್ತು ಹಣ ಹರಿದು ಬರುತ್ತಿದೆ. ನಿಮ್ಮ ಪಕ್ಷದ ಶಾಸಕರನ್ನು ಹೋಗಿ ಕೇಳಿ. ಆಯಾ ಕ್ಷೇತ್ರದಲ್ಲಿ ಅಭಿವೃದ್ಧಿ ಆಗುತ್ತಿದ್ದರೆ ಅದು ಎಸ್‌ಸಿಪಿ/ಟಿಎಸ್‌ಪಿ ಯ ಫಲವಾಗಿ ಹೆಚ್ಚು ಫಲಾನುಭವಿಗಳಿಗೆ ಸೌಲಭ್ಯ ಕೊಡುವಂತಾಗಿದೆ. ಶಿಕ್ಷಣ, ಕೃಷಿ, ತೋಟಗಾರಿಕೆ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಸಾಕಷ್ಟು ಹಣ ಇದ್ದು, ಆ ಮೂಲಕ ಆಯಾ ಕ್ಷೇತ್ರದ ಶಾಸಕರು ಅಲ್ಲಿ ಕಲ್ಯಾಣ ಕಾರ್ಯಗಳನ್ನು ಮಾಡುತ್ತಿದ್ದಾರೆ. ತಾವು ಹೇಳಿದಂತೆ ಇಲ್ಲಿ ಯಾವುದೇ ರೀತಿಯ ಮೂಗಿಗೆ ತುಪ್ಪ ಹಚ್ಚುವಂತಹ ಕೆಲಸ ಮಾಡಿಲ್ಲ. ಮಾನ್ಯ ಈಶ್ವರಪ್ಪನವರು ಇಂತಹ ಗ್ರಾಮೀಣ ಭಾಷೆಯ ಪದಗಳನ್ನು ಬಳಸಿಯೇ ಭಾಷಣ ಮಾಡುತ್ತಾರೆ. ಮೋಸ ಮಾಡುವುದು, ಸುಳ್ಳು ಹೇಳುವುದು ಎಂಬ ಪದಗಳನ್ನು ಬಳಸಿ ನೈಜವಾಗಿ ಮಾತನಾಡುತ್ತೀರಿ. . .

**ಶ್ರೀ ಕೆ.ಎಸ್.ಈಶ್ವರಪ್ಪ:–** ಯಾವ ಪದಗಳನ್ನು ಬಳಸಬೇಕು ಎಂದು ಹೇಳಿ ಆ ಪದಗಳನ್ನು ಬಳಸುತ್ತೇನೆ.

**ಉಪಸಭಾಪತಿಯವರು:–** ಗ್ರಾಮೀಣ ಭಾಷೆಯಲ್ಲಿ ನೈಜವಾಗಿ ಮಾತನಾಡುತ್ತಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್ ಈಶ್ವರಪ್ಪ:–** ನೈಜವಾಗಿ ಮಾತನಾಡುತ್ತೇನೆ ಎಂದು ಒಪ್ಪಿಕೊಂಡು, ಜೊತೆಗೆ, ನಾವೂ ಕಡಿದು ಗುಡ್ಡೆ ಹಾಕಿದ್ದೇವೆ ಎಂದೂ ಹೇಳುತ್ತಿದ್ದಾರೆ. ಇದಕ್ಕೆ ಏನು ಹೇಳಬೇಕು?

**ಶ್ರೀ ಹೆಚ್.ಆಂಜನೇಯ:–** ನೀವು ಮಾತನಾಡುವಾಗ ಸತ್ಯಕ್ಕೆ ಹತ್ತಿರವಾದುದನ್ನು ಮಾತನಾಡಿ. ಪೂರ್ಣವಾಗಿ ತಳ್ಳಿ ಹಾಕುವುದಕ್ಕೆ ಹೋಗಬೇಡಿ. . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಅಯ್ಯೋ ರಾಮ, ಇಷ್ಟು ಹೊತ್ತು ನಾನು ಹೇಳಿದ್ದು ಸುಳ್ಳೇ? . . .

**ಶ್ರೀ ಹೆಚ್.ಆಂಜನೇಯ:–** ನಿಮ್ಮ 5 ವರ್ಷದ ಸಾಧನೆ ಕೇವಲ ರೂ. 22 ಸಾವಿರ ಕೋಟಿ. . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಹಾಗಾಗಿಯೇ ನಾವು ಸೋತೆವು, ಹಾಳಾದೆವು. ಈಗ ನೀವೂ ಹಾಳಾಗಬೇಡಿ. . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್. ಆಂಜನೇಯ:–** ನಾವು ಹಾಳಾಗಿ ಹೋಗುವುದಿಲ್ಲ. ಮುಂದೆಯೂ ನಾವೇ ಬರುತ್ತೇವೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ನೀವು ಎಷ್ಟು ಮಾಡಿದ್ದೀರಿ ಎಂದು ಅಂಕಿ–ಅಂಶಗಳ ಸಮೇತ ಹೇಳುತ್ತಿದ್ದೇನೆ . . . (ಗೊಂದಲ)

**ಶ್ರೀ ಹೆಚ್.ಆಂಜನೇಯ:–** ನಾನು ಕೂಡ ಉತ್ತರ ಕೊಡುವಾಗ ಅಂಕಿಅಂಶ ಸಮೇತ ವಿವರ ಕೊಡುತ್ತೇನೆ. . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಈಗ ನಾನು ಕೊಡುತ್ತಿರುವ ಅಂಕಿಅಂಶ ಸರಿಯಾಗಿದೆಯೋ? . . .

**ಶ್ರೀ ಹೆಚ್.ಆಂಜನೇಯ:–** ನಾನು ಉತ್ತರ ಕೊಡುವಾಗ ಅಂಕಿಅಂಶಗಳೊಂದಿಗೆ ವಿವರ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನನ್ನ ಹತ್ತಿರ ಇರುವ ಅಂಕಿಅಂಶಗಳನ್ನೂ ಸರ್ಕಾರವೇ ಕೊಟ್ಟಿರುವಂಥದ್ದು. ಈ ರೀತಿ ಭಂಡತನಕ್ಕೆ ಇಳಿದು ಮಾತನಾಡಿದರೆ ನಾನೇನು ಹೇಳುವುದಕ್ಕಾಗುತ್ತದೆ? Scheme details of SCP/TSP expenditure-2016. ಇದು ನಿಮ್ಮ ಇಲಾಖೆಯ ಅಂಕಿಅಂಶವೇ ಆಗಿದೆ. ಹಾಗಾದರೆ ನಿಮ್ಮ ಇಲಾಖೆಯವರು ಕೊಟ್ಟಿರುವ ಅಂಕಿಅಂಶಗಳು ಸುಳ್ಳೇ ಅಥವಾ ನಾನು ಕೊಡುತ್ತಿರುವ ಅಂಕಿ ಅಂಶ ಸುಳ್ಳೇ? . . .

**ಶ್ರೀ ಹೆಚ್.ಆಂಜನೇಯ:–** ನೀವು, ಈ ಸರ್ಕಾರ ಏನನ್ನೂ ಮಾಡಿಲ್ಲ ಎಂದು ಹೇಳುತ್ತಿದ್ದೀರಿ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಏನೂ ಮಾಡಿಲ್ಲ ಎಂದು ಹೇಳಲಿಲ್ಲ. ಶೇಕಡ 52 ಮತ್ತು ಶೇಕಡ 53 ರಷ್ಟು ಕೆಲಸ ಮಾಡಿದ್ದೀರಿ ಎಂದು ಹೇಳಿದೆ. . .

**ಉಪಸಭಾಪತಿಯವರು:–** ಮಾನ್ಯ ಮಂತ್ರಿಗಳೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ, ಉತ್ತರ ಕೊಡುವ ಸಂದರ್ಭದಲ್ಲಿ ನೀವು ನಿಮ್ಮ ಹತ್ತಿರ ಇರುವ ಮಾಹಿತಿಗಳನ್ನು ಕೊಡಿ.

**ಶ್ರೀ ಹೆಚ್.ಆಂಜನೇಯ:–**ಮಾನ್ಯ ಸಭಾಪತಿಗಳೆ, ನನ್ನ ಚೇಂಬರ್‌ನಲ್ಲಿ ಒಂದು ನಿಯೋಗ ಬಂದಿದೆ, ನಾನು ಹತ್ತು ನಿಮಿಷದಲ್ಲಿ ಹೋಗಿ ಬರುತ್ತೇನೆ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-**ಸಾಧ್ಯ ಇಲ್ಲ, ನಿಮ್ಮ ಎದುರಿಗೆ ಬೈದರೇನೇ ನನಗೆ ತೃಪ್ತಿ, ಸಮಾಧಾನ. ನೀವು ಅಲ್ಲಿಗೆ ಹೋಗಿಬಿಟ್ಟರೆ ನಾನು ಯಾರನ್ನು ಬೈಯಲಿ? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಹೆಚ್.ಎಂ.ರೇವಣ್ಣ:-** ಬೈಯುತ್ತೇನೆ ಎಂದು ಏಕೆ ಹೇಳುತ್ತೀರಿ? ವಿಷಯ ಹೇಳುತ್ತೇನೆ ಎಂದು ಹೇಳಿ. ಮಾನ್ಯ ಸಚಿವರು ಹೇಳಿದ ಹಾಗೆಯೇ ನೀವು ನಿಮ್ಮ ಭಾಷೆಯನ್ನು ಬಳಸುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಅದು ಗ್ರಾಮೀಣ ಭಾಷೆ ಎಂದು ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. . . .

**ಶ್ರೀ ಆಂಜನೇಯ:-** ಆಯಿತು, ಏನು ಬೈಯುತ್ತೀರೋ ಬೈದುಬಿಡಿ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ಇಲ್ಲ, ನಾನು ಬೈಯುವುದಿಲ್ಲ. ಆದರೆ ಈಗ ನೀವು ಸದನದಿಂದ ಹೊರಗೆ ಹೋಗುವ ಹಾಗಿಲ್ಲ ಅಷ್ಟೆ.

**ಶ್ರೀ ಆಂಜನೇಯ:-** ಐದು ನಿಮಿಷದಲ್ಲಿ ಹೋಗಿ ಬರುತ್ತೇನೆ. ನಿಮ್ಮವರ ನಿಯೋಗವೇ ಬಂದಿದೆ, ರಾಯಣ್ಣ ಬ್ರಿಗೇಡ್‌ನವರು ಬಂದಿದ್ದಾರೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:-**ನೀವು ಸದನದಿಂದ ಹೋದರೆ ನಾನು ಬೇರೆ ಇಲಾಖೆಯ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕಾಗುತ್ತದೆ.

**ಶ್ರೀ ಹೆಚ್.ಆಂಜನೇಯ:-** ಬಂದಿರುವ ನಿಯೋಗವನ್ನು ನಾನು ಭೇಟಿ ಮಾಡಿ ಬರುತ್ತೇನೆ. ಸದನದಲ್ಲಿ ಮಾನ್ಯ ಸಭಾನಾಯಕರು ಇದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಸಭಾನಾಯಕರು ದೇವರು ಕುಳಿತುಕೊಳ್ಳುವ ಹಾಗೆ ಕುಳಿತುಕೊಳ್ಳುತ್ತಾರೆ. ದೇವರಿಂದ ಕೆಲವು ಸಲ ವರವೂ ಸಿಗುವುದಿಲ್ಲ, ಶಾಪವೂ ಸಿಗುವುದಿಲ್ಲ. ಅಂತಹ ದೇವರು ನಮಗೆ ಸಿಕ್ಕಿದ್ದಾರೆ. ತಣ್ಣಗೆ ಕುಳಿತುಕೊಂಡಿರುತ್ತಾರೆ. ಎಷ್ಟಾದರೂ ಅಭಿಷೇಕ ಮಾಡಲಿ, ಅದು ಹಾಲಿನಿಂದಾಗಿರಲಿ, ಜೇನಿನದ್ದಾಗಿರಲಿ, ತುಪ್ಪದ್ದಾಗಿರಲಿ, ನೀರಿನದ್ದಾಗಿರಲಿ, ಮೊಸರಿನದ್ದಾಗಲಿ, ಸಕ್ಕರೆಯದ್ದಾಗಲಿ ತಣ್ಣಗೆ ಕುಳಿತುಕೊಂಡಿರುತ್ತಾರೆ. ಅಂತಹ ಪರಮೇಶ್ವರ್‌ರವರು ನಮಗೆ ಸಿಕ್ಕಿದ್ದಾರೆ. ಯಾವ ಭಾಷೆಯಲ್ಲಿ ಹೇಳಬೇಕೋ ಆ ಭಾಷೆಯಲ್ಲಿ ಹೇಳಿದರೆಯೇ ಅರ್ಥವಾಗುತ್ತದೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಹೊರಗೆ ಹೋದರೆ, ಅವರ ಇಲಾಖೆಯ ವಿಷಯವನ್ನು ಬಿಟ್ಟು ಬೇರೆ ಇಲಾಖೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯದ ಬಗ್ಗೆ ಮಾತನಾಡುತ್ತೇನೆ. ನೀವು ಬಂದ ಮೇಲೆ ಮತ್ತೆ ನಿಮ್ಮ ಇಲಾಖೆಯ ವಿಚಾರ ಮಾತನಾಡುತ್ತೇನೆ. . .

**ಶ್ರೀ ಹೆಚ್.ಆಂಜನೇಯ:–** ಹಾಗೆಯೇ ಮಾಡಿ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಅದಕ್ಕೆ ಮಾನ್ಯ ಸಭಾಪತಿಗಳು ಅವಕಾಶ ಕೊಡಬೇಕು. . .

**ಶ್ರೀ ಹೆಚ್.ಆಂಜನೇಯ:–**ಮಾನ್ಯ ಸಭಾಪತಿಗಳೆ, ನನ್ನನ್ನು ಭೇಟಿ ಮಾಡಲು ಒಂದು ನಿಯೋಗ ಬಂದಿದೆ, ಬೆಳಗ್ಗಿನಿಂದ ಕಾಯುತ್ತಿದೆ. ಅವರನ್ನು ಭೇಟಿ ಮಾಡಿ 10 ನಿಮಿಷದ ಒಳಗೆ ಬಂದುಬಿಡುತ್ತೇನೆ.

**ಉಪಸಭಾಪತಿಯವರು:–** ಆಯಿತು, ಹೋಗಿ ಬನ್ನಿ. ಮಾನ್ಯ ಈಶ್ವರಪ್ಪನವರೇ ಮಾನ್ಯ ಸಭಾನಾಯಕರು ಸದನದಲ್ಲಿದ್ದಾರೆ ತಾವು ದಯವಿಟ್ಟು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–**ಈ ರೀತಿಯ ವ್ಯವಸ್ಥೆ ಸರಿಯಾದುದಲ್ಲ. ಆದರೂ ನೀವು ಕೊಟ್ಟಿರುವ ರೂಲಿಂಗ್ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಎನ್ನುವ ಶಬ್ದಗಳು ಇವರ ನಾಲಿಗೆಯ ತುದಿಯಲ್ಲಿರುವಷ್ಟು ಬೇರೆ ಯಾರಲ್ಲೂ ಇಲ್ಲ. ಈ ಸಮುದಾಯದವರ ಬಗ್ಗೆಯೇ ಚರ್ಚೆ ಆಗುತ್ತಿದ್ದಾಗ ಈ ಸಂದರ್ಭದಲ್ಲಿ ಎದ್ದು ಹೋಗುತ್ತಾರೆ ಎಂದರೆ ಈ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಆಸಕ್ತಿ ಇದೆ ಎನ್ನುವುದನ್ನು ನಂತರ ಹೇಳುತ್ತೇನೆ.

(ಮುಂದು . . .)

(299)20.03.2017 MM-VK 4.40

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):–**

ಮಾನ್ಯ ಸಭಾನಾಯಕರೇ, ಕರ್ನಾಟಕ ರಾಜ್ಯದಲ್ಲಿ ಆರು ಸ್ಮಾರ್ಟ್ ಸಿಟಿಗಳನ್ನು ಕೇಂದ್ರಸರ್ಕಾರ ಸ್ಯಾಂಕ್ಷನ್ ಮಾಡಿದೆ. ನಿಮಗೆ ತಕ್ಕಂತೆ ನಿಮ್ಮ standard ಗೆ ತಕ್ಕಂತೆ ಇರುವುದು ಸ್ಮಾರ್ಟ್ ಸಿಟಿ. ನಮ್ಮ ಕರ್ನಾಟಕದಲ್ಲಿ White Collar Politician ಎಂದರೆ ಮಾನ್ಯ ಜಿ. ಪರಮೇಶ್ವರ್‌ರವರು. ಹೊಗಳಿದರೆ ಹೀಗೆ ಮಾತನಾಡುತ್ತೀರಿ. ಅವರು ನೋಡಿದರೆ ಬಯ್ದರು ಎನ್ನುತ್ತಾರೆ. ಇವರು ನೋಡಿದರೆ ನನಗೇಕೆ ಹೀಗೆ ಹೇಳುತ್ತೀರಿ ಎನ್ನುತ್ತಾರೆ ಹಾಗಾದರೆ ನಾನು ಯಾವ ಪದಗಳನ್ನು ಬಳಸಲಿ? ಇದರಲ್ಲಿ ಏನಾಗಿದೆ ಎಂದರೆ, ದಿನಾಂಕ 25–06–2015ರಂದು ಸ್ಮಾರ್ಟ್ ಸಿಟಿ ಅಭಿಯಾನದಡಿ ಸೇರಿರುವ ಆರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ ಶಿವಮೊಗ್ಗ, ಮಂಗಳೂರು ಮತ್ತು ತುಮಕೂರು ನಗರಗಳಿಗೆ ಎಂಟುನೂರು ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ಕೇಂದ್ರ ಸರ್ಕಾರದಿಂದ ಘೋಷಣೆಯಾಗಿದೆ. ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಪ್ರಾರಂಭವಾಗಲಿವೆ. ಅನೇಕ ನಗರಗಳಿಗೆ ಇನ್ನೂ ಎಂ.ಡಿ ಗಳೇ ನೇಮಕವಾಗಿಲ್ಲ. ನಿಮಗೆ ಇದರ ಕಲ್ಪನೆ ಇದೆಯೋ ಇಲ್ಲವೋ ಗೊತ್ತಿಲ್ಲ. ಎಂ.ಡಿಗಳೇ ನೇಮಕವಾಗಿಲ್ಲ ಎಂದರೆ ಏನು ಮಾಡುವುದು? ಈ ನಗರಗಳಿಗೆ ಏಜೆನ್ಸಿ ತೀರ್ಮಾನವಾಗಿಲ್ಲ. ಕೇಂದ್ರದಿಂದ ಹಣ ಬಂದು ಬಿದ್ದಿದೆ. ಎಂಟು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಪ್ಲ್ಯಾನ್ ಮಾಡುವುದು, ಎಸ್ಟಿಮೇಟ್ ಮಾಡುವುದು ಯಾವಾಗ? ಟೆಂಡರ್ ಕರೆಯುವುದು ಯಾವಾಗ? ಎಂ.ಡಿ ಗಳೇ ಇಲ್ಲವೆಂದರೆ ಅದಕ್ಕೆ ಅಪ್ಪ ಅಮ್ಮ ಯಾರು? ಇನ್ನು ಪಿ.ಎಂ.ಸಿ ಆಯ್ಕೆಯಾದ ನಂತರ ಯೋಜನೆಯನ್ನು ಅನುಷ್ಠಾನಕ್ಕೆ ತಂದು DPR ಮಾಡಿ ಕೇಂದ್ರಸರ್ಕಾರಕ್ಕೆ ಕಳುಹಿಸಿ, ಅಲ್ಲಿ ಒಪ್ಪಿಗೆ ತೆಗೆದುಕೊಂಡು ಅಲ್ಲಿಂದ ಬಂದ ನಂತರ ಟೆಂಡರ್ ಮಾಡುವುದಾಗಿದೆ. ಏಕೆಂದರೆ, ಇಷ್ಟು ದುಡ್ಡು ಬಂದರೆ ಕನಿಷ್ಟ ಆರು ಕಾರ್ಪೋರೇಷನ್‌ಗಳು ಸಾಕಷ್ಟು ಅಭಿವೃದ್ಧಿಯಾಗುತ್ತವೆ. ನಿಮಗೆ ಗೊತ್ತಿರುವ ಹಾಗೆ ಅನೇಕ ನಗರಸಭೆ, ಪುರಸಭೆ ಮತ್ತು ಕಾರ್ಪೋರೇಷನ್‌ಗಳಲ್ಲಿ ಕಸಬರಿಕೆಯನ್ನು ತೆಗೆದುಕೊಳ್ಳಲು ಹಣವಿಲ್ಲ. ಸಂಬಳವನ್ನು ಕೊಡಬೇಕಾದರೆ ತೆರಿಗೆ ಹಣ ಬಂದಿದೆಯೇ ಎಂದು ಹುಡುಕಿ ಹುಡುಕಿ ತಂದು ತೆರಿಗೆಯನ್ನು ಕೊಡುತ್ತಾರೆ. ಕೇಂದ್ರಸರ್ಕಾರದಿಂದ ಇಷ್ಟೊಂದು ಹಣ ಬರುತ್ತಿರುವ ಸಂದರ್ಭದಲ್ಲಿ ಇದನ್ನು ಸರಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ?

**ಶ್ರೀ ಈಶ್ವರ ಖಂಡ್ರೆ (ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು):-** ಮಾನ್ಯ ಸಭಾಪತಿಯವರೆ, ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಸರ್ಕಾರದಲ್ಲಿ ಇವತ್ತು ಪೌರ ಕಾರ್ಮಿಕರಿಗೆ ಭದ್ರತೆ ಕೊಡುವುದು, ಸುರಕ್ಷತೆ ಕೊಡುವುದು ಅಗತ್ಯವಾಗಿದೆ ಮತ್ತು ಸ್ಮಾರ್ಟ್ ಸಿಟಿಗಳಿರಬಹುದು, ನಗರೋತ್ಥಾನ-1, ನಗರೋತ್ಥಾನ-2 ಮತ್ತು ನಗರೋತ್ಥಾನ-3ಕ್ಕೆ ವಿಶೇಷವಾದಂತಹ ಕಾನೂನಿನಲ್ಲಿ ನಿಯಮಾವಳಿಗಳಿಗೆ ಬದಲಾವಣೆ ತಂದು ಅಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾಧಿಕಾರಿಗಳಿಗೆ ಐದು ಕೋಟಿ ರೂಪಾಯಿಗಳವರೆಗೆ ಆಡಳಿತಾತ್ಮಕ ಅನುಮೋದನೆ ಕೊಡುವುದಕ್ಕೆ ಪರವಾನಗಿ ಕೊಟ್ಟಿದ್ದೇವೆ. ತಾಂತ್ರಿಕ ಅನುಮೋದನೆ ಕೊಡುವುದಕ್ಕೆ ಪರವಾನಗಿ ಕೊಟ್ಟಿದ್ದೇವೆ. ಎಲ್ಲಾ ಕಾಮಗಾರಿಗಳು ಸಿದ್ಧತೆ ಮಾಡಿಕೊಂಡು ಪ್ರಾರಂಭ ಮಾಡುವಂತಹ ಹಂತದಲ್ಲಿ ನಡೆಯುತ್ತಿದೆ. ಈಗ ಬದಲಾವಣೆ ಕೂಡ ಆಗುತ್ತಿದೆ. ಬಹಳಷ್ಟು ಕಡೆ ಪರಿವರ್ತನೆಯೂ ಆಗಿದೆ. ಘನತ್ಯಾಜ್ಯ ವಿಲೇವಾರಿ ಇರಬಹುದು ಅದಕ್ಕೆ DPR ಮಾಡಿ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಿಪಡಿಸುವಂತಹ ವ್ಯವಸ್ಥೆಯನ್ನೂ ಮಾಡುತ್ತಿದ್ದೇವೆ. ಈಗ ಅದಕ್ಕೆ ಚುರುಕು ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದೇವೆ. ಇದನ್ನು ಮಾನ್ಯ ಪ್ರತಿಪಕ್ಷ ನಾಯಕರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಚಿವರೇ, ದಯವಿಟ್ಟು ಸ್ವಲ್ಪ ಕೇಳಿಸಿಕೊಳ್ಳುವ ಅಭ್ಯಾಸವನ್ನು ಮಾಡಿಕೊಳ್ಳಿ. ನಾನು ಕೇಳುತ್ತಿರುವುದೇನೆಂದರೆ, ಸ್ವಲ್ಪ ತಡೆಯಿರಿ. ಪೊರಕೆ ಇವರ ಅಂಗಡಿಯಲ್ಲಿ ಮತ್ತು ಮನೆಯಲ್ಲಿ ಸಿಕ್ಕಾಪಟ್ಟೆ ಇದೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಈಶ್ವರಪ್ಪರವರೆ, ಅವರು ಪೊರಕೆ ಸುದ್ದಿಯನ್ನು ಎತ್ತಲಿಲ್ಲ. ನೀವು ನಿಮ್ಮ ಬಾಯಿಯಲ್ಲಿ ಪೊರಕೆ ಎಂದು ಹೇಳುತ್ತಿದ್ದೀರಿ ಆದರೆ ಅವರು ಅದನ್ನು ಎತ್ತಲಿಲ್ಲ ಅಷ್ಟೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಯಿತು ಎಲ್ಲಾ ಪೂರ್ಣ ಪೊರಕೆಗಳೂ ಅವರ ಮನೆಯಲ್ಲಿವೆ ಮತ್ತು ಅಂಗಡಿಯಲ್ಲಿವೆ.

**ಶ್ರೀ ಈಶ್ವರ ಖಂಡ್ರೆ:-** ಮಾನ್ಯ ಈಶ್ವರಪ್ಪರವರೇ, ಬಾಕಿ ಇದ್ದೆ ಬಂದಿದ್ದಕ್ಕೆ ಹೇಳಿದೆ. ಪೊರಕೆಗಳಿಗೆಲ್ಲಾ ಹಣವನ್ನು ಕೊಟ್ಟಿದ್ದೇವೆ. ಬಾಕಿ ಇರುವುದನ್ನು ಸಂಬಳದಲ್ಲಿ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾರ್ಚ್ 7, 2017ರ ಪ್ರಜಾವಾಣಿ ಪತ್ರಿಕೆಯಲ್ಲಿ ಎಸ್‌ವಿಪಿ ರಚನೆ, ಪಿ.ಎಂ.ಸಿ ನೇಮಕ, ಡಿಪಿಆರ್ ಸಿದ್ಧಪಡಿಸುವ ಪ್ರಕ್ರಿಯೆ ವಿಳಂಬ. ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಅನುಷ್ಠಾನಕ್ಕೆ ವಿಘ್ನ. ಇದನ್ನು ಎಲ್ಲಿ ಹೇಳಲಿ? ಎಂ.ಡಿ ನೇಮಕ ಮಾಡಿಲ್ಲ. ಇದು ಬಹಳವಾಯಿತು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸ್ಮಾರ್ಟ್ ಸಿಟಿ ಯೋಜನೆಗೆ ಮೊದಲ ಪಟ್ಟಿಯಲ್ಲಿ ಆಯ್ಕೆಯಾಗಿರುವ ಬೆಳಗಾವಿ ಮತ್ತು ದಾವಣಗೆರೆ ನಗರಗಳಲ್ಲಿ ಸ್ಮಾರ್ಟ್ ಕಾಮಗಾರಿಗಳು ವರ್ಷ ಕಳೆದರೂ ಆರಂಭವಾಗಿಲ್ಲ. ಈ ಸರ್ಕಾರ ಇರಬೇಕಾದರೆ ಅದನ್ನು ಮಾಡುತ್ತಾರೆಯೇ? ಈಗಾಗಲೇ ಕೇಂದ್ರದಿಂದ ಬಂದ ಹಣವನ್ನು ಬೇರೆ ಬೇರೆ ರಾಜ್ಯಗಳು ಬಳಸಿಕೊಂಡಾಯಿತು. ನಮ್ಮ ರಾಜ್ಯದಲ್ಲಿ ಎಂ.ಡಿ ನೇಮಕ ಮಾಡಲು ನಿಮಗೇನು ಕಷ್ಟ? ನಿಮ್ಮ ಅಧಿಕಾರಿಗಳಲ್ಲೇ ಯಾರೋ ಒಬ್ಬ ಐಎಎಸ್ ಅಧಿಕಾರಿಯನ್ನು ನೇಮಕ ಮಾಡಿದರೆ ಆಯಿತು. ಎಂ.ಡಿ ನೇಮಕ ಮಾಡಲು ನಿಮಗೇನು ತೊಂದರೆ? ಯಾರದ್ದಾದರೂ influence ಬೇಕೇ? ಯಾರಾದರೂ ಪ್ರಭಾವ ಬೀರಬೇಕೇ? ಯಾರಿಗಾದರೂ ಕಾಂಚಾಣ ಕೊಡಬೇಕೇ? ರಾಜ್ಯದಲ್ಲಿ ಏನು ನಡೆಯುತ್ತಿದೆ? ಕೆಲಸ ಮಾಡುವುದಕ್ಕೆ ಐಎಎಸ್ ಅದಿಕಾರಿಗಳು ತಯಾರಿರಬೇಕಾದರೆ ಒಬ್ಬ ಎಂ.ಡಿ ನೇಮಕ ಮಾಡಲು ಇವರು ಹಿಂದೆ ಮುಂದೆ ನೋಡುತ್ತಾರೆ ಎನ್ನುವುದಾದರೆ ಹೇಗೆ? ಇವರಿಗೆ ಏನಾದರೂ ಹೇಳಿದರೆ ಸಿಟ್ಟು ಬರುತ್ತದೆ. ಹೀಗಾದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವೇನು ಮಾಡಬೇಕು? ಅನೇಕ ಕಡೆಗಳಲ್ಲಿ ಇದಕ್ಕೆ ಬೇಕಾದಂತಹ ಸಿಬ್ಬಂದಿಗಳು ಕೂಡ ನೇಮಕವಾಗಿಲ್ಲ. ಇದನ್ನು ನೋಡಿದರೆ ಮಾನ್ಯ ಸಚಿವರೇ, ಇನ್ನು ಎರಡು ವರ್ಷವಾದರು ಕೂಡ ಇದು ಪ್ರಾರಂಭವಾಗುವುದೇ ಎಂದು ನನಗೆ ಅನುಮಾನವಾಗುತ್ತಿದೆ. ಸ್ಮಾರ್ಟ್ ಸಿಟಿ ಬಗ್ಗೆ ಕೇಂದ್ರ ಸರ್ಕಾರದಿಂದ ಹಣ sanction ಆಗಿ ಬಂದಿದೆ. ಇದನ್ನು ಮಾಡುವುದಕ್ಕೆ ತುರ್ತಾಗಿ ಪ್ರಾಮಾಣಿಕ ಐಎಎಸ್ ಅಧಿಕಾರಿಗಳನ್ನು ಹುಡುಕಿ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ಒಂದೆರಡು ಕಡೆ ಆಗಿದೆ ನಾಲ್ಕು ಕಡೆಗಳಲ್ಲಿ ಆಗಿಲ್ಲ. ದಯವಿಟ್ಟು ಅದನ್ನು ತಕ್ಷಣ ಮಾಡಿದರೆ ಉಳಿದದ್ದೆಲ್ಲವುಗಳಿಗೂ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ಈ ಯೋಜನೆಯು ಕೇಂದ್ರ ಸರ್ಕಾರದ ಐದು ವರ್ಷಗಳ ಯೋಜನೆಯಾಗಿದ್ದು ಪ್ರತಿ ವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ 100 ಕೋಟಿ ರೂಪಾಯಿಗಳಂತೆ ಪ್ರತಿ ನಗರಕ್ಕೆ ಐದು ವರ್ಷಗಳ ಅವಧಿಯಲ್ಲಿ ಒಂದು ಸಾವಿರ ಕೋಟಿ. ಇಷ್ಟು ವಿಶೇಷವಾದ ಪ್ರಾಜೆಕ್ಟನ್ನು ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನು ಹಾಕಿದರೆ ಅವರು ಮಾಡಿಕೊಂಡು ಹೋಗುತ್ತಾರೆ. ಹಣವನ್ನೂ ಇಟ್ಟಿದ್ದೀರಿ. ಹಣವನ್ನು ಇಟ್ಟುಕೊಂಡರೆ ಸಾಕೇ? ಘೋಷಣೆ ಮಾಡುವುದು ಬೇಡವೇ? ಐಎಎಸ್ ಅಧಿಕಾರಿಗಳು ಬೇಡವೇ? ಕೆಲಸ ಮಾಡುವುದು ಬೇಡವೇ? ಪ್ರತಿ ಕಂಪನಿಗೆ 15 ಜನರು ನಿರ್ದೇಶಕರಾಗಿರುತ್ತಾರೆ. ರಾಜ್ಯದಿಂದ 6, ಕಾರ್ಪೋರೇಷನ್‌ನ 6 ಕೇಂದ್ರಸರ್ಕಾರದ 01, ಇತರೆಯವರು 02. ಈ ಮಂಡಳಿಯ ಅಧ್ಯಕ್ಷರು ಆಯಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಮ್ಯಾನೇಜಿಂಗ್ ಡೈರೆಕ್ಟರ್ ಐಎಎಸ್, ಕೆಎಎಸ್ ಯಾರಾದರೂ ಒಬ್ಬರು ಆಗುತ್ತಾರೆ. ನಾನು ಅದಕ್ಕೋಸ್ಕರ ಇತರ ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಏಜೆನ್ಸಿಗಳ ಏಜೆಂಟ್‌ಗಳನ್ನು ಬೇಗ ಫೈನಲ್ ಮಾಡಿ, ಅದಕ್ಕೆ ಬೇಕಾದಂತಹ ಎಂ.ಡಿಗಳನ್ನು ತಕ್ಷಣವೇ ನೇಮಕ ಮಾಡಿದರೆ ಈ ಕಾಮಗಾರಿ ಆರಂಭವಾಗುವುದಕ್ಕೆ ಒಳ್ಳೆಯದಾಗುತ್ತದೆ. ಈ ದಿಕ್ಕಿನಲ್ಲಿ ಕೇಂದ್ರದಿಂದ ಬಂದಿರುವ ಹಣ ಕೂಡ ವ್ಯರ್ಥವಾಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇದನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಬಗ್ಗೆ ಹೇಳಬೇಕಾದರೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿದ್ದರೆ ಚೆನ್ನಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ಸಾಕಷ್ಟು ಇದೆ. ಇಷ್ಟೊಂದು ಕುಡಿಯುವ ನೀರಿನ ಯೋಜನೆ ಇದೆ.  ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಪಂಚಾಯತ್‌ರಾಜ್ ಚುನಾವಣೆ ಸಂದರ್ಭದಲ್ಲಿ 10,000 ಸಾವಿರ ಕೋಟಿ ರೂಪಾಯಿಗಳನ್ನು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಈ ಬಜೆಟ್‌ನಲ್ಲಿ ಇಡುತ್ತೇವೆ ಎಂದು ಘೋಷಣೆ ಮಾಡಿದರು. 2017-18ರ ಆಯವ್ಯಯದಲ್ಲಿ ಪುಟ ಸಂಖ್ಯೆ 141ರಲ್ಲಿ ಖಂಡಿಕೆ 290ರಲ್ಲಿ *'ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ 2200*

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*ಕೋಟಿ ರೂಪಾಯಿಗಳನ್ನು ನೀಡಲಾಗುವುದು'* ಎಂದು ಹೇಳಿದ್ದಾರೆ. ಅದಕ್ಕೆ ನಾನು 10 ಬೇಡ, ಎರಡು ಬೇಡ, ಮಧ್ಯಕ್ಕಾದರೂ ಬರೋಣ ಎಂದು ಹೇಳಿದೆ.

**ಶ್ರೀ ಬಸವರಾಜ ಪಾಟೀಲ ಇಟಗಿ:-** ಮಾನ್ಯ ಈಶ್ವರಪ್ಪರವರೇ, ಗ್ರಾಮೀಣಾಭಿವೃದ್ಧಿ ಬಗ್ಗೆ ಅವರು ಹಾಗೆ ಹೇಳಿದ್ದರು. ಕುಡಿಯುವ ನೀರಿಗೆ ಅಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಯಿತು ಕುಡಿಯುವ ನೀರಿಗೆ ಹೇಳಿಲ್ಲ ಎಂದರೆ ಸಂತೋಷ. ನನ್ನದೇನೂ ಅಭ್ಯಂತರವಿಲ್ಲ. ನೀವು ಹೇಳಿದ್ದನ್ನು ನಾನು ನಂಬುತ್ತೇನೆ. ಈಗ ಕುಡಿಯುವ ನೀರಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಎಷ್ಟು ಹಣವನ್ನು ಇಡುತ್ತೇವೆ ಎಂದು ಹೇಳಿದ್ದರು? 2200 ಕೋಟಿ ರೂಪಾಯಿಗಳು ಎಂದು ಹೇಳಿದ್ದರೇ? ಇದನ್ನೇಕೆ ಹೇಳುತ್ತಿದ್ದೇನೆ ಎಂದರೆ, ನೀವಾಗಲೀ ಅಥವಾ ನಾವಾಗಲೀ ಇಲ್ಲಿಗೆ ಹುಡುಗಾಟಕ್ಕೆ ಬರುತ್ತಿಲ್ಲ. ಸರ್ಕಾರ ಇದರ ಬಗ್ಗೆ ಸೀರಿಯಸ್ಸಾಗಿ ತೆಗೆದುಕೊಳ್ಳದಿದ್ದರೆ ಅನೇಕ ಭಾಗಗಳಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ ಒಂದು ಪ್ರಾಜೆಕ್ಟ್ ಇದೆ. ಅದನ್ನು ಮುಗಿಸುವುದಕ್ಕೆ ಸುಮಾರು 1400 ಕೋಟಿ ರೂಪಾಯಿ ಹಣ ಬೇಕು. ಈ ರೀತಿ Mini Pipe Water Supply Scheme ಗಳಿಗೆ ಬೇಕು. ಇದಕ್ಕೆಲ್ಲಾ ಸೇರಿಸಿ 2200 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಇದರ ಬಗ್ಗೆ ಮತ್ತೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

(ಮುಂದು...

300/20-3-2017/4.50/ಡಿಎಸ್-ವಿಕೆ

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ಈಶ್ವರಪ್ಪ(ಮುಂದು):-**

ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆಂದರೆ, ಕನಿಷ್ಠ ಐದು ಸಾವಿರ ಕೋಟಿ ರೂಪಾಯಿಯನ್ನಾದರೂ ಇಡಬೇಕಾಗುತ್ತದೆ. ಗದಗ ಮಾನ್ಯ ಎಚ್.ಕೆ.ಪಾಟೀಲ್‌ರವರು ಕ್ಷೇತ್ರ. ನಿನ್ನೆ ನಾನು ಅಲ್ಲಿಂದ ಬಂದೆ. ನಿನ್ನೆ ಬೆಳಿಗ್ಗೆ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದೆ. ನಿಮ್ಮ ಸ್ಕೀಮ್ ಏನಾಯಿತು ಎಂದು ಕೇಳಿದೆ. ಇಲ್ಲ ಸರ್, ಅದಕ್ಕೆ ಬಹಳ ದುಡ್ಡು ಬೇಕು, ದುಡ್ಡು ಇಲ್ಲದಿದ್ದರೆ ಅದನ್ನು ಮುಗಿಸುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ನಿಮ್ಮಲ್ಲೇ ಮಂತ್ರಿ ಇದ್ದಾರಲ್ಲಾ ಅವರನ್ನು ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವುದಿಲ್ಲ ಎಂದು ಹೇಳಿದೆ. ಅವರು ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ ಎಂದು ಹೇಳಿದರು. ಅದು ಎಚ್.ಕೆ.ಪಾಟೀಲ್‌ರವರ ಕ್ಷೇತ್ರ. ಅವರು ಗ್ರಾಮೀಣಾಭಿವೃದ್ಧಿ ಮಂತ್ರಿ. ಅವರ ಕ್ಷೇತ್ರದಲ್ಲಿ Multi Village Scheme ಗೆ ದುಡ್ಡು ಕೊಡುವುದಿಲ್ಲ ಎಂದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯ ಪಕ್ಕದಲ್ಲೇ Multi Village Scheme ಗೆ ದುಡ್ಡು ಕೊಡುವುದಿಲ್ಲ ಎಂದರೆ, ಇನ್ನು ಎಲ್ಲಿಗೆ ದುಡ್ಡು ಕೊಡುತ್ತಾರೆ? ಈ ರೀತಿ ಕರ್ನಾಟಕ ರಾಜ್ಯದಲ್ಲಿ ಏನಾಗುತ್ತಿದೆ ಎಂದರೆ ಎಲ್ಲಾ ಪ್ರಾಜೆಕ್ಟ್‌ಗಳು ಬಜೆಟ್‌ನಲ್ಲಿ ಘೋಷಣೆಯಾಗುತ್ತವೆ. ಆ ಪ್ರಾಜೆಕ್ಟ್‌ಗಳು 20 ಪರ್ಸೆಂಟ್, 30 ಪರ್ಸೆಂಟ್, 40 ಪರ್ಸೆಂಟ್‌ಗೆ ನಿಲ್ಲುತ್ತದೆ. ಇದರ ಬಗ್ಗೆ ಪತ್ರಿಕೆಗಳಲ್ಲಿ, ಟಿವಿ ಗಳಲ್ಲಿ ಸಾಕಷ್ಟು ಬರುತ್ತಿವೆ. ಸಂಬಂಧಪಟ್ಟ ಮಂತ್ರಿಗಳು ಅದನ್ನು ನೋಡಿ, ಸಂಬಂಧಪಟ್ಟ ಅಧಿಕಾರಿಗಳನ್ನು ಕೂರಿಸಿಕೊಂಡು ಇದಕ್ಕೆ ಏನು ಹೇಳುತ್ತೀರಿ, ಏಕೆ ಇದನ್ನು ಮಾಡುವುದಿಲ್ಲ ಎಂದು ಈ ರೀತಿ ಕೇಳಿದಾಗ ಕೆಲಸಗಳು ಆಗುವುದಕ್ಕೆ ಪ್ರಾರಂಭವಾಗುತ್ತದೆ. ಅನೇಕ ಮಂತ್ರಿಗಳು ವಿಧಾನಸೌಧಕ್ಕೆ ಬರುವುದಿಲ್ಲ. ಕೆ.ಡಿ.ಪಿ. ಸಭೆಗಳು ನಡೆಯುವುದೇ ಇಲ್ಲ. ಯಾರಿಗೆ ಕೆಲಸ ಮಾಡುವುದಕ್ಕೆ ಆಸಕ್ತಿ ಇರುತ್ತದೆಯೋ ಅವರಿಗೆ ಮಂತ್ರಿ ಸ್ಥಾನ ಕೊಡಿ. ಮಾನ್ಯ ಪರಮೇಶ್ವರ್‌ರವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ನನಗೆ ಒಂದು ಸುದ್ದಿ ಬಂದಿತು. ಅದು ಸತ್ಯವೋ ಸುಳ್ಳೋ ಎಂದು ಮಾನ್ಯ ಪರಮೇಶ್ವರ್‌ರವರೆ ಹೇಳಬೇಕು. ಈ ಉಪ ಚುನಾವಣೆ ಮುಗಿದ ನಂತರ ಸಚಿವ ಸಂಪುಟ ಪುನರ್‌ರಚನೆ ಮಾಡುತ್ತೇವೆಂದು ಹೇಳಿದರು. ಸಂತೋಷ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ಸುತ್ತಿನಲ್ಲಿ ಯಾರ್‍ಯಾರು ಹಿಂದೆ ಮಂತ್ರಿಗಳು ಸರಿಯಾಗಿ ಕೆಲಸ ಮಾಡಲಿಲ್ಲ ಅವರನ್ನು ತೆಗೆದು ಹೊಸಬರಿಗೆ ಕೊಟ್ಟಿದ್ದಾರೆ. ಈಗಲೂ ಆ ರೀತಿ ಮಾಡಿ. ಬೇಕಾದಷ್ಟು ಎಂಎಲ್‌ಎ, ಎಂಎಲ್‌ಸಿ ಗಳು ಕೆಲಸ ಮಾಡುವಂಥವರು ಇದ್ದಾರೆ. ಅವರಿಗೆ ಇಂಥಿಂಥ ಕೆಲಸ ಮಾಡಬೇಕೆಂದು ಟಾರ್ಗೆಟ್ ಕೊಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ಮಂತ್ರಿ ಸ್ಥಾನ ಎನ್ನುವುದು ಎಂಜಾಯ್ ಮಾಡುವುದಕೋಸ್ಕರ ಇರುವಂತಹ ಸ್ಥಾನ ಆಗಿಬಿಡುತ್ತದೆ. ಮಂತ್ರಿ ಸ್ಥಾನ ಇರುವುದು ವೈಭವಕ್ಕಲ್ಲ. ಮಂತ್ರಿ ಸ್ಥಾನ ಇರುವುದು ಸಾಮಾನ್ಯ ಜನರಿಗೆ ಅನುಕೂಲವಾಗುವ ದಿಕ್ಕಿನಲ್ಲಿ ಹಣ ತೆಗೆದುಕೊಂಡು ಯೋಜನೆಗಳನ್ನು ಮಾಡಿ ಜಾರಿಗೆ ತಂದಾಗ ಆ ಮಂತ್ರಿ ಪಕ್ಕಾ ಎಂದು ಅನಿಸುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಮಂತ್ರಿ ಸ್ಥಾನ ಇಟ್ಟುಕೊಂಡು ಕಾರಿನಲ್ಲಿ ಸುತ್ತುವುದು, ರೆಡ್‌ಲೈಟ್ ಕಾರು, ಬಂಗಲೆ, ಟಿವಿ, ಇವುಗಳೇ ಆಗುತ್ತದೆಯೇ ವಿನಹ ಸಾಮಾನ್ಯ ಜನರ ಕೈಗೂ ಸಿಗುವುದಿಲ್ಲ, ವಿಧಾನಸೌಧದಲ್ಲೂ ಸಿಗುವುದಿಲ್ಲ, ಸಭೆಗಳಲ್ಲೂ ಸಿಗುವುದಿಲ್ಲ, ಏನು ಮಾಡುವುದು?

ಮಾನ್ಯ ಸಭಾಪತಿಯವರೆ, ಕೃಷಿ ಇಲಾಖೆ ಬಗ್ಗೆ ಹೇಳುವುದಾದರೆ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆಯನ್ನು ಶಿಫಾರಸ್ಸು ಮಾಡಲು ಕೃಷಿ ಬೆಲೆ ಆಯೋಗವನ್ನು ಸ್ಥಾಪನೆ ಮಾಡುವುದು ಹಾಗೂ ಜಿಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದಲ್ಲಿ 1500 ಕೋಟಿ ರೂಪಾಯಿಗಳ ಮೊತ್ತದ ಆವರ್ತನಿಧಿ ಸ್ಥಾಪನೆ ಮಾಡುವುದು ಎಂದು ಹೇಳಿದ್ದಾರೆ. ಆ ಕಡೆಗೆ ಗಂಧ ಇಲ್ಲ, ಗಾಳಿ ಇಲ್ಲ, ಆ ಕಡೆ ಕಣ್ಣು ಹಾಕಿಲ್ಲ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೃಷಿ ಗೋದಾಮು, ಶಿಥಿಲೀಕರಣ ಕೇಂದ್ರಗಳನ್ನು ಸ್ಥಾಪಿಸಲು ಬಡ್ಡಿ ರಹಿತ ಸಾಲ ನೀಡುವುದು. ತೋಟಗಾರಿಕೆ ಇಲಾಖೆಯಲ್ಲಿ ಡಾ:ಗೋರಕ್ ಸಿಂಗ್ ಕಮಿಟಿ ಶಿಫಾರಸ್ಸಿನಂತೆ ಹಳದಿ ರೋಗದ ತೊಂದರೆಗೊಳಗಾಗಿರುವ ಅಡಕೆ ಬೆಳಗಾರರಿಗೆ ಸಾಲ ಮನ್ನಾ ನೀತಿ ರೂಪಿಸುವುದು. ವಸತಿ ಯೋಜನೆಗಳು ಹಾಗೂ ಪಿಂಚಣಿ ಯೋಜನೆಗಳ ಫಲಾನುಭವಿಗಳನ್ನು ಗ್ರಾಮಸಭೆಯ ಮೂಲಕವೇ ಆಯ್ಕೆ ಮಾಡಲಾಗುವುದು ಎಂದು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ವಿವರಕ್ಕೆ ಹೋಗುವುದಿಲ್ಲ.

ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸುವುದು ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ, ನೀರಾವರಿ ಸಚಿವರ ನೇತೃತ್ವದಲ್ಲಿ ಒಂದೆರಡು ಸಭೆಗಳಾಗಿವೆ. ಯಾವುದು ಜಾರಿಯಾಗಿಲ್ಲ. ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪನೆ ಮಾಡಿ ಶಾಶ್ವತ ನೀರಾವರಿ ಯೋಜನೆ ಮೂಲಕ ಎಲ್ಲಾ ಕೆರೆಗಳನ್ನು ತುಂಬಿಸುವುದು ಹಾಗೂ ಕೆರೆ ಒತ್ತುವರಿಯಿಂದ ಸಂರಕ್ಷಣೆ ಮಾಡುವುದು ಎಂದು ಹೇಳಿದ್ದಾರೆ. ಕೆರೆ ಒತ್ತುವರಿ ಎಂದು ಹೇಳುತ್ತಿದ್ದಾಗಲೇ ಒಂದು ರೀತಿಯಲ್ಲಿ ರಾಜ್ಯದ ಅನೇಕ ರಾಜಕಾರಣಿಗಳ ಮುಖಗಳೇ ನೆನಪಿಗೆ ಬರುತ್ತದೆ. ಭೂಮಿ ಒತ್ತುವರಿ, ಕೆರೆ ಒತ್ತುವರಿ ಎಂದು ಹೇಳಿದಾಗ ಬುದ್ಧಿವಂತರು ಏನು ಮಾಡುತ್ತಾರೆ? ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ನಾವು ಚರ್ಚೆ ಮಾಡುತ್ತೇವೆಂದರೆ ಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತೆಗೆದುಕೊಂಡುಬಿಡುತ್ತಾರೆ. ಇಲ್ಲಿ ಚರ್ಚೆಯೇ ಮಾಡುವುದಕ್ಕಾಗುವುದಿಲ್ಲ. ಅನೇಕ ಮಂತ್ರಿಗಳ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡಿದ್ದೆ. ನಿಮ್ಮ ಹತ್ತಿರ ಕಳುಹಿಸಿಕೊಟ್ಟೆ. ಇಲ್ಲಿ ಒತ್ತುವರಿ ಬಗ್ಗೆ ಕೋರ್ಟ್‌ನಲ್ಲಿರುವುದರಿಂದ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು, ಅಲ್ಲಿಗೆ ಮುಗಿದು ಹೋಯಿತು. ಕರ್ನಾಟಕ ರಾಜ್ಯದಲ್ಲಿ ಕೆರೆಗಳ ಒತ್ತುವರಿ, ಭೂಮಿ ಒತ್ತುವರಿ ಬಗ್ಗೆ ಎಷ್ಟು ಅನ್ಯಾಯಗಳು ನಡೆಯುತ್ತಿವೆ ಎಂದರೆ ಒಂದು ರೀತಿ ಒತ್ತುವರಿದಾರರಿಗೆ ಕರ್ನಾಟಕ ಸ್ವರ್ಗ. ಭೂಮಿ ಒತ್ತುವರಿ, ಕೆರೆ ಒತ್ತುವರಿ ಬಗ್ಗೆ ಸದನದಲ್ಲಿ ಎಷ್ಟು ಬೇಕಾದರೂ ಮಾತನಾಡಲಿ, ನಾನು ಗಮನಿಸಿದ್ದೇನೆ, ಅವರಿಗೆ ಒಂದು ನೋಟಿಸ್ ಕೊಡುತ್ತಾರೆ. ಅವರು ಪುಣ್ಯಕ್ಕೆ ಆ ನೋಟಿಸ್ ಬರಲಿ ಎಂದು ಕಾಯುತ್ತಿರುತ್ತಾರೆ. ಆ ನೋಟಿಸ್ ತೆಗೆದುಕೊಂಡು ಕೋರ್ಟ್ ಹೋಗಿ ತಡೆಯಾಜ್ಞೆಯನ್ನು ತಂದು ಬಿಡುತ್ತಾರೆ, ಅಲ್ಲಿಗೆ ಮುಗಿದು ಹೋಯಿತು. ಅದು ಒಂದು ರೀತಿ ಅವರಿಗೆ ಪರ್ಮನೆಂಟ್ ಆಸ್ತಿಯಾಗಿಬಿಡುತ್ತದೆ. ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ಯಾಯವಾಗುತ್ತಿದೆ. ಕೆರೆ ಒತ್ತುವರಿ ಮತ್ತು ಭೂಮಿ ಒತ್ತುವರಿ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇಂಧನ ಇಲಾಖೆಯ ಬಗ್ಗೆ ಹೇಳುವುದಾದರೆ, ಈಗ ರಾಜ್ಯದಲ್ಲಿ ಮಳೆ ಇಲ್ಲ, ಬೋರ್‌ವೆಲ್ ಹಾಕಿದರೂ ನೀರು ಬರುತ್ತಿಲ್ಲ. ವಿದ್ಯುತ್ ಕೊಡುವ ಪ್ರಶ್ನೆ ಇಲ್ಲ. ಆದರೆ ಇವರು ಹೇಳಿದ್ದೇನು? 1,600 MW from Yeramarus, 700 MW from Bellary Thermal Power Station Unit-III, Kudgi ಯಲ್ಲಿ 800 ಮೆಗಾವ್ಯಾಟ್ ಮೊದಲನೆ ಘಟಕದಲ್ಲಿ ರಾಜ್ಯದ ಪಾಲು 400 ಮೆಗಾವ್ಯಾಟ್. ವಿದ್ಯುತ್ ಸ್ಥಾವರಗಳು ಮುಂದಿನ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ ಎಂದು ಹೇಳಿದ್ದಾರೆ. ಇದುವರೆಗೂ 700 ಮೆಗಾವ್ಯಾಟ್ BTPS ಬಿಟ್ಟರೆ ಏನೂ ಇಲ್ಲ. ನಾನು ಮಾನ್ಯ ಸಭಾನಾಯಕರಿಗೆ ವಿನಂತಿ ಮಾಡುವುದೇನೆಂದರೆ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಮಂತ್ರಿಯಾದಂತಹ ಸಂದರ್ಭದಲ್ಲಿ ಇಂಧನ ಇಲಾಖೆಯಲ್ಲಿ ಮೀಟರ್ ಖರೀದಿಯಲ್ಲಿ ಅವ್ಯವಹಾರ ಆಗಿತ್ತು. ಮಾನ್ಯ ಸಭಾಪತಿಗಳೇ, ಇದು ತಮಗೆ ಗೊತ್ತಿದೆ. ಆ ಅವ್ಯವಹಾರದಲ್ಲಿ 200 ಕೋಟಿ ಹಗರಣ ನಡೆದಿದೆ. ಟೆಂಡರ್‌ಗಳನ್ನೇ ಕರೆಯದೆ ಆ ಬೋರ್ಡ್ ಮೀಟಿಂಗ್‌ನಲ್ಲೇ resolution ಅನ್ನು ಮಾಡಿಕೊಂಡರು. ಆ ಮೀಟರ್‌ಗಳನ್ನು ಖರೀದಿ ಮಾಡುತ್ತಿದ್ದರು. ಪ್ರತಿ ವರ್ಷ ಕೂಡ enhance ಮಾಡುತ್ತಿದ್ದರು. ಇದು ತಪ್ಪು, ಟೆಂಡರ್ ಕರೆಯಲೇಬೇಕು ಎಂದು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಬಹಳ ಗೌರವದಿಂದ ಕಾಣುವಂತಹ ಮತ್ತು ಅವರು ಗುರುಗಳು ಎಂದುಕೊಂಡಿರುವ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಈ ಕಾನೂನನ್ನು ತಂದರು. ಅವರು ಮುಂಚೆ ಏನು ಭ್ರಷ್ಟಾಚಾರ ಆಗಿಲ್ಲ, ಅವ್ಯವಹಾರ ಆಗಿಲ್ಲ ಎಂದು ಸಾಕಷ್ಟು ವಾದ ಮಾಡಿದರು. ಅವರು ಕೊನೆಗೆ ಒಪ್ಪಿಕೊಂಡುಬಿಟ್ಟರು. ಅವ್ಯವಹಾರ ಆಗಿದೆ, ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ನಾನು ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಇದರ ಬಗ್ಗೆ ಸರ್ಕಾರ ಹಣಕಾಸು ಕಾರ್ಯದರ್ಶಿ ನೇತೃತ್ವದಲ್ಲಿ ತನಿಖೆ ನಡೆಸಿ ಮೂರು ತಿಂಗಳೊಳಗಾಗಿ ಕ್ರಮ ತೆಗೆದುಕೊಂಡ ಬಗ್ಗೆ ವರದಿಯನ್ನು ಈ ಸದನದಲ್ಲಿ ಮಂಡಿಸುವುದಾಗಿ ಹೇಳಿದರು. ಮಾನ್ಯ ಸಭಾನಾಯಕರೇ, ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಸದನದಲ್ಲಿ ಏನು ಭರವಸೆ ಕೊಡುತ್ತಾರೆಯೋ ಅದು ಕೂಡ ನಡೆಯಲಿಲ್ಲವೆಂದರೆ ಭ್ರಷ್ಟಾಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರೆ ಏನು ಲಾಭ? ಅವರೇನು ಕೂಗುತ್ತಾರೆ, ಛೀರುತ್ತಾರೆ, ಹೋಗುತ್ತಾರೆ, ಸಮಿತಿ ಮಾಡುತ್ತೇವೆಂದು ನಮ್ಮ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆ ಎಂಬುದು ಅಧಿಕಾರಿಗಳಿಗೂ ಗೊತ್ತಿದೆ. ಮೂರು ತಿಂಗಳೊಳಗಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. 200 ಕೋಟಿ ಹಗರಣ ನಡೆದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡು ವರ್ಷಗಳಾಯಿತು. ಇದನ್ನು ನಾನು ಬಹಳ ನೊಂದು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದು ಏನಾಯಿತು ಎಂಬುದನ್ನಾದರೂ ತಿಳಿಸಲಿ.

(ಮುಂದು)

(301) 20.03.2017/ 5.00/ ಕೆಹೆಚ್/ಬಿಎನ್ಎಸ್

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು):-** ಮೂರು ತಿಂಗಳು ಎಂದು ಹೇಳಿದ್ದರು. ಈಗಲಾದರೂ ನಾವು ತನಿಖೆ ಮಾಡಿ ವರದಿ ಮಾಡುತ್ತಿದ್ದೇವೆಂದು ಹೇಳಿದರೆ ತುಂಬಾ ಸಂತೋಷವಾಗುತ್ತದೆ. ಇಲ್ಲದಿದ್ದರೆ ಮತ್ತೆ ನಾವು ಪ್ರಸ್ತಾಪ ಮಾಡುವುದು. ನಿಮ್ಮದೊಂದು ಉತ್ತರ. ಎರಡು – ಮೂರು ತಿಂಗಳು ಬೇಕು ಎಂದು ಕಾಲಾವಕಾಶ ಕೇಳುವುದು ನಂತರ ಅಲ್ಲಿಗೆ ನಿಂತು ಹೋಗುವುದು ಇವೆಲ್ಲ ಆಗುತ್ತದೆ. ಇಡೀ ರಾಜ್ಯದಲ್ಲಿ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶದ ಬಗ್ಗೆ ಚರ್ಚೆಯಾಗುತ್ತಿದೆ. ಇದು ನಮ್ಮ ರಾಜ್ಯದ ಆಸ್ತಿ. ಕಪ್ಪತ್ತಗುಡ್ಡವನ್ನು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಹೇಳಿ ಅನೇಕ ಪೂಜ್ಯ ಸ್ವಾಮೀಜಿಗಳು ಹೋರಾಟ ಮಾಡಿಕೊಂಡು ಬಂದರು. ಹೋರಾಟ ಮಾಡಿ, ಹೋರಾಟ ಮಾಡಿ, ಹೋರಾಟ ಮಾಡಿದ ಮೇಲೆ ಬೆಳಗಾವಿ ಅಧಿವೇಶನದಲ್ಲೂ ಕೂಡ ಇದರ ಬಗ್ಗೆ ಚರ್ಚೆಯಾಯಿತು. ಮಾನ್ಯ ಮುಖ್ಯಮಂತ್ರಿಗಳು ಆ delegation ಜೊತೆಗೆ ಒಂದು ಸಭೆಯನ್ನು ಮಾಡಿದರು. ಈ ವಿಚಾರದ ಬಗ್ಗೆ ಖಂಡಿತವಾಗಿ ಗಮನವನ್ನು ಹರಿಸುತ್ತೇವೆ. ಇದಕ್ಕೆ ನ್ಯಾಯ ಕೊಡಿಸುತ್ತೇವೆ. ಯಾವ ಕಾರಣಕ್ಕೂ ಕೂಡ ಸಂರಕ್ಷಿತ ಅರಣ್ಯ ಪ್ರದೇಶ ಏನಿದೆ. ಈ ಸಂರಕ್ಷಿತ ಅರಣ್ಯ ಪ್ರದೇಶವನ್ನು ಉಳಿಸುತ್ತೇವೆ. ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದರ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ವನ್ಯಜೀವಿ ಮಂಡಳಿ ಸಭೆ ನಡೆಯಿತು. ಅಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರವನ್ನು ಕೊಟ್ಟರು. ಸರ್ಕಾರ ಇಂತಹ ಒಂದು ಅರಣ್ಯಪ್ರದೇಶಗಳ ಬಗ್ಗೆಯೂ ಕೂಡ ತಮ್ಮ ಆಸ್ತಿಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ನಡೆಸಲಿಲ್ಲವೆಂದರೆ, ಎಂಥೆಂತಹ ಖದೀಮರುಗಳು ಇರುತ್ತಾರೆ. ಸರ್ಕಾರಕ್ಕೆ ಟೋಪಿ ಹಾಕಿ ಅರಣ್ಯ ಪ್ರದೇಶಗಳನ್ನು ಉಳಿಸಿಕೊಳ್ಳಬೇಕೆಂದು ಹೇಳಿ ಸಾಧು-ಸಂತರು ಮತ್ತು ಪರಿಸರ ಪ್ರೇಮಿಗಳು ಹೋರಾಟ ಮಾಡುವಂತಹ ಪರಿಸ್ಥಿತಿ ಉಂಟಾಯಿತು. ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ಕೊಟ್ಟ ನಂತರ ಅವರು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸ್ವಲ್ಪ ತಡವಾಯಿತು. ಇವರು ಏನು ಮಾಡಿದರೆಂದರೆ ಮಾನ್ಯ ಮುಖ್ಯಮಂತ್ರಿಯವರು ತೀರ್ಮಾನ ಮಾಡುವುದಕ್ಕಿಂತ ಮುಂಚೆಯೇ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದರು. ಎಷ್ಟು ಕೋಟಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೂಪಾಯಿಗಳು ಕೊಟ್ಟರೂ ಇಂತಹ ಅರಣ್ಯ ಪ್ರದೇಶಗಳು ಉಳಿಯುತ್ತದೆಯೇ ಹೇಳಿ ನೋಡೋಣ. ಈಗ ಪುಣ್ಯಕ್ಕೆ ಈ ತಡೆಯಾಜ್ಞೆಗೆ ಇವತ್ತು ತೆರವು ಸಿಕ್ಕಿದೆ. ಇನ್ನು ತಡ ಮಾಡಿದರೆ ಮೇಲಿನ ಕೋರ್ಟ್‌ಗಳಿಗೆ ಹೋಗುತ್ತಾರೆ. ಇಂತಹ ಒಂದು ವಿಶೇಷವಾದಂತಹ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ಘೋಷಣೆ ಮಾಡುವುದಕ್ಕೆ ನಿಮಗೆ ಇರುವ ತೊಂದರೆಯೇನು? ನಾಳೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದನ್ನು ನಾನು ಘೋಷಣೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಘೋಷಣೆ ಮಾಡಲಿಲ್ಲವೆಂದರೆ ಯಾರೋ ಪ್ರಭಾವಿ ವ್ಯಕ್ತಿಗಳ ಕೈಯಲ್ಲಿ ಈ ಸರ್ಕಾರ ಸಿಕ್ಕಿಕೊಂಡಿದೆ ಎಂಬ ಭಾವನೆ ಬರುತ್ತದೆ. Court Order ಆದಮೇಲೆ ಜನ ಅಭಿಪ್ರಾಯ ಕೊಟ್ಟು, ನಿಮಗೆ ಅಧಿಕಾರವನ್ನು ಕೊಟ್ಟು ಎಲ್ಲ ಮಾಡಿದರೂ ಕೂಡ ಇದನ್ನು ಅರಣ್ಯಪ್ರದೇಶವೆಂದು ಘೋಷಣೆ ಮಾಡುವುದಕ್ಕೆ ನೀವು ತಯಾರಿಲ್ಲವೆಂದರೆ, ಖಂಡಿತವಾಗಿ ನೀವು ಪ್ರಭಾವಿ ವ್ಯಕ್ತಿಗಳ ಕೈಯಲ್ಲಿ ಸಿಕ್ಕಿಕೊಂಡು ಎಲ್ಲೋ ಇಲ್ಲಿ ಅವ್ಯವಹಾರ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಆದ್ದರಿಂದ ತಕ್ಷಣ ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅರಣ್ಯ ಸಂಪತ್ತು, ಔಷಧಿ ಸಂಪತ್ತು, ಖನಿಜ ಸಂಪತ್ತು ಇವೆಲ್ಲವನ್ನು ರಕ್ಷಣೆ ಮಾಡಿದ ಹಾಗಾಗುತ್ತದೆ. ತಕ್ಷಣ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಘೋಷಣೆ ಮಾಡಲಿಲ್ಲವೆಂದರೆ ನಾನು ಈ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಸಹ ಕೊಡುತ್ತೇನೆ. ಆ ಸಾಧು-ಸಂತರು ಯಾರಿದ್ದಾರೆ. ಅವರ ನೇತೃತ್ವದಲ್ಲಿ ದೊಡ್ಡ ಹೋರಾಟವನ್ನೇ ಮಾಡಬೇಕಾಗುತ್ತದೆ. ಯಾರೋ ಪ್ರಭಾವಿ ವ್ಯಕ್ತಿಗಳಿಗೆ ಇಷ್ಟಿಷ್ಟು ದೊಡ್ಡ-ದೊಡ್ಡ ಕಪ್ಪತ್ತಗುಡ್ಡದಂತಹ ಅರಣ್ಯ ಪ್ರದೇಶಗಳನ್ನು ಕೊಡುವುದಕ್ಕೋಸ್ಕರ ಈ ಸರ್ಕಾರ ಇರುವುದೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರದಲ್ಲಿ ಯಾವುದೇ ರೀತಿಯ ಅನಿಸಿಕೆಗಳನ್ನು ನಾವು ಅಂದುಕೊಂಡಿಲ್ಲ. ನಿಮ್ಮ ಸರ್ಕಾರದಲ್ಲಿ ರೆಡ್ಡಿಯವರಿಗೆ ಕೊಟ್ಟ ಹಾಗೆ ನಾವು ಯಾರಿಗೂ ನಮ್ಮಲ್ಲಿ ಕೊಡುವ ಪರಿಸ್ಥಿತಿ ಏನು ಇಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಕಳೆದ ಸಾರಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ಅದೇ ವಿಚಾರವನ್ನು ನಾನೇ ಪ್ರಸ್ತಾಪ ಮಾಡಿದ್ದೆ. ನಮಗೂ ನಿಮಗೂ ಇರುವಂತಹ ವ್ಯತ್ಯಾಸವೇನೆಂದರೆ ಆ ಕಪ್ಪತ್ತಗುಡ್ಡದ ಅರಣ್ಯ ಸಂಪತ್ತನ್ನು ಉಳಿಸುವುದಕ್ಕೆ ನಾವು ಪಕ್ಷಾತೀತವಾಗಿ ಈ ವಿಚಾರವನ್ನು raise ಮಾಡಿದ್ದೇವೆ. 2008 ರಿಂದ 2010ನೇ ಇಸವಿಯವರೆಗೆ, ದಿನಾಂಕ 16ನೇ ನವೆಂಬರ್ 2008ರಲ್ಲಿ ನಾನೇ Fact

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Finding Committeeಯ ಅಧ್ಯಕ್ಷನಾಗಿ ಒಂದು ವರದಿಯನ್ನು ಕೊಟ್ಟಿದ್ದೇನೆ. ದಿನಾಂಕ 18ನೇ ಡಿಸೆಂಬರ್ 2008ರಲ್ಲಿ ಲೋಕಾಯುಕ್ತರವರು preliminary report ಅನ್ನು ಕೊಟ್ಟರು. ಬಳ್ಳಾರಿ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಈ ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ. ಆಂಧ್ರದ ಓಬಳಾಪುರಂ mining company ಯವರು ಸುಮಾರು 32 ಕಿ.ಮೀ ಉದ್ದ, 2 ಕಿ.ಮೀ ಅಗಲದ ಜಾಗವನ್ನು ಒತ್ತುವರಿ ಮಾಡಿದ್ದಾರೆ . . . .

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ಈ ವಿಷಯವನ್ನು ಬಿಟ್ಟು ಬಳ್ಳಾರಿ ಮೈನಿಂಗ್ ವಿಚಾರಕ್ಕೆ ಏಕೆ ಹೋಗುತ್ತಿದ್ದಾರೆ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಯಾವ ಸರ್ಕಾರ ಇದ್ದಾಗ ಏನು ಮಾಡಿದ್ದಾರೆ ಎನ್ನುವುದು ಗೊತ್ತಾಗಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಯಾರಿಗೋ ಅನುಕೂಲ ಮಾಡಿಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಬೇರೆಯವರಿಗೆ ಅನುಕೂಲ ಮಾಡಿಕೊಟ್ಟಿಲ್ಲವೇ? ಅದರ ಬಗ್ಗೆ ಮಾತನಾಡಿದರೆ ವಿರೋಧ ಪಕ್ಷದವರಿಗೆ ಕೋಪ ಬರುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಕುಂಬಳಕಾಯಿ ಕಳ್ಳ ಎಂದರೆ ಏಕೆ ವಿರೋಧ ಪಕ್ಷದವರು ಹೆಗಲನ್ನು ಮುಟ್ಟಿಕೊಳ್ಳುತ್ತಾರೆ?

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಅದನ್ನು ಏಕೆ ನಮಗೆ ಹೇಳುತ್ತೀರಿ. ನೀವು ಘೋಷಣೆ ಮಾಡಿದ್ದು ಏಕೆ? ಮತ್ತೆ ಅದನ್ನು ವಾಪಸ್ಸು ತೆಗೆದುಕೊಂಡಿದ್ದು ಏಕೆ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಓಬಳಾಪುರಂ mining company ಯನ್ನು ಅವರಿಗೆ ಕೊಟ್ಟಿರುವುದು ನಾವಾ ಅಥವಾ ನೀವಾ? ಅದನ್ನು ನೀವು ಏಕೆ ಹೇಳುತ್ತೀರಿ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಮೊದಲು ಘೋಷಣೆ ಮಾಡಿರುವುದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಆ ರೀತಿ ವಾಪಸ್ಸು ತೆಗೆದುಕೊಂಡಿರುವುದನ್ನು ಘೋಷಣೆ ಮಾಡಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದನ್ನು ರಾಜ್ಯದ ಹಿತದೃಷ್ಟಿಯಿಂದ ಈಗಾಗಲೇ ಸರ್ಕಾರ ಅರಣ್ಯ ಸಂಪತ್ತನ್ನು ಉಳಿಸುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದೆ. ಹಿಂದೆ ಒಂದು ಲಕ್ಷ ಕೋಟಿ ರೂಪಾಯಿಗಳ ಅರಣ್ಯ ಸಂಪತ್ತನ್ನು ಲೂಟಿ ಮಾಡಿ ಯಾರು ಜೈಲಿಗೆ ಹೋಗಿದ್ದರೆಂಬುದನ್ನು ರಾಜ್ಯದ ಜನತೆ ಅರ್ಥಮಾಡಿಕೊಂಡಿದ್ದಾರೆ. ನೀವು ಸಹ ಇವತ್ತು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಜೈಲಿಗೆ ಹೋಗಬೇಕಾದರೆ victory sign. ಜೈಲಿನಿಂದ ಬರಬೇಕಾದರೆ. .

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಇವರು ಹಳೆಯ ಕಥೆಯನ್ನು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಹಳೆ ಕಥೆ ಎಲ್ಲಿಂದ ಬಂತು?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಶ್ರೀ ಯಡಿಯೂರಪ್ಪನವರ ಸರ್ಕಾರ ಅಧಿಕಾರದಲ್ಲಿದ್ದಾಗ ಸರ್ಕಾರದ ಸಂಪತ್ತನ್ನು ಲೂಟಿ ಮಾಡಿದರು.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇವತ್ತಿಗೂ ಸಹ ಶ್ರೀ ಬಿ.ಎಸ್. ಯಡಿಯೂರಪ್ಪನವರ ಪ್ರಕರಣ ಕೋರ್ಟ್ ಮುಂದೆ ಇದೆ. ಇವತ್ತಿಗೂ Central Bureau of Investigation (CBI) ನ ದುರ್ಬಳಕೆ ಮಾಡಿಕೊಂಡು ಪ್ರಕರಣವನ್ನು ಮುಚ್ಚಿಹಾಕುವುದಕ್ಕೆ ಪ್ರಯತ್ನ ಮಾಡಬಹುದು. ಶ್ರೀ ಯಡಿಯೂರಪ್ಪನವರ ಅವಧಿಯಲ್ಲಿ ಈ ರಾಜ್ಯದ ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಸಂಪತ್ತು ಲೂಟಿಯಾಗಿರುವುದನ್ನು ಈ ಇತಿಹಾಸದ ಕಾಲಘಟ್ಟದಲ್ಲಿ ನೋಡುವುದಕ್ಕೆ ಸಾಧ್ಯತೆ ಇದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದರಲ್ಲಿಯೂ ಶ್ರೀ ಈಶ್ವರಪ್ಪನವರು . . . .

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಈ ರೀತಿಯ ಎಲ್ಲಾ ಪ್ರಕರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಚರ್ಚೆಯಾದರೆ ಕಾಂಗ್ರೆಸ್ ಪಕ್ಷದವರು ಜೈಲಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಬೇಕಾದಂತಹ ಪ್ರಕರಣಗಳೆಷ್ಟು ಇದೆ ಎನ್ನುವುದರ ಬಗ್ಗೆ ದಾಖಲೆ ಇಡೋಣ. (ಗೊಂದಲ) ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ಬಾಯಿಗೆ ಬಂದ ಹಾಗೆ ಮಾತನಾಡಬಹುದೇ? (ಗೊಂದಲ) ಎಲ್ಲಾ ವಿಷಯಗಳ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ರಾಜ್ಯದ ಮಾನ-ಮರ್ಯಾದೆಯನ್ನು ಮತ್ತು ರಾಜ್ಯದ ಸಂಪತ್ತನ್ನು ಲೂಟಿ ಮಾಡಿದಂತಹವರು ಶ್ರೀ ಬಿ.ಎಸ್.ಯಡಿಯೂರಪ್ಪನವರು ಮತ್ತು ಭಾರತೀಯ ಜನತಾ ಪಾರ್ಟಿಯವರು ಇದನ್ನು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಒಂದು ಕೆಲಸ ಮಾಡಿ. ಅದನ್ನು debate ಗೆ ಅವಕಾಶ ಮಾಡಿಕೊಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಭ್ರಷ್ಟಚಾರ ಮಾಡಿದ ಸರ್ಕಾರ ಯಾವುದು? ಯಾರು ರಾಜ್ಯದ ಮರ್ಯಾದೆಯನ್ನು ತೆಗೆಯುತ್ತಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:-** ಶ್ರೀ ಉಗ್ರಪ್ಪನವರೆ ಮಾತನಾಡಿದ್ದು ಸಾಕು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮತ್ತೆ 2011 ನೇ ಇಸವಿಯಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಸ್ಥಾನದಿಂದ ರಾಜೀನಾಮೆ ಕೊಡಿಸಿದರು?

(ಗೊಂದಲ)

**ಉಪ ಸಭಾಪತಿಯವರು:-** ಶ್ರೀ ಉಗ್ರಪ್ಪನವರೆ, ಶ್ರೀ ಪುಟ್ಟಸ್ವಾಮಿಯವರೆ ಕುಳಿತುಕೊಳ್ಳಿ. ಶ್ರೀ ಉಗ್ರಪ್ಪನವರೆ ನೀವು ವಕೀಲರಿದ್ದೀರಿ ಮತ್ತು ಹಿರಿಯ ಸದಸ್ಯರಿದ್ದೀರಿ. ಈ ರೀತಿ ಮಾತನಾಡಬಹುದೇ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಸಂಬಂಧಪಟ್ಟ ವಿಚಾರದ ಬಗ್ಗೆ ಮಾತನಾಡಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ವಕೀಲರು ಈ ರೀತಿ ಎಲ್ಲ ಮಾತನಾಡುವುದೇ? ಮಾತನಾಡುವುದಕ್ಕೆ ಧೈರ್ಯ ಬೇಕು.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ ಅದು ನಿಮಗೆ ಸಂಬಂಧಪಟ್ಟ ವಿಚಾರವಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅಕ್ರಮ ಗಣಿಗಾರಿಕೆ ರಾಜ್ಯದ ಸಂಪತ್ತಿನ ಬಗ್ಗೆ ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ ದಯವಿಟ್ಟು ಕುಳಿತುಕೊಳ್ಳಿ. ಅವರು ಏನು ಹೇಳಿದರು. ಶ್ರೀ ನಾರಾಯಣಸ್ವಾಮಿಯವರೇ ಕುಳಿತುಕೊಳ್ಳಿ.

(ಮುಂದು)

302/20-03-2017/5-10/bkp-bns

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಶ್ರೀಯುತ ಸಂಕನೂರ ರವರೆ, ದಯವಿಟ್ಟು ಕುಳಿತಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಈ ದೇಶದ ಆಸ್ತಿಯನ್ನು ಉಳಿಸಿ ಎಂದು ನಾವು ಹೇಳುತ್ತಿದ್ದೇವೆ.

**ಉಪ ಸಭಾಪತಿಯವರು:–** ದಯವಿಟ್ಟು ನೀವು ಕುಳಿತುಕೊಳ್ಳಿ. Assembly ನಲ್ಲಿ ಮಾತನಾಡಿದಂತೆ ಮಾತನಾಡುತ್ತಿದ್ದೀರಿ. ನೀವೆಲ್ಲರೂ ಹಿರಿಯ ಸದಸ್ಯರಿದ್ದೀರಿ. ನಾಡಿನ ಜನರು ನೋಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇನ್ನು ಮುಂದೆ ನಾವು ಒಂದು ಕೆಲಸ ಮಾಡುತ್ತೇವೆ. ಭ್ರಷ್ಟಾಚಾರದ ಬಗ್ಗೆ ನಾವು ಪ್ರಸ್ತಾಪ ಮಾಡುವಂತಿಲ್ಲ, ಮೈನಿಂಗ್ ಬಗ್ಗೆ ನಾವು ಪ್ರಸ್ತಾಪ ಮಾಡುವಂತಿಲ್ಲ. ಈ ರೀತಿ ಕೋರ್ಟ್‌ನಿಂದ ವರದಿ ಬಂದಿದೆ ಎಂದು ಪ್ರಸ್ತಾಪ ಮಾಡುವಂತಿಲ್ಲ. ಅದರ ಬದಲು ನಾವು ಏನಾದರೂ ಪ್ರಸ್ತಾಪ ಮಾಡಿದಂತೆಯೇ ತಕ್ಷಣ ಏನು ಹೇಳುತ್ತಾರೆಂದರೆ, ನಿಮ್ಮ ಕಾಲದಲ್ಲಿ ಆಗಿತ್ತು ಎಂದು ಹೇಳುತ್ತಾರೆ. ಯಡಿಯೂರಪ್ಪನವರದ್ದು ಹಾಗೆ ಆಗಿತ್ತು ಎಂದು ಹೇಳುತ್ತಾರೆ. (ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ)

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಇಂದಿರಾಗಾಂಧಿಯವರ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಯೋಗ್ಯತೆ ಇದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:–** ಇಂದಿರಾಗಾಂಧಿಯವರ ಬಗ್ಗೆ ಮಾತನಾಡಲಿಕ್ಕೆ ಇವರಿಗೆ ಯೋಗ್ಯತೆ ಇಲ್ಲ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:–** ನಿಮ್ಮ ಹಾಗೆ ಲೂಟಿ ಮಾಡಿ ಅವರು ಹೋಗಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಯಡಿಯೂರಪ್ಪ ಜೈಲಿಗೆ ಹೋಗಿದ್ದು, ಆ ವಿಚಾರ ಈಗ ಕ್ಲಿಯರ್ ಆಗಿದೆ.

(ಗೊಂದಲ)

**ಉಪ ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಈ ದೇಶಕ್ಕೋಸ್ಕರ ಪ್ರಾಣತ್ಯಾಗ ಮಾಡಿದಂತಹವರು ಆ ತಾಯಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** (ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ) ಇದು 'ಸುಳ್ಳು' ಎಂದು ಹೇಳಿ ನೋಡೋಣ. ನೀವು ಸುಮ್ಮನೆ ಎದ್ದು ನಿಂತುಕೊಂಡು ಕೂಗಾಡಿದರೆ ನಾವು ಅದಕ್ಕೆ ಬಗ್ಗುವುದಿಲ್ಲ, ನಾವು ವಿರೋಧ ಪಕ್ಷದಲ್ಲಿರುವವರೇ, ನಾವು ಸತ್ಯ ಹೇಳುವವರೆ. . .

**ಡಾ|| ಜಿ.ಪರಮೇಶ್ವರ್:–** ನಾವು ಸಹ ಸತ್ಯವನ್ನೇ ಹೇಳುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಆಯಿತು, ಉತ್ತರ ಕೊಡುವಾಗ ಹೇಳಿ.

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸಚಿವರು ಕುಳಿತುಕೊಳ್ಳಬೇಕು. ವಿರೋಧ ಪಕ್ಷದ ನಾಯಕರು ಗಮನಿಸಬೇಕು. ತಾವು ದಯಮಾಡಿ ಆಯವ್ಯಯದ ಬಗ್ಗೆ ಮಾತನಾಡಿ. ಈ ಟೀಕೆಗಳು . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವೇ ಹೇಳಿ. ಕಪ್ಪತ್ತ ಗುಡ್ಡ ಬಗ್ಗೆ ನಾನು ಮಾತನಾಡುತ್ತೇನೆ. ನಾವು ಮಾತನಾಡುತ್ತಿರಬೇಕಾದರೆ ವರದಿ ಬಂದಿದೆ . . .

**ಉಪ ಸಭಾಪತಿಯವರು:–** ನೀವುಗಳು ಹಿರಿಯರಿದ್ದೀರಿ. ನೀವು ಮಾತನಾಡುವಂತಹ ಸಮಯದಲ್ಲಿ ವಿಷಯವನ್ನು ಬಿಟ್ಟು ಬೇರೆ ಬೇರೆ ವಿಷಯಕ್ಕೆ ಹೋಗುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ಕಪ್ಪತ್ತ ಗುಡ್ಡದ ಬಗ್ಗೆ ಕೋರ್ಟ್‌ನಿಂದ ಈ ರೀತಿ ವರದಿ ಬಂದಿದೆ, ವಿಳಂಬ ಮಾಡಬೇಡಿ, ಕಪ್ಪತ್ತ ಗುಡ್ಡವನ್ನು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಎಂದು ಹೇಳಿದ್ದು ತಪ್ಪಾ? ತಕ್ಷಣ ಅವರು ಯಾವ ವಿಷಯವನ್ನು ತೆಗೆದುಕೊಂಡರು? ಇದನ್ನು ನಾನು ಮಾಡಿದ್ದೋ ಅವರು ಮಾಡಿದ್ದೋ ಎಂದು ನೀವೇ ಹೇಳಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡುತ್ತಿದೆ ಎಂದವರು ಹೇಳಿದರು . .

**ಉಪ ಸಭಾಪತಿಯವರು:–** ಶ್ರೀಯುತ ನಾರಾಯಣಸ್ವಾಮಿ ರವರೆ, ಕುಳಿತುಕೊಳ್ಳಿ.

**ಶ್ರೀ ಎಂ. ನಾರಾಯಣಸ್ವಾಮಿ:–** ನಿಮ್ಮ ಸರ್ಕಾರ ಇದ್ದಂತಹ ಸಮಯದಲ್ಲಿ ಲೂಟಿ ಹೊಡೆಯುವವರಿಗೆ ಅವಕಾಶ ಮಾಡಿಕೊಟ್ಟಿದೆ.

**ಉಪ ಸಭಾಪತಿಯವರು:–** ನೋಡಿ, 6 ಗಂಟೆಗೆ ಸದನವನ್ನು ಮುಕ್ತಾಯಗೊಳಿಸಬೇಕು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾನಾಯಕರು ಇಲ್ಲಿ ಗಮನಿಸಬೇಕು. ಈ ಕಪ್ಪತ್ತ ಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶ ಘೋಷಣೆ ಮಾಡಬೇಕೆಂದು ಕೇಳಿದ್ದಕ್ಕೆ, ಅದಕ್ಕೆ ಸಂಬಂಧಪಟ್ಟಂತೆ ಕೋರ್ಟ್‌ನಿಂದ ವರದಿ ಬಂದಿದೆ, ಎಂದು ಉತ್ತರ ಕೊಡುವಂತಹ ಸಂದರ್ಭದಲ್ಲಿ ನೀವು ಹೀಗೆ ಮಾಡಿದ್ದೀರಿ, ಅದಕ್ಕೋಸ್ಕರ ನಾವು ಹೀಗೆ ಮಾಡಿದ್ದೇವೆ, ಎಂದು ಉತ್ತರ ಕೊಡಿಸುವುದಾದರೆ ಉತ್ತರ ಕೊಡಿಸಿ. ಇದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಏಕೆಂದರೆ, ನಾವು ಇಲ್ಲಿ ಏನು ನಡೆಯುತ್ತಿದೆ ಎನ್ನುವಂತಹ ಅಂಶವನ್ನು ಇವರ ಗಮನಕ್ಕೆ ತಂದಾಗ ಇವರಿಗೆ ಸಿಟ್ಟು ಬಂದರೆ ನಾವು ಏನು ಮಾಡಲಿಕ್ಕೆ ಆಗುತ್ತದೆ? ಹಾಗಾದರೆ, ನಾವು ಈ ವಿಚಾರವನ್ನು ಹೇಳಬಾರದೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಈ ವಿಚಾರವನ್ನು ಹೇಳುವಂತಹ ಸಮಯದಲ್ಲಿ ಅದನ್ನು ಹೇಳಿ ಎಂದು ನಾವು ಹೇಳುವುದಾಗಿದೆ. ಇದನ್ನು ರಕ್ಷಣೆ ಮಾಡುತ್ತೇವೆ, ಇದರ ಜೊತೆಗೆ ಅದನ್ನು ಹೇಳಿ ಶ್ರೀಯುತ ಈಶ್ವರಪ್ಪನವರೆ ಎಂದು ನಾವು ಹೇಳುತ್ತಿರುವುದಾಗಿದೆ. ರಾಜ್ಯದ ಸಂಪತ್ತು ಲೂಟಿಯಾಗಿತ್ತು, ಅದ್ದರಿಂದ, ನಾವು ಆ ಕಡೆ ಕುಳಿತಿದ್ದೇವೆಂದು ತಾವು ಹೇಳಿ.

**ಉಪ ಸಭಾಪತಿಯವರು:–** ಶ್ರೀಯುತ ಉಗ್ರಪ್ಪನವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದಕ್ಕೆ ಬಂಡತನ ಎನ್ನುವುದಾಗಿದೆ. ಈ ರೀತಿ ಹೇಳಿದ್ದರೆ, ನೀವು ಬಂಡತನ ಎಂದು ಹೇಳುತ್ತೀರಿ, ಎಂದವರು ಹೇಳುತ್ತಾರೆ. ಮತ್ತೆ, ನಾನು ಯಾವ ಪದವನ್ನು ಬಳಸಲಿ?

**ಉಪ ಸಭಾಪತಿಯವರು:–** ಶ್ರೀಯುತ ಈಶ್ವರಪ್ಪನವರೆ, ತಾವು ತಮ್ಮ ಭಾಷಣವನ್ನು ಮುಂದುವರಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:** ಭಂಡತನಕ್ಕೆ ಮತ್ತೊಂದು ಹೆಸರು ಈಶ್ವರಪ್ಪನವರು ಎಂದು ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಉಗ್ರಪ್ಪ ಎಂದು ತಿಳಿದುಕೊಂಡಿದ್ದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಭಂಡತನ ಎಂದರೆ ಈಶ್ವರಪ್ಪ ಎಂದು ತಿಳಿದುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಈ ಸಮಸ್ಯೆಯನ್ನು ಇಲ್ಲಿಯತನಕ ತರಬಾರದಿತ್ತು. ಈಗಾಗಲೇ ಆ ವನ್ಯ ಜೀವಿ ಮಂಡಳಿಯ ಸಭೆಯವರು ಮುಖ್ಯಮಂತ್ರಿಯವರ ಕೈಯಲ್ಲಿಯೇ ಪೂರ್ಣ ಅಧಿಕಾರವನ್ನು ಕೊಟ್ಟಿದ್ದರು. ಉಳಿಸಬೇಕೆನ್ನುವ ಆಸಕ್ತಿ ಇದ್ದರೆ, ಅವರು ಅದನ್ನು ಉಳಿಸಬಹುದಿತ್ತು. ಅವರು ಏತಕ್ಕೆ ಉಳಿಸಲಿಲ್ಲ? ಅವರು ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡರು. ಇವರಿಗೆ ಇದು ಸಂಬಂಧ ಇದೆ ಎಂದು ಹೇಳಬೇಕೋ ಬೇಡವೋ ಹೇಳಿ. ಯಾವ ಪ್ರಭಾವಿಗಳಿಗೆ ಇವರು ಬಗ್ಗಿದರು? ಈಗಲೂ ಸಹ ನಿಮಗೆ ನಮ್ಮ ಮನವಿ ಏನೆಂದರೆ, ಈ ರೀತಿಯಲ್ಲಿ ಕೋರ್ಟ್ ಆರ್ಡರ್ ಆಗಿದೆ, ಸ್ಪಷ್ಟವಾಗಿ ಆಗಿದೆ, ತಡೆಯಾಜ್ಞೆ ತೆರವು ಆಗಿದೆ. ಈಗ ಆರ್ಡರ್ ಮಾಡಿಸಿ. ಇದಕ್ಕೆ ಏನು ತೊಂದರೆ ಇದೆ? ವಿಳಂಬ ಮಾಡುತ್ತಿರುವ ಅರ್ಥ, ಮತ್ತೆ ಯಾರೋ ಮೇಲಿನ ಕೋರ್ಟ್‌ಗೆ ಹೋಗಿ ಸ್ಟೇ ತಂದರೆ, ನೀವು ಪ್ರಭಾವಿ ವ್ಯಕ್ತಿಗಳ ಹಿಡಿತದಲ್ಲಿದ್ದೀರಿ, ಈ ಸರ್ಕಾರ ಪ್ರಭಾವಿ ವ್ಯಕ್ತಿಗಳ ಹಿಡಿತದಲ್ಲಿದೆ ಎಂದು ಒಪ್ಪಿಕೊಂಡಂತಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೀಗಾಗಿ, ನಾನು ತಕ್ಷಣ ಹೇಳುವುದೇನೆಂದರೆ ಈ ಕಪ್ಪತ ಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶವೆಂದು ಹೇಳಿ ಘೋಷಣೆ ಮಾಡಿ. ಉತ್ತರದ ತನಕ ಕಾಯಲಿಕ್ಕೆ ಹೋಗಬೇಡಿ. ಮುಖ್ಯಮಂತ್ರಿಗಳು ಯಾವಾಗ ಉತ್ತರವನ್ನು ಕೊಡುತ್ತಾರೋ ಗೊತ್ತಿಲ್ಲ. ಅದು 27 ನೇ ತಾರೀಖು, 28 ತಾರೀಖು ಇರಬಹುದು, ಅದು ನನಗೆ ಸರಿಯಾಗಿ ಗೊತ್ತಿಲ್ಲ. ಆದ್ದರಿಂದ, ದಯವಿಟ್ಟ, ಇದನ್ನು ನಾಳೆಯೇ ಘೋಷಣೆ ಮಾಡಿದರೆ. . .

**ಶ್ರೀ ಕೆ.ಸಿ.ಕೊಂಡಯ್ಯ:-** ನೀವು ಯಾವಾಗ ಕೇಳುತ್ತೀರೋ ಆಗ ಅವರು ಉತ್ತರ ಕೊಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಹೇಳಿದಂತಹ ಸಮಯದಲ್ಲಿ ಮುಖ್ಯಮಂತ್ರಿಗಳು ಕ್ರಮ ತೆಗೆದಕೊಳ್ಳಿ ಎಂದು ಹೇಳಿದ್ದರೆ, ಆ ಡೈರಿ ಕೇಸ್‌ನಲ್ಲಿ ರಾಜೀನಾಮೆ ಕೊಡಿ ಎಂದ ತಕ್ಷಣ ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ನಾನು ಹೇಳಿದ ಮಾತನ್ನು ಅವರು ಕೇಳುವುದಿಲ್ಲ. ಕೇಳಿದ್ದರೆ ಗೌರವ ಬರುತ್ತಿತ್ತು. (ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ)

**ಉಪ ಸಭಾಪತಿಯವರು:-** ಮುಖ್ಯಮಂತ್ರಿಗಳು ನಿಮ್ಮ ಮಾತನ್ನು ಕೇಳುತ್ತಾರೆಂದವರು ಹೇಳಲಿಲ್ಲ. ಅವರು ಯಾವಾಗ ಬೇಕಾದರೂ ಉತ್ತರ ಕೊಡುತ್ತಾರೆಂದು ಹೇಳಿದರು.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:** (ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ)

**ಉಪ ಸಭಾಪತಿಯವರು: -** ಶ್ರೀಯುತ ಉಗ್ರಪ್ಪನವರೆ, ಆ ವಿಚಾರವನ್ನು ಬಿಡಿ. ತಾವು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:** (ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ) ಈಗ ಯಾರು ರಾಜೀನಾಮೆ ಕೊಡಬೇಕೆಂದು ಅವರು ಹೇಳಲಿ.

**ಉಪ ಸಭಾಪತಿಯವರು:-** ಶ್ರೀಯುತ ಉಗ್ರಪ್ಪನವರೆ, ಸುಮ್ಮನೆ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಗಿಸಲಿ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಈಗ ಸದನಕ್ಕೆ ಬಂದರು. ಅವರು ಲೇಟ್ ಆಗಿ ಬಂದಿದ್ದಾರೆ, ಅವರ ದಾರಿಗೆ . . .

**ಶ್ರೀ ಹೆಚ್.ಆಂಜನೇಯ:-** ತಮ್ಮ ಭಾಷಣ ಆಯಿತಲ್ಲಾ, ಮತ್ತೇನು ಮಾತನಾಡುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲ, ಇನ್ನು ಪ್ರಾರಂಭವಾಗಿಯೇ ಇಲ್ಲ. ನೀವು ಇಲ್ಲಿಂದ ಓಡಿ ಹೋಗಿದ್ದೀರಿ.

**ಉಪ ಸಭಾಪತಿಯವರು:-** ಶ್ರೀಯುತ ಈಶ್ವರಪ್ಪನವರೆ, ತಾವು ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ನಿಮ್ಮ ಕಾಟಕ್ಕೆ ಅವರು ಓಡಿ ಬಂದಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಮ್ಮ ಕಾಟಕ್ಕೆ ಅಲ್ಲ, ನಿಮ್ಮ ಕಾಟಕ್ಕೆ ಓಡಿ ಬಂದಿದ್ದಾರೆ. ಶಾಸಕಾಂಗ ಪಕ್ಷದ ಸಭೆಯ ವಿಚಾರವಾಗಿ ನೀವು ಅವರನ್ನು ಮಾಹಿತಿ ಕೇಳುತ್ತೀರಾ, ಅಂದವರು ನಿಮ್ಮ ಭಯಕ್ಕೋಸ್ಕರ ಓಡಿ ಬಂದಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:** ನನ್ನ ಭಯಕ್ಕೆ ಬಂದಿದ್ದೀರಾ, ಸಂತೋಷ. ಹಾಗಾದರೆ, ಕೇಳಿಕೊಳ್ಳಿ.

**ಶ್ರೀ ಹೆಚ್. ಆಂಜನೇಯ:-** ಭಯ ಅಲ್ಲ, ಗೌರವ.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಂದನೆಗಳು.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೆ, ನನ್ನ ಹೆಸರನ್ನು . .

(ಗೊಂದಲ)

**ಉಪ ಸಭಾಪತಿಯವರು:-** ಲಹರ್ ಸಿಂಗ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಅವರ ಹೆಸರು ಬಂದ ಮೇಲೆ ಅವರು ಮಾತನಾಡಲಿಕ್ಕೆ ಅವಕಾಶಕೊಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರ ಹೆಸರನ್ನು ಪ್ರಸ್ತಾಪ ಮಾಡಿದ ಮೇಲೆ ಅವರು ಹೇಗೆ ಸುಮ್ಮಿರುತ್ತಾರೆ? ಅದಕ್ಕೆ ಕ್ಲಾರಿಫಿಕೇಷನ್ ಕೊಡಲಿ. ಅವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಗೆ ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಆಗುತ್ತದೆ?

(ಗೊಂದಲ)

**ಉಪ ಸಭಾಪತಿಯವರು:** ಎಲ್ಲರೂ ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:** ಅವರ ಹೆಸರು ಇದೆ, ಅದಕ್ಕೆ ಕ್ಲಾರಿಫಿಕೇಷನ್ ಕೊಡಬೇಕು.

**ಉಪ ಸಭಾಪತಿಯವರು:-** ಆಗುವುದಿಲ್ಲ, ಕುಳಿತುಕೊಳ್ಳಿ. ಶ್ರೀಯುತ ಈಶ್ವರಪ್ಪನವರು ಮಾತನಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸದಸ್ಯರಿಗೆ ಮಾತನಾಡಲಿಕ್ಕೆ ನಾವು ಅವಕಾಶವನ್ನು ಕೊಡಬೇಕು.

ಮುಂದು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(303) 20.03.17 SPR GR 5.20

**(ಉಪಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಉಪಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿರವರೇ, ಇಲ್ಲಿ ಎರಡು ಡೈರಿಗಳ ವಿಚಾರ ಪ್ರಸ್ತಾಪವಾಗಿದೆ. ಹಾಗಾದರೆ ವಿತ್ತಿಯ ಮೇಲೆ ಚರ್ಚೆ ಮಾಡದೇ **"XXX"**... ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಹೆಸರು ಪ್ರಸ್ತಾಪವಾಗಿದೆ. ಹೀಗಾಗಿ ಅವರು ಮಾತನಾಡಲಿ.

**(ಗೊಂದಲ)**

**ಉಪಸಭಾಪತಿಯವರು:–** ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಶ್ರೀ ಲಹರ್ ಸಿಂಗ್ ಸಿರೋಯಾಯವರೇ ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಹೆಸರು ಪ್ರಸ್ತಾಪವಾಗಿದೆ. ಹೀಗಾಗಿ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

**(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷಕ್ಕೆ ಸೇರಿದ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಸ್.ಈಶ್ವರಪ್ಪ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಬಿ.ಜೆ.ಪುಟ್ಟಸ್ವಾಮಿ, ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ಶ್ರೀ ಎಂ.ಕೆ.ಪ್ರಾಣೇಶ್, ಶ್ರೀ ಅರುಣ ಶಹಾಪುರ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಸೋಮಣ್ಣ ಮ.ಬೇವಿನಮರದ, ಶ್ರೀ ನಿರಾಣಿ ಹನಮಂತ್ ರುದ್ರಪ್ಪ, ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ, ಶ್ರೀ ಭಾನುಪ್ರಕಾಶ್, ಶ್ರೀ ಅಮರನಾಥ್ ಪಾಟೀಲ್ ರವರುಗಳು ಸದನದ ಬಾವಿಯೊಳಗೆ ಆಗಮಿಸಿದರು)**

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ವಿರೋದ ಪಕ್ಷದ ಸದಸ್ಯರುಗಳು ಯಾರ ವಿರುದ್ಧವಾಗಿ ಸದನದ ಬಾವಿಯೊಳಗೆ ಬಂದಿದ್ದಾರೆ?

---

**XXX** ಮಾನ್ಯ ಉಪಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:-** ಶ್ರೀ ಶರಣಪ್ಪ ಮಟ್ಟೂರ ರವರೇ ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, I am on a point of order. ಈ ಸದನದ ಸದಸ್ಯರ ಹೆಸರನ್ನು ಹೇಳಿ ಯಾರಾದರೂ ಮಾತನಾಡಬೇಕಾದರೆ, ಅವರಿಗೆ ಮೊದಲು ನೋಟೀಸ್ ಕೊಡಬೇಕು. ಅವರಿಗೆ ಮೊದಲು ನೋಟೀಸ್‌ನ್ನು ಕೊಡದೇ ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಮ್ಮ ಸದನದ ಕಾನೂನಿನನ್ವಯ ಅಧಿಕಾರವಿಲ್ಲ. ಅದಕ್ಕಾಗಿ I have raised a point of order. Please give a ruling.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಭ್ರಷ್ಟಾಚಾರದ ಆರೋಪಗಳ ಬಗ್ಗೆ ಡೈರಿಗಳಲ್ಲಿ ನಮೂದಾಗಿದೆ ಎಂದು ಹೇಳಿರುವಂತಹದ್ದು. ಯಾರ ಮೇಲಾದರೂ ಸಹ ಆ ರೀತಿಯ ಡೈರಿಯ ತನಿಖೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗಾದರೆ, ನಿಮಗೆ ಗೊತ್ತಿದೆ. ಆ ಡೈರಿಯ ತನಿಖೆಯಾಗಲಿ. ಅದರಲ್ಲಿ ಭ್ರಷ್ಟಾಚಾರ ನಡೆದಿದೆಯೋ ಅಥವಾ ಇಲ್ಲವೋ ಎಂಬ ಅಂಶಗಳ ಬಗ್ಗೆ ತನಿಖೆಯಾಗಿಲಿ. ಅವರು ಸರ್ವೋಚ್ಚ ನ್ಯಾಯಾಲಯ ತನಿಖೆಯಲ್ಲಿ ಒಪ್ಪಿಕೊಳ್ಳಲಿ. ಇವತ್ತಿನ ದಿವಸ ಸಿ.ಬಿ.ಐ. ನಿಮ್ಮ ಏಜೆನ್ಸಿಯಾಗಿದೆ. ನಿಮಗೆ ತಾಕತ್ತು ಇದ್ದರೆ, ಸರ್ವೋಚ್ಚ ನ್ಯಾಯಾಲಯದ ತನಿಖೆಗೆ ಒಳಪಡಿಸಿ. ಯಾವಾಗ ಯಾರ ಮೇಲಾದರೂ ಸಹ ಚಾರ್ಜಸ್ ಮಾಡಬೇಕಾದರೆ . . . .

**(ಗೊಂದಲ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, **(ಗೊಂದಲ)** ನೋಟೀಸ್‌ನ್ನು ಕೊಟ್ಟಿದ್ದಾರಾ? ನಿಮ್ಮ ಅನುಮತಿಯನ್ನು ಪಡೆದಿದ್ದಾರಾ? ನೀವು ಅವಕಾಶವನ್ನು ಕೊಟ್ಟಿದ್ದೀರಾ? ತಾವು ದಯವಿಟ್ಟು ಇದರ ಬಗ್ಗೆ ತಮ್ಮ ruling ಕೊಡಬೇಕು.

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ರಾಮಚಂದ್ರಗೌಡರೇ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಪಾಯಿಂಟೆ ಇಲ್ಲ ಆರ್ಡರ್ ಎಲ್ಲಿಂದ ಬಂತು?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಒಂದೇ ಒಂದು ಮನವಿಯನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಸ್.ಈಶ್ವರಪ್ಪ ಹಾಗೂ ಶ್ರೀ ವಿ.ಎಸ್.ಉಗ್ರಪ್ಪ ರವರುಗಳಿಬ್ಬರೂ ಹಿರಿಯ ಸದಸ್ಯರುಗಳಾಗಿದ್ದಾರೆ. ಅವರ ಮಾತುಗಳಲ್ಲಿ ಬಹಳ ಸ್ಪಷ್ಟವಾಗುತ್ತಿದೆ. ಚರ್ಚೆ ಬೇರೆ ಕಡೆಗೆ ಹೋಗುತ್ತಿದೆ. ನಾನು ಬಿ.ಜೆ.ಪಿ. ಪಕ್ಷದ ಸದಸ್ಯರುಗಳಲ್ಲಿ ವಿನಂತಿಸುವುದೇನೆಂದರೆ, ಆರೋಗ್ಯಕರವಾದ ಚರ್ಚೆಗೆ ಅವಕಾಶ ಕೊಡಿ. ಆಡಳಿತ ಪಕ್ಷದವರೂ ಸಹ ಅಷ್ಟೆ. ಮಾನ್ಯ ಸದಸ್ಯರಾದ ಶ್ರೀ ಕೆ.ವಿ.ನಾರಾಯಣಸ್ವಾಮಿ ರವರು ಯಾವುದೋ ಒಂದು ವಿಷಯವನ್ನಿಟ್ಟುಕೊಂಡು ಚರ್ಚೆಯನ್ನು ಎಲ್ಲಿಗೋ ತೆಗೆದುಕೊಂಡು ಹೋಗಿ, ಮಾತನಾಡಿದರೆ ಸರಿಯಾಗುವುದಿಲ್ಲ ಆ ಚರ್ಚೆಯ ದಿಕ್ಕು ಬದಲಾಗುತ್ತಿದೆ. ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಆರೋಗ್ಯಕರ ಚರ್ಚೆಗೆ ಅವಕಾಶ ಮಾಡಿ ಕೊಡಿ. ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾ ರವರ ಹೆಸರು ಪ್ರಸ್ತಾಪವಾಗಿದ್ದರಿಂದ ಅವರೂ ಸಹ ತಮ್ಮ ಹೇಳಿಕೆಯನ್ನು ಕೊಡಲಿ. ದಯಮಾಡಿ ಇನ್ನುಳಿದ ಸದಸ್ಯರುಗಳು ತಮ್ಮ ಮುಷ್ಕರವನ್ನು ಹಿಂಪಡೆದು ಸದನದ ಬಾವಿಯಿಂದ ಹೊರಬರುವಂತೆ ವಿನಂತಿಸುತ್ತೇನೆ. ಆರೋಗ್ಯಕರವಾದಂತಹ ಚರ್ಚೆಯಾಗಲಿ. ವಿರೋಧ ಪಕ್ಷದ ನಾಯಕರು ಬಡ್ಜೆಟ್ ಮೇಲೆ ಮಾತನಾಡುತ್ತಿದ್ದಾರೆ. ಸರ್ಕಾರಕ್ಕೆ ತಾಳ್ಮೆ ಇರಬೇಕು. ನಾವುಗಳು ಏನಾದರೂ ತಪ್ಪು ಟೀಕೆ ಮಾಡಿದ್ದರೆ, ಅವುಗಳನ್ನು ಸಹಿಸಿಕೊಳ್ಳುವಂತಹ ಶಕ್ತಿ ಇರಬೇಕು. ನಾವುಗಳು ಒಂದು ಮಾತನ್ನೂ ಆಡಬಾರದು, ಅಭಿಪ್ರಾಯಗಳನ್ನು ಹೇಳಬಾರದು . .

**(ಗೊಂದಲ)**

**ಶ್ರೀ ಕೆ.ವಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೀವು ಯಾರ ಪರವಾಗಿ ಮಾತನಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಯಾರೇ ತಪ್ಪು ಮಾಡಿದರೂ, ಸರ್ಕಾರ ನಿಮ್ಮದು ಇದೆ. ನಿಮಗೆ ದಯವಿಟ್ಟು ತಾಳ್ಮೆ ಇರಬೇಕು. **(ಗೊಂದಲ)** ನಾರಾಯಣ ಸ್ವಾಮಿರವರೇ ನಿಮಗೆ ಸಹನೆಯೇ ಇಲ್ಲ. **(ಗೊಂದಲ)** ಸಭಾನಾಯಕರು ಸದನದಲ್ಲೇ ಇದ್ದಾರೆ.

**ಉಪಸಭಾಪತಿಯವರು:–** ಶ್ರೀ ನಾರಾಯಣ ಸ್ವಾಮಿರವರೇ, ಏನ್ರೀ? ನೀವು ಪದೇ ಪದೇ ಎದ್ದು ಅನುಮತಿ ಇಲ್ಲದೆಯೇ ಮಾತನಾಡುತ್ತೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಸರ್ಕಾರದವರಿಗೆ ನಾವು ಮಾಡುವ ಟೀಕೆಯನ್ನು ಸಹಿಸಿಕೊಳ್ಳುವ ಶಕ್ತಿಯಿರಬೇಕು. ಕೆಲವು ಸಲ ನಾವೇ ತಪ್ಪು ಮಾಡಿದ್ದರೂ ಸಹ ಅದನ್ನು ನೀವು ಸಹಿಸಿಕೊಳ್ಳಬೇಕಾಗುತ್ತದೆ.

**ಉಪಸಭಾಪತಿಯವರು:–** ದಯಮಾಡಿ ತಿಳಿದುಕೊಳ್ಳಬೇಕು.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಎರಡೂ ಪಕ್ಷಗಳು ರಾಷ್ಟ್ರೀಯ ಪಕ್ಷಗಳಾಗಿರುವುದರಿಂದ, ಜನರಿಗೆ ತಪ್ಪು ಸಂದೇಶ ಹೋಗುತ್ತದೆ.

**ಡಾ॥ ಜಿ.ಪರಮೇಶ್ವರ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈ ವಿಷಯ ಪದೇ ಪದೇ ಪ್ರಸ್ತಾಪವಾಗುತ್ತಿದೆ. ಅದನ್ನು ಕ್ರಾಸ್ ರೆಫರೆನ್ಸ್‌ನಲ್ಲಿ ತೆಗೆದುಕೊಳ್ಳುತ್ತೇವೋ ಅಥವಾ ಉದ್ದೇಶಪೂರ್ವಕವಾಗಿ ಮಾತನಾಡುತ್ತೇವೆಯೋ ಒಟ್ಟಿನಲ್ಲಿ ಎರಡೂ ಕಡೆ ಮಾತನಾಡುತ್ತೇವೆ. ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ನ್ಯಾಯಾಲಯದಲ್ಲಿ ಈ ಸಂಬಂಧ ಒಂದು ಆದೇಶವನ್ನು ಮಾಡಿದ್ದಾರೆ. ತಾವು ಅನುಮತಿಯನ್ನು ನೀಡಿದ್ದಲ್ಲಿ ನಾನು ಆ ಎರಡು ಸಾಲುಗಳನ್ನು ಓದುತ್ತೇನೆ. ಮಹಮದ್ ಅಬ್ದುಲ್ ಹಮೀದ್ ಪಾಳ್ಯ ವಿರುದ್ಧ ಕರ್ನಾಟಕ ರಾಜ್ಯದ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 06/03/2017 ರಂದು ಆದೇಶ ಮಾಡಿದೆ. **Mr.M. ABDUL HAMEED @ HAMEED PALYA Vs. THE STATE OF KARNTAKA ( W.P.No.9576/2017 (GM-RES-PIL)** ಪ್ರಕರಣದಲ್ಲಿ ನೀಡಲಾಗಿರುವ ಆ ಆದೇಶವು ಈ ಕೆಳಗಿನಂತಿದೆ:

> "Some diaries have been recovered from political persons.
>
> 2. Entries contained in a diary are not conclusive proof of anything. The Income Tax Department is conducting investigation.
>
> 3. By filing this *pro bono* litigation, a request is made either for constitution of a Special Investigation Team, or to hand over the investigation to the Central Bureau of Investigation.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. When the investigation is going on by the Income Tax Department, and entries in the diary cannot be considered as conclusive proof, we are not inclined to entertain this *pro bono* litigation."

ಹೀಗಾಗಿ ಸುಮ್ಮನೆ ಪದೇ ಪದೇ ಸದನದಲ್ಲಿ ಈ ವಿಚಾರವನ್ನು ಆಡಳಿತ ಪಕ್ಷದವರಾಗಲೀ ಅಥವಾ ವಿರೋಧ ಪಕ್ಷದವರಾಗಲೀ ಪ್ರಸ್ತಾಪ ಮಾಡುವುದಾಗಲೀ ಅಥವಾ ಚರ್ಚೆ ಮಾಡುವುದಾಗಲೀ ನನ್ನ ದೃಷ್ಟಿಯಲ್ಲಿ ಸೂಕ್ತವಲ್ಲವೆಂದೆನಿಸುತ್ತದೆ. ಅದಕ್ಕಾಗಿ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಚರ್ಚೆಯನ್ನು ಮುಂದುವರೆಸಿ, ಈ ಬಗ್ಗೆ ನಾವೂ ಯಾರೂ ಕೂಡ ಇಲ್ಲಿ ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ಅದಕ್ಕೋಸ್ಕರ ಇಷ್ಟು ಸ್ಪಷ್ಟವಾಗಿ ನ್ಯಾಯಾಲಯವೂ ಸಹ ಹೇಳಿದೆ. ಆದ್ದರಿಂದ ದಯವಿಟ್ಟು ತಾವು ಆಯವ್ಯಯದ ಮೇಲೆ ಚರ್ಚೆ ಮಾಡಿ. ಹೌದು ಸರ್ಕಾರದಲ್ಲಿ ತಪ್ಪಾಗಿದ್ದರೆ, ಅದನ್ನು ಎತ್ತಿ ಹಿಡಿಯಿರಿ. ಸಲಹೆಗಳನ್ನು ಕೊಡಿ. ನಾವು ಅದನ್ನು ಸ್ವಾಗತಿಸುತ್ತೇವೆ. ಅದನ್ನು ಬಿಟ್ಟು ಸುಮ್ಮನೆ ಅನಾವಶ್ಯಕವಾಗಿ ಈ ಸದನದ ಸಮಯವನ್ನು ನಾವು ಹಾಳು ಮಾಡುವುದು ಬೇಡ. ಇಡೀ ರಾಜ್ಯ ನಮ್ಮನ್ನು ನೋಡುತ್ತಿದೆ. ನಾವು ಎರಡು–ಮೂರು ವರ್ಷಗಳಿಂದ ಸತತವಾಗಿ ಬರಗಾಲವನ್ನು ಎದುರಿಸುತ್ತಿದ್ದೇವೆ. ಇವತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಇಷ್ಟೆಲ್ಲಾ ಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ನಿಮ್ಮ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಒಳ್ಳೆಯ ಆಯವ್ಯಯವನ್ನು ಕೊಟ್ಟಿದ್ದಾರೆ. ಅದು ನಿಮ್ಮ ದೃಷ್ಟಿಯಲ್ಲಿ ಇಲ್ಲದೇ ಇರಬಹುದು. ಸರ್ಕಾರ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು, ಬರಗಾಲವನ್ನು ಯಾವ ರೀತಿ ಎದುರಿಸಬೇಕು, ಆ ಜನರಿಗೆ ಕುಡಿಯುವ ನೀರನ್ನು ಹೇಗೆ ಒದಗಿಸಬೇಕು ಎಂಬುದರ ಬಗ್ಗೆ ನೀವು ಸಲಹೆಯನ್ನು ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿ ಮಾತನಾಡಿದರು):–** ಮಾನ್ಯ ಸಭಾಪತಿಯವರೆ, ಸಭಾನಾಯಕರು ತಮ್ಮ ಭಾಷಣವನ್ನು ನಂಜನಗೂಡಿನಲ್ಲಿ ಮಾಡಲಿ.

**ಡಾ॥ ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ಹೇಳಿದಂತೆ, ಇದು ಭಾಷಣವಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸಭಾನಾಯಕರು ನಾನು ಹೇಳಿದ ಹಾಗೆ ಕೇಳಲಿ. ಇಲ್ಲಿ ಜವಾಬ್ದಾರಿಯಿಂದ ಮಾತನಾಡಿ. **(ಗೊಂದಲ)** ನ್ಯಾಯಾಲಯದ ತೀರ್ಪನ್ನು ಓದುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ಅದು ಸರಿ. **(ಗೊಂದಲ)** ನಾವು ಕಪ್ಪತ್ತಗುಡ್ಡದ ವಿಷಯವನ್ನು ಪ್ರಸ್ತಾಪ ಮಾಡಿದಾಗ **(ಗೊಂದಲ)** ನೀವು ನಿಮ್ಮ ಶಾಸಕರನ್ನು ಹಿಡಿತದಲ್ಲಿಟ್ಟುಕೊಳ್ಳಿ.

**(ಗೊಂದಲ)**

**ಉಪಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಸಭಾನಾಯಕರು ಮಾತನಾಡುತ್ತಿದ್ದಾರೆ

**(ಗೊಂದಲ)**

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ನನಗೆ ಸಭಾಪತಿಯವರು ಮಾತನಾಡಲು ಅನುಮತಿಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾತನಾಡುತ್ತಿದ್ದೇನೆ. ಹೀಗಾಗಿ ನೀವು ಆಮೇಲೆ ಮಾತನಾಡಿ.

**(ಗೊಂದಲ)**

**ಉಪಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ದಯಮಾಡಿ ಕುಳಿತುಕೊಳ್ಳಿ. ನಾನು ಸಭಾನಾಯಕರನ್ನು ಕರೆದಿದ್ದೇನೆ. ಆದ್ದರಿಂದ ಅವರು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ನಾನು ಕೇಳುವುದಿಷ್ಟೆ. ಅವರು ಸರ್ಕಾರವನ್ನು ಟೀಕೆ ಮಾಡಲಿ. ಇದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಇವತ್ತಿನ ದಿವಸ ರಾಜ್ಯದಲ್ಲಿ ಗಂಭೀರವಾದಂತಹ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಹೀಗಾಗಿ ಅವರು ಸಲಹೆಗಳನ್ನು ಕೊಡಲಿ. ಚುನಾವಣೆಯ ಭಾಷಣವನ್ನು ನಾನು ಅಲ್ಲಿ ಮಾತನಾಡುತ್ತೇನೆ. ಬದಲಾಗಿ ಅದನ್ನು ನಾನು ಇಲ್ಲಿ ಮಾತನಾಡುವುದಿಲ್ಲ. ಇಲ್ಲಿ ನಾನು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. I am not talking irresponsibly. **(ಗೊಂದಲ)** ವಿರೋಧ ಪಕ್ಷದ ನಾಯಕರು ಜವಾಬ್ದಾರಿಯುತವಾಗಿ ಮಾತನಾಡಿ ಎಂದು ಹೇಳುತ್ತಿದ್ದಾರೆ. ನಾನೂ ಸಹ ಜವಾಬ್ದಾರಿಯುತವಾಗಿಯೇ ಮಾತನಾಡುತ್ತಿದ್ದೇನೆ. ತಮಗೆ ಹೇಳುವಂತಹ ನನ್ನ ಉದ್ದೇಶವೇನೆಂದರೆ, ತಾವು ವಿರೋಧ ಪಕ್ಷದ ನಾಯಕರು ಇದ್ದೀರಿ. ನಿಮಗೆ ಜವಾಬ್ದಾರಿಯಿಲ್ಲವೆಂದು ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ನಮಗೆ ಇರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಭೀರವಾದಂತಹ ಸಮಸ್ಯೆಗಳು, ರಾಜ್ಯದ ಜನರನ್ನು ಕಾಡುತ್ತಿರುವಂತಹ ಸಮಸ್ಯೆಗಳ ಬಗ್ಗೆ ನೀವು ಸಲಹೆಯನ್ನು ಕೊಡಿ. **(ಗೊಂದಲ)** ಈ ಕುರಿತು ನಾನು ಎರಡೂ ಪಕ್ಷದವರು ಮಾತನಾಡುವುದು ಬೇಡವೆಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಕಪ್ಪತ್ತಗುಡ್ಡದ ವಿಚಾರವನ್ನು ಮಾತನಾಡುತ್ತಿದ್ದರೆ, ಅವರು ಬಳ್ಳಾರಿಗೆ ಹೋದರು. ಕಪ್ಪತ್ತಗುಡ್ಡಕ್ಕೂ, ಬಳ್ಳಾರಿಗೂ ಏನು ಸಂಬಂಧ.

**(ಗೊಂದಲ)**

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ನೀವು ಮಾತನಾಡಿ. ನಾವು ನ್ಯಾಯಾಲಯದ ತೀರ್ಪನ್ನು ನಿಮ್ಮ ಒಬ್ಬರಿಗೆ ಮಾತ್ರವೇ ಓದಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವೇ ಹೇಳಿ, ನಾವು ಕಪ್ಪತ್ತಗುಡ್ಡದ ವಿಚಾರವನ್ನು ಪ್ರಸ್ತಾಪ ಮಾಡಿದರೆ, ಅವರು ಬಳ್ಳಾರಿಗೆ ಹೋಗುತ್ತಾರೆ. ನೀವು ಆವಾಗಲೇ ಹೇಳಬೇಕಾಗಿತ್ತು.

**ಉಪಸಭಾಪತಿಯವರು:-** ಮಾನ್ಯ ಈಶ್ವರಪ್ಪನವರೇ, ಸಭಾನಾಯಕರು ಅವರ ಮಾತನ್ನು ಮುಗಿಸಲಿ.

**ಡಾ॥ ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ನಾನು ಡೈರಿಯ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ, ಎರಡೂ ಕಡೆಯ ಮಾನ್ಯ ಸದಸ್ಯರುಗಳಿಗೆ ಹೇಳಿದ್ದು. ನಿಮ್ಮಗೊಬ್ಬರಿಗೆ ಮಾತ್ರವೇ ನಾನು ಅದನ್ನು ಓದಿ ಹೇಳಲಿಲ್ಲ. ಎರಡೂ ಕಡೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದು ಬೇಡ. ನಮಗೆ ಸಮಸ್ಯೆಗಳಿವೆ. ಅವುಗಳನ್ನು ಚರ್ಚೆ ಮಾಡೋಣವೆಂದು ಸನ್ಮಾನ್ಯ ಸಭಾಪತಿಯವರ ಅನುಮತಿಯನ್ನು ತೆಗೆದುಕೊಂಡು ಸದನದ ಗಮನಕ್ಕೆ ತರುತ್ತಿದ್ದೇನೆ. ನಾನೇನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ. ಅದಕ್ಕೋಸ್ಕರ ಈ ಚರ್ಚೆಯನ್ನು ಇಲ್ಲಿಗೆ ಅಂತ್ಯಗೊಳಿಸಿ, ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ, ಚರ್ಚೆಯನ್ನು ಮುಂದುವರೆಸೋಣ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ನಮಗೆ ಸಲಹೆಗಳನ್ನು ಕೊಡಿ.

**(. . ಮುಂದು . . .)**

(304) 20.03.2017 5.30 MGN-GR

ಡಾ:ಜಿ.ಪರಮೇಶ್ವರ(ಮುಂದುವರೆದುದು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿರೋಧ ಪಕ್ಷದ ನಾಯಕರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ನಮಗೆ ಸಲಹೆ ಕೊಡಬಹುದು, ಟೀಕೆ ಮಾಡಬಹುದು. ತಪ್ಪುಗಳನ್ನು ಕಂಡುಹಿಡಿದು ಈಗಾಗಲೇ ಅಂತಹ ಅನೇಕ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇಂತಿಂತಹ ಇಲಾಖೆಗಳಲ್ಲಿ ಇಂತಿಂತಹ ತಪ್ಪಾಗಿದೆ ಎಂದು ಹೇಳಿದರೆ ಅದಕ್ಕೆ ನಾವು ಇಲ್ಲವೇ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತೇವೆ. ಅವರು ನೀಡಿರುವ ಅಂಕಿ-ಅಂಶಗಳಲ್ಲಿ ಏನಾದರೂ ವ್ಯತ್ಯಾಸಗಳಾಗಿದ್ದರೆ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ವಿವರಣೆಗಳನ್ನು ಕೊಡುತ್ತಾರೆ. ಅದಕ್ಕಾಗಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸದನದ ಬಾವಿಗೆ ಬಂದು ಧರಣಿ ನಡೆಸುತ್ತಿರುವ ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಧರಣಿಯನ್ನು ಕೈಬಿಟ್ಟು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿ ಆಯವ್ಯಯದ ಮೇಲಿನ ಚರ್ಚೆಯನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಉಚ್ಚ ನ್ಯಾಯಾಲಯದ ತೀರ್ಪಿನ ಬಗ್ಗೆ ಮಾಡಿರುವಂತಹ ಉಲ್ಲೇಖವನ್ನು ನಾನು ಒಪ್ಪುತ್ತೇನೆ. ರೀತಿ ಒಪ್ಪಿಗೆ ಇರುವುದರಿಂದ ಒಬ್ಬರ ಮೇಲೊಬ್ಬರು ಕೆಸರೆರಚುವಂತಹ ಅವಶ್ಯಕತೆ ಇಲ್ಲ. ನಮ್ಮ ಈ ಸದನದ ಎಲ್ಲ ಸದಸ್ಯರ ರಕ್ಷಣೆ ಮಾಡಬೇಕಾದ ಜವಾಬ್ದಾರಿ ಕೂಡ ಮಾನ್ಯ ಸಭಾನಾಯಕರು ಹಾಗೂ ಸಭಾಪತಿಯವರಿಗಿದೆ. ಇವತ್ತು ಸದಸ್ಯರು ಅನವಶ್ಯಕವಾಗಿ ಅವರ ಹೆಸರನ್ನು ಪ್ರಸ್ತಾಪಿಸುತ್ತಾ, ಯಾರೇ ಒಬ್ಬ ಸದಸ್ಯರ ಬಗ್ಗೆ ಯಾವುದೇ ಆರೋಪ ಅಥವಾ ಏನೇ ಮಾಡಬೇಕಾದರು ಕೂಡ ಪ್ರಾರಂಭದಲ್ಲಿ ಅವರಿಗೆ ಒಂದು ದಿವಸ ಮೊದಲೇ ನೋಟೀಸ್ ಕೊಡಬೇಕು. ನೋಟೀಸ್ ಕಳುಹಿಸಿ ಯಾವ ವಿಚಾರ ಪ್ರಸ್ತಾಪ ಮಾಡಬಯಸುತ್ತಿದ್ದೀರೋ, ಅದನ್ನು ಹೇಳಿ ಮಾನ್ಯ ಸಭಾಧ್ಯಕ್ಷರಿಂದ ಅನುಮತಿಯನ್ನು ಪಡೆದುಕೊಳ್ಳಬೇಕು. ಆ ರೀತಿ ಅನುಮತಿ ಪಡೆದ ಮೇಲೆ ತಾವು ಯಾವಾಗ ಆ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಡುತ್ತೀರೋ ಆ ಸಂದರ್ಭದಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡುವಂತಹ ಒಂದು ಪದ್ಧತಿಯನ್ನು ಈ ಸದನದಲ್ಲಿ ಸುಮಾರು 30 ವರ್ಷಗಳಿಂದ ನಾನು ನೋಡುತ್ತಿದ್ದೇನೆ. ಆದರೆ ಏಕಾಏಕಿಯಾಗಿ ಒಬ್ಬ ಸದಸ್ಯರ ಮೇಲೆ ಯಾವುದೋ ವಿಚಾರವನ್ನು ತೆಗೆದುಕೊಂಡು ಮಾತನಾಡುವುದೇನಿದೆ, ಅದು ಘನತೆ ತರುವಂತಹ ವಿಚಾರವಲ್ಲ. ಅದಕ್ಕಾಗಿ ನಾನು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ, ಅದರ ಬಗ್ಗೆ ಅವರು ಸ್ಪಷ್ಟೀಕರಣವನ್ನು ಕೊಡುವ ಅವಶ್ಯಕತೆಯೂ ಇಲ್ಲ; ಅದರ ಬಗ್ಗೆ ಅವರು ಮಾತನಾಡುವಂತೆಯೇ ಇಲ್ಲ. ಒಂದು ವೇಳೆ ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಮಾತನಾಡಿದರೂ ಸಹ ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ. ನಿಮ್ಮ ಅನುಮತಿ ಇಲ್ಲದೆ ಅದರ ಬಗ್ಗೆ ಅವರು ಏನು ಮಾತನಾಡಿದ್ದಾರೆ, ಅದನ್ನು ಕಡತದಿಂದ ತೆಗೆಯಬೇಕು. ಕಡತದಿಂದ ತೆಗೆಯುವುದಕ್ಕಾಗದೆ ಹೋದರೆ ಅದಕ್ಕೆ ಸಮಜಾಯಿಷಿ ಉತ್ತರ ಕೊಡತಕ್ಕಂತಹ ಒಂದು ಅವಕಾಶವನ್ನು ಕೊಡಬೇಕು ಎನ್ನುವಂತಹ ಮಾತನ್ನು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೆ, ಇದು ಪ್ರಾರಂಭವಾಗಿದ್ದು ಹೇಗೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು XXXX ಎಂದರು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, no, no. ನಾನು ಆ ರೀತಿ ಹೇಳಲಿಲ್ಲ. ಸಭಾಪತಿಯವರೇ, ತಾವೇ ಹೇಳಿ.

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಬೇಕಾದರೆ ಕಡತ ತೆಗೆದು ನೋಡಿ, ಸ್ವಾಮಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ತಾವೇ ಹೇಳಿ.

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, XXXX ಎಂದು ಅವರು ಕೇಳಿದಾಗ ಮಾನ್ಯ ವಿರೋಧ ಪಕ್ಷದ ನಾಯಕರು XXXX ಎಂದು ರಿಪೀಟ್ ಮಾಡಿದರು.

(ಗೊಂದಲ)

---

**ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವು ಕಪ್ಪತ್ತಗುಡ್ಡದ ವಿಚಾರಕ್ಕೆ ಬಂದಾಗ ಅವರು ಬಳ್ಳಾರಿ ವಿಚಾರಕ್ಕೆ ಹೋದರು. ಹೌದೋ-ಅಲ್ಲವೋ ಎಂಬುದನ್ನು ತಾವೀಗ ತಿಳಿಸಬೇಕಾಗುತ್ತದೆ. ಸಭಾಪತಿಗಳಾಗಿ ತಾವಿದ್ದೀರಿ, ತಾವು ಹೇಳಬೇಕು.

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ...

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾನಾಯಕರೆ, ತಾವು ಅದನ್ನು ಈಗ ಈ ರೀತಿ ತಿರುಚುವುದಕ್ಕೆ ಹೋಗಬೇಡಿ, ಮಾನ್ಯ ಸಭಾಪತಿಯವರು ಹೇಳಲಿ.

(ಗೊಂದಲ)

**ಡಾ:ಜಿ.ಪರಮೇಶ್ವರ(ಸಭಾನಾಯಕರು):-** XXXX ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರು XXXX ಎಂದು ಹೇಳಿದ ಮೇಲೆ ನಮ್ಮ ಆಡಳಿತ ಪಕ್ಷದವರು ಆ ಹೆಸರನ್ನು ಹೇಳುವಂತಹ ಪರಿಸ್ಥಿತಿ ಬಂತು. ಎಲ್ಲರು ಕೂಡ ತಪ್ಪು ಮಾಡಿದ್ದಾರೆ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೆ, ನಾವು ಪ್ರತಿಭಟನೆ ಮಾಡುತ್ತಿರುವುದು ನಮ್ಮ ಸದಸ್ಯರ ಹೆಸರು ಪ್ರಸ್ತಾಪ ಆಗಿರುವುದರಿಂದ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವ ಕಾರಣಕ್ಕಾಗಿ. ಈಗಾಗಲೇ ಅವರ ಹೆಸರು ಉಲ್ಲೇಖ ಆಗಿದೆ. ಈ ಸದನದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಮಾನ್ಯ ಸದಸ್ಯರೆಲ್ಲರು ಸಹ ಮಧ್ಯಪ್ರವೇಶ ಮಾಡಿ ಏನೇನೋ ಸಾವಿರ ಸಲ ಹೇಳಿದ್ದಾರೆ. ಮಾನ್ಯ ಲಹರ್ ಸಿಂಗ್ ಸಿರೋಯಾ ಅವರ ಹೆಸರು ಉಲ್ಲೇಖ ಆಗಿದೆ, ಅವರಿಗೆ ತಾವು ಮಾತನಾಡಲು ಅವಕಾಶ ಕೊಟ್ಟಿಲ್ಲ, ಹಾಗಾಗಿ ಅವರ ಹೆಸರು ಉಲ್ಲೇಖ ಆಗಿರುವುದರಿಂದ ದಯವಿಟ್ಟು ಅವರಿಗೆ ಸಮಜಾಯಿಷಿ ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿ, ಆ ಕಾರಣಕ್ಕಾಗಿ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಎಲ್ಲರಿಗೂ ಮಧ್ಯದಲ್ಲಿ intervene ಆಗಲಿಕ್ಕೆ ಅವಕಾಶ ಸಿಕ್ಕಿದೆ. ಹಾಗಾಗಿ ಎಲ್ಲರೂ ಮಧ್ಯದಲ್ಲಿ intervene

---

**ಮಾನ್ಯ ಉಪ ಸಭಾಪತಿಯವರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿ ಎಲ್ಲರೂ ಮಾತನಾಡಿದ್ದಾರೆ. ಎಲ್ಲರೂ ವಿಪಕ್ಷ ನಾಯಕರ ಚರ್ಚೆಯ ಮಧ್ಯದಲ್ಲಿ ಮಾತನಾಡಿದ್ದಾರೆ. ಅವರು ಎದ್ದಿರುವುದು ಒಂದು ಸಲ, ಅದೂ ಅವರ ಹೆಸರು ಉಲ್ಲೇಖ ಆಗಿದ್ದಕ್ಕೆ. ಅವರಿಗೆ ಮಾತನಾಡಲು ಅವಕಾಶ ಕೊಡದಿದ್ದರೆ ಅದು ಹೇಗೆ ನ್ಯಾಯವಾಗುತ್ತದೆ? ಆದ್ದರಿಂದ ದಯವಿಟ್ಟು ತಾವು ನಮ್ಮ ಸದಸ್ಯರ ರಕ್ಷಣೆಗೆ ಬರಬೇಕು, ಅವರಿಗೆ ಮಾತನಾಡಲು ಅವಕಾಶ ಕೊಡಬೇಕು ಎಂದು ವಿನಂತಿ ಮಾಡುವುದಕ್ಕಾಗಿ ನಾವು ಪ್ರತಿಭಟನೆ ಮಾಡುತ್ತಿದ್ದೇವೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೆ, ಅವರಿಗೆ ಸ್ಪಷ್ಟನೆ ನೀಡಲು ತಾವು ಅವಕಾಶ ಕೊಟ್ಟರೆ ಆ ಬಗ್ಗೆ ಚರ್ಚೆಯಾಗಬೇಕು.

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ಅವರೆ, ದಯಮಾಡಿ ಕುಳಿತುಕೊಳ್ಳಿ. ನಾನು ತಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಎತ್ತಿರುವಂತಹ ಸಂದರ್ಭದಲ್ಲಿ ಪ್ರಾವಿಷನ್ ಏನಿದೆ ಎನ್ನುವುದನ್ನು ತಾವು ಗಮನಿಸಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಅವರ ಹೆಸರು ಉಲ್ಲೇಖ ಆಗಿರುವುದರಿಂದ ದಯವಿಟ್ಟು ಅವರಿಗೆ ಸಮಜಾಯಿಷಿ ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂಬುದು ನಮ್ಮ ವಿನಂತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ. ಈ ದಿನ ವಿತ್ತೀಯ ಕಲಾಪದ ಬಗ್ಗೆ ಬಹಳ ಚೆನ್ನಾಗಿ ಚರ್ಚೆ ನಡೆಯುತ್ತಿದೆ. ಆದರೂ ಕೂಡ ಎಲ್ಲಿಯೋ ಒಂದು ಕಡೆ ಸಾಂದರ್ಭಿಕವಾಗಿ ಎರಡೂ ಕಡೆಯ ಸದಸ್ಯರು ಬಹಳ ಸ್ವಾರಸ್ಯಕರವಾಗಿ ಚರ್ಚೆಯನ್ನು ಮಾಡುತ್ತಾ ಬಂದಿದ್ದೀರಿ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಆಕಸ್ಮಿಕವಾಗಿ ಕೆಲವು ಟೀಕೆಗಳನ್ನು ಮಾಡುತ್ತಾ ಬಂದಿದ್ದೀರಿ; ಆಡಳಿತ ಪಕ್ಷದಿಂದ ಕೂಡ ಕೆಲವು ಟೀಕೆಗಳು ಬಂದಿವೆ. ಆದರೆ ಎಲ್ಲಿಯೋ ಒಂದು ಕಡೆ ನನಗೆ ಇವತ್ತು ವಿತ್ತೀಯ ಚರ್ಚೆಯಂತಹ ಬಹಳ ಪ್ರಮುಖವಾದ ವಿಷಯದ ಬಗ್ಗೆ ಇಷ್ಟೊಂದು ಪ್ರಲಾಪಗಳನ್ನು ಮಾಡತಕ್ಕಂಥದ್ದು ಸರಿಯಾದುದಲ್ಲ ಎಂಬುದು ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಯಾವುದೋ ಒಂದು ಕಡೆಯ ಸದಸ್ಯರಿಂದ ಈ ರೀತಿ ಆಯಿತು ಎಂದು ನಾನು ಹೇಳುತ್ತಿಲ್ಲ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡೂ ಕಡೆಯಿಂದ ಈ ರೀತಿ ಆಗಿದೆ. ಇವತ್ತು ವಿತ್ತೀಯ ಕಲಾಪದ ಬಗ್ಗೆ ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ನಮಗೆ ಗಾಂಭೀರ್ಯತೆಯೇ ಇಲ್ಲ, ಅಂತಹ ಸಂಗತಿಗಳ ಬಗ್ಗೆ ನನ್ನ ಮನಸ್ಸಿಗೆ ಬಹಳ ಬೇಸರವಾಗಿದೆ. ದಯಮಾಡಿ ಇದನ್ನು ಬಿಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥದ್ದರಲ್ಲಿ ಕೂಡ ಗಾಂಭೀರ್ಯತೆ ಇರಬೇಕು, ಅದನ್ನು ಟೀಕೆ ಮಾಡುವಂತಹ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರು ಕೂಡ ಬಹಳ ಸಮಯೋಚಿತವಾಗಿ; ಔಚಿತ್ಯಪೂರ್ಣವಾಗಿ ಮಾತುಗಳನ್ನಾಡಬೇಕು. ಇಲ್ಲಿ ಎರಡೂ ಕಡೆಯಿಂದಲು ಸಹ ಕೆಲವು ಸಣ್ಣಪುಟ್ಟ ತಪ್ಪುಗಳಾಗಿವೆ. ದಯಮಾಡಿ ಅದು ಮತ್ತೆ ಮರುಕಳಿಸದಂತೆ ನೋಡಿಕೊಳ್ಳುವ ಮೂಲಕ ಈ ಸದನದ ಗೌರವ ಉಳಿಸಬೇಕು, ವಿತ್ತೀಯ ಕಲಾಪದಲ್ಲಿ ಒಳ್ಳೆಯ ಚರ್ಚೆಯಾಗಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**"ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾ ಅವರ ಹೆಸರನ್ನು ಪ್ರಸ್ತಾಪ ಮಾಡಿ ಏನು ಕೆಲವು ವಿಚಾರಗಳು ಕಡತಕ್ಕೆ ಹೋಗಿವೆ, ಅದನ್ನು ನಾನು ಸಂಪೂರ್ಣವಾಗಿ ಕಡತದಿಂದ ತೆಗೆದಿದ್ದೇನೆ."** ಬಾವಿಗೆ ಬಂದು ಧರಣಿ ನಡೆಸುತ್ತಿರುವಂತಹ ಮಾನ್ಯ ಸದಸ್ಯರೆಲ್ಲಾ ದಯಮಾಡಿ ತಮ್ಮ-ತಮ್ಮ ಸ್ಥಾನಗಳಿಗೆ ವಾಪಸ್ ಬನ್ನಿ, ವಿತ್ತೀಯ ಕಲಾಪದ ಬಗ್ಗೆ ಚರ್ಚೆ ಮಾಡೋಣ.

**(ಈ ಹಂತದಲ್ಲಿ ಧರಣಿ ನಡೆಸುತ್ತಿದ್ದ ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಇಂದಿರಾ ಗಾಂಧಿಯವರ ಹೆಸರನ್ನು ಕೂಡ ಉಲ್ಲೇಖ ಮಾಡಲಾಗಿದೆ. ಅವರ ಹೆಸರನ್ನು ಸಹ ಕಡತದಿಂದ ತೆಗೆಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಉಪ ಸಭಾಪತಿಯವರು:- "ಶ್ರೀಮತಿ ಇಂದಿರಾ ಗಾಂಧಿಯವರ ಹೆಸರನ್ನು ಹಾಗೂ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಹೆಸರನ್ನು ಸಹ ನಾನು ಕಡತದಿಂದ ತೆಗೆದಿದ್ದೇನೆ."** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ವಿತ್ತೀಯ ಕಲಾಪದ ಮೇಲಿನ ಚರ್ಚೆಯನ್ನು ಮುಂದುವರೆಸಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಹೆಚ್.ಆಂಜನೇಯ ಅವರು ಸಮಾಜ ಕಲ್ಯಾಣ ಸಚಿವರು ಎನ್ನುವುದಕ್ಕಿಂತಲೂ ಅವರಿಗೆ 'ಘೋಷಣಾ ಸಚಿವರು', 'ಭರವಸೆಯ ಸಚಿವರು' ಎಂದು ಹೆಸರನ್ನಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಹಿಂದಿನ 4 ಆಯವ್ಯಯಗಳಲ್ಲಿ ಘೋಷಣೆ ಮಾಡಿದಂತಹ ಯೋಜನೆಗಳಲ್ಲಿ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲದಿರುವುದರಿಂದ ಅವು ಅನುಷ್ಠಾನಗೊಂಡಿಲ್ಲ ಎನ್ನುವಂತಹ ವಿಚಾರವನ್ನು ನಾನು ಈಗಾಗಲೇ ತಿಳಿಸಿದ್ದೇನೆ. 270 ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದಾಗಿ ಸರ್ಕಾರ ಏನು ಘೋಷಣೆ ಮಾಡಿದೆ, ಅದರಲ್ಲಿ ಎಷ್ಟು ಶಾಲೆಗಳು ಪ್ರಾರಂಭವಾಗಿವೆ ಎನ್ನುವುದನ್ನು ಮಾನ್ಯ ಸಚಿವರು ದಯಮಾಡಿ ತಿಳಿಸಬೇಕಾಗುತ್ತದೆ. ಏಕೆಂದರೆ ಈ ದಿನ ಬೆಳಿಗ್ಗೆ ಸನ್ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಇದೇ ವಿಚಾರವಾಗಿ ಮಾನ್ಯ ಸಚಿವರಿಗೆ ಪ್ರಶ್ನೆಯೊಂದನ್ನು ಕೇಳಿದ್ದರು. ಕೋಟೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಗೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭ ಮಾಡಿದ್ದು ಯಾವಾಗ, ಸದರಿ ಶಾಲೆಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆ ಇರುವ ಹುದ್ದೆಗಳೆಷ್ಟು ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಆ ಶಾಲೆ ಮಂಜೂರಾಗಿ ಸುಮಾರು 10 ವರ್ಷಗಳಾಗಿವೆ. ಅದು ಹಿಂದುಳಿದ ವರ್ಗದ ವಸತಿ ಶಾಲೆಯಾಗಿದ್ದು, ಅನುದಾನದ ಕೊರತೆಯಿಂದ ಕಟ್ಟಡದ ನಿರ್ಮಾಣವನ್ನು ತಕ್ಷಣವೇ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಶಾಲೆ ಮಂಜೂರಾಗಿ ಸುಮಾರು 10 ವರ್ಷಗಳಾಗಿದ್ದರು ಸಹ ಸರ್ಕಾರ ಈಗ ಕಟ್ಟಡ ನಿರ್ಮಾಣವನ್ನು ಪ್ರಾರಂಭ ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ಕಾರಣಕ್ಕಾಗಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

(ಮುಂದುವರೆದಿದೆ...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(305) 20.03.2017 05.40 SV-MD

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಹತ್ತು ವರ್ಷದ ಹಿಂದಿನದನ್ನು ಈಗ ಪ್ರಾರಂಭ ಮಾಡುವುದಕ್ಕೆ ಹೊರಟಿದ್ದೇವೆ. ಎಷ್ಟಾಗಿದೆ? ಏನು ಕಥೆ ಎಂದು 270 ಶಾಲೆಗಳ ಬಗ್ಗೆ ಹೇಳಿ. 300 ಹಾಸ್ಟೆಲ್‌ಗಳ ಪೈಕಿ ಕೇವಲ 134 ಹಾಸ್ಟೆಲ್‌ಗಳು ಆರಂಭವಾಗಿವೆ. ಇದರಲ್ಲಿ ಒಂದು ಸ್ಪಷ್ಟೀಕರಣ ಬೇಕು. ಡಾ: ಬಿ.ಆರ್.ಅಂಬೇಡ್ಕರ್ ಅವರ ಹೆಸರಿನಲ್ಲಿ ಮಂಜೂರು ಮಾಡಿರುವ ಒಟ್ಟು 125 ಶಾಲೆಗಳೂ ಸೇರಿ ಒಟ್ಟು 270 ಶಾಲೆಗಳನ್ನು ಬರುವ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಲಾಗುವುದು ಎಂದರೆ ಅದು ಈ ವರ್ಷವೋ ಬರುವ ವರ್ಷವೋ? ಉತ್ತರ ಕೊಡುವಾಗ ಸ್ಪಷ್ಟ ಪಡಿಸಬೇಕು. 300 ಹಾಸ್ಟೆಲ್‌ಗಳ ಪೈಕಿ 134 ಹಾಸ್ಟೆಲ್ ಆರಂಭವಾಗಿದೆ. ಇದರ ಬಗ್ಗೆಯೂ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು ಎಷ್ಟು ಲ್ಯಾಪ್‌ಟಾಪ್ ಕೊಡಲಾಗಿದೆ ಎನ್ನುವ ಬಗ್ಗೆ ಉತ್ತರ ಕೊಡುವಾಗ ವಿವರಿಸಬೇಕು. ಎಷ್ಟು ಹಾಸ್ಟೆಲ್‌ಗಳಿಗೆ ಕೊಡಲಾಗಿದೆ ಎನ್ನುವುದನ್ನೂ ತಿಳಿಸಬೇಕು. 2016-17ನೇ ಸಾಲಿನಲ್ಲಿ ಸಮಾಜಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 50,000 ನಿವೇಶನಗಳನ್ನು ನೀಡಲಾಗುವುದು ಎಂದು ಹೇಳಿದ್ದು, ಅದು ಹಳೆಯ ಬಜೆಟ್‌ನಲ್ಲಿದೆ. ಮಾನ್ಯ ಸಚಿವರಿಗೆ ಇದು ಮರೆತೇ ಹೋಗಿದೆಯೆಂದು ಕಾಣುತ್ತದೆ. ಸಚಿವರು ಅವರೇ ಹೇಳಿದ್ದನ್ನು ಮರೆತು ನಾನು ಎಲ್ಲಿ ಹೇಳಿದ್ದೇನೆಂದು ಈಗ ಕಣ್ಣು ಬಿಡುತ್ತಿದ್ದಾರೆ. ಅವರು ನಿವೇಶನ ಕೊಟ್ಟುಬಿಟ್ಟಿದ್ದೇವೆಂದು ಹೇಳಿದರೂ ಆಶ್ಚರ್ಯವಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರಿಗೆ ಕಳಕಳಿ ಇಲ್ಲವೆಂದು ಅಲ್ಲ. ಮಾನ್ಯ ಸಚಿವರಿಗೆ ಕಳಕಳಿಯಿದೆಯೆಂದು ಪುನರುಚ್ಚರಿಸುತ್ತೇನೆ. ಆದರೆ ಇಲಾಖೆಯ ಅಧಿಕಾರಿಗಳು ಯಾರೂ ಅವರಿಗೆ ಬಗ್ಗುತ್ತಿಲ್ಲ. ಹಾಸಿಗೆ-ದಿಂಬು ನೀಡುವಾಗ ಭ್ರಷ್ಟಾಚಾರ ಆಯಿತು. ಭ್ರಷ್ಟಾಚಾರ ಆಗಿದೆ ಎಂದು ಸಚಿವರೇ ಒಪ್ಪಿಕೊಂಡಿರುತ್ತಾರೆ. ತನಿಖೆ ಮಾಡುತ್ತೇವೆ ಎಂದು ಹೇಳಿ ಎಷ್ಟು ದಿನಗಳಾಯಿತು? ತನಿಖೆ ಮಾಡಿ ಎಷ್ಟು ಜನಕ್ಕೆ ಅದರಲ್ಲಿ ಶಿಕ್ಷೆಯನ್ನು ಕೊಡಲಾಗಿದೆ? ತನಿಖೆ ಮಾಡಿಸಿ ತಪ್ಪಾಗೇ ಇಲ್ಲ, ಭ್ರಷ್ಟಾಚಾರ ಆಗೇ ಇಲ್ಲ ಎನ್ನುವಂತಹ ಮಾತನ್ನು ಸಚಿವರು ಅಂದೇ ಹೇಳಿಬಿಟ್ಟಿದ್ದರೆ ಇವತ್ತು ನಾವು ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಈ ವಿಧಾನ ಪರಿಷತ್ತಿನಲ್ಲಿ ಸಚಿವರು ಅಧಿಕಾರಿಗಳ ಹೆಸರನ್ನೂ ಹೇಳಿದ್ದರು. ಇಂತಿಂಥ ಅಧಿಕಾರಿಗಳಿಂದ ಹಣ ದುರುಪಯೋಗ ಆಗಿದೆ ಎಂದು ಹೇಳಿದ್ದರು. ಬೇಕಾದರೆ ನಿಮಗೆ ದಾಖಲೆಯನ್ನು ನೀಡುತ್ತೇನೆ. ಇಲ್ಲ ಎಂದು ಸಚಿವರು ತಲೆ ಅಲ್ಲಾಡಿಸಿದರೆ ನಾನೇನು ಮಾಡಲಿ? ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ಸಚಿವರು ಬಿಗಿಯಾಗಿ ಭ್ರಷ್ಟಾಚಾರ ಮಾಡಿದಂತಹ ಅಧಿಕಾರಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಡಿದರು. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಎಷ್ಟು ಸಮಯವಾಯಿತು? ಅದು ಯಾರ ದುಡ್ಡು? ಇವರು ದಲಿತರು, ಹಿಂದುಳಿದವರಿಗೆ ಮೊಸಳೆ ಕಣ್ಣೀರು ಸುರಿಸುವುದಕ್ಕಾಗಿ ಇದ್ದಾರೆಯೇ? ಅಧಿಕಾರಿಗಳಿಂದ ಭ್ರಷ್ಟಾಚಾರವಾಗಿದೆ ಎಂದು ನೇರವಾಗಿ ಒಪ್ಪಿಕೊಳ್ಳುತ್ತಾರೆ. ಇವರಿಗೆ ಹೇಳುವವರು ಕೇಳುವವರು ಯಾರು ಇಲ್ಲವೆ? ಇದೇ ಸದನದಲ್ಲಿ ಸಚಿವರು ಹೇಳಿ ಎಷ್ಟು ದಿನವಾಯಿತು? ಹರಿಕಥೆಯನ್ನು ಕೇಳುವ ಕಡೆಯಲ್ಲಿ ವಯಸ್ಸಾದ ಯಜಮಾನರುಗಳು ಕುಳಿತಿರುತ್ತಾರೆ. ಅವರಿಗೆ ಕಿವಿಯೂ ಕೇಳುವುದಿಲ್ಲ, ಕಣ್ಣೂ ಕಾಣುವುದಿಲ್ಲ. ಏನು ಹೇಳುತ್ತಾರೆಂದು ಗೊತ್ತಾಗುವುದೂ ಇಲ್ಲ. ಇಂದು ವಿಧಾನ ಪರಿಷತ್ತು ಹಾಗೆಯೇ ಆಗಿದೆ. ನಾವು ಹೇಳುತ್ತಲೇ ಇದ್ದೇವೆ, ಸರ್ಕಾರ ಕೇಳುತ್ತಲೇ ಇದೆ. 2015-16ರ ಬಜೆಟ್‌ನಲ್ಲಿ ನಿವೇಶನ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಡ ಕುಟುಂಬಗಳಿಗೆ ಒಟ್ಟು 50,000 ನಿವೇಶನಗಳು; ಗ್ರಾಮೀಣ ಪ್ರದೇಶದಲ್ಲಿ 35,000, ನಗರ ಪ್ರದೇಶಕ್ಕೆ 15,000 ಹಂಚಿಕೆ ಮಾಡಲಾಗುವುದು ಎಂದು ಹೇಳಿದ್ದರು. ಇದು ಸಚಿವರಿಗೆ ನೆನಪಿದೆಯೇ? ಎಷ್ಟು ನಿವೇಶನ ಕೊಡಲಾಗಿದೆಯೆಂದು ಉತ್ತರ ಕೊಡಬೇಕಾದ ಸಂದರ್ಭದಲ್ಲಿ ಹೇಳಲಿ, ಇಲ್ಲವಾದಲ್ಲಿ ನಾಳೆ ಕೊಡುತ್ತೇವೆಂದು ಹೇಳಲಿ. ಸರ್ಕಾರಿ ಭೂಮಿ ಇದೆಯೋ ಇಲ್ಲವೋ, ಆ ಭೂಮಿಯನ್ನು ಸಂಬಂಧಪಟ್ಟವರಿಗೆ ಕೊಡುತ್ತಾರೆಯೋ ಇಲ್ಲವೋ ತಿಳಿಸಬೇಕು. ಮೊನ್ನೆ ಶುರು ಮಾಡಿದಂತಹ ಸಂದರ್ಭದಲ್ಲಿ ನಾನು ವಸತಿ ಇಲಾಖೆಯಿಂದಲೇ ಪ್ರಾರಂಭ ಮಾಡಿದೆ. ಒಂದೇ ಒಂದು ನಿವೇಶನ ಕೊಡದಂತಹ, ಒಂದೇ ಒಂದು ಮನೆಯನ್ನು ಕೊಡದಂತಹ ಊರುಗಳು ಬಹಳ ಇವೆ. ಇದಕ್ಕೆ ಸಚಿವರೇ ಕಾರಣ ಎಂದಲ್ಲ. ಅಧಿಕಾರಿಗಳು ಮಾಡಿದರೆ ಸಚಿವರೂ ಮಾಡುತ್ತಾರೆ. ಗೃಹ ಇಲಾಖೆಯಲ್ಲಿ ಪೋಲಿಸರಿಗೆ ಕಳ್ಳ ಸಿಕ್ಕಿದಾಗ ನೀವು ಮಾಡಲಿಲ್ಲ ಎಂದರೆ ನಿಮ್ಮ ಮೇಲೆ ಕ್ರಿಮಿನಲ್ ಕೇಸು ಹಾಕುತ್ತೇವೆ ಎಂದು ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ. ಅವರು ಏನು ಬೇಕೊ ಅಂದುಕೊ ಹೋಗು ಎನ್ನುತ್ತಾರೆ. ಇಲ್ಲಿ ವಿಧಾನ ಪರಿಷತ್ತಿನಲ್ಲಿ ನಾವು ಒದರುವುದು ಹಾಗೆಯೇ ಆಗಿದೆ. ಅಂದುಕೊ ಹೋಗು ಎಂದು ಸರ್ಕಾರ ಸುಮ್ಮನಿರುತ್ತದೆ. ನಾವು ಯಾರ ಬಳಿ ಹೇಳಬೇಕು. ಹಿರಿಯ ಸದಸ್ಯರಾದ ಶ್ರೀ ರಾಮಚಂದ್ರಗೌಡರು ನೀವು ಹೇಳುವುದಕ್ಕೆ ಇರುವುದು, ಅವರು ಕೇಳುವುದಕ್ಕೆ ಇರುವುದು ಎಂದು ಹೇಳಿದ್ದರು. ಮುಂದೇನು? ಅದಕ್ಕೆ ಈ ವರ್ಷದಲ್ಲಾದರೂ ಕೂಡ ಹಿಂದಿನ ವರ್ಷದಲ್ಲಿ ಏನೇನು ಆಗಿಲ್ಲವೋ ಅದನ್ನು ತೆಗೆದುಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ನಿಮಗೆ ಅವಕಾಶವಿದೆ. ಸೈಟಿರಲಿ, ಮನೆಯಿರಲಿ, ದುಡ್ಡಿರಲಿ ಎಲ್ಲವನ್ನೂ ಕೊಡುವುದಕ್ಕೆ ಇದೊಂದು ಅವಕಾಶ. ಹಿಂದುಳಿದವರಿಗೆ, ದಲಿತರಿಗೆ ನ್ಯಾಯ ಕೊಡುವುದಕ್ಕೆ ಸರ್ಕಾರಕ್ಕೆ ಮಾತ್ರ ಅವಕಾಶವಿದೆ. ಸರ್ಕಾರ ಆ ದಿಕ್ಕಿನಲ್ಲಿ ಪ್ರಯತ್ನ ಮಾಡಲಿಲ್ಲ ಎಂದರೆ ಏನೂ ಉಪಯೋಗವಿಲ್ಲ. ಈಗಲೂ ಮಾಡಬಹುದು. ಎಲ್ಲಾ ವಿಧಾನಸಭಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷೇತ್ರಗಳ ಎಂ.ಎಲ್.ಎ. ಇರಬಹುದು, ಎಂ.ಎಲ್.ಸಿ. ಇರಬಹುದು. ಅವರ ಬಳಿ ದಲಿತರು, ಹಿಂದುಳಿದವರು ಬಂದು ಒಂದು ಸಮುದಾಯ ಭವನ ಮಾಡಿಕೊಡಿ, ನಮಗೊಂದು ರಸ್ತೆ ಮಾಡಿಕೊಡಿ ಎಂದು ಕೇಳುತ್ತಾರೆ. ನಾನು ಸಚಿವರಿಗೆ ಎಷ್ಟು ಪತ್ರಗಳನ್ನು ಕಳುಹಿಸಿದ್ದೇನೆ? ಅವರು ಮಾಡಿಕೊಟ್ಟಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಇನ್ನು ಬೇಕಾದಷ್ಟು ದುಡ್ಡು ಉಳಿದಿದೆಯಲ್ಲವೆ? ಎಷ್ಟು ಇಲಾಖೆಯಲ್ಲಿ ಉಳಿದಿದೆ? ಆ ಇಲಾಖೆಗಳಲ್ಲಿ ಖರ್ಚು ಮಾಡುತ್ತಿದ್ದಾರೆಯೇ? ಮಾಡುತ್ತಿಲ್ಲ. ಎಲ್ಲಾ ಇಲಾಖೆಗಳಿಗೆ ಏಕೆ ಕೊಡುವುದಕ್ಕೆ ಹೋಗಬೇಕು? ಒಂದು ವ್ಯವಸ್ಥೆಯನ್ನು ಮಾಡಬೇಕು. ದಲಿತರಿಗೆ, ಹಿಂದುಳಿದವರಿಗೆ ಸಮಾಜಕಲ್ಯಾಣ ಇಲಾಖೆಯಿಂದ ಮಾಡಿಕೊಡಲಾಗುವುದು. ಸಮುದಾಯ ಭವನ, ದೇವಸ್ಥಾನ ಇಂತಹವುಗಳ ನಿರ್ಮಾಣಕ್ಕಾಗಿ ದಲಿತರು, ಹಿಂದುಳಿದವರು ಸರ್ಕಾರದ ಬಳಿ ರೂ.10,000, ರೂ.20,000, ರೂ.50,000ಕ್ಕೆ ಭಿಕ್ಷೆ ಬೇಡಬೇಕಾಗಿದೆ. ಕೋಟ್ಯಂತರ ರೂಪಾಯಿಗಳಿದ್ದರೂ ಖರ್ಚು ಮಾಡುತ್ತಿಲ್ಲ. ಖರ್ಚು ಮಾಡಿಲ್ಲ ಎಂದು ಲೆಕ್ಕ ಕೊಡುತ್ತಾರೆ. ಮುಖ್ಯಮಂತ್ರಿಗಳು ಮೀಟಿಂಗ್ ಕರೆಯುತ್ತಾರೆ, ಸಚಿವರು ಮೀಟಿಂಗ್ ಕರೆಯುತ್ತಾರೆ. ಅಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ. ಮತ್ತೆ ಮುಂದೆ conference, meeting ನಡೆಯುತ್ತದೆ. ಎಲ್ಲಿಯ ತನಕ ಇದು? ಸಚಿವರು ಗತ್ತು ತೋರಿಸುವ ತನಕ. ಒಂದು ನಾಲ್ಕು ಅಧಿಕಾರಿಗಳಿಗೆ ಅಮಾನತ್ತು ಮಾಡಿ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸಚಿವರ ಮಾತಿಗೆ ಕವಡೆ ಕಾಸಿನ ಬೆಲೆಯೂ ಇಲ್ಲ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಎಂಬ ಘೋಷಣೆಗಳು ಮಾತ್ರ ಉಳಿಯುತ್ತವೆಯೇ ವಿನಃ ಅವರಿಗೆ ನಿವೇಶನ ಸಿಗುವುದಿಲ್ಲ, ಮನೆ ಸಿಗುವುದಿಲ್ಲ, ಸಮುದಾಯ ಭವನ ಸಿಗುವುದಿಲ್ಲ, ರಸ್ತೆಯೂ ಆಗುವುದಿಲ್ಲ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಇದ್ಯಾವುದೂ ಸಿಗದಿರುವಂತಹ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳಾಗಬೇಕೆ? ಇಲಾಖೆಯಲ್ಲಿ ಸಾಕಷ್ಟು ದುಡ್ಡಿದೆ. ಎಲ್ಲಾ ಇಲಾಖೆಯವರೂ ಸಮಾಜಕಲ್ಯಾಣ ಇಲಾಖೆಗೆ ಪತ್ರಗಳನ್ನು ಕಳುಹಿಸುತ್ತಿದ್ದಾರೆ. ತಕ್ಷಣ ಆದೇಶ ಮಾಡಿ ಕಳುಹಿಸಲಿ, ಏನು ತಪ್ಪು? ಏಕೆ ಮಾಡುತ್ತಿಲ್ಲ? ಇವತ್ತು ಬೆಳಿಗ್ಗೆ ಇಲಾಖೆಯ ಅಧಿಕಾರಿಯೊಬ್ಬರು ನನಗೆ ಫೋನ್ ಮಾಡಿದ್ದರು. ಎರಡು ಕೋಟಿ/ಮೂರು ಕೋಟಿಗಳ ಮಂಜೂರಾತಿಗಾಗಿ ನಾನೊಂದು ಪತ್ರವನ್ನು ಕಳುಹಿಸಿದ್ದೆನು. ಅವರು ಕೊಟ್ಟ ಉತ್ತರ ಏನು ಗೊತ್ತೆ? ವಿರೋಧಪಕ್ಷದ ನಾಯಕರಿಗೆ ರೂ.50 ಲಕ್ಷ ತೆಗೆದುಕೊಳ್ಳುವುದಕ್ಕೆ ಹೇಳಿ ಎಂದರು. ಒಂದು ರೂಪಾಯಿ ಕೊಡದಿದ್ದರೂ ಬೇಡ, ನನ್ನದೇನೂ ಅಭ್ಯಂತರವಿಲ್ಲ. ಇಲಾಖೆಯಲ್ಲಿ ದುಡ್ಡು ಇದೆ. ಚುನಾವಣೆ ಹತ್ತಿರ ಬರುತ್ತಿದೆ. ಸಚಿವರೇನಾದರೂ ಒಂದು ನಾಲ್ಕು ಕಾಸು ಕೊಟ್ಟರೆ ಅವರಿಗೆ ಒಂದಷ್ಟು ಮತಗಳು ಬರುತ್ತದೆ ಎಂಬ ಆಸೆ ತಾನೆ? ಹಿಂದುಳಿದವರಿಗೆ, ದಲಿತರಿಗೆ ನ್ಯಾಯ ಸಿಗಲಿ, ಗುಡಿ–ಗೋಪುರ ಸಿಗಲಿ, ನಿವೇಶನ ಸಿಗಲಿ, ಸಮುದಾಯ ಭವನ ಸಿಗಲಿ ಎಂಬ ಆಸೆ ಒಂದು ಕಡೆ. ಮತ್ತೊಂದು ಕಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಒಂದಷ್ಟು ಸ್ವಾಭಿಮಾನದ ಬದುಕನ್ನು ಬದುಕುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯಲ್ಲದೆ ಇನ್ನಾವ ಇಲಾಖೆಯು ಕೊಡಲು ಸಾಧ್ಯ? ದುಡ್ಡು ಬೇಕಾದಷ್ಟಿದೆ, ಕೊಡಿ. ಗುಡಿಸಲು ಮುಕ್ತ ರಾಜ್ಯ ಎಲ್ಲಿಯ ತನಕ? ಕೇವಲ ಘೋಷಣೆ ಇದು. ಸರ್ಕಾರ ಇಡೀ ರಾಜ್ಯದಲ್ಲಿ ಎಷ್ಟು ದಲಿತರು ಹಿಂದುಳಿದವರು ಗುಡಿಸಲಲ್ಲಿ ವಾಸಿಸುತ್ತಿದ್ದಾರೆಂದು ಸರ್ವೆ ಮಾಡಿಸಿದೆ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಹೇಳಿ ಈಗ ನಾವು ಸಂಕಲ್ಪವನ್ನು ಮಾಡಿದ್ದೇವೆ. ಅದರ ಪ್ರಕಾರ ಶಾಸಕರು ಸ್ವಲ್ಪ ಗ್ರಾಮದ ಸಂಪರ್ಕ ಇದ್ದರೆ ಅವರು ಖಂಡಿತವಾಗಿಯೂ ನನ್ನ ಮಾತನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

(...ಮುಂದು)

(306)/20-03-2017/5-50/RC-MD

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಆಂಜನೇಯ(ಮುಂದು):**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಷ್ಟೇ ಗುಡಿಸಿಲಿನಲ್ಲಿ ಇರುವುದು. ಅವರೇ ಮರದ ನೆರಳಿನಲ್ಲಿ ಮತ್ತು ದೇವಸ್ಥಾನದ ಆವರಣದಲ್ಲಿ ವಾಸವಿರುವುದು. ಎಲ್ಲೆಲ್ಲಿ ಸರ್ಕಾರಿ ಜಾಗ ಇದೆಯೋ ಅಲ್ಲಲ್ಲಿ ಅವರು ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಿದ್ದಾರೆ. ಎಷ್ಟು ಜನರು ಅರ್ಜಿ ಹಾಕುತ್ತಾರೋ ಅವರ್‍ಯಾರಿಗೂ ನಾವು ಇಲ್ಲವೆಂದು ಹೇಳುವುದಿಲ್ಲ. ಕೆಲವು ವಿಧಾನಸಭಾ ಕ್ಷೇತ್ರದಲ್ಲಿ ಕೊಡೋಣವೆಂದರೆ ಫಲಾನುಭವಿಗಳೇ ಇಲ್ಲ. ಅಷ್ಟೊಂದು ನಿವೇಶನವನ್ನು ನಾವು ಹಂಚಿಕೆ ಮಾಡಿದ್ದೇವೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿನಲ್ಲಿ 'ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ' ಅಡಿಯಲ್ಲಿ 3 ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ. ಈ ವರ್ಷ ನಾವು ಯಾರು ಅರ್ಜಿ ಹಾಕುತ್ತಾರೋ ಯಾರಿಗೂ ಇಲ್ಲವೆಂದು ಹೇಳುವಂತಿಲ್ಲ, ಎಲ್ಲರಿಗೂ ಕೂಡ ಮನೆಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಗ್ರಾಮ ಪಂಚಾಯಿತಿಯ ವ್ಯವಸ್ಥೆ ಬಗ್ಗೆ ನಿಮಗೆ ತಿಳಿದಿದೆ. ಆ ಗ್ರಾಮಪಂಚಾಯಿತಿಯಲ್ಲಿ ಯಾರು ಅರ್ಜಿ ಹಾಕುತ್ತಾರೋ ಅರ್ಜಿ ಹಾಕಿದವರು ಯಾವ ರೀತಿ ನಡೆದುಕೊಳ್ಳುತ್ತಾರೆಂದು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆಯಿತು ನೋಡೋಣ ಬಾ, ಮಾಡೋಣ ಬಾ, ನೀನೇನು ಪುಕ್ಕಟೆ ಓಟು ಹಾಕಿಲ್ಲ ಎಂದು ಯಾರೂ ಹೇಳುವುದು ಬೇಡ. ಬಡವರನ್ನು ನಿರಾಶೆಗೊಳಿಸಬಾರದು ಎಂಬ ದೃಷ್ಟಿ ಇಟ್ಟುಕೊಂಡು ಎಲ್ಲರಿಗೂ ಸೂರು ಕೊಡಬೇಕು, ಮನೆ ಕೊಡಬೇಕು ಎಂಬ ಆಶಯದಿಂದ ನಮ್ಮ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು ಈ ವರ್ಷ ವಸತಿ ರಹಿತರಾಗಿರುವಂತಹ ಪರಿಶಿಷ್ಟ ಜಾತಿಯವರಲ್ಲಿ ಯಾರ್‍ಯಾರಿಗೆ ಜಾಗ ಇದೆ ಎಷ್ಟು ಜನರು ಅರ್ಜಿ ಹಾಕುತ್ತಾರೋ ಅವರೆಲ್ಲರಿಗೂ ಸಹ ನಾವು ಮನೆಗಳನ್ನು ಮಂಜೂರು ಮಾಡಿಕೊಡುತ್ತೇವೆ ಎಂದು ತಿಳಿಸಿದ್ದಾರೆ. ಈ ವಿಷಯದಲ್ಲಿ ಮಾತ್ರ ನಾವು ಹಿಂದುಳಿದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದಕ್ಕೆ ಪೂರಕವಾಗಿ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ಮಾನ್ಯ ಸಚಿವರು ವಸತಿ ಸಚಿವರಾಗಿ ಉತ್ತರ ಕೊಡುತ್ತೀರೋ, ಅಥವಾ ಸಮಾಜ ಕಲ್ಯಾಣ ಸಚಿವರಾಗಿ ಉತ್ತರ ಕೊಡುತ್ತೀರೋ ಅದನ್ನು ನಾನು ಯೋಚನೆ ಮಾಡುವುದಿಲ್ಲ. ನಾನು ಸಮಾಜ ಕಲ್ಯಾಣ ಸಚಿವರಿಗೆ ನನ್ನದೊಂದು ಸಲಹೆ ಇದೆ. ಏನೆಂದರೆ, ನೀವು ಬೇರೆ ಬೇರೆ ಜಿಲ್ಲೆಗಳಲ್ಲಿ ವಾಸ್ತವ್ಯ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬದುಕನ್ನು ಕಣ್ಣಾರೆ ಕಂಡಿದ್ದೀರಿ. ನಮ್ಮ ಉಡುಪಿ ಜಿಲ್ಲೆಗೆ ಬಂದಾಗ ಒಂದಷ್ಟು ಚರ್ಚೆಗಳು ಬಂತು. ಅಲ್ಲಿ ಮೂಲ ನಿವಾಸಿಗಳು ಕೊರಗರು. ನೀವು ಗ್ರಾಮಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆಂದು 15 ಮನೆಗಳನ್ನು ಕೊಟ್ಟರೆ ಅದರಲ್ಲಿ 5 ಮನೆಗಳಿಗೆ ಅರ್ಜಿ ಬಂದರೂ ಆಗುವುದಿಲ್ಲ. ಏಕೆಂದರೆ ಇವತ್ತಿನ ದಿವಸ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದರೆ ನೀವು ಆ ಹಣವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನವನ್ನೆ ಮಾಡುವುದಿಲ್ಲ. ನಮ್ಮ ಉಡುಪಿ ಜಿಲ್ಲೆಯಲ್ಲಿ ಮೂಲ ನಿವಾಸಿಗಳು ‘ಕೊರಗ’ ಜನಾಂಗದವರು. ಆ ಜನಾಂಗದವರಿಗೆ ಇಡೀ ಉಡುಪಿ ಜಿಲ್ಲಾ ಪಂಚಾಯಿತಿಯವರು ಹಾಗೂ ಬೇರೆ ಬೇರೆ ಸಂಸ್ಥೆಯವರು ಸೇರಿ ನಾಲ್ಕೂವರೆಯಿಂದ ಐದು ಲಕ್ಷ ರೂಪಾಯಿಗಿಂತ ಕಡಿಮೆ ಹಣದಲ್ಲಿ ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಏಕೆಂದರೆ ಸ್ವಂತವಾಗಿ ಮನೆ ಕಟ್ಟಿಕೊಳ್ಳುವುದಕ್ಕೆ ಶಕ್ತಿ ಕೂಡ ಅವರಿಗೆ ಇಲ್ಲ. ಏಕೆಂದರೆ, ಹಂತ ಹಂತವಾಗಿ ಅಂದರೆ ತಳಪಾಯ ಹಾಕಿದರೆ ಮಾತ್ರ ಹಣ ಬರುತ್ತದೆ, ಗೋಡೆಯನ್ನು ನಿರ್ಮಾಣ ಮಾಡಿದರೆ ಮಾತ್ರ ಹಣ ಕೊಡುತ್ತಾರೆ. ಆಗ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಯೋಚನೆ ಮಾಡಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕೊರಗ ಜನಾಂಗದವರಿಗೋಸ್ಕರ ನಾಲ್ಕೂವರೆ ಲಕ್ಷ ರೂಪಾಯಿಯ ಪ್ಯಾಕೇಜ್ ಹಣದಲ್ಲಿ ಮನೆಗಳನ್ನು ಕಟ್ಟಿಕೊಡಬೇಕು. ಮನೆಗಳನ್ನು ಜಿಲ್ಲಾಧಿಕಾರಿಗಳ ವಶದಲ್ಲಿರುವಂತೆ ನಿರ್ಮಿತಿ ಕೇಂದ್ರದವರು ಕಟ್ಟಿಕೊಡಬೇಕೆಂದು ನಿರ್ಣಯ ಮಾಡಿದರು. ಈ ರೀತಿ ಹೇಳಿ ಸುಮಾರು 8 ತಿಂಗಳುಗಳೇ ಕಳೆದುಹೋಯಿತು. ಆದರೆ ಇವತ್ತಿನವರೆಗೂ ನಿಮ್ಮಿಂದ ಹಣ ಬಿಡುಗಡೆ ಆಗಿಲ್ಲ, ಮನೆ ಕಟ್ಟುವುದಕ್ಕೆ ಡಿ.ಸಿ. ಅವರು ಪ್ರಾರಂಭ ಮಾಡಲೂ ಇಲ್ಲ. ಆ ದಲಿತರಿಗೆ ಮನೆ ಆಗಲೂ ಇಲ್ಲ. ದಯವಿಟ್ಟು ತಾವು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಏನು ಯೋಚನೆ ಮಾಡಬೇಕೆಂದರೆ, ಇಂಥವರಿಗೆ ಅಂದರೆ ಕೊರಗ ಜನಾಂಗದವರಿಗೆ ನಿಮ್ಮ ಜಿಲ್ಲಾಧಿಕಾರಿಗಳ ಮೂಲಕ ನಿರ್ಮಿತಿ ಕೇಂದ್ರದವರು ಮನೆಗಳನ್ನು ಕಟ್ಟಿಕೊಡಬೇಕು. ಸಾಮಾನ್ಯವಾಗಿ ಈ ಜನಾಂಗದವರಿಗೆ ಮನೆ ಕಟ್ಟಿಕೊಳ್ಳಲು ಸಂಘ ಸಂಸ್ಥೆಗಳಲ್ಲಿ ಹಣ ಸಿಗುವುದಿಲ್ಲ. ತಳಪಾಯಕ್ಕೆ ಹಣ ಸಿಕ್ಕರೆ ಗೋಡೆ ಕಟ್ಟುವುದಕ್ಕೆ ಹಣ ಸಿಗುವುದಿಲ್ಲ. ಅವರ ಬಳಿ ಹಣ ಇರುವುದಿಲ್ಲ, ಅವರಿಗೆ ಸಾಲ ಸೌಲಭ್ಯ ಸಿಗುವುದಿಲ್ಲ. ನಿರ್ಮಿತಿ ಕೇಂದ್ರದವರಿಗೆ ಸ್ವಂತ ಶಕ್ತಿ ಇದೆ. ಇಂತಹ ಸ್ಥಿತಿ ಇರುವಾಗ ಮನೆಗಳನ್ನು ಕಟ್ಟಿಕೊಡುವುದಕ್ಕೆ ಇರುವಂತಹ ತೊಂದರೆಯಾದರೂ ಏನು? ದಯವಿಟ್ಟು ಇದನ್ನು ಮಾಡಬೇಕೆಂದು ನನ್ನ ವಿನಂತಿ. ಮಾಡುತ್ತೀರೋ ಇಲ್ಲವೋ ಎಂದು ನಮಗೆ ಈಗಲೇ ಹೇಳಬೇಕು. ನಮ್ಮ ಉಡುಪಿ ಜಿಲ್ಲೆಯಲ್ಲಿರುವಂತಹ ಎಲ್ಲಾ ಕೊರಗ ಜನಾಂಗದವರ ಬೇಡಿಕೆ ಇರುವಂತಹ ಮನೆಗಳಿಗೆ ತಕ್ಷಣ ನಾಲ್ಕೂವರೆ ಲಕ್ಷ ರೂಪಾಯಿಯ ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ಮೂಲಕ ಮನೆ ಕಟ್ಟಿಕೊಡುವುದಕ್ಕೆ ನಮ್ಮ ಸರ್ಕಾರ ಬದ್ಧವಿದೆ ಮಾಡುತ್ತೇವೆಂದು ಹೇಳಿದರೆ ನಾವು ನಂಬಬಹುದು.

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ಕೊರಗ ಜನಾಂಗ ಎನ್ನುವವರು ಅಸ್ಪೃಷ್ಯ ಜನಾಂಗ. ನಾನು ಅವರ ಮನೆಗೆ ಹೋಗಿ ಅಲ್ಲಿಯೇ ವಾಸ್ತವ್ಯ ಹೂಡಿ ಒಂದು ಪ್ಯಾಕೇಜ್ ಮಾಡಿದ್ದೇನೆ. ಏನೆಂದರೆ, ವಿದ್ಯಾರ್ಥಿಗಳು ಓದಲಿ ಎಂಬ ದೃಷ್ಟಿ ಇಟ್ಟುಕೊಂಡು ಒಂದು ಮಗುವಿಗೆ ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ ರೂಪಾಯಿಯವರೆಗೂ ವಿದ್ಯಾರ್ಥಿ ವೇತನವನ್ನು ಕೊಡುವಂತಹ ಒಂದು ಯೋಜನೆಯನ್ನು ತಂದಿದ್ದೇನೆ. ಆನಂತರ ಅವರ ಹಾಡಿಯಲ್ಲಿ ಏನೇನು ಮೂಲಭೂತ ಸೌಕರ್ಯಗಳು ಬೇಕಾಗಿವೆಯೋ ಆ ಎಲ್ಲಾ ಸೌಕರ್ಯಗಳ ವ್ಯವಸ್ಥೆಯನ್ನು ಸಹ ಮಾಡಿದ್ದೇನೆ. ಈ ವರ್ಷ ಸಾಮಾನ್ಯ ಬಜೆಟ್‌ನಲ್ಲಿ ಒಂದು ಮನೆ ಕಟ್ಟಿಕೊಳ್ಳುವುದಕ್ಕೆ ರೂ. 1,75,000/– ಒಂದು ಯುನಿಟ್ ಇದೆ. ಆದರೆ ಈ ಕೊರಗ ಜನಾಂಗದವರಿಗೆ ಇನ್ನೂ 2.00 ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಟ್ಟು ಒಟ್ಟು 3,75,000 (ಮೂರು ಲಕ್ಷದ ಎಪ್ಪತ್ತೈದು ಸಾವಿರ) ರೂಪಾಯಿಯಲ್ಲಿ ಕೊರಗ ಜನಾಂಗದವರ ಎಷ್ಟು ಮನೆಗಳು ಬರುತ್ತವೆ ಅಷ್ಟೂ ಮನೆಗಳನ್ನು ಸಹ ನಿರ್ಮಿತಿ ಕೇಂದ್ರದಿಂದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿರ್ಮಿತಿ ಕೇಂದ್ರದವರು ನಾಲ್ಕೂವರೆ ಲಕ್ಷ ರೂಪಾಯಿ ಹೇಳುತ್ತಾರೆ. ನೀವು ಹೇಗೆ ಮನೆ ಕಟ್ಟಿಸಿ ಕೊಡುತ್ತೀರಿ? ಅದನ್ನು ನಾಲ್ಕೂವರೆ ಲಕ್ಷ ರೂಪಾಯಿಯಲ್ಲಿಯೇ ಕಟ್ಟಿ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:-** ನಾನು ಮೂರು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಯಲ್ಲಿ ಮನೆಗಳನ್ನು ನಿರ್ಮಿಸಿ ಕೊಡುವುದಕ್ಕೆ ತಯಾರಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಿರ್ಮಿತಿ ಕೇಂದ್ರದವರು ಮೂರುವರೆ ಲಕ್ಷ ರೂಪಾಯಿಯಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ನಾಲ್ಕೂವರೆ ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಹೇಳುತ್ತಾರೆ. ಹೇಗಿದ್ದರೂ ಕೊಡುತ್ತೀರಿ, ಕೊರಗ ಜನಾಂಗದವರಿಗೆ ನಾಲ್ಕೂವರೆ ಲಕ್ಷ ರೂಪಾಯಿಗಳಲ್ಲಿ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಹೆಚ್.ಆಂಜನೇಯ:-** ಆಯಿತು. ಕೊರಗ ಜನಾಂಗದವರಿಗೆ ಮಾತ್ರ ಕಟ್ಟಿಸಿ ಕೊಡುತ್ತೇವೆ. ಆಮೇಲೆ ಇದು ಎಲ್ಲರಿಗೂ ಅನ್ವಯ ಆಗುತ್ತದೆ ಎಂದು ತಿಳಿಯಬೇಡಿ. ಕೊರಗ ಜನಾಂಗದವರು ಯಾರಿದ್ದಾರೆ ಅವರಿಗೆ ನಾಲ್ಕೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ಮನೆ ಕಟ್ಟಿಕೊಡುವುದಕ್ಕೆ ಈಗ ಪ್ರಪೋಸಲ್ ಕಳುಹಿಸುತ್ತೇವೆ. ಪ್ರಪೋಸಲ್ ಬಂದ ತಕ್ಷಣವೆ ನಾವು ಅದನ್ನು ಮಂಜೂರಾತಿ ಮಾಡಿಕೊಡುತ್ತೇವೆ. ನಿರ್ಮಿತಿ ಕೇಂದ್ರದ ಮೂಲಕವೇ ಅನುಷ್ಠಾನಗೊಳಿಸುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಕೊರಗ ಜನಾಂಗದವರು ಕೇವಲ ಉಡುಪಿ ಜಿಲ್ಲೆಯಲ್ಲಿ ಮಾತ್ರ ಇಲ್ಲ. ಎಲ್ಲಾ ಕಡೆಗಳಲ್ಲಿಯೂ ಇದ್ದಾರೆ.

**ಶ್ರೀ ಹೆಚ್.ಆಂಜನೇಯ:-** ಮೂಲ ಆದಿವಾಸಿಗಳು ಉಡುಪಿ ಜಿಲ್ಲೆಯಲ್ಲಿದ್ದಾರೆ ಅವರಿಗೆ ಮಾತ್ರ. ಮತ್ತೆ ಯಾರನ್ನೋ ಕೊರಗ ಎಂದು ಹೇಳಿದರೆ ಅವರಿಗೆ ಕೊಡುವುದಿಲ್ಲ. ಅವರು tribals ಇದ್ದಾರೆ. ಅವರಲ್ಲಿ ಎರಡು ಜನಾಂಗವಿದ್ದು ಅವರಿಗೆ ಮಾತ್ರ.

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಉಡುಪಿಯಿಂದಲೇ ಆರಂಭವಾಗಲಿ. ಕೃಷ್ಣ ಪರಮಾತ್ಮನ ಊರು ಉಡುಪಿ. ಅಲ್ಲಿಂದಲೇ ಆರಂಭವಾಗಲಿ ಯಾರು ಬೇಡ ಎಂದು ಹೇಳುವುದಿಲ್ಲ.

**ಶ್ರೀ ಎ.ಮಂಜು(ಪಶು ಸಂಗೋಪನೆ ಮತ್ತು ರೇಷ್ಮೆ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಮೂಲ ಆದಿವಾಸಿಗಳು ಉಡುಪಿ ಜಿಲ್ಲೆಯಲ್ಲಿದ್ದಾರೆ ಅವರಿಗೆ ಮಾತ್ರ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಉಡುಪಿಯಿಂದ ಬಂದಂತಹ ಮೂಲ ವಾಸಿಗಳು ಹಾಸನದಲ್ಲಿಯೂ ಸಹ ಇದ್ದಾರೆ. ಇಡೀ ರಾಜ್ಯದಲ್ಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:–** ಮೂಲ ಆದಿವಾಸಿಗಳಿಗೆ ಮಾತ್ರ ಕೊಡುತ್ತೇವೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮೂಲ ಆದಿವಾಸಿಗಳು ಉಡುಪಿಯಿಂದ ಬಂದು ನಮ್ಮ ಹಳೆಬೀಡು ಹಾಗೂ ಹಾಸನದಲ್ಲಿ ವಾಸವಾಗಿದ್ದಾರೆ. ಆದಕಾರಣ ಸರ್ಕಾರ ಪಾಲಿಸಿ ಮಾಡುವುದಾದರೆ ಇಡೀ ರಾಜ್ಯಕ್ಕೆ ಅನ್ವಯ ಆಗುವಂತೆ ಮಾಡಬೇಕು, ಒಂದೇ ಒಂದು ಕಡೆ ಮಾತ್ರ ಮಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳುವಂತಹ ಮಾತನ್ನು ನಾಬು ಒಪ್ಪುತ್ತೇನೆ. ಏಕೆಂದರೆ, ಕೊರಗ ಜನಾಂಗದವರು ಕೇವಲ ಉಡುಪಿ ಜಿಲ್ಲೆಯಲ್ಲಿ ಮಾತ್ರ ಇಲ್ಲ. ಎಲ್ಲಾ ಜಿಲ್ಲೆಯಲ್ಲಿಯೂ ಸಹ ಇದ್ದಾರೆ. ಅದೇ ರೀತಿ ಹಾವೇರಿ ಜಿಲ್ಲೆಯಲ್ಲಿಯೂ ಸಹ ಇದ್ದಾರೆ. ದಯಮಾಡಿ ತಾವು ತಾರತಮ್ಯ ಮಾಡಬೇಡಿ. ಬೇಕಾದರೆ ಶ್ರೀ ಕೃಷ್ಣ ಪರಮಾತ್ಮನ ಜಿಲ್ಲೆಯಿಂದಲೇ ಪ್ರಾರಂಭವಾಗಲಿ. ಅಲ್ಲಿಂದ ಪ್ರಾರಂಭವಾಗಿ ಎಲ್ಲಾ ಕಡೆಗೂ ದಯಮಾಡಿ ಕಳುಹಿಸಿ ಕೊಡಬೇಕು. ಮಾನ್ಯ ಆಂಜನೇಯ ಅವರು ಎಂದೆಂದೂ ಸುಳ್ಳನ್ನು ಹೇಳುವುದಿಲ್ಲ

(ಗೊಂದಲ)

**ಉಪ ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಆಂಜನೇಯ ಅವರು ಬಹಳ ಸಮಾಜ ಮುಖಿಯಾಗಿ ಚಿಂತನೆ ಮಾಡುವಂಥವರು. ರಾಜ್ಯದಲ್ಲಿ ಸುಮಾರು 606 ಹಾಡಿಗಳಿವೆ. List ಪ್ರಕಾರ Scheduled Tribes ನಲ್ಲಿ 51 ಜಾತಿಗಳಿವೆ. ಅದರಲ್ಲಿ ಮೂಲ ಬುಡಕಟ್ಟಿಗೆ ಸೇರಿರುವಂತಹ ಕಾಡು ಕುರುಬ, ಜೇನು ಕುರುಬ ಈ ರೀತಿಯ ಜಾತಿಗಳು ಏನಿವೆ, ಅದು ಮೈಸೂರು ಜಿಲ್ಲೆ, ಚಾಮರಾಜ ನಗರ ಜಿಲ್ಲೆ, ಕೂರ್ಗ್, ಮಂಗಳೂರು, ಚಿಕ್ಕಮಗಳೂರು, ಹಾಸನ ಹಾಗೂ ಹೆಚ್.ಡಿ.ಕೋಟೆಯಲ್ಲಿ ಸುಮಾರು 109 ಹಾಡಿ ಗಳಿವೆ. ಇಲ್ಲಿ ಇರುವಂಥದ್ದರಲ್ಲಿ ಈ ವರ್ಷ ಇವರಿಗೆ ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದೀರಿ. ಅದರಲ್ಲಿ 25 ಕೋಟಿ ರೂಪಾಯಿಗಳನ್ನು ಸಮುದಾಯ ಭವನ ಕಟ್ಟುವುದಕ್ಕೆ ಕೊಟ್ಟಿದ್ದೀರಿ. ಬುಡಕಟ್ಟು ಜನಾಂಗದವರು ನಿಜಕ್ಕೂ ಯಾರು primitive tribal groups ಇದ್ದಾರೆ ಅವರಿಗೆ ಎಲ್ಲರಿಗೂ ಸಹ there shall not be discrimination. ಉಡುಪಿ ಅವರಿಗೆ ಒಂದು ರೀತಿ, ಚಿಕ್ಕಮಗಳೂರಿನವರಿಗೆ ಒಂದು ರೀತಿ ಅಥವಾ ಗುಲ್ಬರ್ಗಾದವರಿಗೆ ಒಂದು ರೀತಿ ಆಗಬಾರದು. ಸರ್ಕಾರ ಪಾಲಿಸಿ ಮಾಡುವುದಾದರೆ ನಾಲ್ಕುವರೆ ಲಕ್ಷ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೀರೋ, ಐದು ಲಕ್ಷ ರೂಪಾಯಿ ಮಾಡುತ್ತೀರೋ ಅದನ್ನು ಯೂನಿಫಾರಂ ಆಗಿ ರಾಜ್ಯದಲ್ಲಿ ಹಾಡಿಗಳಲ್ಲಿರುವಂತಹ ಯಾರು Scheduled Tribes ಇದ್ದಾರೆ ಅದನ್ನು ದಯಮಾಡಿ ಸ್ಪಷ್ಟಪಡಿಸಿ. ಎಲ್ಲರಿಗೂ ಒಂದೇ ರೀತಿಯಾಗಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮೊದಲು ಉಡುಪಿಯಿಂದಲೇ ಪ್ರಾರಂಭವಾಗಲಿ ಆನಂತರ ನೋಡೋಣ. ನಿನ್ನೆ ದಿವಸ ವಿಜಯಪುರದ ಶಿವಣಗಿ ಎಂಬ ಗ್ರಾಮದಲ್ಲಿ "ಕೊಡಚ ಮತ್ತು ಕೊರಮ" ಸಮಾಜದವರದು ರಾಜ್ಯ ಮಟ್ಟದಲ್ಲಿ ಒಂದು ದೊಡ್ಡ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ನಾನು ಹೋಗಿದ್ದೆ. ನಿನ್ನೆ ದಿವಸ ಈ ಸರ್ಕಾರದಿಂದ ನಿಜಕ್ಕೂ ಸಹ ಒಂದು ಒಳ್ಳೆಯ ಕೆಲಸ ಆಯಿತು. ಹಿಂದೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾನ್ಯ ಗೋವಿಂದ ಕಾರಜೋಳ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸುಮಾರು 35 ಲಕ್ಷ ರೂಪಾಯಿಗಳನ್ನು ಅವರ ಸಮುದಾಯಕ್ಕೆ ಕೆಲಸ ಪ್ರಾರಂಭ ಮಾಡಲು ಕೊಟ್ಟಿದ್ದರು. ಅಲ್ಲಿಂದ ಅದು ಅಲ್ಲಿಯೇ ನಿಂತು ಹೋಗಿತ್ತು. ನಿನ್ನೆ ದಿವಸ ನಾನು ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಆ ಸಮಾಜದವರ ಸಮುದಾಯ ಭವನ ಕಟ್ಟುವುದಕ್ಕೆ 2 ಕೋಟಿ ರೂಪಾಯಿ ಕೊಡಬೇಕೆಂದು ಹಾಗೂ 10 ಎಕರೆ ಭೂಮಿ ಹಾಗೂ ಒಂದು ನಿಗಮ ಬೇಕೆಂದು ಕೇಳಿದರು. ಭೂಮಿಯ ಬಗ್ಗೆ ನೀವು ಸುಲಭವಾಗಿ ಘೋಷಣೆ ಮಾಡಬಹುದು. ನಿಗಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಿಡುತ್ತೇನೆ.

(ಮುಂದು)

**(307) 20–03–2017 ಕೆಜಿ/ಎಕೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ಈಶ್ರರಪ್ಪ (ಮುಂದು..):– ಮಾನ್ಯ ಸಭಾಪತಿಯವರೇ, ಮಾನ್ಯ ನೀರಾವರಿ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಎರಡು ಕೋಟಿ ರೂಪಾಯಿಗಳನ್ನು ಆ ಸಮುದಾಯದ ಸಮಾಜಕ್ಕೆ ಕೊಡುತ್ತೇನೆ ಎಂದು ಒಪ್ಪಿಕೊಂಡರು. ನಾನು ಸದರಿ ಸಮ್ಮೇಳನಕ್ಕೆ ಹೋಗಿದ್ದೆ. ಅವರು ಯಾರು ಆ ಸಮ್ಮೇಳನಕ್ಕೆ ಬಂದಿರಲಿಲ್ಲ. ಮಾನ್ಯ ನೀರಾವರಿ ಸಚಿವರಾದ ಎಂ.ಬಿ.ಪಾಟೀಲ್‌ರವರು ಬಂದು ಘೋಷಣೆ ಮಾಡಿದರು. ಅರ್ಧಕ್ಕೆ ನಿಂತಿರುವ ಸಮುದಾಯ ಭವನಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 37 ಹಿಂದುಳಿದ ಮತ್ತು ದಲಿತ ಸಮಾಜದ

ಮಠ–ಮಂದಿರಗಳಿಗೆ, ಶಾಲೆಗಳಿಗೆ, ಹಾಸ್ಟೆಲ್‌ಗಳಿಗೆ, ಸಮುದಾಯ ಭವನಗಳಿಗೆ ಮತ್ತು ಮಠಗಳ ಅಭಿವೃದ್ಧಿಗಳಿಗೆ ಸುಮಾರು 98 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ ಅದನ್ನು ಆ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ಆದರೆ, ಈ ಸರ್ಕಾರ ಕೆಲವರಿಗೆ ಪೂರ್ಣ ಮಾಡಿದ್ದಾರೆ. ಇನ್ನೂ ಕೆಲವರಿಗೆ ಪೂರ್ಣ ಮಾಡಲು ಅವರ ಕೈಯಲ್ಲಿ ಹಣ ಇಲ್ಲ. ಮಾನ್ಯ ಸಭಾಪತಿಯವರೆ, ಇವತ್ತು ಸರ್ಕಾರ ಮಾಡುವಂತಹ ಕೆಲಸಗಳನ್ನು ಆ 38 ಮಠಗಳು ಮಾಡುತ್ತೀವೆ. ಅವರು ಶಾಲೆಗಳನ್ನು ಮಾಡುತ್ತಿದ್ದಾರೆ. ಬಡ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಮಾಡುತ್ತಿದ್ದಾರೆ. ಕೆಲವರು ಆಸ್ಪತ್ರೆಗಳನ್ನು ಮಾಡುತ್ತಿದ್ದಾರೆ. ನಾನು ಮೊನ್ನೆ ದಿವಸ ಚಿತ್ರದುರ್ಗಕ್ಕೆ ಹೋಗಿದ್ದೆ. ಅಲ್ಲಿ ಮಡಿವಾಳ ಸಮುದಾಯ ಸಮಾಜದ ಒಂದು ಹಾಸ್ಟೆಲ್ ಆಗುತ್ತಿದೆ. ಆ ಸ್ವಾಮಿಜೀಯವರು ನನ್ನನ್ನು ಕರೆದುಕೊಂಡು ಹೋಗಿ ಹಾಸ್ಟೆಲ್ ಅನ್ನು ತೋರಿಸಿ ಹೇಳಿದರು ನೋಡಪ್ಪಾ, ನೀವು ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್ನೂ ಸ್ವಲ್ಪ ಕೆಲಸ ಹಾಗೆ ಉಳಿದುಕೊಂಡಿದೆ. ಈ ವಿಚಾರವನ್ನು ಅವರ ಹತ್ತಿರ ವಿಚಾರ ಮಾಡಿದ್ದಾರೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಮಾನ್ಯ ಸಭಾಪತಿಯವರೆ, ಆ 38 ಮಠಗಳ ಸ್ವಾಮಿಗಳು ಯಾರು ಯಾರು ಇದ್ದಾರೆ, ದಲಿತರು ಮತ್ತು ಹಿಂದುಳಿದವರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಅವರುಗಳನ್ನು ಕರೆದು ಅವರಿಗೆ ಏನು ಬೇಕು ಎಂದು ಕೇಳುವಂತಹ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಈ ಸರ್ಕಾರದಿಂದ ಅವರಿಗೆ 50 ಕೋಟಿ ರೂಪಾಯಿಗಳು ಅಥವಾ 100 ಕೋಟಿ ರೂಪಾಯಿಗಳನ್ನು ಕೂಡುವುದು ಬಹಳ ಹೆಚ್ಚಿಗೆ ಆಗುವುದಿಲ್ಲ. ಮೊನ್ನೆ ಸರ್ಕಾರ ವಾಲ್ಮೀಕಿ ಸಮಾಜದ ಮಠಕ್ಕೆ 5 ಕೋಟಿ ರೂಪಾಯಿಗಳು ಅಥವಾ 6 ಕೋಟಿ ರೂಪಾಯಿಗಳ ಚೆಕ್ಕನ್ನು ಕೊಟ್ಟಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅದನ್ನು ನಾನು ಪೇಪರ್‌ನಲ್ಲಿ ಸಹ ನೋಡಿದ್ದೇನೆ. ಅದೇ ರೀತಿ ಎಲ್ಲಾ ಹಿಂದುಳಿದವರಿಗೆ ಮತ್ತು ದಲಿತ ಮಠಗಳಿಗೆ ಕೊಡಿ. ಸರ್ಕಾರ ಮಾಡುವಂತಹ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೆ, ಒಂದು ಹಾಸ್ಟೆಲ್ ಕಟ್ಟಿಕೊಳ್ಳುತ್ತೇವೆಂದು ಅವರು ಹತ್ತು ಎಕರೆ ಜಮೀನು ಕೇಳಿದರು. ಈಗ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಕೊರವ ಸಮಾಜದವರು ಆ ಎರಡು ಕೋಟಿ ರೂಪಾಯಿಗಳಲ್ಲಿ ದೇವಸ್ಥಾನವನ್ನು ಇಲ್ಲವೇ, ಸಮುದಾಯ ಭವನವನ್ನು ನಿರ್ಮಾಣ ಮಾಡಿಕೊಳ್ಳುತ್ತಾರೋ ಆ ಕೊರವ ಸಮಾಜದವರು ಅದು ನನಗೆ ಗೊತ್ತಿಲ್ಲ. ಸರ್ಕಾರದಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಬಿದ್ದಿದೆ. ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ನಾನು ಸರ್ಕಾರ ಖರ್ಚು ಮಾಡಿಲ್ಲವೆಂದು ಹೇಳುತ್ತಿಲ್ಲ. ಆ ಹಣವನ್ನು ಯಾವ ರೂಪದಲ್ಲಿ ಖರ್ಚು ಮಾಡಬೇಕು ಮತ್ತು ಆ ದಲಿತರಿಗೆ ಮತ್ತು ಹಿಂದುಳಿದವರಿಗೆ

ಯಾವ ರೀತಿ ನ್ಯಾಯ ಕೊಡಬೇಕೆಂದು ದಯವಿಟ್ಟು ಸ್ವಲ್ಪ mind apply ಮಾಡಿ. ಈ ಸರ್ಕಾರಕ್ಕೆ ಇರುವುದೇ ಇನ್ನು ಒಂದು ವರ್ಷದ ಅವಧಿ.

**ಶ್ರೀ ಎಚ್.ಆಂಜನೇಯ (ಸಮಾಜ ಕಲ್ಯಾಣ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೆ, ಮತ್ತೇ ನಾವೇ ಅಧಿಕಾರಕ್ಕೆ ಬರುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರೇ ಮತ್ತೇ ಅಧಿಕಾರಕ್ಕೆ ಬರಲಿ. ಇದೇರೀತಿ ಮಾಡಲಿ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮಗೆ ಇನ್ನೂ ಎಷ್ಟು ಸಮಯ ಬೇಕು? ಈಗ 6.00 ಗಂಟೆ ಆಗಿದೆ. ತಾವು ಇನ್ನೂ ಮಾತನಾಡುತ್ತೀರಾ? ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರೆ, ದಯವಿಟ್ಟು ಕುಳಿತುಕೊಳ್ಳಿ.

**ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭ ಮಾಡುವಾಗಲೇ ಹೇಳಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಮಾನ್ಯ ಎಚ್.ಆಂಜನೇಯರವರು ಬಂದರು. ಇನ್ನೂ ಆ ಇಲಾಖೆಯ ಎರಡು ವಿಷಯಗಳು ಇವೆ. ಅದನ್ನು ಬೇಕಾದರೆ ನಾಳೆಗೆ ಮುಂದುವರಿಸುತ್ತೇನೆ. ನನಗೆ ಬಹಳ ಮುಖ್ಯವಾದ ವಿಷಯವೆಂದರೆ, ನಾಳೆ ಮಾನ್ಯ ಆರೋಗ್ಯ ಸಚಿವರು ಬಂದರೆ ಬಹಳ ಒಳ್ಳೆಯದು. ದಯವಿಟ್ಟು ಅದಕ್ಕೆ ಅವಕಾಶ ಮಾಡಿ ಕೊಡಿ. ನಾನು ನಾಳೆ ಅರ್ಧಗಂಟೆ ಅಥವಾ ಮುಕ್ಕಾಲು ಗಂಟೆ ಅದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ನನಗೆ ದಯವಿಟ್ಟು ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾಳೆ ಮುಂದುವರಿಸಿ.

**ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ನಾನು ಈ ವಿಷಯವನ್ನು ಅರ್ಧಕ್ಕೆ ನಿಲ್ಲಿಸಿದ್ದೇನೆ. ಆ 38 ಮಠಗಳಿಗೆ ಇವರೇ ಹೋಗುತ್ತಾರೋ ಅಥವಾ ಮಠಾಧಿಪತಿಗಳನ್ನು ಅವರ ಹತ್ತಿರಕ್ಕೆ ಕರೆಸಿಕೊಳ್ಳುತ್ತಾರೋ ಅದು ನನಗೆ ಗೊತ್ತಿಲ್ಲ. ಇಲ್ಲೇ ಸಭೆಯನ್ನು ನಡೆಸುತ್ತಾರೋ ಗೊತ್ತಿಲ್ಲ. ಆ ಅಷ್ಟು ಜನಕ್ಕೂ 50 ಲಕ್ಷ ರೂಪಾಯಿ, ಒಂದು ಕೋಟಿ ರೂಪಾಯಿ, ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಿಜಕ್ಕೂ ಮಾನ್ಯ ಎಚ್.ಆಂಜನೇಯರವರನ್ನು ನೆನಪಿಸಿಕೊಳ್ಳುತ್ತಾರೆ. ನನಗೆ ಒಬ್ಬ ಸ್ವಾಮಿಜೀ ಹೇಳಿದ್ದನ್ನು ನಾನು ಇಲ್ಲಿ ಹೇಳುತ್ತೇನೆ. ಆ ಸ್ವಾಮಿಜೀ ಯಾಕೆ ಆ ಮಾತನ್ನು ಹೇಳಿದರೋ ನನಗೆ ಗೊತ್ತಿಲ್ಲ. ನಾನು ಹೋದಾಗ ಬಹಳ ಗೌರವದಿಂದ ಹೇಳಿದರು. ಇದು ಒಂದು ಒಳ್ಳೆಯ ಕಟ್ಟಡ ಆಗಿದೆ. ಅದಕ್ಕೆ ನನ್ನ ಪೋಟೋ ಹಾಕುತ್ತೇವೆ ಎಂದು ಹೇಳಿದರು. ಅದಕ್ಕೆ ನಾನು ತಮಗೆ ಕೈಮುಗಿದು ಪ್ರಾರ್ಥನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತೇನೆ. ಆ 38 ಸ್ವಾಮಿಜೀಗಳನ್ನು ಕರೆದು ಅವರಿಗೆ ಸಂತೋಷವಾಗಿ ಏನೂ ಬೇಕೋ ಅದನ್ನು ಕೊಟ್ಟರೆ, ದಲಿತರಿಗೆ, ಹಿಂದುಳಿದವರಿಗೆ, ಹಾಸ್ಟೆಲ್‌ಗಳಿಗೆ, ವಿದ್ಯಾಭ್ಯಾಸಕ್ಕೆ ಮತ್ತು ಸಮುದಾಯ ಭವನಗಳಿಗೆ ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಅರುಣ ಶಾಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ, ಈಗ ಆಗುವುದಿಲ್ಲ. ನಾಳೆ ಮಾಡಿಕೊಡುತ್ತೇನೆ. ಈಗ ಒಂದು ಲಘು ಪ್ರಕಟಣೆ ಇದೆ.

## 8. ಪ್ರಕಟಣೆ

ಶಾಸನ ಸಭೆಗಳಲ್ಲಿ ನಾಗರೀಕರ ಹಿತಾಸಕ್ತಿಗಳನ್ನು ಕಾಪಾಡುವುದು ಹಾಗೂ ಸರ್ಕಾರದ ಯೋಜನೆಗಳ ಸಮರ್ಪಕ ಜಾರಿಯ ಕುರಿತು ಸಮಗ್ರವಾದ ಮಾಹಿತಿಗಳ ಪ್ರಾತ್ಯಕ್ಷಿತೆಯ ಕಾರ್ಯಗಾರವನ್ನು "India Governs" ಸಂಸ್ಥೆಯು "UNICEF" ಸಹಯೋಗದೊಂದಿಗೆ ಮಾನ್ಯ ಸದಸ್ಯರುಗಳಿಗಾಗಿ ದಿನಾಂಕ 21ನೇ ಮಾರ್ಚ್ 2017 ರಂದು ಬೆಳಿಗ್ಗೆ 10.00 ಗಂಟೆಗೆ ವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 106 ರಲ್ಲಿ ಏರ್ಪಡಿಸಲಾಗಿರುತ್ತದೆ. ಸದರಿ ಕಾರ್ಯಗಾರದಲ್ಲಿ ಎಲ್ಲಾ ಮಾನ್ಯ ಸದಸ್ಯರು ಭಾಗವಹಿಸುವ ಮೂಲಕ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ. ಇನ್ನು ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21.03.2017 ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**

– – – –

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು